ವೈಶಾಖೀ ಪರ್ವ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
ನಂ. ೭, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು-೫೬೦೦೨೫

ವೈಶಾಖೀ ಪರ್ವ

ಮಲ್ಲಿಕಾ

ಸುಖಮಾ ಪತಿತಂ ಸೇವ್ಯಂ
ದುಃಖಮಾ ಪತಿತಂ ತಥಾ।
ಚಕ್ರವತ್ ಪರಿವರ್ತಂತೇ
ದುಃಖಾನಿಚ ಸುಖಾನಿಚ॥

Vaisakhi Parva in Kannada by 'Mallika'
Published by Lakshmi Prakashana,
7, Langford Road, Bangalore-560 025.

ಪ್ರಥಮ ಮುದ್ರಣ : ೧೯೭೩
ದ್ವಿತಿಯ ಮುದ್ರಣ : ೧೯೮೮

ಬೆಲೆ : 28–00 ರೂಪಾಯಿಗಳು

ಮುದ್ರಕರು :
ನ್ಯೂ ಐಡಿಯಾಸ್
30, 15ನೇ ಅಡ್ಡರಸ್ತೆ
ಮೂರನೆಯ ವಿಭಾಗ ಜಯನಗರ
ಬೆಂಗಳೂರು–560 011

ವೈಶಾಖೀ ಪರ್ವ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು-560 025

ನಿವೇದನೆ

ಈ ಗ್ರಂಥದ ಪ್ರತಿಗಳು ಅಂದೇ ಮುಗಿದಿದ್ದರೂ ಇದುವರೆಗೆ ಪುನರ್ಮುದ್ರಣದ ಕಡೆ ಗಮನ ಹರಿಸಲು ಸಾಧ್ಯವಾಗಿರಲಿಲ್ಲ. ಈ ಸಲಿ ಪುನರ್ಮುದ್ರಣಕ್ಕೆ ಅವಕಾಶ ಕೊಟ್ಟುದುದರಿಂದ ಇದು ಪುನರಪಿ ಓದುಗರ ಕೈ ಸೇರುತ್ತಿದೆ. ಇದರಲ್ಲಿ ರೂಪುಗೊಂಡ ಏಳು ಕಥಾವಸ್ತುಗಳು ಏಳೇಳು ಬಗೆಯ ಭೂಮಿಕೆಯನ್ನು ಹೊಂದಿದ್ದರೂ ಪೋಣಿಸಿದ್ದು ಒಂದೇ ಸೂತ್ರದಲ್ಲಿ. ಕೆಲವು ಚಾರಿತ್ರಿಕ, ಇನ್ನು ಕೆಲವು ಕಾಲ್ಪನಿಕ. ಹಾಗೆಂದ ಮಾತ್ರಕ್ಕೆ ಚಾರಿತ್ರಿಕ ಕಥಾವಸ್ತು ಕಲ್ಪನಾ ವೈಖರಿಯಿಂದ ಸಂಪೂರ್ಣ ವಿಮುಕ್ತವಾಗಿಲ್ಲ. ಸಹಜಾಸಹಜಗಳ ಮೂಸೆಯಲ್ಲಿ ಕಡೆದು ಸಿದ್ಧ ಕೃತಿಗಳಾಗಿ ಕಥಾಚಿತ್ರಗಳಲ್ಲಿ ಮೈದಾಳಿವೆ ಎಂಬುದು ದಿಟ.

ವರ್ಷೇ ವರ್ಷೇ ಹೊಸ ಗ್ರಂಥಗಳ ಕಡೆ ಗಮನಕೊಡುವುದರಿಂದ ಹಿಂದಿನ ಗ್ರಂಥಗಳ ಪ್ರಕಟಣೆ ಕಷ್ಟವೇ. ಕವಿಗಳಲ್ಲಿ ಸ್ವತಃ ಪ್ರಕಾಶಕರಾಗಿರುವವರು ವಿರಳ. ಸರಕಾರದ ನಿರ್ಲಕ್ಷ್ಯ ಧೋರಣೆಯಿಂದ ಪ್ರಕಟಣ ಕಾರ್ಯ ಅಗಾಧವಾದ ಹೊರೆಯಾಗಿದೆ. ಮುಂದೆ ಪ್ರಕಟಿಸುವ ಎದೆಗಾರಿಕೆಯು ಕುಗ್ಗವಂತಹ ಪರಿಸ್ಥಿತಿಯಲ್ಲಿ ಬರವಣಿಗೆ ಆನಂದವಾಗುವ ಬದಲು ಸಿಂಹಸ್ವಪ್ನವಾಗಿ ಪರಿಣಮಿಸಿದ್ದು ನಮ್ಮ ದುರದೃಷ್ಟಕಾರಕ. ಇನ್ನಾದರೂ ಸರಕಾರದ ಕುರುಡುಗಣ್ಣು ತೆರೆದರೆ ಲೇಖನಿ ನಿರಾಳ.

ವಿಭವನಾಮ ಸಂವತ್ಸರ ಚೈತ್ರ
ಶುದ್ಧ ಸಪ್ತಮಿ, ಗುರುವಾರ,
೨೪ - ೩ - ೧೯೮೮.

ಇಂತು,
ಮಲ್ಲಿಕಾ

ಪರಿವಿಡಿ

ಶ್ರೀಶಾಲಿನೀ

........ಕಾಳಮೇಘಾಚ್ಛಾದಿತ ಗಗನತಲದಲ್ಲಿ ವೀಚಿವಾಯುವಿನ ಉನ್ಮತ್ತ ಸಂಚರಣ.

........ವೈಶಾಖ ವೈಖರಿಯ ಉಷ್ಣೋಷ್ಣ ವಾತಾವರಣದ ಮೇಲೆ ಮುಂಗಾರಿನ ಮಲ್ಲಯುದ್ಧ ಸನ್ನಾಹ.

ಮನೆಯ ಮುಂಬಾಗಿಲಿನಲ್ಲಿ ನಿಂತ ಸಂಧ್ಯಾಮಣಿ ಆ ಪ್ರಕ್ಷುಬ್ಧ ಪರಿಸ್ಥಿತಿಯ ಮೇಲೆ ಕಣ್ಮನಗಳನ್ನು ಚೆಲ್ಲಿ, ವಾತಾವರಣದ ಸಮೀಕ್ಷೆಯಲ್ಲಿ ಸಂಪೂರ್ಣ ತನ್ಮಯಳಾಗಿದ್ದಾಳೆ. ಎಳೆಯ ಮನವನ್ನು ನಡುಗಿಸುವಂತಹ ಗುಡುಗಿನ ಘನಘೋರ ಘರ್ಜನೆ. ಮಳೆಗಾಳಿಗಳ ಅವ್ಯಾಹತ ಕಾಳಗ. ಹಲವಾರು ದಿನಗಳಿಂದ ವಾತಾವರಣ ಪರಿಸ್ಥಿತಿ ವಿಪರೀತವೇ. ಆಕಾಶದಿಂದ ಒಮ್ಮೆಗೇ ಕಳಚಿ ಬೀಳುವಷ್ಟು ಭಾರಾಕ್ರಾಂತವಾದ ಮೋಡಗಳು. ಹಿಂದಿನ ದಿನವಂತೂ ಅವಳು ಶಾಲೆಗೆ ಹೋಗುವ ನಿರ್ಧಾರವನ್ನೇ ಬಿಡಮಾಡಿಸಿತು ಪ್ರಕೃತಿಯ ವಿಕೋಪ; ಅನಂತರ ವಾತಾವರಣ ಪರಿಶುಭ್ರವಾಗಿ ಅನ್ಯಥಾ ಅಂದಿನ ಪಾಠ ಪ್ರವಚನಗಳನ್ನು ಕಳೆದುಕೊಂಡ ಪ್ರಸಂಗ ಒದಗಿ ಬಂತು. ಇಂದೂ ಸಹ, ಅದೇ ಪರಿಸ್ಥಿತಿ ಉಂಟಾದುದರಿಂದ ಅವಳ ಎಳೆಯ ಮನಸ್ಸಿಗೆ ಎಲ್ಲಿಲ್ಲದ ಆತಂಕ. ಈಗ ಹೋಗುವುದೋ ಬಿಡುವುದೋ ಎಂಬ ಸಮಸ್ಯೆ. ಹೀಗೆ ಮತ್ತೆಮತ್ತೆ ತಪ್ಪಿಸಿಕೊಂಡಲ್ಲಿ ಪರೀಕ್ಷೆಯ ಹಂತವನ್ನು ಸರ್ವಾಂಗವಾಗಿ ದಾಟುವುದಸಾಧ್ಯ ಎಂಬುದು ಮನೋವೇದ್ಯ.

ಅಬ್ಬಬ್ಬ ! ಅದೆಂತಹ ಬಿರುಗಾಳಿ !

ಮಳೆಯನ್ನು ಮಾತ್ರವಲ್ಲ! ಮನೆ ಮಠಗಳನ್ನೂ ಧೂಳೀಪಟಗೊಳಿಸುವಂತಹ ಘನ ಘೋರ ಸನ್ನಾಹ.

ಸಂಧ್ಯಾ ಕಣ್ಣರಳಿಸಿ ಮತ್ತೆ ಆಕಾಶದತ್ತ ನಿಟ್ಟಿಸಿದಳು. ಚಿದಾಕಾಶದಲ್ಲೂ ಬರುಗಾಳಿ ಬಲವಾಗಿ ಬೀಸತೊಡಗಿತು.

ಹೊತ್ತು ಒಂಭತ್ತರ ಅಂಚನ್ನು ದಾಟಿತು. ಇನ್ನರ್ಧ ಗಂಟೆಯೊಳಗಾಗಿ ಹೊರಡಲೇಬೇಕು....ಆ ಯೋಚನೆ ಬಂದಾಗ ಕೈಕಾಲುಗಳಿಗೆ ಚಟುವಟಿಕೆಯೂ ಮೂಡಿ ಬಂತು. ಒಳಹೋಗಿ ಪುಸ್ತಕಗಳನ್ನು ಜೋಡಿಸಿಟ್ಟು ತಲೆ ಬಾಚಿಕೊಂಡು ಅಣಿಯಾಗಿ ಹೊರಬಂದು ಪುನಃ ಕಾರ್ಮೋಡಗಳ ಮೇಲೆ ನೇರ ದೃಷ್ಟಿಯನ್ನು ಬೀರಿದಳು. ಮೊದಲಿಗಿಂತಲೂ ಆಗ ಮಳೆಗಾಳಿಯ ಆವೇಗ ಸ್ವಲ್ಪ ಕಡಿಮೆಯಾಗಿದ್ದುದು ಮನಸ್ಸಿಗೆ ಎಷ್ಟೋ ಸಮಾಧಾನ ತಂದಿತು.

ಇನ್ನು ಪರವಾಯಿಲ್ಲ, ಹೊರಡಬಹುದು ಎಂದುಕೊಳ್ಳುತ್ತಿರುವಾಗಲೇ ಅಲ್ಲಿಗೆ ಬಂದ ತಾಯಿಯು ನೋಟವನ್ನು ಗಗನ ಭಿತ್ತಿಯಲ್ಲಿ ನೆಟ್ಟು ನುಡಿದಳು "ಈಗೀಗ ಆಕಾಶ ತಿಳಿಯಾಗುತ್ತಿದೆ. ಇನ್ನು ಮಳೆ ಬರಲಾರದು ಸಂಧ್ಯಾ!"

"ಹೌದಮ್ಮಾ! ಹೇಗೂ ಇನ್ನು ಹದಿನೈದು ನಿಮಿಷ ಇದೆ. ಅಷ್ಟರೊಳಗಾಗಿ ಪೂರ್ತಿ ಕಡಿಮೆಯಾಗಬಹುದು ಅಲ್ಲವೇ ?"

"ಓಹೋ ! ನೋಡಿದರೆ ಹಾಗೇ ಅನಿಸುತ್ತೆ."

"ನಾನಾಗಲೇ ಪುಸ್ತಕಗಳನ್ನು ಜೋಡಿಸಿಟ್ಟಿರುವೆ."

"ಗಾಳಿಯ ಹೊಡೆತ ತುಂಬ ಇದೆ. ಇಲ್ಲದಿದ್ದರೆ ಮಳೆ ಬರುತಿತ್ತು."

"ನಾನು ಶಾಲೆಗೆ ಹೋಗುವವರೆಗೆ ಬರದಿದ್ದರೆ ಸಾಕು ; ಅನಂತರ ಎಷ್ಟಾದರೂ ಸುರಿದುಕೊಳ್ಳಲಿ !"

ಆ ಮುಗ್ಧದುಗ್ಧಭಾವ ಮುಗುಳು ನಗು ತರಿಸಿತು ಪಂಕಜಳಿಗೆ. ಮಗಳ ಕೆನ್ನೆಯನ್ನು ಮೆಲ್ಲಗೆ ಚಿವುಟಿ ಮುದ್ದಿಟ್ಟುಕೊಂಡಳು.

ರಸ್ತೆಯಲ್ಲಿ ಹಾದಿಗರು ಯಥಾರೀತಿ ಸಂಚರಿಸುತಿದ್ದಾರೆ. ಯಾರಿಗೂ ಮಳೆಗಾಳಿಯ ಆತಂಕವಿಲ್ಲ ; ಅವಸರವೂ ಇಲ್ಲ. ಅವರ ಚಟುವಟಿಕೆಯ ಕಡೆಗೆ ನೋಟವನ್ನು ಹೊರಳಿಸಿದ್ದ ಸಂಧ್ಯಾಮಣಿ ತಾಯಿಯ ಕಡೆ ತಿರುಗಿ ನುಡಿದಳು,

"ಇನ್ನು ಹೊತ್ತಾಯ್ತಮ್ಮ; ನಾನು ಹೊರಡುವೆ."

"ಹೋಗು.... ಆಕಾಶ ನಿರ್ಮಲವಾಗುತ್ತಿದೆ; ಇನ್ನು ಮಳೆ ಬರಲಾರದು."

ಸಂಧ್ಯಾಮಣಿ ಒಳಗಡೆ ಹೋಗಿ ಪುಸ್ತಕಗಳನ್ನು ತೆಗೆದುಕೊಂಡು ಹೊರಬಂದಳು. ತೊಟ್ಟ ಉಡುಪು ಗರಿಗರಿಯಾಗಿ ಮುಗ್ಧ ಮನೋಹರತೆಗೆ ಒಪ್ಪುವಂತಿತ್ತು. ಹೊನ್ನರಾಗದ ಮುಖದ ಮೇಲೆ ಮನಮೋಹನೀಯವಾದ ಎಳೆ ನಗುವನ್ನು ತೇಲಿಸಿ ತಾಯಿಗೆ 'ಟಾಟಾ' ಹೇಳಿ ಪ್ರಾಕಾರವನ್ನು ದಾಟಿದಳು ಸಂಧ್ಯಾ. ಕಣ್ಣುಗಳಲ್ಲಿ ತುಂಬಿದ ಔತ್ಸುಕ್ಯ, ಅರಳಿದ ಕಪೋಲಪಾಲಿಗಳು ಬಾಲ ಸಹಜವಾದ ಶೋಭೆಯನ್ನು ಇಮ್ಮಡಿಗೊಳಿಸಿದ್ದುವು.

ಕ್ರಮಕ್ರಮೇಣ ಮಳೆ-ಗಾಳಿ ಕಾಳಗ ಕಡಿಮೆಯಾಗುತ್ತಾ ಬಂದು ವಾತಾವರಣ ತಿಳಿಯಾಯಿತು. ಸಂಧ್ಯಾಮಣಿ ಹರ್ಷಿತಳಾಗಿ ದೂರದ ಹಾದಿಯನ್ನು ಸದ್ದಿಲ್ಲದೆ ಕಳೆದು ಶಾಲೆಯನ್ನು ಸೇರಿಕೊಂಡಳು.

ಮಧ್ಯಾಹ್ನ ಶಾಲೆ ಬಿಟ್ಟಾಗ ಹೊತ್ತು ನಾಲ್ಕರ ಅಂಚಿನಲ್ಲಿತ್ತು. ಮಕ್ಕಳೆಲ್ಲಾ ಶಾಲಾ ಬಂಧನದಿಂದ ಬಿಡುಗಡೆ ಹೊಂದಿದೊಡನೆ ಒಂದೇ ಬಾರಿಗೆ ಹೊರಬಿದ್ದರು-ಕಟ್ಟೆಯೊಡೆದ ಪ್ರವಾಹದಂತೆ.

ಗಗನ ಪ್ರಾಂತ್ಯದಲ್ಲಿ ಮಳೆ-ಗಾಳಿಗಳು ಮತ್ತೆ ಕಾಳಗ ಹೂಡಿವೆ. ಕಾರ್ಮೋಡಗಳು ಕಾರ್ಮಳೆಯನ್ನು ಈಗಿಂದೀಗಲೇ ಕರೆಯುವಷ್ಟು ಭಾರಭಾರವಾಗಿವೆ. 'ಹತ್ತಿರದವರೆಲ್ಲಾ ಬೇಗನೆ ಮನೆ ಸೇರಿಕೊಳ್ಳುತ್ತಾರೆ. ನನ್ನ ಗತಿಯೇನು?' ಎಂಬ ಚಿಂತೆಯಲ್ಲೇ ಮೆಟ್ಟಲಿಳಿದಳು ಸಂಧ್ಯಾ. ಬಿರುಗಾಳಿಯ ವೇಗಕ್ಕೆ ಸಿಕ್ಕಿ ಮುರಿದ ಸಣ್ಣಪುಟ್ಟ ರೆಂಬೆಗಳು, ಹಸಿರು ಸೂಸುವ ತರು ಪಲ್ಲವಗಳು, ಪುಷ್ಪದಳಗಳು, ಪುಷ್ಪರೇಣುಗಳು ರಸ್ತೆಯ ಮೇಲೆಲ್ಲಾ ಚಿತ್ರವಿಚಿತ್ರವಾಗಿ ಚೆಲ್ಲಿ ಸೂಸಿವೆ. ಮುಂದೆ ಹೆಜ್ಜೆ ಇರಿಸಿದಷ್ಟೂ ಹಿಂದೂಡುವ ಎದುರುಗಾಳಿ. ಮಕ್ಕಳು ಆಗಲೇ ತಮ್ಮ ತಮ್ಮ ಹಾದಿ ಹಿಡಿದಿದ್ದಾರೆ. ಎಷ್ಟೋ ಮಂದಿ ಎಡಬಲಗಳ ರಸ್ತೆಯನ್ನು ಹಿಡಿದು ಅದೃಶ್ಯರಾದರು. ಸಂಧ್ಯಾ ಮಳೆಗಾಳಿಗಳೊಂದಿಗೆ ಸ್ಪರ್ಧೆ ಹೂಡುವಂತೆ ಮುನ್ನಡೆದಳು. ಹಾದಿಯುದ್ದಕ್ಕೂ ಹೆಜ್ಜೆ ಹೆಜ್ಜೆಯನ್ನೂ ಹಿಮ್ಮೆಟ್ಟಿಸುವಂತಹ ಕಸಕಡ್ಡಿಗಳ ಸಹಿತ ಕೆಂಧೂಳಿನ ತೆರೆ. ವಾಮ ಮಾರ್ಗವನ್ನು ಕಳೆದು ಹೆದ್ದಾರಿಗೆ ಕಾಲಿಟ್ಟಾಗ

ಹಾದಿಗರು ತೀರಾ ಕಡಿಮೆಯಾದಂತೆ ಕಂಡಿತು. ಅಂಗಡಿಯ ಸಾಲು ಸಿಕ್ಕಬೇಕಾದರೆ ಇನ್ನೂ ಬಹಳಷ್ಟು ದೂರ ನಡೆಯಬೇಕು. ಮಳೆ-ಗಾಳಿಯ ಕಾಳಗ ನೋಡಿದರೆ ಅಲ್ಲಿಯವರೆಗೆ ನಿಧಾನಿಸುತ್ತೆ ಎಂಬುದು ಅನುಮಾನ. ಉಟ್ಟ ಬಟ್ಟೆ-ಬಾಚಿದ ಕೂದಲು ಗಾಳಿಪಟದಂತೆ ಹಾರಾಡುತ್ತವೆ. ಬಿರುಗಾಳಿಗೆ ಮುಖವೊಡ್ಡಲಾಗದೆ ತೀರ ನತ ಶಿರಸ್ಕಳಾದರೂ ಶರೀರ ಬಾಳೆಗಿಡದಂತೆ ತೂಗಾಡುತಿತ್ತು. ಹೇಗಾದರೂ ಅಂಗಡಿ ಸಾಲು ಮುಟ್ಟಿದರೆ ಸಾಕು. ಅನಂತರ ಮಳೆ ಬಿಟ್ಟಮೇಲೆ ಮನೆ ಸೇರಿಕೊಳ್ಳಬಹುದು, ಎಂಬ ಆಲೋಚನೆ. ಆದರೆ, ಹೆದ್ದಾರಿಯನ್ನು ಅರ್ಧ ಕ್ರಮಿಸುವಷ್ಟರಲ್ಲಿ ಅಲ್ಲಲ್ಲಿ ತಟಪಟನೆ ದಪ್ಪದಪ್ಪ ಮಳೆ ಹನಿಗಳು ಉದುರ ತೊಡಗಿದುವು. ಅಲ್ಲಿಂದ ಮುಂದೆ ಹಿಡಿಯಬೇಕಾದುದು ಬಲಭಾಗದ ಹಾದಿ. ಅತ್ತ ಅಂಗಡಿ ಸಾಲಿಗೆ ಇನ್ನೂ ದೂರ ನಡೆಯಬೇಕಾದುದರಿಂದ ಆ ಯೋಜನೆ ಬಿಟ್ಟು ನಾಲ್ಕಾರು ಮನೆಗಳ ಆಚೆ ರಸ್ತೆಯ ಬದಿಯಲ್ಲಿದ್ದ ಹೆಮ್ಮರದ ಆಶ್ರಯ ಬಯಸಿ ಅದರತ್ತ ಭೀತ ಕಾತರ ದೃಷ್ಟಿಯನ್ನು ಹರಿಸಿದಳು. ಆ ಹಚ್ಚ ಹಸುರಾಂತ ವೃಕ್ಷ ಗಾಳಿಯ ಹೊಡೆತಕ್ಕೆ ಸಿಕ್ಕಿ ಅತ್ತಿತ್ತ ತೂಗಾಡುತಿದ್ದರೂ ಕೈಬೀಸಿ ಬಾಬಾರೆಂದು ಕರೆಯುವಂತಿದೆ ! ಇನ್ನು ತಡ ಮಾಡುವಂತೆಯೇ ಇಲ್ಲ. ಅದರ ಹೊರತು ಅಲ್ಲಿ ಬೇರೆ ಆಶ್ರಯವೇ ಇಲ್ಲ. ಇಕ್ಕೆಲಗಳ ಬೃಹದ್ ಗೃಹಗಳು ಪ್ರಾಕಾರದ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡು ಒಳಗಡೆ ಶಾಂತ ಪ್ರೀತ ವೈಭವದಲ್ಲಿ ಮೈಮರೆತಿವೆ.

ಸಂಧ್ಯಾಮಣಿ ಓಡಿಹೋಗಿ ಆ ಮರದಡಿ ನಿಂತುಕೊಂಡಳು.

ಪನ್ನೀರಿನ ಬಿಂದುಗಳಂತೆ ಬಿಡಿಬಿಡಿಯಾಗಿ ಬೀಳುತಿದ್ದ ಮಳೆ ಸ್ವಲ್ಪ ಹೊತ್ತು ಕಳೆಯುವುದರೊಳಗಾಗಿ ಧಾರೆಧಾರೆಯಾಗಿ ಸುರಿಯಹತ್ತಿತು. ಹೆಮ್ಮರದ ಹಸುರಟ್ಟಣೆಯನ್ನು ಭೇದಿಸಿ ಬೀಳುತಿದ್ದ ಹನಿಗಳು ಮುಖ ಮೈಗಳನ್ನು ತೋಯಿಸಿ ಒದ್ದೆಯ ಮುದ್ರೆಯನ್ನು ಒತ್ತಿದುವು. ತೊಯ್ದ ಮಣ್ಣಿನ ಕಮ್ಮನೆ ಕಂಪು ವಿನೂತನ ಹೂಗಂಪಿನಂತೆ ಮೂಗನ್ನು ಅವ್ಯಾಹತವಾಗಿ ಮುತ್ತ ತೊಡಗಿತು. ಹನಿಗಳು ಒಟ್ಟೊಟ್ಟಾಗಿ ಬಿದ್ದ ರಭಸಕ್ಕೆ ಸಿಡಿದ ಮಣ್ಣು ಉಡುಪಿನ ಮೇಲೆ ಮಣ್ಣಿನ ಚಿತ್ತಾರವನ್ನು ಚಿತ್ರಿಸುತಿತ್ತು. ಅಭಿಶಸ್ತ ಹೆಜ್ಜೆಗಳು ಕೆಸರಿನ ಕಮಲವಾದುವು. ಕಣ್ಣುಗಳಂಚಿನಲ್ಲಿ-ಕಪೋಲ

ಪ್ರಾಂತದಲ್ಲಿ ಕಾಣುವ ಹನಿಗಳು ಕಂಬನಿಗಳೋ ಮಳೆ ಹನಿಗಳೋ ಊಹಿಸುವುದು ಕಷ್ಟ.

ಮಳೆಗಾಳಿಯ ಆಘೂರ್ಣನವೇಗದಿಂದ ಗಿಡಮರಗಳ ಎಲೆಗೈಗಳು ಲಟಲಟನೆ ಮುರಿದು ಬೀಳುತಿದ್ದುವು.

ಧೋ, ಧೋ, ಧೋ, ಧೋ! ಭೈರವ ವರ್ಷದ ರುದ್ರಧಾರೆ ಮಾರ್ದವಮತ್ತ ಕಂಠದಿಂದ ಹರಿಯುತಿತ್ತು.

ಭಯ-ಕಳವಳ ಎಳೆಯ ಮನವನ್ನು ಸಮೂಲವಾಗಿ ಅಲುಗಾಡಿಸುತಿದ್ದರೂ ತನ್ನನ್ನು ತಾನು ಪತೋಟೆಯಲ್ಲಿಟ್ಟುಕೊಳ್ಳುತ್ತ ಮೈ ಮುದುಡಿಕೊಂಡು ನಿಂತಳು. ಮರದ ರೆಂಬೆಗಳಿಂದ ಹರಿದು ಬರುವ ನೀರು ಸೂರಿನಿಂದ ಸುರಿಯುವಂತೆ ಬೀಳುತಿದ್ದು ಮೈಕೈಗಳು ಪುಸ್ತಕಗಳೊಂದಿಗೆ ತೊಪ್ಪನೆ ತೊಯ್ಯ ತೊಡಗಿದುವು. ಮೈ ತೊಯ್ದುದಕ್ಕಿಂತ ಪುಸ್ತಕಗಳ ವಿಚಾರ ತುಂಬ ಆತಂಕಮಯ. ಬರೆದ ನೋಟ್ಸೆಲ್ಲಾ ಹಾಳಾಗುವುದು ಸಹಿಸಲಾಸಲ್ಲ. ಮುಂದೇನು ಗತಿ ಎಂಬ ಚಿಂತೆ ಕೆಲವೊಮ್ಮೆ ತೀರ ಸನಿಹದಲ್ಲಿ ಹರಿದಾಡುವ ವಾಹನಗಳ ಚಕ್ರ ಚರಣಕ್ಕೆ ಸಿಕ್ಕಿ ಜಪ್ರನೆ ಹಾರುವ ಕೆಸರ ನೀರು ಮೈಯನ್ನು ಮುದ್ದಿಡುವುದೂ ಉಂಟು. ಮಳೆ ಕಡಿಮೆಯಾಗುವ ಸೂಚನೆಯಂತೂ ಇಲ್ಲವೇ ಇಲ್ಲ.

ಅದೇ ಸಮಯದಲ್ಲಿ ಎದುರು ಮನೆಯ ಯಜಮಾನ ವರಾಂಡಕ್ಕೆ ಬಂದರು. ಅವರ ನೋಟಕ್ಕೆ ಪ್ರಪ್ರಥಮವಾಗಿ ಕಂಡುಬಂದ ಬಾಲಕಿಯ ಕರುಣಾಯಿತ ಚಿತ್ರಾತುರ ಮನವನ್ನು ಬೆಣ್ಣೆಯಂತೆ ಕರಗಿಸಿತು. ತಕ್ಷಣ ಒಳಗಡೆ ಹೋಗಿ ಕೊಡೆಯೊಂದಿಗೆ ಧಾವಿಸಿ ಬಂದು ಕೊಡೆಯನ್ನು ಮುಂದೆ ಮಾಡಿ "ಅಯ್ಯೋ....ಎಂಥ ಮಳೆಯಲ್ಲಿ ನೆನೆಯುತಿದ್ದಿ! ಒಳಗೆ ಬಾಮ್ಮಾ" ಎಂದರು ಕರುಣ ಕಾತರ ಕಂಠದಿಂದ.

ಅವಳು ಅಲ್ಲಿಂದ ಹಂದದೆ ಭಯಮಿಶ್ರಿತ ನೋಟದಿಂದ ಅವರನ್ನು ನೋಡಿದಳು.

"ಬಾ ಮಗೂ! ಹೆದರಿಕೊಳ್ಳಬೇಡ."

"........."

"ಮಳೆ ಬಿಟ್ಟಮೇಲೆ ಹೋಗುವಿಯಂತೆ. ಏನೂ ತಿಳಿದುಕೊಳ್ಳಬೇಡ."

ಆದರೂ ಅವಳಿಗಾದ ಭಯ ಅಷ್ಟಿಷ್ಟಲ್ಲ. ಮುಗ್ಧ ಮೃಗಶಾಬಕದಂತೆ ಬೆರಗುಗಣ್ಣುಗಳಿಂದ ಅವರ ಕಡೆ ನೋಡಿದಳು. ಮುಖದಲ್ಲಿ ಭೀತಭಾವ ಸ್ಪಷ್ಟವಾಗಿ ಕಾಣಿಸುತಿತ್ತು. ಅವರು ಪುನಃ ಅನುನಯದಿಂದ ತಲೆಯನ್ನು ನೇವರಿಸುತ್ತ ಸಾಂತ್ವನಗೈಯ್ಯುವ ದನಿಯಲ್ಲಿ ನುಡಿದರು,

"ಈ ಜಡಿಮಳೆಯಲ್ಲಿ ತೊಯ್ಯುತ್ತ ಇಲ್ಲೇ ನಿಂತುಕೊಳ್ಳುವ ಭಯವಾದರೂ ಏನು? ನೀನೇ ನಮ್ಮ ಮನೆಗೆ ಸೀದಾಬರಬಹುದಾಗಿತ್ತು. ಅಷ್ಟೇಕೆ ಭಯ-ಸಂಕೋಚ? ವರಾಂಡದಲ್ಲಿ ನಿಂತುಕೊಳ್ಳಬಹುದಿತ್ತಲ್ಲ?"

ಸಂಧ್ಯಾ ಹೇಳಲಾರದೆ, ಹೇಳಿದಳು "ಪರವಾಯಿಲ್ಲ. ಇಷ್ಟರಲ್ಲೇ ಮಳೆ ಬಿಡಬಹುದು."

"ಛೆಃ! ಛೆಃ! ಎಲ್ಲಿಯಾದರುಂಟೇ? ಮನುಷ್ಯರ ಬಳಿ ಇಷ್ಟೊಂದು ಸಂಕೋಚ? ಬಾ, ಬಾ. ಮಳೆ ಬಿಟ್ಟ ಮೇಲೆ ಹೋಗಬಹುದು." ಸ್ನೇಹ ಪ್ರೇಮಗಳ ಗಣಿಯಾಗಿ ನುಡಿದರು ಅವರು.

ಆಗಲೂ ಅವಳಿಗೆ ಧೈರ್ಯ ಮೂಡಲಿಲ್ಲ. ಮನಃಪ್ರಾಣಗಳು ಆಮೆಯಂತೆ ಮುದುಡಿಕೊಂಡುವು. ತೀರ ಅಪರಿಚಿತರಾದ ಅವರೊಂದಿಗೆ ಹೋಗಲು ಆತ್ಮಶಃ ಅಳುಕು. ಅವರು ಎಷ್ಟೇ ನಲ್ಮೆಯಿಂದ ಒತ್ತಾಯಿಸಿದರೂ ಅವಳು ಮೆಲಮೆಲ್ಲನೆ ಕೈಯ್ಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದಳು. ಕಣ್ಣುಗಳಲ್ಲಿ ಭಯದ ಛಾಯೆ ಮೊಳೆಯಿತು.

"ಅಷ್ಟೇಕೆ ಸಂಕೋಚ ಮಗೂ, ನಾವು ಮನುಷ್ಯರಲ್ಲವೇ?"

ಆ ಮಾತಿಗೆ ಉತ್ತರಿಸುವ ಬದಲು ಬಾಲಸಹಜವಾದ ಬರೀ ಅನುಮಾನ ತುಂಬಿದ ದೃಷ್ಟಿ ಅವರೆಡೆಗೆ ಹರಿಯಿತು. ಆ ಜಡಿಮಳೆಯಲ್ಲಿ ಅವರೂ ತನಗಾಗಿ ತೊಯ್ಯುತ್ತಿದ್ದಾರೆ. ತಾನು ತಡಮಾಡಿದಷ್ಟು ಅವರಿಗೆ ತೊಂದರೆಯೇ ಎಂಬುದು ಮನವರಿಕೆಯಾದರೂ ಎಳೆಯ ಮನಸ್ಸಿಗೆ, ಅಪ್ರಬುದ್ಧ ಬುದ್ಧಿಗೆ ಪ್ರೋತ್ಸಾಹ ಮೂಡುತ್ತಲೇ ಇಲ್ಲ. ಒಂದೆರಡು ಕ್ಷಣ ಯೋಚಿಸಿದರೂ ಏನು ಮಾಡಬೇಕೋ ಬಗೆ ಹರಿಯಲಿಲ್ಲ. ಬಾಲಕಿ ತಬ್ಬಿಬ್ಬಾದಳು.

"ಬಾ, ಮಗೂ! ಏನೂ ಭಯ ಪಡಬೇಡ." ಎನ್ನುತ್ತ ಹಿಡಿದ ತೋಳನ್ನು ಬಿಡದೆ ಮತ್ತೆ ಒತ್ತಾಯಿಸಿದರು ಅವರು. ಸ್ವಭಾವ ಜನ್ಯವಾದ ಸರಳತೆ ಅಂಗ ಭಂಗಿಯಲ್ಲಿ ವ್ಯಕ್ತಗೊಳ್ಳುತಿತ್ತು.

ಸಂಧ್ಯಾಮಣಿ ಸ್ವಲ್ಪ ಹಿಂದೆ ಹಿಂದೆ ಸರಿಯುತ್ತ ಅವರನ್ನು ತಲೆಯೆತ್ತಿ ನೋಡಿದಳು. ಅಡ್ಡ ಮಳೆಯ ಹನಿಗಳು ತಟಪಟನೆ ಮುಖದಮೇಲೆ ಬಿದ್ದುವು. ಒಡನೆ ಅವರು ಕೊಡೆಯನ್ನು ಇನ್ನಷ್ಟು ಮುಂದೆ ಮಾಡಿ, ಮಳೆಗೆ ತಡೆ ಹಿಡಿದು ತೋಳನ್ನು ಮೃದುವಾಗಿ ಅದುಮಿ ಹಿಡಿದುಕೊಂಡು ದನಿಯಲ್ಲಿ ಹಾಲ್ಜೇನಿನ ಝರಿಯನ್ನು ಹರಿಸಿದರು,

"ಹೆದರಿಕೊಳ್ಳಬೇಡ.....ಅಷ್ಟೊಂದು ಸಂಕೋಚವಿರಬಾರದು."

ಆದರೆ,

ಬಾಲಕಿ ಅಂಜುತ್ತಂಜುತ್ತ ನುಡಿದಳು "ಇನ್ನೇನು ಮಳೆ ನಿಂತು ಹೋಗುತ್ತೆ, ಅನಂತರ ಮನೆಗೆ ಹೋಗುವೆ."

"ಅಷ್ಟು ಭಯವೇಕೆ ? ನಾನು ನಿನ್ನಂತೆಯೇ ಅಲ್ಲವೆ ? ಅದೇಕೆ ನನ್ನಲ್ಲಿ ನಂಬುಗೆ ಮಾಡುವುದಿಲ್ಲ ?"

"................"

"ಬಾ, ಮಗೂ ! ಹೆದರಬೇಡ."

ಸಂಧ್ಯಾಮಣಿ ಮಾತಾಡಲಿಲ್ಲ; ನೋಟ ಮಳೆಗಾಳಿಯಕಡೆ ನಿಟ್ಟಿಸಿತು.

"ಗಾಳಿ ಜೋರಾಗಿದೆ. ಮರದ ಕೊಂಬೆ ಮುರಿದುಕೊಂಡರೆ ಕಷ್ಟ!" ಎಂದರು ವೃದ್ಧಮಹಾಶಯ.

ಅಷ್ಟು ಮಾತುಕತೆಯೊಳಗಾಗಿ ಅವರ ಮೈಯ್ಯೂ ಪೂರ್ತಿ ತೊಯ್ದು ಹೋದುದನ್ನು ಗಮನಿಸಿದಳು ಸಂಧ್ಯಾ. ಇನ್ನು ಹೆಚ್ಚುಹೊತ್ತು ಅವರನ್ನು ಕಾಯಿಸುವುದು ಸರಿಯಲ್ಲ ಎನಿಸಿದಾಗಲೇ ಅವರು "ಬಾ, ಮಗೂ!" ಎನ್ನುತ್ತ ಅವಳ ಉತ್ತರಕ್ಕೂ ಕಾಯದೆ ಅವಳನ್ನು ಎಳೆದುಕೊಂಡೇ ಹೊರಟಾಗ ಅವಳು ಯಾವ ಪ್ರತಿರೋಧವನ್ನೂ ತೋರದೆ ಅವರೊಡನೆ ಓಡುತ್ತಲೇ ಹೋಗಿ ವರಾಂಡವನ್ನು ಹತ್ತಿದಳು. ಅವರು ತೊಯ್ದ ಪುಸ್ತಕಗಳನ್ನು ಈಸಿಕೊಂಡು ಮೇಜಿನ ಮೇಲಿಟ್ಟು ಒಳಬಾಗಿಲಬಳಿ ನಿಂತು ಉಚ್ಚಸ್ವರದಲ್ಲಿ ಕರೆದರು,

"ನಾಗಮ್ಮಾ.....!"

ಆ ಕರೆಗೆ ಉತ್ತರವಾಗಿ ಇಳಿ ವಯಸ್ಸಿನ ಸಾಮಾನ್ಯ ಸ್ತ್ರೀಯೊಬ್ಬಳು ಹೊರಬಂದಳು. ಉಟ್ಟ ಉಡಿಗೆ ತೊಡಿಗೆ ಅವಳು ಪರಿಚಾರಕಳೆಂಬುದನ್ನು ಸಾರಿ ಹೇಳುವಂತಿತ್ತು.

"ಈ ಮಗುವನ್ನು ಒಳಗಡೆ ಕರೆದುಕೊಂಡುಹೋಗಿ ಟವಲ್ಲಿನಿಂದ ಒರಿಸು. ಮಳೆಯಲ್ಲಿ ತೊಯ್ದಿದ್ದಾಳೆ."

ಆ ಮಾತಿಗೆ ಮಣಿದು ಒರಿಸಲುದ್ಯುಕ್ತಳಾದ ಅವಳು ಎರಡು ಹೆಜ್ಜೆ ಮುಂಬರಿದು ಕರೆದಳು,

"ಬಾಮ್ಮಾ, ಒಳಗೆ ಮೈ ಒರಿಸುವೆ."

ಸಂಧ್ಯಾ ನಿಂತಲ್ಲಿಂದ ಕದಲದೆ ದೀನದೃಷ್ಟಿಯಿಂದ ಅವಳನ್ನು ನೋಡಿದಳು. ಮುಖಮುದ್ರೆ ಆತಂಕ-ಕಳವಳಗಳ ಕಪ್ಪುಮುದ್ರೆಯಿಂದ ಅಂಕಿತವಾಯಿತು. ಅವಳ ಮನಸ್ಥಿತಿಯನ್ನರಿತು "ಟವಲ್ಲನ್ನು ಇಲ್ಲೇ ತಾ." ಎಂದರು ಯಜಮಾನ-ಪ್ರಸನ್ನ ಮುಖಬಿಂಬದಲ್ಲಿ ಮುಗುಳು ನಗೆಯನ್ನು ಸೂಸಿ.

ನಾಗಮ್ಮ ಟವಲ್ಲು ತರಲು ಒಳಹೋದಳು.

"ನನಗೆ ಮಕ್ಕಳೆಂದರೆ ಅಪಾರವಾದ ಪ್ರೀತಿ ; ನೀನು ನನ್ನ ಬಳಿ ಎಂದೂ ಹೆದರಿಕೊಳ್ಳಬೇಡ ; ಸಂಕೋಚವೂ ಕೂಡದು." ಎಂದರು ಅವರು; ಸಂಧ್ಯಳ ಕೆನ್ನೆಗಳನ್ನು ಅತ್ಯಂತ ಆತ್ಮೀಯತೆಯಿಂದ ನೇವರಿಸುತ್ತ.

"........"

"ನಿನ್ನ ಹೆಸರೇನು ಮಗೂ ?"

"ಸಂಧ್ಯಾ !"

"ಸಂಧ್ಯಾ ! ಬಲು ಸುಂದರವಾದ ಹೆಸರು. ನೀನು ಸಂಧ್ಯಾರಾಣಿಯೇ ಹೌದು!" ಉದ್ಗಾರ ತೆಗೆದರು ವೃದ್ಧಮಹಾಶಯ. ಆ ಮಾತು ಕೇಳಿ ಅವಳ ಹಾಲ್ಗೆನ್ನೆಗಳಲ್ಲಿ ಓಕುಳಿ ಪೂಸಿದಂತೆ ಲಜ್ಜೆಯ ರಂಗೊರೆದು, ಕಿಸಲಯಕೋಮಲ ತುಟಿಗಳಲ್ಲಿ ಎಳೆನಗುವಿನ ಮಂಗಳರೇಖೆ ಹರಿದಾಡಿತು. ಅತ್ಯಂತ ಮುಗ್ಧದುಗ್ಧಭಾವದಿಂದ "ನಾನು ಸಂಧ್ಯಾರಾಣಿ ಅಲ್ಲ ; ಸಂಧ್ಯಾಮಣಿ."

"ಓ ಹಾಗೇನೂ?"ಹಾಸ್ಯಭಾವದಿಂದ"ನನ್ನ ಹೆಸರು ಗೊತ್ತೇ ಮಗೂ?"

"ಇಲ್ಲ." ಎಂಬಂತೆ ತಲೆಯಾಡಿಸಿದಳು ಸಂಧ್ಯಾಮಣಿ.

"ನನ್ನ ಹೆಸರು 'ಆದಿತ್ಯಬಾಬು.' ಎಲ್ಲರೂ ನನ್ನನ್ನು 'ಬಾಬು' ಎಂದು ಕರೆಯುತ್ತಾರೆ. ನೀನು ಸಹ ಅದೇ ರೀತಿ ಕರೆಯಬಹುದು."

ಸಂಧ್ಯಾ ಮಾತಾಡದೆ ಮುಗುಳು ನಕ್ಕಳು.

ನಾಗಮ್ಮ ಒಳಗಿನಿಂದ ಟವಲ್ಲನ್ನು ತಂದಳು. ಇನ್ನೊಬ್ಬ ಪರಿಚಾರಕನೂ ಅಲ್ಲಿ ತಲೆಹಾಕಿದ. ಆದಿತ್ಯಬಾಬು ಅವಳಿಂದ ಟವಲ್ಲನ್ನು ತೆಗೆದುಕೊಂಡು ತಾವೇ ಅವಳ ತಲೆ ಮೈಗಳನ್ನು ಒತ್ತಿ ಒತ್ತಿ ನೀರು ತೆಗೆದರು. ಲಂಗವನ್ನು ನವುರಾಗಿ ಹಿಂಡಿ ಕೈಕಾಲುಗಳನ್ನೂ, ಮುಖವನ್ನೂ ಒರಸಿದ ನಂತರ ಪುಸ್ತಕಗಳನ್ನು ಒರಸಿ ಬಿಡಿ ಬಿಡಿಯಾಗಿ ಆರಲು ಇಟ್ಟರು. ಅವರ ಸ್ವಚ್ಛ ಕಾಂತಿಯ ಭವ್ಯಾಕೃತಿಯು ಬಗ್ಗಿ ಬಗ್ಗಿ ಏಳುವುದನ್ನು ಸಂಧ್ಯಾ ತುಟಿ ಪಿಟಕ್ಕೆನ್ನದೆ ಈಕ್ಷಿಸಿದಳು. ಎಲ್ಲವೂ ಅವರ ಸ್ವಂತ ಕೆಲಸದಂತೆ ಅತ್ಯಂತ ಶ್ರದ್ಧೆಯಿಂದ, ಪ್ರೀತಿ ವಿಶ್ವಾಸಗಳಿಂದ ನಡೆಯುತಿತ್ತು.

"ನಿನಗೆ ನನ್ನ ಕಂಡರೆ ಭಯವೇ ಮಗೂ ?" ಎಂದರು ಬಾಬು, ಅರಳಿದ ಮುಗುಳು ನಗೆಯೊಡನೆ.

ಆಗ ಸಂಧ್ಯಳಿಗೆ ಏನುತ್ತರಿಸಬೇಕೋ ಹೊಳೆಯಲಿಲ್ಲ. ಸುಮ್ಮನೆ ನಕ್ಕಳು. ಆ ಮುಹೂರ್ತದಲ್ಲಿ ಯಾರಾದರೂ ಸರಿಯಾಗಿ ಗಮನಿಸಿದ್ದಲ್ಲಿ ಅದಕ್ಕೆ ಯಾವ ಅರ್ಥವನ್ನಾದರೂ ಕೊಡಬಹುದಾಗಿತ್ತು. ಆದರೂ ಆದಿತ್ಯ ಬಾಬು ವಿಪರೀತಾರ್ಥವನ್ನೇನೂ ಕಲ್ಪಿಸಲಿಲ್ಲ. ತುಟಿಗಳಲ್ಲಿ ಮೃದುಮಂದ ಹಾಸವನ್ನು ಸೂಸಿ ನಲ್ಮೆಯಿಂದ ಮೈದಡವಿದರು-ಮೈಯೆಲ್ಲಾ ಆನಂದದ ಆಗರವಾಗಿ.

"ನಿನಗೇಕೆ ಅಷ್ಟು ಸಂಕೋಚ ? ನೀನು ಎಂದೂ ಹೊಸಬರೊಡನೆ ಬೆರೆಯುವುದಿಲ್ಲವೇ ?"

"ಸಂಕೋಚವೇನೂ ಇಲ್ಲ. ಸುಮ್ಮನೆ...."

ಆ ನುಡಿಯನ್ನು ಬಹಳ ಕಷ್ಟದಿಂದ ಹೊರಹಾಕಿದಳು ಸಂಧ್ಯಾಮಣಿ. ನೋಟ ಹೊರ ವಾತಾವರಣದ ಕಡೆ ನಿಟ್ಟಿಸಿ ಹಿಮ್ಮರಳಿತು. ಬಿರುಮಳೆ ಇನ್ನೂ ಸುರಿಯುತ್ತಲೇ ಇದ್ದುದರಿಂದ ಇನ್ನೂ ಎಷ್ಟು ಹೊತ್ತು ಇಲ್ಲಿರಬೇಕೋ ಎಂಬ ಚಿಂತನೆ ಮನದಾಳದಲ್ಲಿ ತುಂಬಿತು.

"ನಿನ್ನಲ್ಲಿ ಆತ್ಮೀಯ ಆಕರ್ಷಣೆ ಇದೆ. ಇಲ್ಲಿಗೆ ನಿನ್ನ ಅನಿರೀಕ್ಷಿತ ಭೇಟಿ ಅದಾವ ಜನ್ಮದ ಪ್ರೀತಿಯ ದ್ಯೋತಕವೋ" ಎಂದರು ಬಾಬು. ಮುಖ ಬಿಂಬದಲ್ಲಿ ಭಾವಗಾಂಭೀರ್ಯದಿಂದ ಕೂಡಿದ ಪ್ರಶಾಂತತೆ ನೆಲೆಸಿತ್ತು.

ಆದರೆ,

ಆ ವಾಕ್ಯಸರಣಿ, ಆ ಭಾವ ಗಾಂಭೀರ್ಯ ಎಷ್ಟರ ಮಟ್ಟಿಗೆ ಸಂಧ್ಯಳಿಗೆ ಅರ್ಥವಾಯಿತೋ ಊಹಿಸುವುದು ಕಷ್ಟ. ಭಯ-ಸಂಕೋಚ ಸ್ವಲ್ಪ ಕಡಿಮೆ ಯಾಗಿದ್ದರೂ ಅವಳ ಗಮನವೆಲ್ಲಾ, ಪ್ರಕ್ಷುಬ್ಧ ವಾತಾವರಣದ ಮೇಲೆ. ಅವಳು ಏನೂ ಹೇಳಲಿಲ್ಲ.

"ಬಹಳ ತೊಯ್ದಿದ್ದಿ ಮಗೂ ! ಶೀತಭಾಧೆ ಬಾಧಿಸದಂತೆ ಎಚ್ಚರಿರ ಬೇಕು, ತಿಳಿಯಿತೇ ?"

"ಪರವಾಯಿಲ್ಲ; ಎಷ್ಟೋಬಾರಿ ತೊಯ್ದಿರುವೆ." ಎಂದಳು ಹುಡುಗಿ ಧೈರ್ಯವನ್ನು ಪ್ರದರ್ಶಿಸುತ್ತ.

"ಆದರೂ ಅಲಕ್ಷ್ಯ ಕೂಡದು."

"ಸ್ವಲ್ಪ ಹೊತ್ತಿನಲ್ಲಿ ಬಟ್ಟೆ ಆರಿಕೊಳ್ಳುತ್ತವೆ. ಅದರಿಂದ ಅಂತಹ ಭಾದಕವೇನೂ ಆಗಲಾರದು."

"ಮನೆ ಹತ್ತಿರದಲ್ಲಿದೆಯೇ ?"

"ಹೌದು. ಇಲ್ಲಿಂದ ಅಷ್ಟು ದೂರವೇನೂ ಇಲ್ಲ."

"ಮನೆಗೆ ಹೋದೊಡನೆಯೇ ಬಟ್ಟೆ ಕಳಚಿಹಾಕು."

ಅನಂತರ ಸ್ವಲ್ಪ ಹೊತ್ತು ಕಳೆದ ಮೇಲೆ ಮಳೆಗಾಳಿಯ ಆವೇಗ ಕಡಿಮೆಯಾಗಹತ್ತಿತು. ಸಂಧ್ಯಾಮಣಿಯ ಸುಂದರ ಲೋಚನಗಳು ಗಗನ ತಲವನ್ನು ಮತ್ತೆ ಮತ್ತೆ ನಿಟ್ಟಿಸಿದುವು. ಮಳೆ ಇಷ್ಟಿದ್ದರೆ ಹೆಚ್ಚಲ್ಲ ನಾನು ಮನೆಗೆ ಹೋಗಿಬಿಡಬಹುದು ಎಂಬ ಭಾವನೆ ಬಲಿಯುತಿತ್ತು. ಹಾಗೇ ನೋಡುನೋಡುತ್ತ ದೃಷ್ಟಿಯನ್ನು ಸಸ್ಯಸಮೃದ್ಧವಾದ ಅಂಗಳದ ಕಡೆ ಹರಿ ಸಿದಳು. ಅರಳಿದ ನಾನಾಬಗೆಯ ಹೂಗಳು ನೀರು ತುಂಬಿ ಭಾರಭಾರ ವಾಗಿದ್ದವು. ಹಳೆಯ ಹೂಗಳ ದಳಗಳುದುರಿ ತುಂಬಿದ ಮಳೆನೀರಿನಲ್ಲಿ ಪುಷ್ಪಿತ ದೋಣಿಗಳಂತೆ ಹರಿದುಹೋಗುತಿದ್ದುದನ್ನು ನೋಡಿ ಎಳೆಯ ಮನಸ್ಸು ಪುಳಕಗೊಂಡಿತು. ದೃಷ್ಟಿಯನ್ನು ಅದರ ಮೇಲೇ ಚೆಲ್ಲಿಕೊಟ್ಟಳು. ನಾನಾವರ್ಣರಂಜಿತ ಹೂದಳಗಳು ಒಂದಕ್ಕೊಂದು ಸ್ಪರ್ಧೆ ಹೂಡಿದಂತೆ ಮುನ್ನುಗ್ಗುತ್ತಿವೆ.

ಮಳೆ ಕಡಿಮೆಯಾಗುತಿದ್ದುದನ್ನು ಗಮನಿಸಿ ಆದಿತ್ಯಬಾಬು ಅಂದರು, "ಇನ್ನು ಸ್ವಲ್ಪ ಹೊತ್ತಿನಲ್ಲಿ ಮಳೆ ಕಡಿಮೆಯಾಗಬಹುದು."

ಸಂಧ್ಯಾ ಪುಷ್ಪ ಲೋಕದಿಂದ ದೃಷ್ಟಿಯನ್ನು ಹಿಂತೆಗೆದು "ಹೌದು, ಇನ್ನು ಹೋಗುವೆ." ಎಂದಳು ಸಂತಸ ಸೂಸಿ.

ಅವರು ಒಳಹೋಗಿ ನೀಲವರ್ಣದ ಸಣ್ಣ ಕೊಡೆಯೊಂದನ್ನು ತಂದು ಕೊಟ್ಟು, ಪುಸ್ತಕಗಳನ್ನು ಜೋಡಿಸಿ ಅವಳ ಕೈಗಿಟ್ಟು "ನೀನು ಇನ್ನೆಂದೂ ನನ್ನ ಬಳಿ ಸಂಕೋಚಿಸಬೇಡ ; ಆಯಿತೇ?" ಎನ್ನುತ್ತ ನೈಬಾಗಿ ಅವಳ ಹಣೆಗೊಂದು ಸಿಹಿ ಮುತ್ತನೊತ್ತಿ ಮುದ್ದಿಟ್ಟುಕೊಂಡರು.

"ಮಳೆ ಕಡಿಮೆಯಾಗಿದೆ; ಇನ್ನೇಕೆ ಕೊಡೆ? ಹಾಗೆಯೇ ಹೋಗಿ ಬಿಡುವೆ."

"ಛೀ! ಛೀ! ಎಲ್ಲಿಯಾದರುಂಟೇ? ಇನ್ನೂ ಸಂಕೋಚ ಬಿಡಲಿಲ್ಲವೇ?"

"ನಿಮಗೆ ತೊಂದರೆಯಾಗಬಾರದು."

"ನನಗೆಲ್ಲಿಯ ತೊಂದರೆ? ನಾನು 'ಕೊಡೆ' ಅಲ್ಲವಲ್ಲಾ?" ಎಂದರು ಬಾಬು ಮಂದಹಾಸ ಹರಿಸಿ.

ಸಂಧ್ಯಾ ಪ್ರತಿನಗು ತೋರಿದಳು. ಕಪೋಲ ಪಾಲಿಯಲ್ಲಿ ಸುಂದರ ಗುಳಿಗಳು ಮೂಡಿದುವು.

ಅವಳ ತಲೆಯನ್ನು ಪ್ರೇಮಾದರದಿಂದ ನೇವರಿಸಿ ನುಡಿದರು ಬಾಬು,

"ಮೆಲ್ಲಗೆ ಹೋಗು ಮಗೂ! ಕೆಸರೊತ್ತಿದ ರಸ್ತೆ ಜಾರಬಹುದು."

"ಆಗಲಿ."

ಸಂಧ್ಯಾ ಅಮಿತಾನಂದದಿಂದ ತಲೆಯೆತ್ತಿ ನೋಡಿದಳು. ಅವರು ನಿಂತ ನಿಲುವು, ಬೋಳು ತಲೆ, ಭವ್ಯಾಕೃತಿ, ಮುಖಭಾವ ಅಸಾಧಾರಣ ವ್ಯಕ್ತಿಗೆ ಉಪಮಾನವಾಗುವಂತಿತ್ತು. ಸರಿಯಾಗಿ ಗಮನಿಸಿದರೆ ತಮ್ಮ ಮನೆಯಲ್ಲಿರುವ ಚಿತ್ರಪಟದ ಸುಭಾಸರಿಗೂ ಇವರಿಗೂ ಇರಬಹುದಾದ ವ್ಯತ್ಯಾಸವೆಂದರೆ ಅವರ ಮಿಲಿಟರಿ ಸಮವಸ್ತ್ರ ಮಾತ್ರ ಎನಿಸಿತು ಮುಗ್ಧ ಬುದ್ಧಿಗೆ. ಆ ಮುಹೂರ್ತದಲ್ಲಿ ಏನೋ ಒಂದು ಭಗೆಯ ಭಾವಪರವಶತೆ ಮನದಲ್ಲಿ ತುಂಬಿ ಬಂತು.

* * * *

ಸಾಧಾರಣ ಮಳೆ ಬೀಳುತ್ತಲೇ ಇತ್ತು. ಬೃಹದ್ ನೀಲಾಕಾಶವೆಲ್ಲಾ ಭಾರಾಕ್ರಾಂತವಾದ ಕಪ್ಪನೆಯ ಕಾರ್ಮೋಡಗಳಿಂದ ತುಂಬಿಹೋಗಿದೆ.

ಈಗ ಸ್ವಲ್ಪ ಕಡಿಮೆಯಾಗಿರುವ ಮಳೆ ಇನ್ನೊಂದು ಘಳಿಗೆಯಲ್ಲಿ ಸುರಿಯಲೂ ಬಹುದು. ರಸ್ತೆಯ ಮೇಲೆ ಮಳೆಯ ನೀರು ಕೆಂಪಗೆ ಕೆನ್ನೀರಾಗಿ ಹರಿಯು ತಿತ್ತು-ಯಮರಾಜ ರಕ್ತಾಕ್ತ ಹಸ್ತವನ್ನು ಅದ್ದಿ ತೊಳೆದಂತೆ. ಜಲಮಯ ವಾದ ರಸ್ತೆಯಲ್ಲಿ ಸಂಧ್ಯಾ ದುಪುದುಪು ಹೆಜ್ಜೆ ಇಡುತ್ತ ನೀಲವರ್ಣರಂಜಿತ ಕೊಡೆಯನ್ನಾಂತು ಹೊರಟಿದ್ದಾಳೆ. ಅಭಿಶಪ್ತ ಹೆಜ್ಜೆಗಳ ಗತಿ ತುಸು ಮಂದ ವಾಗಿದ್ದರೂ ಮಾನಸಿಕ ಚಾಲನೆ ಮಂದವಾಗಿರಲಿಲ್ಲ. ಅವರ ಔದಾರ್ಯ ವನ್ನೂ, ಪ್ರೇಮ ವಿಶ್ವಾಸವನ್ನೂ ತಲೆಯಲ್ಲಿ ತುಂಬಿಕೊಂಡೇ ಮುಂದುವರಿ ದಳು. ನೀಲಿಯ ಕೊಡೆ ಚಿಕ್ಕದಾದುದರಿಂದ ಬಹುಶಃ ಅವರಿಗೆ ನನ್ನಂತಹ ಚಿಕ್ಕ ಮಕ್ಕಳಿರಬಹುದೇನೋ ಎಂಬ ಭಾವನೆ; ಯಾವುದೋ ಶಾಲೆಗೆ ಹೋಗುತ್ತಿರಬಹುದು ಎಂದಾದರೂ ಸಿಕ್ಕಿಯಾಳು ಎಂಬ ತುಲನೆ. ಅದೇ ವಿಚಾರ ವಿಮರ್ಶೆಯಲ್ಲೋ ಅಥವಾ ಮತ್ತಾವ ಕಾರಣದಿಂದಲೋ ಹಾದಿ ಸಾಗಿದುದೇ ತಿಳಿಯಲಿಲ್ಲ. ಪ್ರಾಕಾರವನ್ನು ದಾಟಿ ಮನೆಯ ಮೆಟ್ಟಲೇರಿ ದಾಗಲೇ ಇತ್ತ ಗಮನ. ಮಗಳು ಒಳ ಬರುತ್ತಲೂ ಅವಳ ಸ್ಥಿತಿಗತಿಯನ್ನು ನೋಡಿ ಆತಂಕಿತ ವಾಣಿಯಲ್ಲಿ ನುಡಿದಳು ತಾಯಿ,

"ಆಗನಿಂದಲೂ ನಿನಗಾಗಿ ಕಾದಿದ್ದೆ. ಪೂರಾ ತೊಯ್ದು ಬಂದಿ ದ್ದೀಯೇ."

"ಏನೂ ಆಗುವುದಿಲ್ಲ ಬಿಡಿ," ಅಷ್ಟೇ ಸರಳವಾಗಿ ಉತ್ತರಿಸಿದಳು. ಸಂಧ್ಯಾಮಣಿ.

"ಸರಿ ಸರಿ ; ಈಗಲೇ ಬಟ್ಟೆ ಬದಲಿಸು."

"ಅದಂತೂ ಇದ್ದೇ ಇದೆಯಲ್ಲ," ಎಂದ ಸಂಧ್ಯಾ ನಡೆದುದೆಲ್ಲವನ್ನೂ ಸವಿಸ್ತಾರವಾಗಿ ಹೇಳಿ "ಅವರು ಕೊಡೆಯನ್ನು ತಂದುಕೊಡು ಎಂತಲೂ ಹೇಳಲಿಲ್ಲ. ನನಗಂತೂ ತುಂಬ ಆಶ್ಚರ್ಯವೇ.....!" ಎಂದಳು-ವಿಚಾರ ಪೂರ್ಣ ಉತ್ಸುಕತೆಯು ಶ್ರದ್ಧಾಗೌರವಗಳಿಗೆ ಪುಟಗೊಟ್ಟಂತೆ.

"ಯಾರೋ ಪುಣ್ಯಾತ್ಮರೇ ಇರಬೇಕು !"

ಸಂಧ್ಯಾ ಕೊಡೆಯನ್ನು ಬದಿಯಲ್ಲಿಟ್ಟು ತನ್ನ ಪುಸ್ತಕವನ್ನು ಮೇಜಿನ ಮೇಲೆ ಬೇರೆ ಬೇರೆಯಾಗಿ ಹರಡಿ ಆರಲು ಹಾಕಿದಳು. ಮಧ್ಯವರ್ತಿ ಯಾಗಿದ್ದ ನೋಟ್ಸ್ ಪುಸ್ತಕ ನೆನೆದಿರಲಿಲ್ಲವಾದುದರಿಂದ ಎಷ್ಟೋ

ಸಮಾಧಾನ. ಪಠ್ಯಪುಸ್ತಕಗಳು ತೊಯ್ದಿದ್ದರೂ ಒಣಗಿದ ಮೇಲೆ ಸರಿ ಹೋಗುತ್ತವೆ ಎಂಬುದು ಆತ್ಮಗತ.

“ಸ್ವಲ್ಪ ಹೊತ್ತಿನ ನಂತರ ಮಳೆ ಬಿಟ್ಟರೆ ಕೊಡೆಯನ್ನು ಒಯ್ದು ಅವರಿಗೆ ಕೊಟ್ಟು ಬರುವೆ.”

“ಹಾಗೇ ಮಾಡು ಮಗೂ !”

ಆದರೆ.....!

ಮಳೆ.........ಮಳೆ.........ಮಳೆ.........!

ಊರು ಕೇರಿಗಳನ್ನೆಲ್ಲಾ ಆದ್ಯಂತವಾಗಿ ತೊಳೆಯುವಂತಹ ಭೈರವ ವರ್ಷ. ನಾಲ್ಕು ಗೋಡೆಯ ಬಂಧನದೊಳಗೆ ನಾಲ್ಕಾರು ದಿನಗಳು ಸಂದು ಹೋದುವು. ಅನಂತರ ಮೂರು-ನಾಲ್ಕು ದಿನಗಳು ಜ್ವರದ ಬೇಗೆಯಿಂದ ಹಾಸಿಗೆ ಹಿಡಿದಳು ಸಂಧ್ಯಾಮಣಿ. ಅದರಿಂದ ಚೇತರಿಸಿಕೊಳ್ಳಬೇಕಾದರೆ ಮತ್ತೆ ಮೂರು ನಾಲ್ಕು ದಿನಗಳು ಬೇಕಾದುವು. ಆ ಅವಧಿಯಲ್ಲಿ ಆದಿತ್ಯ ಬಾಬುಗಳ ಕೊಡೆ ಮನೆಯಲ್ಲಿಯೇ ಉಳಿಯಿತು. ಸಂಧ್ಯೆಗೆ ಅದನ್ನು ಕ್ಲುಪ್ತಕಾಲದಲ್ಲಿ ಹಿಂದಿರುಗಿಸಲಾಗದಿದ್ದುದರಿಂದ ಅವರು ಕೋಪಿಸಿಕೊಂಡಾರೇನೋ ಎಂಬ ಚಿಂತೆ; ಅವರ ಮುಂದೆ ಹೋಗಿ ಏನೆಂದು ಹೇಳಲಿ ಎಂಬ ಅಳುಕು; ಇಂತಹ ತಾಪಾನುತಾಪಗಳಲ್ಲಿ ಚಂಚಲ ಮನಸ್ಸು ಇನ್ನೂ ಚಂಚಲಿತವಾಗುತಿತ್ತು.

ಸಂಧ್ಯಾ ಹಾಸಿಗೆಯ ಮೇಲೆ ಕುಳಿತುಕೊಂಡಿದ್ದಾಳೆ. ಹಣೆಯ ಮೇಲೆ ಕರಿಯ ಕುರುಳು ಅರಾಜಕವಾಗಿ ಹರಿದಿದೆ. ಶಕ್ತಿಹೀನತೆಯಿಂದ ಮುಖ ಬಿಳಿಚಿಕೊಂಡಿದೆ. ಮೈಯನ್ನು ದಹಿಸುವಂತೆ ಉಷ್ಣತಾಪದಗ್ಧ ರಕ್ತ ನಾಡಿ ನಾಡಿಗಳಲ್ಲಿ ಜುಮ್ಮನೆ ಹರಿದಾಡುತಿತ್ತು. ತಾಯಿಯ ಕಡೆ ನಿರ್ನಿಮೇಷ ನಯನಗಳಿಂದ ನೋಡುತ್ತ ನುಡಿದಳು “ನಾಳೆಯಾದರೂ ಅವರ ಮನೆಗೆ ಹೋಗಿ ಕೊಡೆ ಕೊಟ್ಟು ಬರುವ ಯೋಚನೆಯಿತ್ತು......... ಏನು ಮಾಡಲಿ ?”

“ಅವರು ಯಾರೆಂಬುದು ತಿಳಿದಿದ್ದಲ್ಲಿ ನಾವೇ ಕೊಟ್ಟು ಬರಬಹುದಾಗಿತ್ತು. ವಿಳಾಸ ತಿಳಿಯದೆ ಪತ್ತೆ ಹಚ್ಚುವುದು ಕಷ್ಟ.” ಎಂದಳು ತಾಯಿ.

"ಅದಕ್ಕೇನಂತೆ ? ಹೀಗಾಯ್ತೆಂದು ಅವರಿಗೆ ತಿಳಿಸಿದರೆ ಸರಿ," ಎಂದು ನಿರಾಳವಾಗಿ ನುಡಿದು ಅಸಡ್ಡೆ ತೋರಿದರು ತಂದೆ, ಮಗಳ ಮತ್ತು ಮಡದಿಯ ಮಾತಿಗೆ ಉತ್ತರವಾಗಿ.

ಆದರೂ, ಸಂಧ್ಯಳ ಚಿಂತನೆಯೇ ಬೇರೆ, ಅಂತರ್ನಿಹಿತ ಆತ್ಮಘೋಷಣೆಯೇ ಬೇರೆ.

ಆದಿತ್ಯಬಾಬುವಿನ ಔದಾರ್ಯ ಎಷ್ಟೊಂದು ಮಾನವ ಸಹಜವಾಗಿತ್ತೋ ತಮ್ಮ ನಿಧಾನ ಅಷ್ಟೇ ಹೃದಯ ಹೀನತೆಯನ್ನು ತೋರುವಂತೆ ಭಾಸವಾಗುತಿತ್ತು. ಖಿನ್ನ ಮನಸ್ಕಳಾಗಿ "ದೈವೇಚ್ಛೆ !" ಎಂದಳು ಸಂಧ್ಯಾಮಣಿ.

"ಅದು ನಿಜ ; ಏನು ಮಾಡುವುದಕ್ಕಾಗುತ್ತೆ ?" ಎಂದಳು ಸಂಧ್ಯಳ ತಾಯಿ.

ಅನಂತರ,

ಕೆಲವು ದಿನಗಳಲ್ಲಿ ಸಂಧ್ಯಾಮಣಿ ಚೇತರಿಸಿಕೊಂಡಳು. ಆದರೆ ವಾತಾವರಣ ಮಂಜುಭರಿತವಾಗಿ ತಂಡಿ ಹವೆಯಿಂದ ಕೂಡಿತ್ತು. ಆದರೂ ಸಹ ಮಗಳು ಹೋಗಿ ಬರಲು ಉತ್ಸುಕಳಾದುದನ್ನು ನೋಡಿ ತೀವ್ರ ವಿರೋಧಿಸುತ್ತ ಬಿತ್ತರಿಸಿದಳು ಪಂಕಜ,

"ಈಗಷ್ಟೇ ಜ್ವರ ಬಿಟ್ಟಿದೆ; ಈ ತಂಡಿ ಹವೆಯಲ್ಲಿ ಹೋಗಬೇಡ ಮಗೂ !"

"ಏನಮ್ಮಾ ಮಾಡಲಿ? ಯೋಚಿಸಿದಷ್ಟೂ ಚಿಂತೆ. ಅವರಿಂದ ಕೊಡೆ ತಂದು ಎಷ್ಟು ದಿನಗಳಾದುವು ?"

"ಆಗು-ಹೋಗುಗಳು ನಮ್ಮ ಕೈಯ್ಯಲ್ಲಿಲ್ಲ ಸಂಧ್ಯಾ. ಇದ್ದುದನ್ನು ವಿವರಿಸಿ ಕ್ಷಮಿಸಿಬಿಡಿ ಎಂದರಾಯಿತು."

"ದಿನಗಳು ಓಡಿದಷ್ಟು ಭಯ-ಸಂಕೋಚ."

"ತೊಂದರೆ ಎಂಬುದು ಎಲ್ಲರಿಗೂ ಇದ್ದೇ ಇರುತ್ತೆ ಮಗೂ ! ಅದನ್ನಷ್ಟು ಅವರು ಅರಿತುಕೊಳ್ಳಲಾರರೇ ?"

"ಅದೇನೋ ಹೌದು..... ಅವರ ಮನೆ ಅರಿತವರು ಯಾರಾದರೂ ಇದ್ದಿದ್ದರೆ ಯೋಚನೆಯೇ ಇರಲಿಲ್ಲ."

"ಅದನ್ನೇ ಏಕೆ ಮತ್ತೆಮತ್ತೆ ಮರ್ಮರಿಸುತಿದ್ದಿ ?"

'ಆದರೆ, ಈ ಮಾನವ ಲೋಕದಲ್ಲಿ ಅಷ್ಟೊಂದು ಸಮಂಜಸವಾಗಿ ಭಾವಿಸುವವರು ಎಷ್ಟು ವಿರಳ ಎಂಬುದನ್ನು ಬಲ್ಲವರೇ ಬಲ್ಲರು' ಎಂದು ಅತ್ಯಂತ ಮಾರ್ಮಿಕವಾಗಿ ಬಿತ್ತರಿಸಿತು ಅಂತರಾತ್ಮ.

ಒಡನೆ ಮಂಜಿನ ಮೂರ್ತಿಯಂತೆ ನಿಂತ ನಿಲುವಿನಲ್ಲೇ ಯೋಚಿಸಿದಳು ಪಂಕಜ. ಆ ವಿಚಾರಧಾರೆ ತರ್ಕಿಸಿದಷ್ಟೂ ಮನೋರಂಗದಲ್ಲಿ ಹಸಿರು ಹಸಿರಾಗಿಯೇ ಹರಿದಾಡುವುದು ಸ್ವಾಭಾವಿಕ. ಮರುಘಳಿಗೆಯಲ್ಲಿ ಭಾರವಾದ ಉಸಿರು ಹೊರಬಿತ್ತು. ವಿಚಾರಮಗ್ನಳಾದ ಮಗಳ ನಿಶ್ಚಲ ನಯನ ಪಕ್ಷ್ಮಾಗ್ರಳನ್ನು ನೋಡುತ್ತ ಅತುಲನೀಯ ಕರುಣ ಕಾತುರತೆಯಿಂದ ನುಡಿದಳು ಅವಳು,

"ಇಷ್ಟೇ ದಿನ ಕಳೆದಿದೆ ಇನ್ನೇನಂತೆ? ನಾಳೆ ಕೊಟ್ಟರಾಯಿತು. ಅಥವಾ ಒಂದೆರಡು ದಿನಗಳನಂತರ....."

ಸಂಧ್ಯಾಮಣಿ ಆ ಮಾತಿಗೆ ಉತ್ತರ ಹೇಳಲಿಲ್ಲ. ನಾಳೆ ಹೇಗೂ ಶಾಲೆಗೆ ಹೋಗಬೇಕು. ಆಗ ಕೊಂಡೊಯ್ಯಬಹುದು ಎಂಬ ಯೋಚನೆಯಲ್ಲಿ ಸುಮ್ಮನಾದಳು. ಕಿಟಕಿಯಲ್ಲಿ ಹರಿದ ನೋಟ ಗಗನದಲ್ಲಿ ಮೀನಿನಂತೆ ಚಲಿಸುತಿತ್ತು. ಬಿಳಿಚಿಕೊಂಡ ಕೆನ್ನೆಗಳಿಗೆ ಇನ್ನೂ ಹೊಸ ನೆತ್ತರಿನ ರಂಗು ಮೂಡಿರಲಿಲ್ಲ.

ಮರುದಿನ,

ಶಾಲೆಗೆ ಆತುರಾತುರವಾಗಿ ಹೊರಡಲು ಅಣಿಯಾಗುತಿದ್ದ ಸಂಧ್ಯಳಿಗೆ ಕೊಡೆಯನ್ನು ಹಿಂದಿರುಗಿಸಿ ಹೋಗುವ ಮನಸ್ಸು. ಅದಕ್ಕೆಂದೇ ಕೆಲವು ನಿಮಿಷಗಳು ಮುಂಚಿತವಾಗಿ ಹೊರಟಳು ಅವಳು. ಮನದಾಳದಲ್ಲಿ ಅಳುಕು ಅವಿತಿದ್ದರೂ ಚಿತ್ತ ಸದೃಢವಾಗಿತ್ತು. ಅವರನ್ನು ಇನ್ನೊಮ್ಮೆ ನೋಡುವ ಅವಕಾಶದೊಂದಿಗೆ ಎಲ್ಲವನ್ನೂ ಹೇಳಿಕೊಳ್ಳುವ ಇಚ್ಛೆ....ಅವರ ಮಕ್ಕಳಾರೆಂದು ತಿಳಿದುಕೊಳ್ಳುವ ಕುತೂಹಲ.....ಇಂತಿಂತಹ ನಾನಾ ಅಂಶಗಳನ್ನು ಮನದಲ್ಲಿ ಮೆಲಕು ಹಾಕುತ್ತಲೇ ಮುಂದುವರಿದಳು. ಹಿಡಿದ ಹಾದಿಯ ತಿರುವು ಮುರುವುಗಳನ್ನು ದಾಟಿ ಹೆದ್ದಾರಿಗೆ ಕಾಲಿಟ್ಟಾಗ ವೈ ಮನಸ್ಸು ಅನಿರೀಕ್ಷಿತವಾಗಿ ಜುಮು ಜುಮು ಎಂದುವು. ನಾಲ್ಕಾರು ಮನೆಗಳ ವ್ಯಾಪ್ತಿ ಎರಡು ನಿಮಿಷದಲ್ಲೇ ಕಳೆಯಿತೇನೋ. ಮನೆಯ ಮುಂದೆ ನಿಂತಾಗ ಪ್ರಪ್ರಥಮ

ವಾಗಿ ಸುಂದರ ಉದ್ಯಾನ ಕಣ್ಣಿಗೆ ಬಿತ್ತು. ಬೆಳಗಿನ ವಾತಾವರಣಕ್ಕೆ ಮೈ ಗೊಟ್ಟ ಪುಷ್ಪ ಸಂಪತ್ತಿ ತರಲಹಾಸದ ಪ್ರತಿಮೆಗಳಂತೆ ನಳನಳಿಸುತ್ತಿವೆ- ಶ್ರದ್ಧೆ ಗೌರವಗಳ ಮೋಹಕ ಬೆಳೆಯನ್ನೇ ಅಲ್ಲಿ ಬೆಳೆದಂತೆ !

ಸಂಧ್ಯಾ ಪ್ರಾಕಾರದ ಬಾಗಿಲ ಬಳಿ ನಿಂತಿದ್ದಾಳೆ. ವಿವಿಧ ಪುಷ್ಪರಾಜಿ ಬಾಬಾರೆಂದು ಕರೆಯುವಂತೆ ತಲೆದೂಗುತ್ತಿವೆ. ಸುಯ್ಯೆಲರು ಪುಷ್ಪ ಮೋಹ ಕತೆಯಲ್ಲಿ ಅಲ್ಲಲ್ಲೆ ಸುಳಿದಾಡುತ್ತಿರುವಂತೆ ಭಾಸವಾಗುತಿತ್ತು. ಮುಂದಿನ ಬಾಗಿಲು ಮುಚ್ಚಿದ್ದುದರಿಂದ ಬಾಬು ಇದ್ದಾರೋ ಇಲ್ಲವೋ ಎಂಬ ಯೋಚನೆ ಯಿಂದ ಅನುಮಾನಿಸುತ್ತಿರುವಾಗಲೇ ಪಕ್ಕದ ಮನೆಯವರ ನೋಟ ಬಾಲ ಕಿಯ ಮೇಲೆ ಬಿತ್ತು. ಅವರು ಪ್ರಾಕಾರದ ಬಳಿಗೆ ಬಂದು ಅಪರಿಚಿತ ಹುಡುಗಿಯನ್ನು ಕಂಡು ಅತೀವ ಶ್ರದ್ಧಾಭಾವದಿಂದ ಕೇಳಿದರು,

"ಏನಮ್ಮಾ? ಏಕೆ ನಿಂತಿದ್ದಿ ?"

"ಆದಿತ್ಯ ಬಾಬುಗಳನ್ನು ನೋಡಬೇಕಿತ್ತು."

"ಅವರೀಗ ಮನೆಯಲ್ಲಿಲ್ಲವಲ್ಲಾ, ಸಾಯಂಕಾಲ ನೀನು ಬಂದರೆ ಸಿಗುತ್ತಾರೆ."

ಒಂದು ಘಳಿಗೆ ಮರವಟ್ಟಂತೆ ನಿಂತಳು ಸಂಧ್ಯಾ. ಕೊಡೆಯನ್ನು ಹಿಂದಿರುಗಿ ಮನೆಯಲ್ಲಿಟ್ಟು ಬರುವುದೆಂದರೆ ಸಮಯ ಸಾಲದು. ಇನ್ನದನ್ನು ತನ್ನೊಂದಿಗೆ ಶಾಲೆಗೆ ಕೊಂಡೊಯ್ಯದೆ ವಿಧಿಯಿಲ್ಲ. ಅಲ್ಲಿಂದ ಹಿಂದಿರುಗಿ ಬರುವಾಗಲಾದರೂ ಹಿಂದಿರುಗಿಸಬಹುದೇ ಎಂಬ ಆಲೋಚನೆ-ಅಭಿಲಾಷೆಗಳ ತುಂಬು ಭಾವನೆಯಿಂದ ಪುನಃ ಕೇಳಿದಳು ಸಂಧ್ಯಾ,

"ಮಧ್ಯಾಹ್ನ ನಾಲ್ಕು ಘಂಟೆಗೆ ಸಿಗುತ್ತಾರೆಯೆ ?"

"ಇಲ್ಲಮ್ಮಾ. ಅವರು ಸಿಗುವುದು ಐದು ಗಂಟೆಯ ಮೇಲೆಯೇ ಸರಿ."

"ಹಾಗಾದರೆ ಮತ್ತೆ ಬರುವೆ. ತುಂಬ ವಂದನೆಗಳು !"

ಸಂಧ್ಯಾ ಅಲ್ಲಿ ನಿಲ್ಲದೆ ಹೊರಟಳು. ಮುಖಮಂಡಲ ಪ್ರಾತಃಸೂರ್ಯ ಕಾಂತಿಯಿಂದ ನುಣ್ಣನೆಯ ಹೊಳಪನ್ನು ಪಡೆದುಕೊಂಡಂತಿತ್ತು. ಹೆಜ್ಜೆ ಹೆಜ್ಜೆಗೂ ಚಿಮ್ಮುವ ನೀಲ ಸಮವಸ್ತ್ರದ ದಟ್ಟನಿರಿ, ಶುಭ್ರ ಉಡುಪಿನ ರೂಪು ರೇಷೆ ಅವಳ ಮೈಮಾಟಕ್ಕೆ ಸರ್ವತ್ರ ಭೂಷಣವಾಗಿವೆ. ಆ ಮುಂದಿನ ಸ್ವಲ್ಪ ಹಾದಿಯನ್ನು ಕಳೆದು ಶಾಲೆ ಸೇರುವುದು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ.

ಅನಂತರ ಕನ್ನಡ ತರಗತಿಯ ಉಪಾಧ್ಯಾಯಿನಿ ಚಂಚಲ ಬರುವವರೆಗೆ ಕಾದಿದ್ದು ಕೊಡೆಯನ್ನು ಅವಳ ಬೀರುವಿನಲ್ಲಿ ಇಟ್ಟಮೇಲೆ ಮನಸ್ಸಿನ ಭಾರ ಇಳಿಸಿ ತನ್ನ ತರಗತಿಯನ್ನು ಕುರಿತು ತೆರಳಿದಳು. ಮಧ್ಯಾಹ್ನದವರೆಗೂ ಛಿದ್ರ ವಿಚ್ಛಿದ್ರವಾಗಿದ್ದ ಮಳೆ ಮೋಡಗಳು ಮತ್ತೆ ದಟ್ಟೈಸತೊಡಗಿದುವು. ಗುಡುಗಿನ ಘನಘೋರ ಘರ್ಜನೆ ಆಗಾಗ ಮೈ ನಡುಗಿಸುವಂತೆ ಕೇಳಬರ ಹತ್ತಿತು. ಶಾಲೆಯನ್ನು ಬಿಟ್ಟು ಕರಿಯಹೆದ್ದಾರಿಯನ್ನು ತುಳಿದಾಗಲೇ ಮಳೆ ಆರಂಭವಾಯಿತು. ಕೈಯಲ್ಲಿ ಕೊಡೆ ಇದ್ದುದರಿಂದ ತೊಂದರೆ ಇರಲಿಲ್ಲ ವಾದರೂ ಬಾಬುಗಳ ಮನೆಯವರು ಕಂಡಾರೇನೋ ಎಂಬ ಯೋಚನೆ ಯಿಂದಲೇ ಅವರ ಮನೆಯಕಡೆ ನಿಟ್ಟಿಸಿತು ನೋಟ. ಅಲ್ಲಿ ಕಣ್ಣಿಗೆ ಯಾರೂ ಕಾಣಿಸದಿದ್ದುದು ಎಳೆಯ ಮನಸ್ಸಿಗೆ ಎಷ್ಟೋ ಸಮಾಧಾನ. ಸಂಧ್ಯಾ ಮನೆ ಮುಟ್ಟಿದಾಗಲೂ ಮಳೆ ಧಾರಾಕಾರವಾಗಿ ಸುರಿಯುತ್ತಲೇ ಇತ್ತು-ಇಕ್ಕೆಲಗ ಳಲ್ಲಿ ನೀರಿನ ಕೋಡಿ ಹರಿಯುವಂತೆ. ಅವಳು ತಲೆಬಾಗಿಲ ಕರೆಗುಂಡಿ ಯನ್ನು ಒತ್ತಿದಾಗ ಬಂದು ಬಾಗಿಲನ್ನು ತೆರೆದ ಪಂಕಜ,

"ಮಳೆಗೆ ಮತ್ತೆ ಸಿಕ್ಕಿದೆ ಎಂದುಕೊಂಡಿದ್ದೆ. ಅದೇ ಕೊಡೆ ಹಿಡಿದಿದ್ದಿ, ಅವರು ಹಿಂತೆಗೆದುಕೊಳ್ಳಲಿಲ್ಲವೇ ?"

"ಅವರು ಮನೆಯಲ್ಲಿರಲಿಲ್ಲ. ಮಳೆ ಬಿಟ್ಟನಂತರ ಹೋಗಿ ಕೊಟ್ಟು ಬರುವೆ."

"ಬಿಡು, ನಿನಗೆ ಒಳ್ಳೆಯದೇ ಆಯಿತು. ಅವರಿದ್ದಿದ್ದರೆ ನೀನು ಈಗ ಪುನಃ ತೊಯ್ಯುತಿದ್ದಿ."

"ಹೌದು....." ಎಂದಷ್ಟು ನುಡಿದು ಹೊರಡುವ ಸಿದ್ಧತೆ ನಡೆಸಿದಳು.

ಸಂಧ್ಯಾ ಒಳಗಡೆ ಹೋಗಿ ಕೊಡೆಯನ್ನು ನೀರಿಳಿದುಕೊಳ್ಳುವಂತೆ ಮೂಲೆಯಲ್ಲಿಟ್ಟು ಪುಸ್ತಕಗಳನ್ನು ಬೀರುವಿನಲ್ಲಿಟ್ಟಳು. ಅಡ್ಡ ಮಳೆಯಿಂದ ಅಲ್ಪ ಸ್ವಲ್ಪ ತೊಯ್ದ ಉಡುಪನ್ನು ಆರಿಸಲು ಹಾಕಿ, ನಿತ್ಯಕರ್ಮಗಳನ್ನು ಮುಗಿಸುವಾಗ ಮಳೆ ನಿಂತು ಆಗಸ ತಿಳಿಯಾಗಿತ್ತು. ಮಳೆಯಲ್ಲಿ ತೊಳೆದ ಪ್ರಾಕಾರಗಳು ಶುಚಿರ್ಭೂತವಾಗಿ ಮನೆಮನೆಗಳ ಉದ್ಯಾನವನಗಳೆಲ್ಲ ಹಸುರಿನ ಪೆಂಪನ್ನು ಸೂಸುವಂತಿದ್ದುವು. ವಾಸಗೃಹಗಳು ಮಳೆಯ ಮಧುರ ಸ್ನಾನದಿಂದ ಮೈಮಾಲಿನ್ಯವನ್ನು ಕಳೆದುಕೊಂಡು ಶುಭ್ರವಾಗಿವೆ. ಹಾದಿ

ಯಂತೂ, ಅದರಲ್ಲಿ ನಡೆಯುವುದೇ ಹಿತ ಎಂಬಷ್ಟು ಸ್ವಚ್ಛ. ಇಕ್ಕೆಲಗಳ ನೀರು ಕೊಳೆಯ ಸಹಿತ ಹರಿದು ಹೋಗಿತ್ತು. ಅವಳು ತನ್ನ ಕುತೂಹಲ ತೃಷಿತ ನೋಟವನ್ನು ಎಲ್ಲೆಡೆ ಹರಿಸುತ್ತ ಮೈಮರೆತಿರುವಾಗಲೇ ಬಾಬುಗಳ ಮನೆಯ ಪ್ರಾಕಾರದ ಬಳಿಗೆ ಬಂದಿದ್ದಾಳೆ. ತಾಯಿಯು ಅವರೊಂದಿಗೆ ಕ್ಷಮೆ ಕೇಳಬೇಕಾದ ರೀತಿಯನ್ನೂ, ತಮ್ಮ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸುವ ವಿಧಾನವನ್ನೂ ಹೊರಡುವ ಮುನ್ನ ಹೇಳಿಕೊಟ್ಟಿದ್ದಳು. ಆದರೆ, ಅವೆಲ್ಲಾ ಆಗಲೇ ಮರೆತುಹೋಗಿ ನೆನಪಿಸಿಕೊಂಡರೂ ಕಲಬೆರೆತುಕೊಳ್ಳುತ್ತವೆ. ಅದೇ ಯೋಚನೆಯಲ್ಲಿ ಒಂದೆರಡು ನಿಮಿಷ ನಿಂತುಕೊಂಡಳು. ಲಜ್ಜೆ-ಭಯ-ಕಳವಳಗಳ ಒತ್ತಡದಲ್ಲಿ ಹೃದಯ ವ್ಯಾಪ್ತಿಗೆ ತುಸು ಮೀರಿ ಮಿಡಿಯಹತ್ತಿತು.

ಪ್ರಾಕಾರದ ಬಾಗಿಲು ಮುಚ್ಚಿತ್ತು ; ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಬಾಗಿಲಬಳಿ ನಿಂತಳು. ಅತ್ಯಂತ ನಿಶ್ಶಬ್ದವಲಯ..... ಸ್ವಚ್ಛಕಾಂತಿಯಿಂದ ಬೆಳಗುವ ಮನೆ..... ಸಸ್ಯ ಸಮೃದ್ಧ ಅಂಗಳ..... ಹೂದುಂಬಿದ ಸುಂದರ ಉದ್ಯಾನ. ಒಂದೊಂದೂ ತೆರೆದ ಮನದಿಂದ ಬಾಬಾರೆಂದು ಸ್ವಾಗತಿಸುವಂತೆ ತೋರಿ ಬಂತು.

ಆದರೇನು ?

ಮೊಟ್ಟಮೊದಲಾಗಿ ಆ ಗೃಹ ವಲಯದಲ್ಲಿ ಕಟ್ಟಿಟ್ಟ ಶಾಂತಿಯನ್ನು ಕಲಕುವ ಧೈರ್ಯವಂತೂ ಮೂಡಲಿಲ್ಲ. ಹಾಗೇ ನಿಂತಿದ್ದಾಳೆ. ಮಂತ್ರ ಮುಗ್ಧತೆ ಮನಃಪ್ರಾಣಗಳನ್ನು ಮೆಲ್ಲಮೆಲ್ಲನೆ ಬಿಗಿಯುತ್ತಿದೆ. ಗಟ್ಟಿಯಾಗಿ ಉಸಿರಾಡಲು ಸಂಕೋಚ.....ಏನೆಂದು ಕರೆಯುವುದೆಂಬ ಪ್ರಶ್ನೆಯೇ ಗಂಟಲಿಗೆ ಗಾಣ. ಹಾಗೆ ಅದೆಷ್ಟು ನಿಮಿಷಗಳು ಉರುಳಿದುವೋ.....ಪ್ರಯತ್ನಪೂರ್ವಕವಾಗಿ ಸ್ವಲ್ಪ ಹಣಿಕಿ ನೋಡಿದಾಗ ತಲೆಬಾಗಿಲು ಹರವಾಗಿ ತೆರೆದಿದ್ದುದು ಕಾಣಬಂತು. ಇನ್ನೂ ಸ್ವಲ್ಪ ಮುಂದುವರಿದರೆ ಅಂಗಳದ ವಾಮ ಪಾರ್ಶ್ವದ ಕಲ್ಲುಬೆಂಚಿನ ಮೇಲೆ ಬಾಬು ಕುಳಿತಿದ್ದಾರೆ. ಯಾವ ಕಾರ್ಯ-ಬಾಹುಲ್ಯವೂ ಅವರನ್ನು ಬಂಧಿಸಿದಂತಿರಲಿಲ್ಲ. ಬಳಿಯಲ್ಲಿ ಕೆಲವು ಪುಸ್ತಕಗಳನ್ನಿಟ್ಟುಕೊಂಡಿದ್ದು ಯಾರ ಪ್ರತೀಕ್ಷೆಯಲ್ಲಿಯೋ ಇರುವಂತೆ ಅನ್ಯಮನಸ್ಕರಾಗಿದ್ದಾರೆ. ಸಂಧ್ಯಾ ಒಂದು ಹೆಜ್ಜೆ ಹಿಂತೆಗೆದು ನಿಂತಳು. ತನುಮನಗಳು

ಏಕಕಾಲದಲ್ಲಿ ಪುಲಕಗೊಂಡುವು. ತನ್ನನ್ನು ತಾನೇ ಸಾವರಿಸಿಕೊಳ್ಳುತ್ತ ಅಲ್ಲೇ ನಿಂತಳಾದರೂ ಕರೆಯುವ ಧೈರ್ಯ ಮೂಡಲಿಲ್ಲ. ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ಬಾಗಿಲ ಚಿಲಕವನ್ನು ಸಣ್ಣಗೆ ಸದ್ದು ಮಾಡಿದಳು. ಆಗ ಬಾಬು ಕಣ್ಣು ಹೊರಳಿಸಿ ನೋಡಿದರು. ಒಡನೆ ಅತೀವ ಆನಂದಪರವಶತೆಯಿಂದ ಮುಖಬಿಂಬ ಅರಳಿ ಹೂವಾಯಿತು. ಅವರು ಎದ್ದು ಬಂದು ಬಾಗಿಲನ್ನು ತೆರೆದು ಪ್ರೀತಿಯಿಂದ "ಬಾಮ್ಮಾ!" ಎಂದರು ಸ್ವಾಗತ ಪೂರ್ವಕವಾಗಿ.

ಸಂಧ್ಯಾ ಒಳ ಹೆಜ್ಜೆ ಇಟ್ಟಳು.

ಆದಿತ್ಯಬಾಬು ಅವಳನ್ನು ತಬ್ಬಿ ಹಿಡಿದುಕೊಂಡೇ ಕಲ್ಲು ಬೆಂಚಿನೆಡೆಗೆ ನಡೆದರು. ಅವರ ನಡೆನುಡಿಗಳಲ್ಲಿ ಅಸೀಮ ಪ್ರೇಮ ವ್ಯಕ್ತವಾಗುತಿತ್ತು. ಅವಳು ಭಯ ಸಂಕೋಚಗಳಿಂದ ಬಿಡುಗಡೆ ಹೊಂದಿದರೂ ಲಜ್ಜೆಯಿಂದ ದೂರವಾಗಲಿಲ್ಲ. ಕರ್ಪೂರ ಗೌರಕಾಂತಿಯ ಕಪೋಲಗಳು ನಸುರಂಗಿನಿಂದ ರಂಜಿತವಾದುವು. ತುಟಿಗಳಲ್ಲಿ ಸರಳ ಸ್ಮಿತ ಎಳೆದಿಂಗಳಂತೆ ಹರಡಿತು. ತಾಯಿಯ ವಾಕ್ಸರಣಿ ಮನಃಪಟಲದಿಂದ ಅಳಿಸಿಹೋಗಿದ್ದರೂ ನೆನಪಿಸಿಕೊಳ್ಳಲು ಪ್ರಯತ್ನಿಸಿ ಸುಮ್ಮನಾದಳು.

"ಈ ಕೊಡೆಯನ್ನೇಕೆ ಹಿಂಬಕ್ಕೆ ತಂದೆ? ನೀನೇ ಇಟ್ಟುಕೊಳ್ಳಬಹುದಾಗಿತ್ತು."

"..........."

"ಏಕೆ ಮಾತಾಡುವುದಿಲ್ಲ ? ಸಂಕೋಚವೇ ? ಹೆದರಿಕೆಯೆ ?"

"ಸುಮ್ಮನೆ...."

"ಅಂದರೆ ....?" ಎನ್ನುತ್ತ ನಸು ನಕ್ಕರು ಬಾಬು.

"........."

"ಏನೋ ಒಂದು ಬಗೆಯಾಗಿದ್ದಿ, ಮೈಯ್ಯಲ್ಲಿ ಆರೋಗ್ಯವಿದ್ದಂತಿಲ್ಲ.....?"

"ಹೌದು, ಕಳೆದವಾರ ನಾಲ್ಕಾರು ದಿನ ಜ್ವರ ಬಂದಿತ್ತು. ಅದಕ್ಕೇ.....ಕೊ....."

ನಡುವೆ ಬಾಯಿ ಹಾಕಿದರು ಬಾಬು "ಓ! ಅದಕ್ಕೇ ಬಿಳಚಿಕೊಂಡಿದ್ದಿ. ನಿನ್ನ ಮುಖದ ಸಸಾರವೇ ಅದೃಶ್ಯವಾಗಿದೆ!"

"........."

"ನೀನು ಈ ಭೂಮಿಗೆ ಅಕಸ್ಮಾತ್ತಾಗಿ ಬಂದಿರುವ ಕಲ್ಪಲತೆ ಮಗೂ!"

ಸಂಧ್ಯಾ ಈ ಸಲ ಅವರನ್ನು ಹುಬ್ಬೆತ್ತಿ ನೋಡುವ ಸಾಹಸ ಮಾಡಿದಳು. ಅವರ ಮಾತು ಅರ್ಥವಾಗದೆ ಹಾಗೆಂದರೇನೆಂಬುದನ್ನು ತಿಳಿಯುವ ಅಭಿಲಾಷೆ ಮನದಲ್ಲಿ. ಆದರೂ ಲಜ್ಜಾಭಾವ ಬಾಯ್ದೆರೆಯಲು ಬಿಡದು. ಅವಳ ಅರಳುಗಂಗಳನ್ನು ನೋಡಿ ಆದಿತ್ಯಬಾಬು ಆನಂದಿತರಾದರು. ಅಂತರಂಗದಲ್ಲಿ ಆವುದೋ ವಿಶ್ವಸ್ತಭಾವನೆ ಬೆಳೆದು ಭೂಮವಾಗುತಿತ್ತು. ಆತ್ಮೀಯ ಭಾವಮುಗ್ಧರಂತೆ ಸ್ವಲ್ಪಹೊತ್ತು ಏನೋ ಯೋಚಿಸುತಿದ್ದು ಅನಂತರ ಅವರು ಅವಳ ತಲೆಯನ್ನು ನೇವರಿಸುತ್ತ ಹರ್ಷಾತಿರೇಕದಿಂದ ಪ್ರಶ್ನಿಸಿದರು "ಈ ಉದ್ಯಾನವನ್ನು ನೋಡಿದರೆ ನಿನಗೇನೆನಿಸುತ್ತೆ ?"

"ತುಂಬ ಆನಂದವಾಗುತ್ತೆ."

"ನಿನಗೆ ಹೂಗಳನ್ನು ಮುಡಿಯುವುದು ಇಷ್ಟವೇ ? ಹೂದಾನಿಯಲ್ಲಿಡುವುದು ಇಷ್ಟವೇ ?"

"ಮುಡಿಯುವುದು ಇಷ್ಟವಿಲ್ಲ. ಹೂದಾನಿಯಲ್ಲಿಟ್ಟು ಸಿಂಗರಿಸುವೆ."

"ಅದು ತುಂಬ ಒಳ್ಳೆಯದು." ಎಂದರು ಬಾಬು. ಸಣ್ಣಗೆ ತಲೆದೂಗುತ್ತ.

"ನಾನಿನ್ನು ಮನೆಗೆ ಹೋಗುವೆ, ಅಮ್ಮ ನನಗಾಗಿ ಕಾದಿರುತ್ತಾರೆ."

"ನಾನೂ ಸಹ ನಿನಗಾಗಿಯೇ ಕಾದಿದ್ದೆ !"

ಆ ಮಾತು ಅರ್ಥವಾಗದೆ ಆಶ್ಚರ್ಯಚಕಿತ ನಯನಗಳಿಂದ ನಿಟ್ಟಿಸಿ ನೋಡಿದಳು. ಸಮಯೋಚಿತವಾಗಿ ಏನಾದರೂ ಹೇಳಬೇಕೆಂದರೆ ತುಟಿಗಳು ಬಿರಿಯಲೊಲ್ಲವು....ಕೊಡೆಯನ್ನು ನಾನೇ ಇಟ್ಟುಕೊಳ್ಳಬಹುದಾಗಿತ್ತು ಎಂದರಷ್ಟೆ, ಮತ್ತೇಕೆ ನನಗಾಗಿ ಕಾದಿದ್ದರು ಎಂಬುದು ಪ್ರಶ್ನೆ. ಅವರ ಹಾವಭಾವಗಳನ್ನು ಗಮನಿಸಿ ಅಚ್ಚರಿಯ ಕುಂಡದಲ್ಲಿ ಮುಳುಗೆದ್ದಳು ಸಂಧ್ಯಾ. ಅವರ ಎಲ್ಲಿಲ್ಲದ ಸ್ನೇಹಾನುರಾಗ ಅರ್ಥವೇ ಆಗಲಿಲ್ಲ. ಮನೋರಂಗ ಹೊಸ ವಿಚಾರಧಾರೆಗೆ ಆಗರವಾಯಿತು.

ಆದಿತ್ಯಬಾಬುವಿನ ದೃಷ್ಟಿ ಕೊಡೆಯ ಮೇಲೆ ಹರಿಯಿತು. ಆ ಸಮಯದಲ್ಲಿ ಅಸ್ತವ್ಯಸ್ತಗೊಂಡ ಮನಸ್ಸಿನಿಂದ ನಿಶ್ಚಲಭಂಗಿಯಲ್ಲಿ ಸ್ವಲ್ಪಹೊತ್ತು

ಕಳೆದು ಅನಂತರ ಭಾರವಾದ ಬಿಸಿಯುಸಿರನ್ನು ಹೊರ ಹರಿಯ ಬಿಟ್ಟು ಕೇಳಿದರು,

"ನಿನ್ನ ತಂದೆ ತಾಯಿಗೆ ಇನ್ನೆಷ್ಟು ಮಂದಿ ಮಕ್ಕಳಿದ್ದಾರೆ ಮಗೂ ?"

"ನಾನೊಬ್ಬಳೇ. ನನಗಿಬ್ಬರು ಅಕ್ಕಂದಿರು ಇದ್ದರಂತೆ, ಇಬ್ಬರೂ ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದಾರೆ."

ಆದಿತ್ಯಬಾಬು ಆಗ ಏನನ್ನೋ ಹೇಳಲು ಬಯಸಿ ಸುಮ್ಮನಾದರು. ಮತ್ತೆ ಬಹಳ ಹೊತ್ತು ಆವುದೋ ಯೋಚನೆಯ ಸುಳಿಯಲ್ಲಿ ಸಿಕ್ಕಿದಂತೆ ಗಂಭೀರಭಾವ ತಳೆದಿದ್ದು ಮೆಲ್ಲನೆ ಉದ್ಗಾರ ತೆಗೆದರು,

"ಈ ಪ್ರಪಂಚ ಇಷ್ಟೆ !"

ಸಂಧ್ಯಳಿಗೆ ಅದರ ಭಾವಾರ್ಥ ಹೊಳೆಯದಿದ್ದರೂ ಮುಗುಳು ನಕ್ಕಳು.

ಗಿಡ ಬಳ್ಳಿಗಳಲ್ಲಿ ಬುಲ್‌ಬುಲ್ ಪಕ್ಷಿಗಳು ಸಂಧ್ಯಾರಾಗವನ್ನು ಮಧುರ ಕಂಠದಿಂದ ಬಿತ್ತರಿಸುತಿದ್ದುವು.

"ನಾನಿನ್ನು ಮನೆಗೆ ಹೋಗುವೆ." ಬಾಲವಾಣಿ ಮೊಳಗಿತು.

"ಅದೇಕೆ ಅಷ್ಟೊಂದು ಆತುರ ? ಸುಂದರ ಹೂಗಳ ಸಮುದಾಯ ದಲ್ಲಿ ಸ್ವಲ್ಪ ಹೊತ್ತಿದ್ದು ಆನಂದವನ್ನು ಪಡೆದುಕೊಳ್ಳಬಾರದೇ ? ಹೂಗಳ ನೆಲೆ ನಮ್ಮನ್ನು ಪರಮಾನಂದದ ಸ್ವರ್ಗಕ್ಕೆ ಹಚ್ಚುತ್ತದೆ." ಎಂದರು ಬಾಬು.

"ನಿಜ" ಎಂಬಂತೆ ಅವಳು ತಲೆದೂಗಿದರೂ ಬಾಲ ಸಹಜವಾದ ಮುಗ್ಧ ಆತುರತೆ ಮುಖದಲ್ಲಿ ಕಾಣಿಸುತಿತ್ತು.

"ನೀನು ಬಹಳ ಸಂಕೋಚ ಪ್ರಕೃತಿಯುಳ್ಳವಳು. ಆದರೂ, ಈ ಬಾಬುವಿನ ಬಳಿ ಯಾವ ಸಂಕೋಚವನ್ನೂ ಇಟ್ಟುಕೊಳ್ಳಬಾರದು ಕಂಡೆಯಾ."

"ಇಲ್ಲ" ಎಂಬ ನುಡಿ ಹೊಮ್ಮುವುದರೊಳಗಾಗಿ ಎರಡೂ ಕೆನ್ನೆಗಳು ಆರಕ್ತವಾಗಿ ಲಜ್ಜೆಯ ಮುಗುಳು ಮೂಡಿತು. ಅವಳ ಕಪೋಲತಲದ ಕಪ್ಪುಮಚ್ಚೆ, ಸುಂದರವಾದ ಸಾಲು ಹಲ್ಲುಗಳು ಜನ್ಮಾಂತರದ ವಿಜಯ ಕೇತನದ ಮುದ್ರೆಯಂತೆ ಆಕರ್ಷಣೀಯವಾಗಿದ್ದುವು.

ಸ್ವಲ್ಪಹೊತ್ತು ಇಬ್ಬರ ತುಟಿಯೂ ಬಿರಿಯಲಿಲ್ಲ.

ಪರಿದೃಶ್ಯಮಾನವಾದ ಪುಷ್ಪಜಗತ್ತಿನಲ್ಲಿ ಸಂಧ್ಯಾಮಣಿ ಮೈಮರೆತ ಳೇನೋ. ಆದಿತ್ಯಬಾಬು ಯಾವುದೋ ಅನಿರ್ವಚನೀಯವಾದ ಅನುಭೂತಿ ಯಲ್ಲಿ ಮುಳುಗಿದ್ದರು. ಸಂಧ್ಯಾರಾಗದಲ್ಲಿ ಮಿಂದ ಜಗತ್ತು ಆನಂದವನ್ನೇ ಆನಂದಿಸುವಂತಿದ್ದರೂ ಅವರು ಭಾವಿಸಿದ ರೀತಿಯೇ ಬೇರೆ; ಶೋಧಿಸಿದ ಸಾರವೇ ಬೇರೆ.

ಅಂದು ಪ್ರಾಯಶಃ ನೆರೆಮನೆಯವರು ಆದಿತ್ಯಬಾಬುವಿಗೆ ಸಂಧ್ಯಾ ಬರಲಿರುವ ಸುದ್ದಿಯನ್ನು ಅರುಹಿದ್ದರೇನೋ. ಆಗಲೇ ಅವಳಿಗೊಂದು ಚಾಕಲೆಟ್ಟಿನ ಡಬ್ಬಿಯೂ, ನಾಲ್ಕಾರು ವರ್ಣರಂಜಿತ ಪುಸ್ತಕಗಳೂ ವರಾಂಡದ ಮೇಜಿನ ಮೇಲೆ ಕಾದಿದ್ದುವು. ಬಾಬು ಡಬ್ಬದ ಸುತ್ತೂ ಅಂಟಿಸಿದ್ದ ಅಂಟಿನ ಪಟ್ಟಿಯನ್ನು ತೆಗೆದು, ಅದರಿಂದ ಒಂಡೆರಡು ಸಿಹಿಗಳ ಕಾಗದವನ್ನು ಕಳಚಿ, ಅವಳ ಬಾಯಿಗೊಂದನ್ನಿಟ್ಟು, ತಾವೊಂದನ್ನು ಬಾಯಿಗೆ ಹಾಕಿಕೊಂಡು ಪುಸ್ತಕಗಳನ್ನೂ ಸಿಹಿಯನ್ನೂ ಬಹುಮಾನವಾಗಿ ಕೊಡುತ್ತ ಭಾವಾವಿಷ್ಟರಾಗಿ ನುಡಿದರು,

"ನಿನ್ನ ಪರಿಚಯ ಎಷ್ಟು ಆಕಸ್ಮಿಕವೋ ಅಷ್ಟೇ ಸಂತೋಷಪ್ರದವೂ ಆಗಿದೆ ಮಗೂ!"

"........."

"ಸಂಧ್ಯಳಿಗೆ ಅವರ ಮಾತುಗಳೇ ಅರ್ಥವಾಗದುದರಿಂದ ಉತ್ತರಿಸಲೂ ಸಾಧ್ಯವಾಗಲಿಲ್ಲ. ಅತ್ಯಂತ ಸಂಕೋಚವಾಣಿಯಲ್ಲಿ "ಇದೆಲ್ಲಾ ಏಕೆ? ಸುಮ್ಮನೆ ತೊಂದರೆ ತೆಗೆದುಕೊಂಡಿರಿ ತಾತ!" ಎಂದಳು.

"ಎಲ್ಲರೂ ನನ್ನನ್ನು 'ಬಾಬು' ಎಂದು ಕರೆಯುತ್ತಾರೆ. ನೀನೂ ಹಾಗೆಯೇ ಕರೆಯುವುದರಲ್ಲಿ ಯಾವ ಅಭ್ಯಂತರವೂ ಇಲ್ಲ, ಮಗೂ!"

"ದೊಡ್ಡವರನ್ನು.....?"

"ಪರವಾಯಿಲ್ಲ." ಎಂದರು ಆದಿತ್ಯಬಾಬು ಸಣ್ಣಗೆ ತಲೆದೂಗಿ. ಕಣ್ಣುಗಳಲ್ಲಿ ಸಾತ್ವಿಕತೆಯ ಬೆಳಕು ಮಿಂಚುತಿತ್ತು. ಬೆನ್ನನ್ನು ನಲ್ಮೆ ಯಿಂದ ನೇವರಿಸುತ್ತ ಕೇಳಿದರು "ನಿನಗೆ ಹೂಗಳೆಂದರೆ ಇಷ್ಟವೇ?"

"ಹೌದು."

"ನಿನಗೆ ಹೂ ಬೇಕೇ?"

"........."

"ಕೆಲವನ್ನು ಕಿತ್ತು ಕೊಟ್ಟರೆ ಹೂದಾನಿಯಲ್ಲಿಡುತ್ತೀಯಷ್ಟೆ ?"

ಸಂಧ್ಯಾ ತಲೆದೂಗಿ ಸಮ್ಮತಿ ಸೂಚಿಸಿದಳು.

"ಅದು ಒಳ್ಳೆಯದು."

ಬಾಬು ಗಿಡದಿಂದ ಗಿಡಕ್ಕೆ ಚಲಿಸಿ ಉದ್ದುದ್ದ ತೊಟ್ಟನೊಡನೆ ಹಲವಾರು ಹೂಗಳನ್ನು ಕಿತ್ತು ಜೋಡಿಸುತ್ತ ಕೇಳಿದರು "ನೀನು ಬಿಡುವಿನ ಹೊತ್ತಿನಲ್ಲಿ ಇತರ ಪುಸ್ತಕಗಳನ್ನು ಓದುತ್ತಿ ತಾನೇ ?"

"ಹೌದು....ಓದುವೆ."

"ಇವು ತುಂಬ ಒಳ್ಳೆಯ ಪುಸ್ತಕಗಳು. ಖಂಡಿತ ಓದು."

"ಆಗಲಿ, ಓದುವೆ."

"ಸ್ವಲ್ಪವೂ ಸಂಕೋಚ ಪಟ್ಟುಕೊಳ್ಳಬೇಡ. ನನ್ನ ಬಳಿ ಬೇಕಾದಷ್ಟು ಪುಸ್ತಕಗಳಿವೆ. ಯಾವುದು ಬೇಕಾದರೂ ನೀನು ತೆಗೆದುಕೊಂಡು ಹೋಗಬಹುದು."

".........."

"ಏಕೆ ಮಾತಿಲ್ಲ ?"

"ನೀನು ಯಾವುದಾದರೂ ಲೈಬ್ರರಿಯ ಮೆಂಬರೇ ?"

"ಹೌದು. ಪಬ್ಲಿಕ್ ಲೈಬ್ರರಿಗೆ ಮೆಂಬರು."

"ನನ್ನಲ್ಲಿ ಒಳ್ಳೊಳ್ಳೆಯ ಪುಸ್ತಕಗಳಿವೆ. ನೀನು ಆ ಲೈಬ್ರರಿಗೆ ಹಣ ಕಟ್ಟಿದಂತೆ ಇಲ್ಲಿ ಹಣ ಕಟ್ಟಬೇಕಾಗಿಲ್ಲ. ಯಾವುದೂ ಬೇಕಾದರೂ ತೆಗೆದು ಕೊಳ್ಳಬಹುದು ; ಸ್ವಂತದ್ದಾಗಿ ಉಪಯೋಗಿಸಲೂಬಹುದು."

ಸಂಧ್ಯಾ ಅತ್ಯಂತ ಸಂತುಷ್ಟಳಾದಳು. ಅರಳಿದ ಮುಖಬಿಂಬದಲ್ಲಿ ಮುಗುಳು ನಗೆ ಹರಿದಾಡಿತು.

"ತುಂಬ ವಂದನೆಗಳು !"

ಆದಿತ್ಯಬಾಬು ತಲೆಯಮೇಲೆ ಕೈಯಿಟ್ಟು ಹರಸುವಂತೆ "ಹೋಗಿ ಬಾಮ್ಮಾ !" ಎಂದರು. ಕಂಠಸ್ವನ ತುಸುವಿಜಾತೀಯವಾಗಿತ್ತು. ಕಣ್ಣಾಲಿ ಗಳಲ್ಲಿ ನಸು ರಂಗು ಮೂಡಿ ಏನೋ ಒಂದು ಬಗೆಯ ಅಪೂರ್ವ ರಸಭಾವ ವನ್ನು ಪ್ರದರ್ಶಿಸಿದುವು. ಅವಳೊಂದಿಗೆ ರಸ್ತೆಯ ಅಂಚಿನವರೆಗೂ ಬಂದು

ನಲ್ಮೆಯಿಂದ ಪ್ರೀತಿ ವಿಶ್ವಾಸಗಳ ಮುದ್ದಿನ ಮಳೆಗರೆದು ಬೀಳ್ಕೊಟ್ಟರು. ಸಂಧ್ಯಾ ತನ್ನ ಮನೆಯ ಹಾದಿ ಹಿಡಿದಳು. ಹೂಗೊಂಚಲು, ಚಾಕಲೆಟ್ಟಿನ ಡಬ್ಬ, ಪುಸ್ತಕಗಳು ಕೈ ತುಂಬ ತುಂಬಿವೆ. ಅಪೂರ್ವ ಔದಾರ್ಯದ ಹೊರೆ ಮನದುಂಬಿ ಮುಖಬಿಂಬದಲ್ಲಿ ಹೊಸ ಖಳೆಯನ್ನು ಮೂಡಿಸಿತ್ತು. ಸಂಧ್ಯಾ ಹೆದ್ದಾರಿಯಿಂದ ವಾಮಮಾರ್ಗಕ್ಕೆ ಹೆಜ್ಜೆ ಇಡುವ ಮುನ್ನ ಹಿಂತಿರುಗಿ ನೋಡಿದಳು. ಆದಿತ್ಯಬಾಬು ಗೇಟಿನ ಬಳಿ ನಿಂತು ಇತ್ತಲೇ ನೋಟವನ್ನು ಹೊರಳಿಸಿದ್ದಾರೆ. ಎಂತಹ ಆಶ್ಚರ್ಯ ? ಆ ಅಮೋಘವಾದ ಪ್ರೀತಿಯನ್ನು ಅವರು 'ದೇವರಿಗಾಗಿ' (ಉಪಾಧ್ಯಾಯಿನಿಯೊಮ್ಮೆ ಬಹುಮೂಲ್ಯವಾದ 'ಪ್ರೀತಿ' ಯನ್ನು ವರ್ಣಿಸಿದ ಬಗೆ) ಪಡೆದುಕೊಂಡಿರಬೇಕು ಎನಿಸಿದರೂ ವಿಷಯ ನುಂಗಲಾರದ ತುತ್ತಿನಂತಾಯಿತು. ತನುಮನಗಳು ಆಶ್ಚರ್ಯಾವೇಗಗಳ ವಶೀಭೂತವಾದುವು. ಹಾದಿ ಸಾಗಿದುದರ ಪರಿವೆಯೇ ಮೂಡಲಿಲ್ಲ. ಮನೆಯಂಗಳದಲ್ಲಿ ತಾಯಿಯನ್ನು ಕಂಡಾಗ, ಗಗನವಿಹಾರಿಯಾಗಿದ್ದ ಚಿತ್ತ ವಾಸ್ತವ ಜಗತ್ತಿಗೆ ಸರಿಯಿತು. ಆನಂದದ ಗಣಿಯಾಗಿ ಬಳಿಗೆ ಹೋದಳು.

"ಅದೇಕೆ ಇಷ್ಟೊತ್ತು ? ಇನ್ನೂ ಏನೇನೋ ಬೇರೆ ಸಂಪಾದಿಸಿದ್ದಿ !"

"ಅವರು ನನ್ನ ಬಿಡಲೇ ಇಲ್ಲ.....ಇಲ್ಲಿ ನೋಡಿ !"

"ಓ....ಹೋ ! ಎನ್ನುತ್ತ ದೃಷ್ಟಿ ಅರಳಿಸಿದಳು ತಾಯಿ.

ಸಂಧ್ಯಾ ಅವರ ಸ್ನೇಹಾನುರಾಗವನ್ನೆಲ್ಲ ಉಲ್ಲಸಿತ ಜೀವನೀಶಕ್ತಿಯಿಂದ ಕಂಠಪೂರ್ತಿ ಬಣ್ಣಿಸಿದಳು.....

"ಯಾರೋ ಉತ್ತಮ ಕುಟುಂಬದವರಿರಬೇಕು !"

ಸಂಧ್ಯಾ ಅದುವರೆಗೆ ಮರೆತು ಹೋಗಿದ್ದ ವಿಚಾರವನ್ನು ಜ್ಞಾಪಿಸಿಕೊಂಡು "ಓ! ಒಂದು ವಿಚಾರ ಮರೆತೇ ಹೋಯ್ತು !" ಎಂದಳು. ಭಾವ ವಿಸ್ತೃತ ನಯನಗಳಲ್ಲಿ ಹೊಳಪನ್ನು ಸೂಸಿ.

"ಏನದು ?"

"ಈ ಪುಸ್ತಕಗಳನ್ನು ನನಗೇ ಕೊಟ್ಟಿದ್ದಾರೋ ಏನೋ....ಆಗ ಅವರೇನೋ ಹೇಳಿದರು ; ನಾನೇ ಸರಿಯಾಗಿ ಕೇಳಿಸಿಕೊಳ್ಳಲಿಲ್ಲ !"

"ಓದಿದನಂತರ ಅವನ್ನೊಮ್ಮೆ ತೆಗೆದುಕೊಂಡು ಹೋಗು. ಏನು ಹೇಳುತ್ತಾರೋ ಹಾಗೆ ಮಾಡು." ಸಲಹೆ ನೀಡಿದಳು ತಾಯಿ.

"ಅವರು ಪ್ರಾಯಶಃ ಹಿಂತೆಗೆದುಕೊಳ್ಳಲಾರರು. ಆದರೂ, ಹೋಗಿ ಕೇಳಿ ನೋಡುವೆ."

"ಅವರ ಮನೆಯಲ್ಲಿ ಚಿಕ್ಕಮಕ್ಕಳಿರಬೇಕು. ಅದರಿಂದ ಬಾಲ ಸಾಹಿತ್ಯ ಕಲೆಹಾಕಿದ್ದರೆಂದು ತೋರುತ್ತದೆ."

"ಅಲ್ಲಿ ಯಾರೂ ಕಾಣಿಸುವುದಿಲ್ಲ, ಅಮ್ಮಾ!"

"ಬಹುಶಃ ಪರವೂರಿಗೆ ಹೋಗಿರಬಹುದು."

"ಇದ್ದರೂ ಇರಬಹುದು ; ಮನೆ ನಿಶ್ಶಬ್ದವಾಗಿತ್ತು."

ಅನಂತರ ನಾಲ್ಕಾರು ದಿನಗಳು ನಿರಾತಂಕವಾಗಿ ಸಂದು ಹೋದುವು.

ಸಂಧ್ಯಾಮಣಿ ಪುಸ್ತಕಗಳನ್ನು ಓದಿದ ಮೇಲೆ ಅವುಗಳನ್ನು ತೆಗೆದು ಕೊಂಡು ಬಾಬುಗಳ ಮನೆಯ ಕಡೆ ಹೊರಟಳು. ಎಳೆಯ ಮನಸ್ಸು, ಎಳೆಯ ಹೃದಯ, ಎಳೆಯ ಹೆಜ್ಜೆಗಳು ಒಂದಕ್ಕೊಂದು ಸಾದರದಿಂದ ಉತ್ತೇಜಕವಾಗಿವೆ. ದುರ್ನಿವಾರ ಸಂಭ್ರಮವೇಗದಿಂದ ಪುಟಪುಟಿಯುವ ಜೀವಕ್ಕೆ ಆ ದೂರದ ಹಾದಿಯು ಈಗ ತೀರ ಹತ್ತಿರವಾದಂತೆ ಭಾಸವಾಗು ತ್ತದೆ. ಒಂದೇ ಘಳಿಗೆಯಲ್ಲಿ ಹೋಗಿ ಬಿಡುವೆ ಎಂಬಷ್ಟು ವಿಶ್ವಾಸ ಮನಃ ಪ್ರಾಣಗಳಲ್ಲಿ.

ಅವಳು ಆ ಮನೆಯ ಪ್ರಾಕಾರದ ಬಾಗಿಲಲ್ಲಿ ಹಣಿಕಿದಾಗ ಆದಿತ್ಯ ಬಾಬು ಉದ್ಯಾನದ ಕಾಮಗಾರಿಯಲ್ಲಿ ಸ್ವತಃ ನಿರತರಾಗಿದ್ದರು. ಅವರು ವೈಬಾಗಿ ಕೈಗೊಂಡ ಕಾಯಕ ಬಹಳ ಕಾಲದಿಂದ ಪಳಗಿದ್ದಾರೆ ಎಂಬುದಕ್ಕೆ ಜೀವಂತ ಸಾಕ್ಷಿ! ಅವರು ಈ ಕಡೆ ಬೆನ್ನು ಮಾಡಿದ್ದರಿಂದ ಅವಳನ್ನು ಗಮ ನಿಸಲಿಲ್ಲ. ಒಂದೆರಡು ಘಳಿಗೆ ಸದ್ದಿಲ್ಲದೆ ಉರುಳಿದುವು. ಹುಡುಗಿ ಮೂರ್ತಿ ಮತ್ತಾಗಿ ನಿಂತಳು. ಮನದಲ್ಲಿ ನಾನವರಿಗೆ ಸಹಾಯ ಮಾಡಲೇ ಎಂಬ ಆಕಾಂಕ್ಷೆ....ಒಬ್ಬರೇ ಇದ್ದಾರಲ್ಲ ಇನ್ನಾರೂ ಇಲ್ಲವೇ ಎಂಬ ಕುತೂಹಲ..... .....ಅಷ್ಟು ವಯಸ್ಸಾದರೂ ಎಷ್ಟು ಕೆಲಸ ಮಾಡುತ್ತಾರೆ ಎಂಬ ಅಚ್ಚರಿ..... ಇಂತಿಂತಹ ಸಮಸ್ಯೆಯ ಕುಂಡದಲ್ಲಿ ಅವಳು ಈಸುತ್ತಿರುವಾಗಲೇ ಬಾಬು ಹಿಂತಿರುಗಿ ನೋಡಿದರು. ಆಗ ಆ ಮುಹೂರ್ತದಲ್ಲೇ ಮುಖಬಿಂಬ ಅರಳಿ ಪ್ರಸನ್ನವಾಯಿತು-ಒಮ್ಮೆಗೇ ಶತಮಾನಗಳ ಕವಿಗಳು ರಾಗಾರುಣತಾನವನ್ನು ಮಿಾಂಟಿದಂತೆ !

"ಸಂಧ್ಯಾರಾಣಿ! ಈಗ ಬಂದೆಯೇನಮ್ಮಾ?"

"ಹೌದು."

ಮಂದಹಾಸದ ಮಂಗಳ ದೀಪ್ತಿಯೊಡನೆ ಒಳ ಹೆಜ್ಜೆ ಇಟ್ಟಳು ಸಂಧ್ಯಾಮಣಿ.

"ಬಾಮ್ಮಾ!" ಆದರದ ಸ್ವಾಗತ ನೀಡಿದರು ಆದಿತ್ಯಬಾಬು.

"ನಿಮ್ಮ ಪುಸ್ತಕಗಳನ್ನು ಓದಿದ್ದಾಯಿತು. ತುಂಬ ಚೆನ್ನಾಗಿವೆ, ನನಗೆ ಬಹಳ ಮೆಚ್ಚುಗೆಯಾಯಿತು!"

"ಅವನ್ನು ನಿನಗಾಗಿಯೇ ಕೊಟ್ಟದ್ದು, ನೀನೇ ಇಟ್ಟುಕೋ. ಸಂಕೋಚವೇಕೆ?"

"..........."

"ನನ್ನಲ್ಲಿ ಇನ್ನೂ ಬಾಲ ಸಾಹಿತ್ಯ ಬೇಕಾದಷ್ಟು ಇದೆ. ನೀನು ಯಾವುದು ಬೇಕಾದರೂ ಒಯ್ಯಬಹುದು."

ಸಂಧ್ಯಾ ಮರು ಮಾತಿಲ್ಲದೆ ಆನಂದಾತಿಶಯದಿಂದ ಅವರ ಕಡೆ ನೋಡಿದಳು.

ಪುಸ್ತಕಗಳು ಸರಳ ಭಾಷೆಯಲ್ಲಿವೆ ಅಲ್ಲವೇ?"

"ಹೌದು........ಹೌದು"

"ನಿನ್ನಂತಹವರು ಓದಬೇಕಾದ ಸಾಹಿತ್ಯ. ಖಂಡಿತ ಓದು ಮನೋವಿಕಾಸವಾಗುತ್ತೆ."

ಸಂಧ್ಯಳಿಗೆ ಏನೆನ್ನಬೇಕೊ ಹೊಳೆಯಲಿಲ್ಲ. ಹೇಗೆ ಕೃತಜ್ಞತೆ ಸಲ್ಲಿಸಬೇಕೋ ತಿಳಿಯಲಿಲ್ಲ. ಸುಮ್ಮನೆ ಗರಬಡಿದವಳಂತೆ ನಿಂತುಬಿಟ್ಟಳು. ನಿರ್ನಿಮೇಷನಯನಗಳಲ್ಲಿ ಭಾವಕಾಂತಿ ತೆರೆಯ ಹಿಂದಿನ ರಮಣಿಯಂತೆ ಇಣುಕುತಿತ್ತು. ಅವಳು ಏನನ್ನೂ ಹೇಳದೆ ನಿಶ್ಚಲ ಭಂಗಿಯಲ್ಲಿ ನಿಂತುದನ್ನು ನೋಡಿ ಅವಳ ಬೆನ್ನಿನಮೇಲೆ ಕೈಯಿಟ್ಟು ನಲ್ಮೆಯಿಂದ ನುಡಿದರು ಆದಿತ್ಯಬಾಬು, "ಹೋಗು; ಒಳಗಡೆ ಬೀರುವಿನಿಂದ ನಿನಗೆಷ್ಟು ಪುಸ್ತಕಗಳು ಬೇಕೋ ಅಷ್ಟನ್ನೂ ತೆಗೆದುಕೊಂಡು ಹೋಗು!"

ಸಂಧ್ಯಾ ಕೊರಳೆತ್ತಿ ನೋಡಿದಳು. ಅಸ್ತಮಾನ ಪ್ರಭೆಯಲ್ಲಿ ಮಿಂದ ಅವರು ಶಾಂತ ಮನೋಹರವಾಗಿ ಕಾಣಿಸುತಿದ್ದರು. ಸಣ್ಣಗೆ ಮುಗುಳು

ನಕ್ಕು ಸಂಕೋಚದಿಂದ ಉತ್ತರಿಸಿದಳು "ಸಾಕು.........ನನಗೆ ಇನ್ನಾವುದೂ ಬೇಡ."

"ನಿನಗೆ ಒಳಹೋಗಲು ಭಯವೇನೋ; ಬಾ, ನಾನೂ ನಿನ್ನೊಂದಿಗೆ ಬರುವೆ. ನಿನಗೆ ಯಾವುದು ಬೇಕೋ ಅದನ್ನು ತೆಗೆದುಕೊ. ಪುಸ್ತಕ ತೆಗೆದುಕೊಳ್ಳಲು ಹಿಂಜರಿಯಬಾರದು."

"..............."

"ಬಾಮ್ಮಾ!"

"ಬೇಡ ...."

ಹಾಗೆಂದರೆ ಬಾಬು ಕೇಳಬೇಕಲ್ಲ. ಒತ್ತಾಯಿಸಿ ಒಳಗೆ ಎಳೆದು ಕೊಂಡು ಹೋಗುತ್ತ ಕೇಳಿದರು,

"ಏಕಷ್ಟು ಸಂಕೋಚ ? ಈಗಲೂ ನನ್ನ ಪರಿಚಯ ಆಗಲಿಲ್ಲವೇ ?"

"ಸಂಕೋಚವೇನಿಲ್ಲ ; ಸುಮ್ಮನೆ.........."

"ಅಂದರೆ.....?"

"ನಿಮಗೆ ತೊಂದರೆಯಾಗಬಾರದು."

"ಇದರಲ್ಲಿ ತೊಂದರೆ ಏನಿದೆ ?"

ಅವಳು ಏನೂ ಮಾತಾಡದೆ ಎಳೆನಗು ಬೀರಿದಳು.

"ನನ್ನಲ್ಲಿ ನೀನೇನೂ ಅನುಮಾನಿಸಬೇಡ."

"ಇಲ್ಲ...."

ಆದಿತ್ಯಬಾಬು ಅವಳನ್ನು ಒಳಕೋಣೆಗೆ ಕರೆದೊಯ್ದು ಬೀರುವಿನ ಬಾಗಿಲನ್ನು ಹರವಾಗಿ ತೆರೆದು "ನೋಡು!" ಎಂದರು. ದನಿ ಆನಂದದ ಆಗರವಾಗಿತ್ತು. ಆಗ ಭ್ರಮಿತ ಬಾಲಕಿ ದೀಪದಾನಿಯಂತೆ ನಿಂತುಬಿಟ್ಟಳು. ಪುಸ್ತಕ ಪ್ರಪಂಚ ಬಾ ಬಾರೆಂದು ಕರೆಯುವಂತಿದೆ. ಗೃಹಲಕ್ಷಣ ನವ ನಾಗರಿಕತೆಯನ್ನು ಸಾರಿ ಹೇಳುತ್ತಿದೆ. ಒಳಗೆಲ್ಲೂ ಕುಟುಂಬಿಗರ ಚಿತ್ರಪಟ ಗಳು ಕಾಣಿಸುತ್ತಿಲ್ಲ. ಹಿಂಭಾಗದಲ್ಲಿ ಕಲೆತಿದ್ದ ಆಳುಗಳ ಗುಸುಗುಸು ಮಾತು ಕತೆ ಕೇಳಿಸುತಿತ್ತು. ಸಂಧ್ಯಾಮಣಿ ಕೈಗೆಟುಕಿದ ಕೆಲವು ಪುಸ್ತಕಗಳನ್ನು ತೆಗೆದುಕೊಂಡು ಹೊರಬಂದಳು. ಆದಿತ್ಯಬಾಬು ಅವಳನ್ನು ಉದ್ಯಾನದ ಕಲ್ಲುಬೆಂಚಿನ ಮೇಲೆ ಕೂಡಿಸಿ "ಇಲ್ಲೇ ಸ್ವಲ್ಪಹೊತ್ತು ಪುಸ್ತಕಗಳನ್ನು ನೋಡು." ಎಂದರು ಅಭಿರಾಮಭಂಗಿಯಲ್ಲಿ.

ಅವರ ಹೂದೋಟದ ಕಾಮಗಾರಿ ಪುನಃ ಆರಂಭವಾಯಿತು. ವೃದ್ಧ ಶರೀರ ಬಿಲ್ಲಿನಂತೆ ಬಾಗಿ ಕೆಲಸ ನಿರ್ವಹಿಸುತಿತ್ತು. ಗಿಡಗಳ ಕಶಿ ಯಥಾವತ್ತಾಗಿ ನಡೆದು ಜೇಡದ ರೆಂಬೆಗಳೆಲ್ಲಾ ರಾಶಿರಾಶಿಯಾಗಿ ಕೆಳಗೆಬಿದ್ದುವು. ಕೆಲಸದವನು ಅವನ್ನು ಜೋಡಿಸಿ ಹೊರಗೊಯ್ಯುತಿದ್ದ. ಮಾಲಿ ಕಳೆ ಕೀಳುತಿದ್ದ. ಅನಂತರ ಬಾಬು ಅದಕ್ಕೆ ಕೈ ಹಚ್ಚಿದರು. ಅವರು ನ್ಯೆಬಾಗಿ ಕಳೆ ಕೀಳುವುದನ್ನು ನೋಡಿದರೆ ತರುಣರನ್ನು ಅಣಕಿಸುವಂತಿತ್ತು. ಸಂಧ್ಯಾಮಣಿ ಪುಸ್ತಕಗಳನ್ನು ಬದಿಗಿಟ್ಟು ಅವರ ಬಳಿಗೆ ಹೋಗಿ ನಿಂತುಕೊಂಡಳು.

"ನಿನಗೀಗ ನನ್ನ ಪರಿಚಯು ಚೆನ್ನಾಗಿ ಆಯಿತಷ್ಟೆ? ಇನ್ನು ನನ್ನಲ್ಲಿ ಸಂಕೋಚವಿಲ್ಲ ತಾನೇ?"

ಬಾಬುವಿನ ಪ್ರಶ್ನೆ ಪ್ರಸನ್ನ ಮುಖದಿಂದ ಹೊರಬಿತ್ತು. ತುಟಿಗಳಲ್ಲಿ ತುಂಬೆನಗೆ ತೇಲಿತು.

"ಇಲ್ಲ. ಖಂಡಿತ ಇಲ್ಲ." ಎನ್ನುತ್ತ ತಲೆಯಾಡಿಸಿದಳು ಸಂಧ್ಯಾಮಣಿ ಕಣ್ಣುಗಳಲ್ಲಿ ಸಾನಂದದ ಖಳೆ ಕೂಡಿಬಂತು.

"ಇನ್ನೂ ಕೆಲವು ಪುಸ್ತಕಗಳನ್ನು ಆರಿಸಿಕೊಳ್ಳಬಹುದಿತ್ತಲ್ಲ, ಏಕೆ ಬಿಟ್ಟೆ?"

"ಇನ್ನೊಮ್ಮೆ ಬಂದು ತೆಗೆದುಕೊಳ್ಳುವೆ."

ಆದಿತ್ಯಬಾಬು ನಕ್ಕು ಬಿಟ್ಟರು "ಆಗಲೂ ಇಷ್ಟೆ!"

ಸಂಧ್ಯಳ ತುಟಿಗಳಲ್ಲೂ ಪ್ರತಿಹಾಸ ಮಿನುಗಿತು.

"ಇನ್ನೆಂದು ಬರುತ್ತಿ? ನಾಳೆ........ಬರುವುದಕ್ಕಾಗುತ್ತದೆಯೇ?"

"ನಾಳೆಯೊಳಗಾಗಿ ಇಷ್ಟು ಪುಸ್ತಕಗಳನ್ನು ಓದುವುದಕ್ಕಾಗುವುದಿಲ್ಲ."

"ಅವಿರಲಿ, ಪರವಾಗಿಲ್ಲ. ಇಲ್ಲಿ ಬೇಕಾದಷ್ಟು ಹೂಗಳಿವೆ. ಈ ಉದ್ಯಾನದಲ್ಲಿ ಆನಂದದಿಂದ ಅಡ್ಡಾಡುತ್ತ ನನ್ನೊಂದಿಗೆ ಸ್ವಲ್ಪಹೊತ್ತು ಕಳೆದು ಅನಂತರ ಹೋಗಬಹುದಲ್ಲ? ನಿನಗೇನುಬೇಕೋ ಅದನ್ನು ತೆಗೆದುಕೊಂಡು ಹೋಗಲೂ ನೀನು ಇಲ್ಲಿ ಸ್ವತಂತ್ರಳಿದ್ದಿ!"

"..........."

"ನಿನ್ನ ಹೂದಾನಿಗೆ ಹೂಗಳು ಬೇಕಷ್ಟೆ?"

'ಬೇಕು' ಎಂಬಂತೆ ತಲೆಯಾಡಿಸಿದಳು ಸಂಧ್ಯಾಮಣಿ. ಮೈಯೆಲ್ಲಾ ಮನಸ್ಸಾದಂತೆ ಮುಖಬಿಂಬ ಅರಳಿ ಹೂವಾಯಿತು.

"ನಿನಗೆ ಯಾವ ಹೂ ಬೇಕು? ಗುಲಾಬಿ, ಸೇವಂತಿಗೆ, ಪಾರಿಜಾತ ಇವುಗಳಲ್ಲಿ ಯಾವುದು ಇಷ್ಟ ?"

"ನೀವು ಯಾವುದು ಕೊಡುತ್ತೀರೋ ಅದು."

ಆದಿತ್ಯಬಾಬು ಸಂತುಷ್ಟರಾಗಿ ಬಗೆ ಬಗೆಯ ಹೂಗಳನ್ನು ಕಿತ್ತು ಅವಳ ಕೈಗಿಟ್ಟು ಮುದ್ದಿನ ಮಳೆಗರೆದು, ಪ್ರೀತ್ಯಾದರದಿಂದ ಬೀಳ್ಕೊಡುತ್ತ ಕಾಲಾನುಕಾಲದ ಮಧುರಾನುಭೂತಿಯಲ್ಲಿ ಹಸುರುಹಸುರಾಗಿ ಮುಳುಗಿದ್ದರು. ಅವಳು ಪುಸ್ತಕಗಳನ್ನು ಎದೆಗಾಂತು ಹಿಡಿದು ರಸ್ತೆಗಿಳಿದನಂತರ ಹಿಂದೆಯೇ ತಮ್ಮ ದೃಷ್ಟಿಯನ್ನು ಹರಿಯಬಿಟ್ಟು ವಿಸ್ಮಯವಿಮೂಕರಂತೆ ಸ್ತಂಭೀಭೂತರಾದರು. ಅವರ ನೋಟಕ್ಕೆದುರಾಗಿ ಹಾದಿಯಂಚಿನಲ್ಲಿ ಮಂಗಳ ಪ್ರತಿಮೆಯಂತೆ ಸಂಧ್ಯಾ ನಡೆಯುತ್ತಲೇ ಇದ್ದಾಳೆ. ಅಭಿಶಸ್ತ ಹೆಜ್ಜೆಗಳ ಗತಿ ತೀವ್ರವಾಗಿದ್ದರೂ ಉತ್ಸುಕತೆಯಿಲ್ಲದೆ ಯಾಂತ್ರಿಕವಾಗಿ ಚಲಿಸುತ್ತಿರುವಂತಿವೆ, ದೂರ ದೂರ....ಇನ್ನೂ ದೂರ....ಅಂತೂ ಕಣ್ಮರೆಯಾದಳು ಹುಡುಗಿ.

* * * *

ಸಂಧ್ಯಾಮಣಿ ಆ ಪುಸ್ತಕಗಳನ್ನೆಲ್ಲ ಓದಲು ಹಲವಾರು ದಿನ ತೆಗೆದುಕೊಂಡಳೇನೋ. ಆ ಅವಧಿಯೊಳಗಾಗಿ ಆದಿತ್ಯಬಾಬುವನ್ನು ನೆನೆಯುವ ಪ್ರಸಂಗ ಅದೆಷ್ಟು ಬಾರಿ ಒದಗಿತೋ ಊಹಿಸಿ ಹೇಳುವುದು ಕಷ್ಟ. ವಾರವಾರವೂ 'ಟೆಸ್ಟ್'ಗಳು ನಡೆಯುವುದರಿಂದ ಸಮಯವೆಲ್ಲಾ ಶಾಲಾ ಪುಸ್ತಕಗಳನ್ನು ಓದುವುದರಲ್ಲೇ ಕಳೆಯುತ್ತದೆ. ಶಾಲೆಗೆ ಹೋಗಿ ಬರುವಾಗಲೆಲ್ಲ ಅವರನ್ನು ನೋಡುವ ಯೋಚನೆ ಮನದಲ್ಲಿ. ಆಸ್ತಿಕ ದೃಷ್ಟಿ ಆ ಮನೆ ಕಣ್ಮರೆಯಾಗುವವರೆಗೂ ಅಲ್ಲಲ್ಲೇ ವಿಚರಿಸುತ್ತದೆ. ತಮ್ಮ ಹೂದಾನಿಗಳು ಖಾಲಿಯಾಗಿ ಎಂದೋ. ಒಮ್ಮೆ ಹೋಗಿದ್ದರೆ ಹೂಗಳನ್ನಾದರೂ ತರಬಹುದಿತ್ತು ಎಂಬ ಭಾವನೆ. ಆದರೆ, ಅವರ ಅತೀವ ಪ್ರೀತಿ ಅರ್ಥೈಸಲಾಗದ ಒಗಟು. ಅವರು ಹಾದಿಯಲ್ಲಿ ಓಡಾಡುವುದೇ ಆಗಲೀ, ಅವರ ಮಕ್ಕಳು ಶಾಲಾ ಕಾಲೇಜುಗಳಿಗೆ ಹೋಗುವುದೇ ಆಗಲೀ ಕಾಣಿಸುತ್ತಿಲ್ಲವಲ್ಲಾ ಎಂಬ

ಯೋಚನೆ. ಅಂತೂ, ಒಂದಲ್ಲ ಒಂದು ರೀತಿಯಲ್ಲಿ ಅವರ ನೆನವರಿಕೆ ಮೂಡುತ್ತದೆ. ಆದರೂ ಅವರಲ್ಲಿಗೆ ಹೋಗಿಬರಲು ಅವಕಾಶ ದೊರೆಯು ಲಿಲ್ಲ. ಎಣಿಕೆಗೂ ಬಾರದಷ್ಟು ಸರಾಗವಾಗಿ ದಿನಗಳು ಓಡುತ್ತವೆ. ಇಂದು–ನಾಳೆ ಎನ್ನುವುದರೊಳಗಾಗಿ ವಾರಗಳೇ ಉರುಳಿ ಹೋದುವು.

ಬಾಬುವಿನ ಮನೆಯಿಂದ ತಂದ ಪುಸ್ತಕಗಳನ್ನು ಓದದೆ ಹಿಂದಿರುಗಿಸಲು ಸರ್ವಥಾ ಮನಸ್ಸು ಒಪ್ಪುತ್ತಿಲ್ಲ. ಅವರೇ ಹೇಳಿದಂತೆ ಅದರ ಮೊದಲೇ ಒಮ್ಮೆ ಹೋಗಿ ಬರುವ ಮನಸ್ಸು. ಆದರೆ, ಅವುಗಳನ್ನು ಬಹಳ ಕಾಲ ಉಳಿಸಿಕೊಳ್ಳುವುದು ಸರಿಯಲ್ಲ ಎಂಬ ಚಿಂತೆಯಲ್ಲಿ ಅದೂ ಸಹ ಸಾಧ್ಯವಾಗುತ್ತಿಲ್ಲ. ತಲೆಯಲ್ಲಿ ಅದೇ ವಿಚಾರಧಾರೆಯನ್ನು ತುಂಬಿಕೊಂಡು ಶಾಲೆಯಿಂದ ಮನೆಯ ಹಾದಿ ಹಿಡಿದಿದ್ದಳು ಸಂಧ್ಯಾಮಣಿ.

ಅವಳು ತನ್ನ ಮನೆಯನ್ನು ಮುಟ್ಟಿದಾಗ ಅದು ಬಾಬುಗಳ ಮನೆಯಂತೆಯೇ ಸರ್ವತ್ರ ಶಾಂತಿಯಿಂದ ಕೂಡಿತ್ತು. ಮಗಳ ಪ್ರತೀಕ್ಷೆಯಲ್ಲಿದ್ದ ಪಂಕಜ ಕದವನ್ನು ತೆರೆದು ತೀವ್ರ ಆಯಾಸದಿಂದ ಬಳಲಿದ್ದ ಅವಳನ್ನು ಕುರಿತು ನುಡಿದಳು,

"ನೀನಿನ್ನೂ ಜ್ವರದ ಹೊಡೆತದಿಂದ ಸಂಪೂರ್ಣ ಚೇತರಿಸಿಕೊಳ್ಳಲಿಲ್ಲ. ಬಹಳ ಆಯಾಸಗೊಂಡಂತೆ ಕಾಣಿಸುತ್ತಿ. ಕೈ ಕಾಲು ತೊಳೆದುಕೊಂಡು ವಿಶ್ರಾಂತಿ ತೆಗೆದುಕೋ."

"ಅಷ್ಟು ಸಮಯ ಎಲ್ಲಿಂದ ಬರಬೇಕು? ಹೋಂ ವರ್ಕ್ ಮಾಡಿಕೊಳ್ಳುವುದಿದೆ. ಈವತ್ತಂತೂ, ಬಾಬುಗಳ ಮನೆಗೆ ಹೋಗಿಯೇ ತೀರಬೇಕು, ಎನಿಸಿದೆ."

"ಓ....! ಅವರ ಪುಸ್ತಕಗಳು ಇಲ್ಲೇ ಉಳಿದಿವೆ ಅಲ್ಲವೇ?"

"ಹೌದಮ್ಮಾ! ಇಂದು ಮಧ್ಯಾಹ್ನದ ಬಿಡುವಿನಲ್ಲಿ ಒಂದು ಪುಸ್ತಕ ಓದಿರುವೆ, ಹಿಂದಿನದೊಂದು ಸೇರಿಸಿ ಕೊಟ್ಟು ಬರುವ ಯೋಚನೆ. ಇನ್ನೊಂದನ್ನು ಇನ್ನೊಮ್ಮೆ ಕೊಡುವೆ. ಆಗಬಹುದೇ?"

"ಆಗಬಹುದು. ಆದರೆ, ನೀನು ವಿಶ್ರಾಂತಿ ತೆಗೆದುಕೊಂಡಿದ್ದರೆ ಒಳ್ಳೆಯದಿತ್ತು."

"ಅವರ ಮನೆ ಹೆದ್ದಾರಿಯಲ್ಲಿ; ಅದೇನು ಹೆಚ್ಚು ದೂರವಲ್ಲ."

"ಹಾಗಾದರೆ, ಈಗ ಹೋಗಬೇಕೆ ಸಂಧ್ಯಾ ?"

"ಹೌದು....."

ಸಂಧ್ಯಾ ಪುಸ್ತಕಗಳನ್ನು ತೆಗೆದಿಟ್ಟು ನಿತ್ಯಕರ್ಮಗಳನ್ನು ತೀರಿಸಿ ಹೋಂ ವರ್ಕ್ ಮುಗಿಸಿದಾಗ ದಿನಮಣಿ ಪಡುವಣ ಸೀಮೆಗೆ ಇಳಿಯುತ್ತಿದ್ದ. ಸಂಧ್ಯಾಮಣಿ ಬಾಬುಗಳ ಮನೆಗೆ ಹೊರಟಳು. ಈಗೀಗ ಆ ಹಾದಿಯಲ್ಲಿ ಎಲ್ಲಿಲ್ಲದ ಆತ್ಮೀಯತೆ. ಅಂಕುಡೊಂಕಿನ ಹಾದಿಯನ್ನು ಕಳೆದು ಹೆದ್ದಾರಿಗೆ ಕಾಲಿಟ್ಟಾಗಲೇ ಮಾನಸ ಪಕ್ಷಿ ಅವರ ಉದ್ಯಾನವನ್ನು ಹೊಕ್ಕಾಗಿತ್ತು. ಆ ನಾಲ್ಕಾರು ಮನೆಗಳನ್ನು ದಾಟಿ ಪ್ರಾಕಾರದ ಬಾಗಿಲಲ್ಲಿ ಹಣಿಕಿದಾಗ ಹೊರಗಡೆ ಒಬ್ಬರೂ ಕಾಣಿಸಲಿಲ್ಲ. ಸ್ವಲ್ಪಹೊತ್ತು ಅವರ ನಿರೀಕ್ಷೆಯಲ್ಲಿ ಅಲ್ಲೇ ನಿಂತುಕೊಂಡಳು. ಉದ್ಯಾನದಲ್ಲಿ ನಳನಳಿಸುವ ಹೂ ಗೊಂಚಲುಗಳ ಮೇಲೆ ಆನಂದಪ್ರಮತ್ತ ನೋಟ ಹರಿದಾಡಿತು; ಎಷ್ಟೊತ್ತಾದರೂ ಹೊರಗಡೆ ಯಾರೂ ಬಾರದಿರಲು ಬಾಗಿಲನ್ನು ತಳ್ಳಿ ಒಳ ಹೋದಳು ಸಂಧ್ಯಾ. ವರಾಂಡದ ಬಾಗಿಲು ತೆರೆದಿದ್ದರೂ ಆದಿತ್ಯಬಾಬುಗಳಾಗಲೀ, ಆಳುಗಳಾಗಲೀ ಯಾರೂ ಕಾಣಿಸದೆ, ತಾನೇ ಏಕಾಏಕಿ ಒಳ ಹೋಗಲು ಅಳುಕಿತು ಮನಸ್ಸು; ಕರೆಯುವುದು ಹೇಗೆ ಎಂಬ ಸಂಕೋಚ; ಹಾಗೇ ನೋಡುತ್ತ ನಿಂತಿದ್ದಾಳೆ. ಸ್ವಲ್ಪ ಹೊತ್ತಿನ ನಂತರ ಯಾವಕಾರಣವೋ ಆದಿತ್ಯಬಾಬು ಹೊರಬಂದರು. ಅವರ ಮುಖಮಂಡಲದ ವರ್ಚಸ್ಸೇ ಬದಲಾಗಿದೆ. ಕೆನ್ನೆಗಳಲ್ಲಿ ಉಕ್ಕುವಂತಿದ್ದ ಲಾಲಿಮೆ ಮಾಯವಾಗಿ ತೀವ್ರ ಅನಾರೋಗ್ಯದ ಪರಿಮ್ಲಾನ ಮುದ್ರೆಯೊತ್ತಿತ್ತು. ದೇಹಪ್ರಕೃತಿ ತುಂಬ ಸುಸ್ತಾದಂತೆ ನಿಧಾನಗತಿಯಲ್ಲಿ ಚಲಿಸುತಿತ್ತು. ಘನಗಾಂಭೀರ್ಯವೇ ಮೈವೆತ್ತು ಬಂದಂತಿದ್ದ ಅವರು ಅವಳನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತ ನಲ್ಮೆಯಿಂದ ಕೇಳಿದರು,

"ಏಕಮ್ಮಾ, ಇಷ್ಟುದಿನ ಬರಲಿಲ್ಲ ?"

ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಅವಳಲ್ಲಿ ಸಿದ್ಧ ಉತ್ತರವೂ ಇರಲಿಲ್ಲ. ಮುಗ್ಧ ಮನಸ್ಸು ಸ್ವಲ್ಪ ತಬ್ಬಿಬ್ಬಾಯಿತು. ಅವರ ಬಳಿಗೆ ಯಾವಾಗಲೂ ಹೋಗುವ ಪ್ರಮೇಯವಾದರೂ ಏನು ? ಎಂಬುದು ಬಹು ದೊಡ್ಡ ಪ್ರಶ್ನೆ. ಯೋಚನೆಯ ಸುಳಿಯಲ್ಲಿ ಸಿಕ್ಕಿದ ಮನಸ್ಸು

ಎಚ್ಚತ್ತುಕೊಳ್ಳಲು ಕೆಲವು ನಿಮಿಷಗಳೇ ಬೇಕಾದುವೇನೋ. ಅನಂತರ ಸಾವರಿಸಿಕೊಂಡಂತೆ ಮುಗುಳು ನಕ್ಕಳು ಅವಳು. ಆದಿತ್ಯಬಾಬು ಪ್ರೇಮಾದರದಂದ ಗಾಢಾಲಿಂಗನೆ ಮಾಡಿಕೊಂಡು ಏನೋ ಒಂದು ರೀತಿಯ ಆತಂಕಪೂರ್ಣ ಧ್ವನಿಯಲ್ಲಿ ಪುನಃ ಕೇಳಿದರು "ಇಷ್ಟು ದಿನ ಏಕೆ ಬರಲಿಲ್ಲ ಮಗೂ ? ನನ್ನನ್ನು ಆಗಲೇ ಮರೆತುಬಿಟ್ಟೆಯಾ ಹೇಗೆ ? ನಾನು ಎಷ್ಟು ದಿನಗಳಿಂದ ನಿನಗಾಗಿ ಕಾದಿದ್ದೆ ಗೊತ್ತೆ ?"

ಎಂತಹ ಪ್ರಶ್ನೆ ?

ಅವರು ನನಗಾಗಿ ಕಾದಿದ್ದಾದರೂ ಏಕೆ ?? ನಾನು ಬಂದದ್ದು ಸರಿಯೇ ? ತಪ್ಪೆ ? ಅಥವಾ ಇನ್ನೇನಿರಬಹುದು ? ನನಗೊಂದೂ ಅರ್ಥವಾಗದಲ್ಲ. ಅವರ ಒತ್ತಾಯಕ್ಕೆ-ಪ್ರೀತ್ಯಾದರಗಳಿಗೆ ಉದ್ದೇಶವಾದರೂ ಏನು ? ಏನೆಂದು ಹೇಳಲಿ ?

ತಲೆಯಲ್ಲಿ ಪ್ರಶ್ನೆಗಳೇನೋ ಸುಳಿಸುತ್ತುತ್ತಲಿವೆ. ಆದರೆ, ಸಮರ್ಪಕವಾದ ಉತ್ತರಗಳು ದೊರೆಯುತ್ತಲೇ ಇಲ್ಲ. ಸ್ವಲ್ಪಹೊತ್ತು ಭಾವವಿಭಾವಗಳಲ್ಲಿ ಸುಮ್ಮನಿದ್ದು ಅನಂತರ ಉತ್ತರಿಸಿದಳು.

"ಮರೆಯಲಿಲ್ಲ, ಪರೀಕ್ಷೆ ಇತ್ತು."

"ಹಾಗೋ ? ಮರೆತೇಬಿಟ್ಟೆಯೇನೋ ಎಂದುಕೊಂಡಿದ್ದೆ."

"ಇಲ್ಲ....ಓದುವುದು ಬಹಳವಿತ್ತು ; ಬಿಡುವಾಗಲಿಲ್ಲ."

"ಪರೀಕ್ಷೆಯಲ್ಲಿ ಹೇಗೆ ಬರೆದಿದ್ದಿ ?"

"ಪರವಾಯಿಲ್ಲ ; ಸಾಧಾರಣ ಮಾಡಿರುವೆ."

"ಅದೇಕೆ ? ತುಂಬಾ ನೀರಸ ಉತ್ತರ ?"

ಸಂಧ್ಯಾ ಉತ್ತರಿಸದೆ ಮುಗುಳು ನಕ್ಕಳು.

"ಈಚೆಗೆ ಆರೋಗ್ಯ ಕೆಟ್ಟದ್ದರಿಂದ ನಿನಗೆ ಓದಿಕೊಳ್ಳಲು ಸ್ವಲ್ಪ ತೊಂದರೆಯಾಗಿರಬಹುದು."

"ಹೌದು."

"ನೀನಿಲ್ಲಿಗೆ ಬಂದು ಬಹಳ ಹೊತ್ತಾಗಿತ್ತೇ ?"

"ಸ್ವಲ್ಪ ಮುಂಚೆ ಬಂದಿದ್ದೆ. ಬಹುಶಃ ನಾಲ್ಕೈದು ನಿಮಿಷಗಳು ಕಳೆದಿರಬಹುದು."

"ಕರೆಯಲಿಲ್ಲವೇಕೆ ?"

"ಸುಮ್ಮನೆ."

"ಇನ್ನೂ ನಿನ್ನ ಲಜ್ಜೆ ಹೋಗಲಿಲ್ಲವೇ ?"

ಸಂಧ್ಯಾ ಉತ್ತರಿಸದೆ ಮುಗುಳು ನಕ್ಕಳು. ಲಜ್ಜೆಯ ಮೋಹಕ ರಂಗು ಕೆನ್ನೆಗಳಿಗೊರೆಯಿತು.

"ಇನ್ನು ಮುಂದೆ ಆಗಾಗ ಬರುತ್ತೀ ತಾನೆ ?"

"ಬರುವೆ........."

"ಏಕೆ? ನಿನ್ನ ದನಿಯಲ್ಲಿ ಸಂಕೋಚ ?"

"ಏನಿಲ್ಲ."

ಆದಿತ್ಯಬಾಬು ಆವುದೋ ಯೋಚನೆಯ ಬಲೆಯಲ್ಲಿ ಸಿಕ್ಕಿ ಸುಮ್ಮನಾದರೂ ಕೈ ಹಸ್ತ ಅವಳ ಭುಜವನ್ನು ತಬ್ಬಿ ಹಿಡಿದಿತ್ತು–ಪ್ರೀತ್ಯಾದರಗಳ ಪೂರಕವಾಗಿ. ಮಸ್ತಕರಂಗದಲ್ಲಿ ನಾಟ್ಯವಾಡುವ ಭಾವತರಂಗಿಣಿಯ ಮೃದು ನೂಪುರಗಳ ಮಧುರನಾದ ಮನಃಪ್ರಾಣಗಳನ್ನು ಮಂತ್ರಮುಗ್ಧಗೊಳಿಸಿತು. ಕಂಠ ಬಾಷ್ಪರುದ್ಧವಾದುದರಿಂದ ಮೌನಭಾರ ವಹಿಸಿದಂತೆ ಸ್ವಲ್ಪಹೊತ್ತು ಅವರು ಏನೂ ಹೇಳಲಿಲ್ಲ. ಕಣ್ಣುಗಳಲ್ಲಿ ಅನಿರೀಕ್ಷಿತವಾಗಿ ರಂಗು ಮೂಡಿಬಂತು.

"ನೀವು ಮಲಗಿದ್ದಿರೇನೋ...."

ಮೋಹಕವಾಣಿ ಮೊಳಗಿದಾಗ ಭಾವಪರವಶತೆಯಿಂದ ವಿಮುಖರಾದರು ಬಾಬು.

"ಹೌದು, ಮಗೂ. ಮಲಗಿ ಬೇಸರವಾದುದರಿಂದಲೇ ನಿನ್ನ ನೆನಪಾದುದು." ವಿಜಾತೀಯವಾದ ಕಂಠದಲ್ಲಿ ನುಡಿದರು ಬಾಬು.

"ಏಕೆ.....?"

"ಆರೋಗ್ಯ ಕೆಟ್ಟದೆ."

"ಔಷಧಿ ತೆಗೆದುಕೊಳ್ಳಲಿಲ್ಲವೇ ?"

"ತೆಗೆದುಕೊಂಡೆ....." ಅದಕ್ಕಿಂತ ಹೆಚ್ಚಾಗಿ ಏನು ಹೇಳಲೂ ಅವರಿಗೆ ಮನಸ್ಸಾಗಲಿಲ್ಲವೇನೋ ; ವಾಗ್ಧಾರೆ ಅಷ್ಟಕ್ಕೇ ತುಂಡುಗಡಿದು ಪ್ರೇಮ ಸ್ನಿಗ್ಧ ದೃಷ್ಟಿ ಕೃತಾರ್ಥಭಾವದಿಂದ ತುಂಬಿ ಬಂದಂತೆ ಮಿನುಗಿತು.

"ಎಷ್ಟು ದಿನಗಳಿಂದ....?" ಕೇಳಿದಳು ಸಂಧ್ಯಾಮಣಿ.

"ಒಂದು ವಾರದಿಂದ." ಎಂದ ಬಾಬು ಮರುನಿಮಿಷದಲ್ಲಿ ಅವಳ ತಲೆಯಮೇಲೆ ಮುಕ್ತ ಹಸ್ತವನ್ನಿಟ್ಟು "ನೀನೂ ಸಹ, ಜ್ವರದ ಹೊಡೆತ ದಿಂದಇನ್ನೂ ಚೇತರಿಸಿಕೊಳ್ಳಲಿಲ್ಲ. ಆರೋಗ್ಯವನ್ನು ಹೀಗೆ ಅಲಕ್ಷಿಸ ಬಾರದು." ಎಂದರು, ದನಿಯಲ್ಲಿ ಆಂತಕದ ಮಳೆಗರೆದು.

"ಪರವಾಯಿಲ್ಲ ; ನಾನು ಕೆಲವು ದಿನಗಳಲ್ಲಿ ಚೇತರಿಸಿಕೊಳ್ಳುವೆ."

"ಚೆನ್ನಾಗಿ ಊಟ ಮಾಡು. ಹಣ್ಣು ಹಂಪಲು-ಟಾನಿಕ್ ತೆಗೆದುಕೋ."

"ಈಗ ನೀವೇ ಚೆನ್ನಾಗಿಲ್ಲವಲ್ಲ?"

"ಏನಾದರೂ ಇದ್ದೇ ಇರಬೇಕಲ್ಲ, ವಯಸ್ಸಾದ ಮೇಲೆ ಎಲ್ಲರೂ ಅಷ್ಟೆ."

ಸಂಧ್ಯಾ ಕರುಣಕಾತರ ದೃಷ್ಟಿಯಿಂದ ಅವರ ಮುಖವನ್ನೇ ನಿಟ್ಟಿಸಿ ದಳು. ಬಳಲಿಕೆ-ಆಯಾಸಗಳಿಂದ ಪರಿಮ್ಲಾನವಾಗಿದ್ದ ಮುಖದಮೇಲೆಲ್ಲ ತುಂತುರು ತುಂತುರಾಗಿ ಬೆವರಿನ ಕಣಗಳು ಮೂಡಿದ್ದುವು. ದೃಷ್ಟಿಯನ್ನು ಎದುರಿಗೇ ಚೆಲ್ಲಿ ಕೊಟ್ಟಿದ್ದಾರೆ. ಬಲಿತು ಉದ್ದುದ್ದವಾದ ಹುಬ್ಬು, ವಿಶಾಲ ವಾದ ಲಲಾಟ ಆಳವಾದ ಅನುಭವವನ್ನು ಪ್ರತಿಪಾದಿಸುವಂತಿವೆ. ಅವರು ಸ್ವಲ್ಪಹೊತ್ತು ಅದಾವ ಗಂಭೀರ ಚಿಂತನೆಯಲ್ಲಿ ತೊಡಗಿದ್ದರೋ, ವಿಚಿತ್ರ ವಾದ ಮೌನ ಶಾಂತಿಯಲ್ಲಿ ಹೊತ್ತು ಉರುಳಿಹೋಯಿತು. ಜೀವನ ಸಾಮ್ರಾಜ್ಯ ಕಷ್ಟ-ಸುಖಗಳ ಜೋಡಣೆಯಾದರೂ ಆದಿತ್ಯಬಾಬುವಿನಜೀವನ ಪರಿಸ್ಥಿತಿಯೇ ಬೇರೆ. ಅಶಾಂತಿಯ ಬೆಂಕಿ ಜೀವನ ಚೈತನ್ಯತರಂಗಗಳನ್ನೂ, ವರ್ತಮಾನ ಯುಗಧರ್ಮದ ಧ್ಯೇಯವನ್ನೂ ಎಳೆಎಳೆಯಾಗಿ ಸುಡುತ್ತಿದ್ದರೂ ಅತೀವ ಶಾಂತಮನೋಹರತೆಯಿಂದ ಈ ಲೋಕದೊಡನೆ ತಮಗೆ ಯಾವ ಸಂಸ್ರವವೂ ಇಲ್ಲವೇನೋ ಎಂಬಷ್ಟು ಗಾಂಭೀರ್ಯದಿಂದ ತುಂಬಿರುತ್ತಾರೆ. ಆದರೆ, ಅಂತರ್ನಿಹಿತ ರುದ್ರವೇದನೆಯ ಗುಟ್ಟು ಆ ಸರ್ವಾಂತರ್ಯಾಮಿ ಮಾತ್ರ ಬಲ್ಲನೇನೋ....

ಅಸ್ತಮಾನ ಶೋಭೆಯಿಂದ ಕೂಡಿದ ಅರುಣಾರುಣನ ಉಜ್ವಲ ಕಿರಣಧಾರೆಯಲ್ಲಿ ಮಿಂದು ಇಳಾಮಾತೆ ಪುನೀತಗೊಂಡಿದ್ದಾಳೆ. ದೂರ ದೂರ

ತೆರಳಿದ್ದ ಪಕ್ಷಿಕೋಟಿ ಗೂಡುಗಳನ್ನರಸುತ್ತ ಆಗಲೇ ಹಿಂತಿರುಗುತ್ತಿವೆ. ಗಿಡ ಗಿಡಗಳಲ್ಲಿ ವಿಧವಿಧ ಪಕ್ಷಿಕಂಠಗಳಿಂದ ಸಂಧ್ಯಾರಾಗ ಮೊಳಗುತ್ತಿದೆ.

ಆದಿತ್ಯಬಾಬು ಅವಳ ಕೈಯನ್ನು ನಲ್ಮೆಯಿಂದ ಹಿಡಿದು ಒಳಗೆ ಕರೆದು ಕೊಂಡು ಹೋಗಿ ಚಾಕ್‌ಲೆಟ್ ಡಬ್ಬಿಯನ್ನು ಕೈಗಿಟ್ಟು "ಎಷ್ಟು ಪುಸ್ತಕಗಳು ಬೇಕೋ ತೆಗೆದುಕೊ" ಎಂದರು.

"ಇದೆಲ್ಲಾ ಏಕೆ?"

"ನಿನಗಾಗಿ" ಪ್ರಯತ್ನಪೂರ್ವಕವಾಗಿ ಎಳೆನಗುವನ್ನು ಹರಿಸಿದರು ಬಾಬು.

ಅತ್ಯಂತ ಸಂಕೋಚದಿಂದ ನುಡಿದಳು ಸಂಧ್ಯಾ "ನೀವು ಹೀಗೆಲ್ಲಾ ಕೊಡುವುದಾದರೆ ನಾನು ಇಲ್ಲಿಗೆ ಬರುವುದೇ ಇಲ್ಲ."

"ಓ.....ಹೊಸದಾಗಿ ಕೊಡುವುದೇನಿದೆ? ತಂದೆಯದೆಲ್ಲಾ ಮಗಳಿಗೆ ತಾನೆ?"

ಆ ಮಾತು ಕೇಳಿ ಆಶ್ಚರ್ಯವೆನಿಸಿತು ಸಂಧ್ಯಳಿಗೆ. ಒಂದೆರಡು ಕ್ಷಣ ತಬ್ಬಿಬ್ಬಾಗಿ ಪ್ರಶ್ನಿಸಿದಳು "ನಿಮಗೆ ಮನೆಯವರಾರೂ ಇಲ್ಲವೇ ಬಾಬೂಜಿ?"

ಆ ಮುಹೂರ್ತದಲ್ಲಿ ಏನನ್ನೋ ಹೇಳಲು ಬಯಸಿದರು ಬಾಬು. ಆದರೆ ತುಟಿಗಳು ಬಿರಿಯಲಿಲ್ಲ. ಭಾವೋದ್ವೇಗದಿಂದ ಮುಖಬಿಂಬ ಕೆಂಪು ತಳೆಯಿತು. ಆ ಪುಟ್ಟ ಹುಡುಗಿಯ ಮುಂದೆ ಸೋಲೊಪ್ಪಿಕೊಳ್ಳಲು ತಯಾರಿರಲಿಲ್ಲವಾದರೂ ತಮ್ಮನ್ನು ತಾವು ಸಾವರಿಸಿಕೊಳ್ಳಬೇಕಾದರೆ ಕೆಲವು ನಿಮಿಷಗಳು ಹಿಡಿದುವು. ಅನಂತರ ಭಾರವಾದ ಧ್ವನಿಯಲ್ಲಿ ಉತ್ತರಿಸಿದರು, "ಒಂದು ಕಾಲದಲ್ಲಿ ಎಲ್ಲಾ ಇದ್ದರು ಮಗೂ, ಈ ಜೀವನ ಯಾರಿಗೂ ಮನಶ್ಶಾಂತಿಯನ್ನಾಗಲೀ, ಭೌತಿಕಸುಖವನ್ನಾಗಲೀ ಪ್ರಸಾದಿಸುವುದಿಲ್ಲ. ಎಂದಿದ್ದರೂ ಇಷ್ಟೆ; ನಿಸ್ಸಾರದಲ್ಲೇ ಸಾರವನ್ನು ಬಸಿದುಕೊಳ್ಳಬೇಕು."

ಅನಂತರ ಸ್ವಲ್ಪಹೊತ್ತು ಗಂಭೀರಶಾಂತಿಯಿಂದ ಆವರಿಸಿತು. ಆ ವಿಚಾರ ಧಾರೆಯನ್ನು ಸಂಧ್ಯಾ ಏನೆಂದು ಅರ್ಥೈಸಿದಳೋ ದೇವರಿಗೇ ಗೊತ್ತು. ಎಳೆಯ ಮನಸ್ಸೆಲ್ಲಾ ಕಲಕಲಮಯವಾಗಿತ್ತು. ಸಜಲನಯನ ಗಳು ನಿಶ್ಚಲವಾಗಿದ್ದುವು. ಅವರು ಎಂದಿನಂತೆ ಮಾತುಕತೆಯಲ್ಲಿ ತೊಡಗಲು

ಇನಿತೂ ಉತ್ಸುಕರಾಗಿರಲಿಲ್ಲ. ಅಂತರ್ನಿಹಿತ ಉಷ್ಣತೆ ಬಿಸಿಯುಸಿರಿನಲ್ಲಿ ಹೊರಬೀಳುತಿತ್ತು. ಧರಿಸಿದ ಉಡುಪಿನಲ್ಲಿ ಎಂದಿಲ್ಲದ ಸಡಿಲತೆ ಕಾಣಿಸುತಿತ್ತು. ಆ ಗಂಭೀರ ಸನ್ನಿವೇಶದಲ್ಲಿ ಸಂಧ್ಯಳಿಗೂ ತಾನಾಗಿ ಬಾಯ್ದೆರೆಯಲು ಅಷ್ಟು ಮನಸ್ಸಾಗಲಿಲ್ಲ. ಗಡಿಯಾರದ ಟಿಕ್‌ಟಾಕ್ ಸದ್ದು ಸ್ವಚ್ಛಂದವಾಗಿ ತೋರಿಸುವ ಕ್ಷಣಕ್ಷಣಗಳು ಪ್ರತಿಕ್ಷಣವೂ ಕ್ಷಯಿಸುತ್ತಿದ್ದುವು-ಒಂದಾದ ಮೇಲೊಂದರಂತೆ.

ಆದಿತ್ಯಬಾಬು ಅಂದಿಂದಿಗೂ ತೀವ್ರ ತನ್ಮಯರಾಗಿದ್ದ ತಮ್ಮ ಆತ್ಮಾಂತರಿತ ವಿಚಾರದಲ್ಲಿ ಅದಾವ ಅಂತ್ಯ ತೀರ್ಮಾನ ಕೈಕೊಂಡರೋ ಏನೋ. ಅಂತೂ, ಪೂರ್ವದಿಗಂಚಲ ಅಂಧಕಾರವನ್ನು ಬದಿಗೊತ್ತಿ ಮುಂಬೆಳಕು ಬೀರಿ ನಿರ್ಮಲವಾದಂತೆ ಅವರ ಚಿತ್ತಶ್ರೀ ಆ ಮುಹೂರ್ತದಲ್ಲಿ ತಾಪ-ಪರಿತಾಪಗಳನ್ನು ಬದಿಗೊತ್ತಿ ಪ್ರಸನ್ನವಾಯಿತು. ಅವರು ಒಂದು ರೀತಿಯ ಸಮಾಧಾನದಿಂದ ಗಿಡದಿಂದ ಗಿಡಕ್ಕೆ ಚಲಿಸಿ, ಬಗೆ ಬಗೆಯ ಹೂಗಳನ್ನು ಕಿತ್ತು ಜೋಡಿಸಿ ಅವಳ ಕೈಗೆ ನೀಡಿದರು. ಆಗ ತಮ್ಮ ಜನ್ಮ ಸಾರ್ಥಕತೆಯ ಭಾವ ಶಾಂತಿ ಅಂತಃಸ್ಥಲವನ್ನು ಅಭಿನವರಸದಲ್ಲಿ ನೆನಸಿದಂತೆ ಹೆಜ್ಜೆಗಳ ಚಾಲನೆ ಹಗುರವಾಗಿತ್ತು.

ಸಂಧ್ಯಾಮಣಿ ಕೈಗಳಲ್ಲಿ ಸುಗಂಧಪೂರ್ಣ ಪುಷ್ಪಗಳನ್ನಾಂತು ಅಪೂರ್ವ ಆನಂದದಿಂದ ನುಡಿದಳು,

"ತುಂಬ ವಂದನೆಗಳು ಬಾಬೂಜಿ!"

ಆಗ ಆದಿತ್ಯಬಾಬು ಬಾಷ್ಪಗದ್ಗದ ಕಂಠದಿಂದ ನುಡಿದರು "ನಿನಗೂ ನನಗೂ ಯಾವುದೋ ಹಳೆಯ ಗಂಟು ಬಿದ್ದಿದೆ. ಇನ್ನು ನಮ್ಮನಮ್ಮಗಳ ಮಧ್ಯೆ ಯಾವ ಆಡಂಬರವೂ ಇರಬಾರದು ಮಗೂ!"

ಸಂಧ್ಯಳಿಗೆ ಅದೊಂದೂ ಅರ್ಥವಾಗಲಿಲ್ಲ. ಅವಳು ಹೊರಡಲು ಸಿದ್ಧಳಾದಳು. ಎಡಿಯ ಹೃತ್‌ಸಾಗರದಿಂದ ಕೋಳಿಹರಿದ ಉತ್ಸುಕತೆ ಕಾಡಿಗೆಗಣ್ಣುಗಳಲ್ಲಿ ಕಾಣಿಸುತಿತ್ತು.

ಆದಿತ್ಯಬಾಬು ಅವಳನ್ನು ಸ್ನೇಹಧಾರೆಯಲ್ಲಿ ಅದ್ದುವಂತೆ ನೋಡಿದರು. ಭಾವಪೂರ್ಣ ಹೃದಯ ದೇಹಶುಕ್ತಿಯಲ್ಲಿ ಬಿಸಿಯುಸಿರಿನೊಡನೆ ಏರಿ ಇಳಿಯುತಿತ್ತು. ಅವಳೊಂದಿಗೆ ತಾವೂ ನಡೆಯುತ್ತ ಕೇಳಿದರು ಬಾಬು,

"ನಿನಗೆಷ್ಟು ವರ್ಷ ಮಗೂ ?"

"ಹತ್ತು."

"ನಾನೂ ಹಾಗೇ ಅಂದುಕೊಂಡಿದ್ದೆ." ಎಂದು ನುಡಿದ ಬಾಬು ಪುನಃ ಕೇಳಿದರು "ನನಗೆಷ್ಟು ಗೊತ್ತೆ ?"

"ಇಲ್ಲ."

"ಅರವತ್ತು !"

ಸಂಧ್ಯಾ ಮುಗುಳು ನಕ್ಕಳು ; ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತ ಪಡಿಸಲಿಲ್ಲ.

ಈ ಸಲ ಆದಿತ್ಯಬಾಬು ಅವಳೊಂದಿಗೆ ಅವಳ ಮನೆಯುವರೆಗೂ ನಡೆದರು. ಹೆಜ್ಜೆ ಹೆಜ್ಜೆಗೂ ರಕ್ತದ ಪ್ರತಿಕಣವು ತುಳುಕುವಂತೆ ಭಾಸವಾಯಿತು. ಅವಳು ಮೆಟ್ಟಿಲು ಹತ್ತಿ ಒಳಹೋಗುವವರೆಗೂ ಸ್ವಲ್ಪ ದೂರದಲ್ಲಿ ನಿಂತಿದ್ದು ಹಿಂದಿರುಗಿದರು—ಪಳಗಿದ ಗಜರಾಜ ದೀನಾದೀನನಾಗಿ ನಡೆಯುವಂತೆ.

ಮೂರು ದಿನಗಳ ಬಳಿಕ ಸಂಧ್ಯಳ ಕೈಗೆ ಎಲ್ಲಿಯದೋ ರಿಜಿಸ್ಟರ್ ಪಾರ್ಸಲ್ ಬಂದಾಗ ಅತ್ಯಂತ ಆಶ್ಚರ್ಯದ ಗಣಿಯಾಗಿ ಒಡೆದಳು ಅವಳು. ಎಳೆಯ ಮೈ ಭಾವೋದ್ವೇಗದಿಂದ ಪುಳಕಗೊಂಡು ಆಪಾದ ಮಸ್ತಕವೂ ನವಿರು ನಿಮಿರಿ ನಿಂತಿತು. ಪಾರ್ಸಲಿನ ಒಳ ಪದರನ್ನು ಹರಿದು ಒಳಾಂತರಕ್ಕೆ ಕೈಯಿಟ್ಟಾಗ ಅವಳಿಗಾದ ಪರಮಾನಂದಕ್ಕೆ ಎಣೆಯೇ ಇರಲಿಲ್ಲ.

ಅದರಲ್ಲಿದ್ದುದು ಇಷ್ಟು,

ಒಂದು ಕೊಳಲು ಕೃಷ್ಣನ ಸುಂದರ ವಿಗ್ರಹ. ಹತ್ತು ಸಾವಿರ ರೂಪಾಯಿಗಳ ನೋಟುಗಳು ಮತ್ತು ನಾಲ್ಕಾರು ಪಂಕ್ತಿಗಳ ಒಂದು ಕಾಗದ.

.....ಸುಪಾತ್ರರನ್ನರಿತು ನನ್ನ ದ್ರವ್ಯವನ್ನು ದಾನಮಾಡುವುದು ನನ್ನ ಕರ್ತವ್ಯವಾಗಿತ್ತು. ಪ್ರಾಯಶಃ ಅದಕ್ಕೆಂದೇ ನನ್ನ ಆತ್ಮ ಇದುವರೆಗೂ ಕಾದಿದ್ದಿರಬಹುದು ಎಂದರೆ ಅತಿಶಯೋಕ್ತಿಯಾಗಲಾರದು. ಯಾವುದು ಶ್ರೀಶಾಲಿನಿಗೆ ಸಲ್ಲಬೇಕಾಗಿತ್ತೋ ಅದು ನಿನಗಿಂದು ಸಲ್ಲುತ್ತಿದೆ. ನಿನ್ನ ಭವ್ಯ ಭವಿಷ್ಯ ಸುಖಮಯವಾಗಿರಲಿ ಎಂದು ಹೃತ್ಪೂರ್ವಕವಾಗಿ ಹಾರೈಸುವೆ.

ನೀನು ಆದಿತ್ಯಬಾಬುವಿನ ಕುಮಾರ್ತಿ ಶ್ರೀಶಾಲಿನಿಯನ್ನು ಎಂದಾದರೂ ಸಂಧಿಸಿದರೆ ಬಾಬು ನಿನ್ನನ್ನು ಆಶೀರ್ವದಿಸಿದ್ದಾರೆ ಎಂದು ಖಂಡಿತ ಮರೆಯದೆ ತಿಳಿಸು....

ಸಂಧ್ಯಾ ಆ ಕೆಲವೇ ಪಂಕ್ತಿಗಳ ಕಾಗದವನ್ನು ನಿಮಿಷಾರ್ಧದಲ್ಲಿ ಓದಿ ಮುಗಿಸಿದಾಗ ಒಮ್ಮೆಗೇ ಆಶ್ಚರ್ಯ-ಆನಂದಗಳ ವಶೀಭೂತಳಾಗಿ, ಅನಿರ್ವಚನೀಯವಾದ ಕಿಂಕುರ್ವಾಣತೆಯಿಂದ ತುಂಬಿ ಆದಿತ್ಯಬಾಬವಿನ ಮನೆಯ ಕಡೆ ಓಡಿದಳು. ಆದರೆ, ಆಗಲೇ ಆ ಮನೆಯ ಬಾಗಿಲಿಗೆ ಬೀಗಮುದ್ರೆ ಬಿದ್ದಿತ್ತು.

ಸುಂದರ ಉದ್ಯಾನ ಶ್ರೀಹೀನತೆಯಿಂದ ತಲೆಬಾಗಿತ್ತು.

ಟಾಂ ಮೂನಿ

.....ಶಾಂತ–ಶೀತಲ–ಸುಂದರ ವಾತಾವರಣ ಮನಃಪ್ರಾಣಗಳಿಗೆ ಕಾಯ ಕಲ್ಪಗೈಯ್ಯುವಷ್ಟು ಹಿತಕರ.

.....ನಗರವಲಯದ ರೇಡಿಯೋಗಳೂ, ಟೇಪ್ ರಿಕಾರ್ಡುಗಳೂ ವಿಧ ವಿಧ ಕಂಠಗಳಿಂದ ವಿವಿಧ ರಾಗಗಳನ್ನು ಹಾಡಿ ಹೂಡಿದ್ದ ಗದ್ದಲದೊಂದಿಗೆ ಸಕಲ ಪಕ್ಷಿಜಾತಿಯೂ ತಮ್ಮ ನಾದಮಾಧುರ್ಯವನ್ನು ಮೀಂಟತೊಡಗಿತ್ತು.

ಅದೇ ತಾನೇ ಪ್ರಾರ್ಥನಾವಿಧಿಯನ್ನು ಮುಗಿಸಿದ್ದ ಬಾಬಿ ಬರ್ಟನ್ ಬಾಲ್ಕನಿಗೆ ಬಂದಾಗ ಬಾಲಸೂರ್ಯ ಮುಗಿಲ ದಿಣ್ಣೆಯನ್ನು ಏರುತಿದ್ದ. ವಾತಾವರಣ ಇನ್ನೂ ಮಂಜುಮಯವಾಗಿತ್ತು. ಆದರೆ, ಆಗಲೇ ಅದೆಷ್ಟು ಉತ್ಸುಕ ಜನಸಂದಣಿ ರಸ್ತೆಯಲ್ಲಿ?

ಅದಾವ ಬಗೆಯ ಭ್ರಾಂತಿಯೋ, ಮರುಳೋ ದೇವರಿಗೇ ಗೊತ್ತು!

ಈ ಜನ ಭಾನುವಾರದ ಬಿಡುವನ್ನಾದರೂ ಸ್ವಹಿತಕ್ಕಾಗಿ ಬಳಸ ಬಾರದೆ? ಇದೇನು ಉತ್ಸಾಹ? ಇದೆಂತಹ ಘೋಷಣೆ? ಛೆಃ! ಛೆಃ! ನಿಜವಾಗಿಯೂ ಅರ್ಥಹೀನ ವ್ಯವಹಾರ! ಬುದ್ಧಿಹೀನ ತಾರ್ಕಿತರು!

ಬಾಬಿ ಬರ್ಟನ್ ಆಶ್ಚರ್ಯಚಕಿತಲೋಚನನಾಗಿ ರಸ್ತೆಯ ಕಡೆ ನಿಟ್ಟಿಸುತ್ತ ಅಂದುಕೊಂಡ.

ಟಾರು ಬಳಿದ ಕರ್ರನೆಯ ನೇರ ರಸ್ತೆಯಲ್ಲಿ ಪ್ರವಹಿಸುವ ಸ್ತ್ರೀಪುರುಷರ ಸಮಭಾಗಿತ್ವದ ಅಧ್ಭುತ ಜೀವನಧಾರೆ ಕಾಲಚಕ್ರದೊಡನೆ ತೀವ್ರ ಸ್ಪರ್ಧೆ ಹೂಡುತ್ತಿದೆಯೋ ಎಂಬಂತೆ ಕಣ್ಮನಗಳನ್ನು ಸೆರೆಹಿಡಿಯಿತು. ಉಣ್ಣೆಯ ಉಡುಪು ಧರಿಸಿದ ಪುರುಷರನ್ನು ಮೀರಿಸುವಂತೆ ಕೆಂಪು ಶಾಟಿಕೆಯಂತಹ ಉದ್ದನೆಯ ತೊಡಿಗೆಗಳಿಂದಲೂ, ಬಗೆಬಗೆಯ ವರ್ಣರಂಜಿತವಾದ ಉಡುಪುಗಳಿಂದಲೂ ಶೋಭಿತರಾದ ಸ್ತ್ರೀಯರು ಸ್ಪರ್ಧೆಯಲ್ಲಿ ತಾವಾರಿಗೂ ಕಡಿಮೆ ಯಿಲ್ಲದಂತೆ ಮೆರವಣಿಗೆಯಲ್ಲಿ ಮುಂದಿದ್ದಾರೆ ಘೋಷಣೆ ಕೂಗುತ್ತ!

ಅದು ಸಿದ್ಧತಾದಿನ–ಕೈಸರ್ ವಿರುದ್ಧವಾಗಿ ಯುದ್ಧ ಪ್ರಚೋದನೆಯ ಅದ್ಭುತ ಅಖಂಡ ಸ್ಫೂರ್ತಿಯ ದಿನ!

ಬಾಬಿ ಬಾರ್ಟನ್ ಅತ್ತ ನಿಟ್ಟಿಸಿ ನೋಡುತ್ತಲೇ ಇದ್ದ–ನಿಶ್ಚಲ ಭಂಗಿ ಘನೀಭೂತವಾಗುವಂತೆ.

ಬೃಹದ್ ಮೆರವಣಿಗೆ ಅಜಗರದಂತೆ ಹರಿಯುವಾಗ ಹೊಮ್ಮುವ ಒಕ್ಕೊರಲಿನ ಘೋಷಣೆ ಕಿವಿಯನ್ನು ಕೊರೆೈಸಿ ಅಂತಸ್ಥಲವನ್ನು ಮುಟ್ಟು ತ್ತದೆ. ಅದರಲ್ಲಿ ಹುರುಳೇನಾದರೂ ಇದೆಯೋ ಎಂಬುದೇ ವಿಶೇಷ. ಅದೇ ಚಿತ್ತಾರ....ಅದೇ ಚಿಂತನೆ. ಅದೆಷ್ಟು ಹೊತ್ತು ಹಾಗೆ ಉರುಳಿತೋ ಅದನ್ನರಿಯ. ಆ ಉದ್ದನೆಯ ಬಾಲ್ಕನಿಯಲ್ಲಿ ಅಲ್ಲಲ್ಲೆ ವಿಚರಿಸುತ್ತ ಹೊಂಬಿಸಿಲ ಮೋದಕತೆಗೆ ಮೈಯೊಡ್ಡಿದ ಬಾಬಿ ಬರ್ಟನ್. ಕುತೂಹಲ ತೃಷಿತ ದೃಷ್ಟಿ ಆಗಾಗ ರಸ್ತೆಯ ಕಡೆ ಹರಿಯುತ್ತಲೆ ಇತ್ತು. ಮೆರವಣಿಗೆಯಲ್ಲಿ ಕರಿಯರೂ, ಬಿಳಿಯರೂ, ವಯೋವೃದ್ಧರೂ, ಜ್ಞಾನವೃದ್ಧರೂ ಕೂಡಿಯೇ ಹೊರಟಿದ್ದಾರೆ. ಚಿತ್ರ ಚೇತೋಹಾರಿಯಾಗಿದೆ. ಆದರೂ, ಆ ಗಲಾಟೆ ಗದ್ದಲಗಳು ಒಮ್ಮೆ ಚಿಂತೆ ಮೂಡಿಸಿದರೆ ಇನ್ನೊಮ್ಮೆ ಅಸಡ್ಡೆ ಮೂಡಿಸುತ್ತವೆ. ನೋಡಿದಷ್ಟೂ ಅಸಹ್ಯ. ಯೋಚಿಸಿದಷ್ಟೂ ಜಿಗುಪ್ಸೆ. ತಾನು ಯಾವುದೋ ವಿಚಾರವನ್ನು ತರ್ಕಕ್ಕೆ ತೆಗೆದುಕೊಂಡರೂ ತನ್ನ ಏಕಾಂತ ನಿಷ್ಠೆಯ ಭಾವಸ್ಫೂರ್ತಿ ಹರಿಯುವುದು ವಿಶ್ವಶಾಂತಿಯೆಡೆಗೆ ದಕ್ಷಿಣವನ್ನೇ ಸೂಚಿಸುವ ದಕ್ಷಿಣಾಮುಖಿಯಂತೆ.

ಅದೆಲ್ಲಾ ಒತ್ತಟ್ಟಿಗಿರಲಿ ;

ಈ ಜನಕಲ್ಪ ಏತರಿಂದ ಮಾಡಲ್ಪಟ್ಟಿದೆಯೋ ದೇವರಿಗೇ ಗೊತ್ತು. ಯಾವ ಸಾಧನೆಗಾಗಿ ಅರ್ಥಹೀನ ಪಥವನ್ನು ತುಳಿದಿದೆ ಎಂಬುದು ಅರ್ಥೈಸಲಾಗದ ವಿಚಾರ. ಪ್ರತಿಯೊಬ್ಬರೂ ಅಭಿನೇತೃಗಳಂತೆ ಅಭಿನಯಿಸುವುದಂತೂ ಮತ್ತೂ ಆಶ್ಚರ್ಯಕರ....! ಇದಕ್ಕೆ ಕೊನೆ ಎಂದಿಗೆ ? ಸಮಯೋಚಿತ ಪರಿಹಾರವಾದರೂ ಏನು ? ?

ಆ ದಿಶೆಯಲ್ಲಿ ಹರಿದಾಡುವ ಯೋಚನಾಲಹರಿ ಊರ್ಧ್ವಮುಖಿಯಾದರೂ ಸಾಧನೆ ಸುಗಮವೇ ?

ಇಂದಿನ ನವತಾರುಣ್ಯದ ರೀತಿನೀತಿಗಳಂತೂ ಒತ್ತಟ್ಟಿಗಿರಲಿ, ಎಪ್ಪತ್ತು ಎಂಬತ್ತರ ಜೀವವಾಹಿನಿಯೂ ಅತ್ತ ನುಗ್ಗುತ್ತಿರುವುದೇ ಮಹತ್ತಾದ ಅಂಶ.

ಆ ಅತುಲನೀಯ ವಿದ್ವೇಷಪೂರ್ಣ ಮೆರವಣಿಗೆ ಆ ಕೊನೆಯಲ್ಲಿ ಕಣ್ಮರೆಯಾದ ಮೇಲೆ ಏನೋ ಒಂದು ರೀತಿಯ ಜುಗುಪ್ಸೆಯಿಂದ ಬಾಬಿ ಬರ್ಟನ್ ಒಳಬಂದ. ಚಿಕ್ಕ ಮೇಜಿನ ಮೇಲೆ ಅಸ್ತವ್ಯಸ್ತವಾಗಿ ತುಂಬಿ ಹರಡಿದ್ದ ದೈನಿಕ, ಮಾಸಿಕ, ಸಾಪ್ತಾಹಿಕಗಳ ಮೇಲೆ ದೃಷ್ಟಿ ಹರಿಯಿತು. ಮತ್ತೆ ಹಾಸಿದ ಕುರ್ಚಿಯ ಮೇಲೆ ಕುಳಿತುಕೊಂಡು ದೈನಿಕವೊಂದನ್ನು ತಿರುವಿಹಾಕಿದ. ತಲೆಬರೆಹಗಳು ದಪ್ಪದಪ್ಪ ಅಕ್ಷರಗಳಲ್ಲಿ ವಿಷಯಗಳನ್ನು ನಿರೂಪಿಸಿದ್ದುವು. ರಾಜಕಾರಣಿಗಳ ಯುದ್ಧಪ್ರಚೋದಕ ಭಾಷಣಗಳು, ವಿಚಾರವಾದಿಗಳ ವಿಚಾರಧಾರೆ, ಶಾಂತಿದೂತರ ಶಾಂತಿವಾಚನ ಬಗೆಬಗೆ ಯಲ್ಲಿ ಹೊಮ್ಮಿ ರಾಷ್ಟ್ರವನ್ನು ದಿಶೆದಿಶೆಗೆ ಎಳೆದು ಛಿದ್ರವಿಛಿದ್ರಗೊಳಿಸುವಂತೆ ತೋರುತ್ತಿವೆ. ಎಲ್ಲರೂ ತಮ್ಮತಮ್ಮ ಸ್ಫೂರ್ತಿಯುತ ಆತ್ಮ ಸಮರ್ಥನೆಯಲ್ಲಿ "ನ್ಯಾಯಕ್ಕಾಗಿ ಹೋರಾಟ" ಎಂಬುದನ್ನು ಘಂಟಾಘೋಷವಾಗಿ ಪ್ರತಿ ಭೋದಿಸುತ್ತಿದ್ದಾರೆ!

ಇದೀಗ ಸರಿ!

ಭಾರವಾದ ದನಿಯಲ್ಲಿ ಉದ್ಗಾರ ಹೊರಬಿತ್ತು. ಬಾಬಿ ಬರ್ಟನ್ ಹಾಗೇ ಆಲೋಚನಾಪರವಶನಾದ. ಜನಜೀವನದ ನಾನಾಮುಖಗಳು ಅಕ್ಷಿಪಟಲದ ಮೇಲೆ ಹರಿದಾಡಿದುವು. ರಾಷ್ಟ್ರದ ಜಾಗೃತಸ್ಫೂರ್ತಿಗೆ. ಕೊಬ್ಬಿದ ನೆತ್ತರಿಗೆ ಯಾವ ರೀತಿ ತಾಳ್ಮೆ ಕಲಿಸಬೇಕು? ಎಂಬುದಂತೂ ಎಲ್ಲರೂ ಖಂಡಿತ ಯೋಚಿಸಲೇಬೇಕಾದ ವಿಚಾರ ಎಂಬ ತಾರ್ಕಿತ ನೆಲೆಯಲ್ಲಿ ಮನಸನ್ನು ನೆಟ್ಟ. ಹಲವಾರು ವಿಚಾರತರಂಗಗಳು ಅಲೆಅಲೆಯಾಗೆದ್ದುವು.

ಹೊತ್ತು ಅದೇಕೋ ದೀರ್ಘ ಸಂಚಿತ ಯೋಜನೆಯಂತೆ ನಿಧಾನಗತಿ ಯಲ್ಲಿ ಉರುಳುತಿತ್ತು.

ಟಿಕ್ ಟಾಕ್. ಟಿಕ್ ಟಾಕ್. ಟಿಕ್ ಟಾಕ್.

ಬೆಳಗಿನ ಉಪಹಾರ ಜೀರ್ಣವಾಗಿ ಎಂದೋ. ಹೊತ್ತು ಉರುಳಿದರೂ ಎದ್ದೇಳಲು ಮನಸ್ಸಿಲ್ಲ.

ಬಾಬಿ ಬರ್ಟನ್ ವಿಧುರ. ಸತಿ ಮೇರಿ ಬರ್ಟನ್ ಅಪಘಾತಕ್ಕೆ ಈಡಾಗಿ ಮೂರು ನಾಲ್ಕು ತಿಂಗಳು ಕಳೆದಿದ್ದುವೇನೋ. ಅಂದಿನಿಂದ ಅಡಿಗೆ ಮನೆಯ ಕಾರ್ಯಭಾರವೂ ಅವನದೇ. ತನುಮನಗಳಲ್ಲಿ ಉತ್ಸಾಹವಿದ್ದಾಗ ಪಾತ್ರೆ ಪಗಡಿಗಳಲ್ಲಿ ಏನೇನೋ ರೂಪುಗೊಳ್ಳುತಿತ್ತು; ಇಲ್ಲದಿದ್ದಾಗ ಯಾವುದಾದರೂ ಖಾನಾವಳಿಯಲ್ಲಿ ಹಸಿವು ಹಿಂಗುವುದು. ಈಸ್ಟರ್ ಹಬ್ಬದ ಪ್ರಯುಕ್ತ ದೊರೆತ ರಜೆಯಲ್ಲಿ ಯಾವ ತೊಂದರೆಯನ್ನೂ ಹಚ್ಚಿಕೊಳ್ಳಲು ಮನಸ್ಸು ಒಪ್ಪುತ್ತಲೇ ಇಲ್ಲ. ಭಾನುವಾರದವರೆಗೂ ಸಾಧ್ಯವಾದಷ್ಟು ಆರಾಮವಾಗಿರಬೇಕು ಎಂಬ ಅತುಲನೀಯ ಆಶಯ; ನಿರ್ಯೋಚನೆಯಿಂದ ನಿದ್ದೆಗೈಯ್ಯಬೇಕು ಎಂಬಷ್ಟು ಸ್ವಹಿತ ಚಿಂತನೆ.....ಇದರೆ, ಕ್ಷುದ್ರ ಜಗತ್ತು ಅಷ್ಟು ದಯಾರ್ದ್ರವಾಗಿರಬೇಕಲ್ಲ ? ಎಲ್ಲಿ, ಯಾವ ಕಡೆ ತಿರುಗಿದರೆ ಆ ಕಡೆ ಹಿಡಿದುಕೊಳ್ಳುವ ಜೇಡಬಾಂಧವನ ತುಂತುಕೃತಿಯ ನೇಮದಲ್ಲಿ ಸರ್ವತೋ ವಿಸಾರಿಯಾಗಿದೆ. ಮೇಲಾಗಿ, ಯೌವನದ ಪ್ರಥಮ ಉದ್ರೇಕದಿಂದ ಜೀವನ ಹದಗೆಟ್ಟಂತೆ ಕಾಲಮಾನವೂ ದುರ್ಲಲಿತವಾಗಿದೆ....!

ಬಾಬಿ ಬರ್ಟನ್ ಸಿಗಾರಿಗೆ ಅಗ್ನಿಸ್ಪರ್ಶಮಾಡಿ ಒಂದು ದಮ್ ಎಳೆದು ಪತ್ರಿಕೆಯ ಒಳಪುಟವನ್ನು ತಿರುವಿಹಾಕಿದ. ವಿಶ್ವಶಾಂತಿಯನ್ನು ಕೋರುವ ವಿಚಾರಾತ್ಮಕ ಲೇಖನ ಮನವನ್ನು ಸೆರೆಹಿಡಿಯಿತು. ಅದನ್ನು ಆದ್ಯಂತವಾಗಿ ಏಕಾಗ್ರಚಿತ್ತದಿಂದ ಓದತೊಡಗಿದ. ಅಕ್ಷರ ಅಕ್ಷರವೂ ಆತ್ಮ ಸ್ಫೂರ್ತಿಯೊಡನೆ ಹರಿದು ಬಂದಿದ್ದುವು. ಕಳೆದ ಯುದ್ಧಾನಂತರ ಹೆಂಗಸರು-ಮಕ್ಕಳು, ದೀನರು-ದುಃಖಿಗಳು, ರೋಗಿಗಳು-ನಿರೋಗಿಗಳು ಅನುಭವಿಸಿದ ಘನಘೋರ ದುಃಖವನ್ನು ಚಿತ್ರವತ್ತಾಗಿ ಮುಂದಿಟ್ಟು ಇನ್ನಾದರೂ ಪ್ರಜ್ಞಾವಂತರು ತಮ್ಮ ತಮ್ಮ ಗಮನವನ್ನು ಶಾಂತಿವಾದದ ಕಡೆ ಹರಿಯಬಿಡಬೇಕೆಂದು ಆಗ್ರಹಪೂರ್ವಕವಾಗಿ ವಿನಂತಿಸಿಕೊಂಡಿದ್ದ. ಓದಿದನಂತರ ಆತನ ಬಗೆಗೆ ಗೌರವ ಮೂಡಿತು 'ಅವನು ನಿಜವಾಗಿಯೂ ಮನುಕುಲ ಸಂಜಾತ-ಪವಿತ್ರಮತಿ' ಎಂದು ತನಗೆ ತಾನೇ ಹೇಳಿಕೊಂಡ. ಯೋಚನಾ ಲಹರಿ ಅದೇ ದಿಶೆಯಲ್ಲಿ ಹರಿದಾಡಿತು. ಭಾವಾತಿರೇಕದಿಂದ ಕಣ್ಣುಗಳು ಫಳಫಳ ಮಿಂಚಿದುವು. ಮಸ್ತಕದ ಹಿರಿಯ ಭಾರವನ್ನು ಕೈ ಹಸ್ತದ ಮೇಲಿಳುಹಿ ನೋಟವನ್ನು ಪುನಃ ಲೇಖದ ಮೇಲೆ ಹರಿಯಬಿಟ್ಟ. ಅದನ್ನು

ವಿದ್ವತ್‌ಪೂರ್ಣವಾಗಿ ಬರೆದವ 'ಟಾಂ ಮೂನಿ'. ಈ ಮೊದಲೇ ಆತನ ಕೆಲವು ಲೇಖನಗಳನ್ನು ಓದಿದ್ದುಂಟು. ಅವು ಮತ್ತೆ ಮತ್ತೆ ಓದಿಸುವುದು ಮಾತ್ರವಲ್ಲ; ಬುದ್ಧಿ ಸಂಪುಟವನ್ನೂ ಕೆರಳಿಸುತ್ತವೆ.

*   *   *   *

ಜಸ್ಟಿಸ್ ಬಾಬಿ ಬರ್ಟನ್ ರಕ್ತವರ್ಣರಂಜಿತವಾದ ತನ್ನ ವಾಹನವನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಸ್ವಿಚ್ ಕೀಯನ್ನು ಜೇಬಿನಲ್ಲಿಟ್ಟುಕೊಂಡು ಫ್ರಾಂಕ್ಲಿಗ್ರಿಫಿನ್ ಹೋಟೆಲಿನ ಒಳಾಂತರಕ್ಕೆ ಕಾಲಿಟ್ಟ. ಆಗಲೇ ಅಲ್ಲಿ ಬಹಳಷ್ಟು ಮಂದಿ ಜಮಾವಣೆಯಾಗಿದ್ದುದರಿಂದ ಖಾಲಿ ಮೇಜನ್ನು ಅರಸುತ್ತಾ ಮುಂದುವರಿದ. ಮೇಲ್ಗಡೆ ಬೃಹದ್ ಒಳಾಲಯದ ಬಲಬದಿಯಲ್ಲಿ ನಾಲ್ವರು ಕೂಡಬಹುದಾದ ಮೇಜಿನ ಮುಂದೆ ಒಬ್ಬನೇ ಕುಳಿತುದು ಕಾಣಬಂತು. ಅಲ್ಲಿಗೆ ನೇರವಾಗಿ ಹೋಗಿ ಕುರ್ಚಿಯನ್ನೆಳೆದು ಕುಳಿತುಕೊಂಡ. ಎದುರಿಗೆ ಕುಳಿತ ವ್ಯಕ್ತಿಯೆಡೆಗೆ ನೋಟ ಕ್ಷಣಕಾಲ ಹರಿದು ಹಿಮ್ಮರಳಿತು. ಆತ ತೀರ ಅಪರಿಚಿತನಾದರೂ ಅವನ ತುಟಿಗಳಲ್ಲಿ ಎಳೆನಗು ಮಿನುಗಿ ಮಾಯವಾಯಿತು. ಬಾಬಿ ಬರ್ಟನ್ ಸಂತುಷ್ಟನಾಗಿ ಪ್ರತಿಹಾಸ ತೋರಿದ.

ಮರುಕ್ಷಣದಲ್ಲಿ ಸಮವಸ್ತ್ರಧಾರೀ ಪರಿಚಾರಕ ಬಳಿಗೆ ಬಂದು 'ಏನಪ್ಪಣೆ' ಎಂಬಂತೆ ಹುಬ್ಬೇರಿಸಿದ. ಖಾದ್ಯಗಳ ಪಟ್ಟಿ ಮೇಜಿನ ಮೇಲಿತ್ತು. ಅದನ್ನು ನೋಡಿ ತನ್ನ ಅಭಿರುಚಿಗೆ ತಕ್ಕ ಖಾದ್ಯವಿಶೇಷಕ್ಕೆ ಆರ್ಡರು ಕೊಟ್ಟನಂತರ ಜಸ್ಟಿಸ್ ಬಾಬಿ ಬರ್ಟನ್ ತರುಣನೆಡೆಗೆ ದೃಷ್ಟಿ ಹೊರಳಿಸಿ ಕೇಳಿದ,

"ನೀನೇನಾದರೂ ಹೇಳುವುದಿದೆಯೇ ?"

"ಆಗಲೇ ಹೇಳಿದ್ದಾಗಿದೆ. ಇಷ್ಟರಲ್ಲೇ ಬರಬಹುದು."

"ಸರಿ....."ಎಂಬಂತೆ ತಲೆದೂಗಿ ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ಕೇಳಿದ ಜಸ್ಟಿಸ್ ಬಾಬಿ ಬರ್ಟನ್ "ನೀನೇನು ಮಾಡುತ್ತಿದ್ದಿ ?"

"ನಾನು ಫೈನಲ್ ಬಿ.ಎ., ಓದುತ್ತಿರುವೆ."

"ಎಲ್ಲಿ ?"

"ಲಾರ್ಡ್ ಲಿಯೋನಾರ್ಡ್ ವೆಲ್ಲಿಂಗ್ಟನ್ ಪ್ರೈವೇಟ್ ಕಾಲೇಜ್....."

"ಮುಂದೇನು ಮಾಡಬೇಕೆಂದಿದ್ದಿ ?"

"ಎಂ.ಎ., ಓದುವ ಮನಸ್ಸಿದೆ."

"ನಿನ್ನ ಕಾಲೇಜಿನಲ್ಲಿ....." ಮುಂದೇನೋ ಹೇಳಬೇಕೆಂದಿದ್ದ ವಿಚಾರ ಅಷ್ಟಕ್ಕೆ ತುಂಡುಗಡಿಯಿತು. ಜಸ್ಟಿಸ್ ಬಾಬಿ ಬರ್ಟನ್ ವಿಚಾರಪರನಂತೆ ಸುಮ್ಮನಾದ.

"ಏನು ಹೇಳು ?" ತರುಣ ಪ್ರಶ್ನಿಸಿದ. ಮನಸ್ಸು ಉತ್ಸುಕವಾಗಿತ್ತು.

"ಈಗೀಗ ಎಲ್ಲಾ ಕಡೆಯೂ ಗುಂಪುಗುಳಿತನ, ವರ್ಣಭೇದ ಮುಂತಾದುವು ಹೆಚ್ಚುತ್ತಿವೆ. ನಿಮ್ಮಲ್ಲಿ....?"

"ನಮ್ಮಲ್ಲೂ ಅದೇನು ಕಡಿಮೆಯಿಲ್ಲ." ಅವನು ಮುಗುಳುನಕ್ಕ.

"ಓ....ಹೋ!" ಉದ್ಗಾರ ತೆಗೆದ ಜಸ್ಟಿಸ್ ಬಾಬಿ ಬರ್ಟನ್.

"ಅದೊಂದು ಅಂಟುಜಾಡ್ಯ. ಯಾವಾಗೆಂದರೆ ಅವಾಗ ಎಲ್ಲೆಂದರೆ ಅಲ್ಲಿ ಭುಗಿಲೇಳುತ್ತಿರುತ್ತವೆ."

"ವಿದ್ಯಾರ್ಥಿ ಹೋರಾಟ ಕಾರಣಬದ್ಧವಾಗಿ ಕ್ರಮಬದ್ಧವಾಗಿ ಮೂಡಿ ಬಂದರೆ ಸಮಸ್ಯೆಗಳು ಬಗೆಹರಿಯುತ್ತವೆ. ಇಲ್ಲದಿದ್ದರೆ ಹೊಸ ಹೊಸ ಸಮಸ್ಯೆಗಳನ್ನು ಮೂಡಿಸುತ್ತವೆ!"

"ಹೌದು....! ಅದು ಎಲ್ಲಾ ವಿದ್ಯಾರ್ಥಿಗಳಿಗೂ ಗೊತ್ತು!" ತರುಣ ತಲೆದೂಗಿದ.

"ಇವೆಲ್ಲ ಅರುಗಾದರೆ ನಿಮ್ಮ ಮುನ್ನಡೆ ಸರಾಗವಾಗಿ ಸಾಗುತ್ತೆ."

"ಅದು ನಿರ್ವಿವಾದ. ಆದರೂ, ಮಾಡುವುದೇನು? ಎಲ್ಲಾದರೂ ಒಂದು ಕಿಡಿ ಮೂಡಿತೆಂದರೆ ಸಾಕು. ಇಡೀ ಯೂನಿವರ್ಸಿಟಿಯೇ ಧಗ ಧಗ ಉರಿಯಹತ್ತುತ್ತದೆ!"

"ಈಗ ತೀವ್ರಗತಿಯಲ್ಲಿ ಕಾಲ ಬದಲಾಗುತ್ತಿದೆ. ಮುಖ್ಯವಾಗಿ ಎಲ್ಲೆಲ್ಲಿ ಬದಲಾಗಬೇಕೋ ಅಲ್ಲಿ ಆಗುತ್ತಲೇ ಇಲ್ಲ; ಅದೇ ತುಂಬ ವಿಷಾದಕರ."

"ಅಹುದಹುದು!"

"ನೋಡು, ಎಲ್ಲಿಂದ ಎಲ್ಲಿಯವರೆಗೂ ಯುದ್ಧ ಪ್ರಚೋದನೆ. ಆ ದಿಶೆಯಲ್ಲಿ ನಮ್ಮ ಜನ ಎಷ್ಟೊಂದು ಉತ್ಸಾಹಶೀಲರಾಗಿದ್ದಾರೆ? ಅದೇ ಬಹಳ ಆಶ್ಚರ್ಯ. ನುಂಗಲಾರದ ತುತ್ತು!"

"ಬಿಸಿ ರಕ್ತ! ಹುಚ್ಚು ಸಾಹಸ! ಏನಾದರೂ ಮಾಡಲೇಬೇಕು, ಮಾಡುತ್ತಿದ್ದಾರೆ!" ತರುಣ ಹಾಸ್ಯಪ್ರಧಾನವಾಗಿ ನುಡಿದು ಮೃದುಹಾಸ ಬೀರಿದ.

"ತುಂಬ ಬಾಲಿಶ–ಹುಡುಗಾಟ! ಈ ರೀತಿಯಲ್ಲಿ ಜಾಗೃತಿಯುಂಟಾದರೆ ಕಷ್ಟ."

ತರುಣ ಮಂದಸ್ಮಿತನಾಗಿ ಉತ್ತರಿಸಿದ,

"ಅಲ್ಲ; ಖಂಡಿತ ತಿಳಿಗೇಡಿತನ!"

"ಹೌದು, ನೀನೆಂದದ್ದು ಸರಿ....." ಜಸ್ಟಿಸ್ ಬಾಬಿ ಬರ್ಟನ್ ಒಪ್ಪಿಕೊಂಡ. ಮುಖಭಾವ ನಸು ಖಿನ್ನವಾಯಿತು.

ಸ್ವಲ್ಪಹೊತ್ತು ಇಬ್ಬರೂ ಮಾತಾಡಲಿಲ್ಲ. ಸುತ್ತಮುತ್ತಲಿನ ಜನರಾಶಿಯ ಮಾತಿನ ಮರ್ಮರ ಕಿವಿಯ ಮೇಲೆ ಅವ್ಯಾಹತವಾಗಿ ಬೀಳುತಿತ್ತು. ಚಾಕು-ಚಂಚಗಳ ಕಿಣಿ ಕಿಣಿ ಸದ್ದು. ಖಾದ್ಯಗಳ ಕಮ್ಮನೆ ಕಂಪು ಒಂದಕ್ಕೊಂದು ಸ್ಪರ್ಧೆ ಹೂಡುವಂತಿದ್ದುವು.

"ಇದಕ್ಕೆ ಮದ್ದೇನು ?" ಕೇಳಿದ ಜಸ್ಟಿಸ್ ಬಾಬಿ ಬರ್ಟನ್.

ತರುಣ ತಲೆಯಾಡಿಸುತ್ತ ಸ್ವಲ್ಪಹೊತ್ತು ಯೋಚಿಸುವಂತೆ ಸುಮ್ಮನಾದ.

"ನಿನ್ನ ವಿದ್ಯಾರ್ಥಿದೆಶೆ ಏನು ಹೇಳುತ್ತದೆ? ನಿನ್ನ ಗೆಳೆಯರ ಅಭಿಪ್ರಾಯವೇನು ?"

"ಹಾಗೂ ಇದ್ದಾರೆ, ಹೀಗೂ ಇದ್ದಾರೆ. ಒಟ್ಟಿನಲ್ಲಿ ವಸ್ತುಸ್ಥಿತಿ ಡೋಲಾಯಮಾನ."

"ಬಹುಮತ ಯಾವ ಕಡೆಗಿದೆ ?"

"ಬಹುಶಃ ಸೇಡು ತೀರಿಸಿಕೊಳ್ಳುವುದರಲ್ಲಿ !"

"ಛೀ! ಛೀ! ತುಂಬ ಅನ್ಯಾಯ."

"ಅದೇ ವ್ಯಸನ, ನಾನು ಸದಾ ಈ ಗುಂಪುಗಳಿಂದ ಬಹಳ ದೂರ.... ನನಗೆ ಇದೆಲ್ಲ ಸರಿಹೋಗುವುದಿಲ್ಲ."

"ಅಂದರೆ.........?"

"ನಾನು ಶಾಂತಿವಾದಿ; ಮೇಲಾಗಿ ಆಶಾವಾದಿ."

"ನಿಮ್ಮಂತಹವರು ಮುಂದೆ ನಿಂತು ಪ್ರಚಾರ ಮಾಡಬೇಕು; ಸಮಯ ಸಿಕ್ಕಿದಾಗ ಎಲ್ಲೆಂದರಲ್ಲಿ ತರ್ಕವಿತರ್ಕಗಳನ್ನು ಹೂಡಿ ಮುಗ್ಧ ಜನಾಂಗಕ್ಕೆ ತಿಳಿವಳಿಕೆ ಮೂಡುವಂತೆ ಮಾಡಬೇಕು. ನೀವು ಅಷ್ಟು ಮಾಡಬಲ್ಲಿರಾದರೆ ತುಂಬ ಒಳ್ಳೆಯದು."

"ನಾನೀಗ ಮಾಡುತ್ತಿರುವುದೂ ಅದೇ. ಅದರಿಂದ ಇದುವರೆಗೆ ಅಂತಹ ಪ್ರಯೋಜನವೇನೂ ಆಗಲಿಲ್ಲ, ಎಂದು ತೀವ್ರ ವಿಶಾದದಿಂದ ಹೇಳ ಬೇಕಾಗಿದೆ."

"ಏನೇನು ಮಾಡುತಿದ್ದಿ ?"

"ಆಗಾಗ ಒಂದೆಡೆ ಕೂಡಿ ಚರ್ಚೆ ಹೂಡುತ್ತೇವೆ; ಭಾಷಣಗಳಿಗೂ ಕಡಿಮೆಯಿಲ್ಲ; ಪತ್ರಿಕೆಗಳಿಗೆ ಬೇಕಾದಷ್ಟು ಲೇಖನವನ್ನೂ ಬರೆಯುತ್ತಿರುವೆ. ಹೀಗೆ ಏನೇನೋ.....ನಮ್ಮಿಂದಾದಷ್ಟು ಮಾಡುವುದು ಅಷ್ಟೆ. ಈ ಕೊಬ್ಬಿದ ಜನಾಂಗಕ್ಕೆ ಎಷ್ಟು ತಲೆ ಹೊಡೆದುಕೊಂಡರೂ ಅರ್ಥವೇ ಆಗುವುದಿಲ್ಲ. ಎಷ್ಟು ಮಾಡಿದರೂ ಸಮುದ್ರಕ್ಕೆ ಒಂದಿಷ್ಟು ಪನ್ನೀರು ಸುರಿದಂತೆ! ಇದು ತುಂಬ ದುರದೃಷ್ಟಕರ."

"ಓ....! ಹಾಗೆನ್ನಬಾರದು. ಅಷ್ಟು ನಿರಾಶೆಯುಂಟಾದರೆ ಯಾವ ಕೆಲಸವೂ ಕೈಗೂಡುವುದಿಲ್ಲ."

"ನಾನು ಕಳೆದ ಆರು ತಿಂಗಳಿಂದ ಎಷ್ಟೆಷ್ಟು ಪ್ರಯತ್ನ ಪಟ್ಟಿರುವೆ ಎಂಬುದನ್ನು ಹೇಳಿದರೆ ಬಹುಶಃ ಯಾರೂ ನಂಬಲಾರರು."

"ಬೇಷ್! ನೀವು ಮಾಡಲೇಬೇಕು. ಸಾರ್ವಜನಿಕ ಕ್ಷೇತ್ರದಲ್ಲಿದ್ದ ವರಿಗೆ ಇದು ಸರಾಗ"

"ಅದಕ್ಕಾಗಿಯೇ ನಾನು ಮಿತಿಮೀರಿದ ಶ್ರಮ ತೆಗೆದುಕೊಳ್ಳು ತ್ತಿರುವೆ."

"ನಿನ್ನ ಲೇಖಗಳು ಯಾವಾಗ, ಯಾವ ಯಾವ ಪತ್ರಿಕೆಗಳಲ್ಲಿ ಪ್ರಕಟ ವಾಗಿವೆ ?"

"ಕಳೆದವಾರ 'ಲೋಕಲ್ ರಿವ್ಯೂ' 'ಡೆಕ್ಕನ್ ನಿವ್ಸ್' ಗಳಲ್ಲಿ. ಒಮ್ಮೆ 'ನ್ಯೂಯಾರ್ಕ್ ಟೈಮ್ಸ್'ನಲ್ಲಿ. ಕೆಲವೊಮ್ಮೆ 'ಸಿವ್ಸ ಜರ್ನಲ್' ಮತ್ತು 'ಯೂತ್‌ಸರಿವ್ಯೂ' ಗಳಲ್ಲೂ ಪ್ರಕಟವಾಗಿವೆ."

“ನಿನ್ನ ಹೆಸರೇನು ? ನಿನ್ನ ಲೇಖಗಳು ಯಾವ ಹೆಸರಿನಲ್ಲಿ ಪ್ರಕಟವಾಗುತ್ತವೆ ?”

“ನನ್ನ ಹೆಸರು ಎಫ್. ಟಾಂ ಮೂನಿ. ನನ್ನ ಲೇಖಗಳಲ್ಲಿ ‘ಟಾಂ ಮೂನಿ’ ಎಂದಷ್ಟು ಮಾತ್ರ ಇರುತ್ತದೆ. ಬಹುಶಃ.........”

ಜಸ್ಟಿಸ್ ಬಾಬಿ ಬರ್ಟನ್ ಉತ್ಸಾಹದಿಂದ ನಡುವೆ ಬಾಯಿಹಾಕಿದ,

“ಓ.........! ನೀನು ಟಾಂ ಮೂನಿ ? ನಿನ್ನ ಲೇಖನಗಳನ್ನು ನಾನು ಓದಿರುವೆ. ಅವು ತುಂಬ ಸ್ಫೂರ್ತಿಯುತವಾಗಿವೆ. ತುಂಬ ಅಭಿನಂದನೆಗಳು” ಎನ್ನುತ್ತ ಹರ್ಷೋನ್ಮತ್ತತೆಯಿಂದ ಹಸ್ತ ಲಾಘವ ನೀಡಿದ.

ಇಬ್ಬರ ತುಟಿಗಳಲ್ಲೂ ಎಳೆನಗುವಿನ ವಿಮಲಧಾರೆ ಹರಿದಾಡಿ ಹೋಯಿತು.

“ತುಂಬ ಥ್ಯಾಂಕ್ಸ್ !”

ಟಾಂ ಮೂನಿ ಬಾಬಿಯ ಪರಿಚಯುವನ್ನು ಕುರಿತು ಪ್ರಶ್ನಿಸಲಿಲ್ಲವಾದುದರಿಂದ ಇವನಿಗೆ ಹೇಳಿಕೊಳ್ಳುವ ಪ್ರಸಂಗವೂ ಬರಲಿಲ್ಲ.

* * * *

....ಗಗನಾಂಗಣದ ನೀಲಭಿತ್ತಿಯ ಮೇಲೆ ಏರಿದ ರವಿ ಕೆಂಡದುಂಡೆಯಂತೆ ಥಳಥಳಿಸುತ್ತಿದ್ದ.

.....ಮಧ್ಯಾಹ್ನಕಾಲೀನ ವಾತಾವರಣ ಉಷ್ಣಾಧಿಕ್ಯದಿಂದ ತುಂಬಿ ತಾಪಕಾರಕವಾಗಿತ್ತು.

ತಾಳಲಾಗದ ಸೆಕೆ–ಬೇಗೆಗಳಿಂದ ಮುಖ–ಮೈಯಲ್ಲಿ ಬೆವರು ಬಸಿದು ತೊಯ್ಯುತ್ತಲೇ ಇತ್ತು. ಆಯಾಸ–ಸಂಕಟಗಳಿಂದ ಎಲ್ಲಾ ಜೀವಿಗಳೂ ಪರಿತಪಿಸುವಂತಹ ದಗೆ–ಬಾಯಾರಿಕೆ.

ಆದರೆ, ಈ ಭವ್ಯ ಲೋಕಾಲಯದಲ್ಲಿ ಅದೆಂತಹ ಚಿತ್ರವಿಚಿತ್ರ ಉತ್ಸಾಹವೋ, ರಂಗುರಂಗಿನ ಜನವಾಹಿನಿ ಮಾನಸಿಕ ಪರಿತಾಪ–ದೈಹಿಕ ಕ್ಲೇಶಗಳನ್ನು ಇನಿತೂ ಲಕ್ಷಿಸದೆ ರಸ್ತೆ ರಸ್ತೆಗಳಲ್ಲೂ ಮುಖಾಮುಖಿಯಾಗಿ ಸಂಚರಿಸುತ್ತದೆ. ಆವ ಉದ್ದೇಶವೋ, ಆವ ಕಾರ್ಯಭಾರವೋ ಊಹಿಸುವುದು ಕಷ್ಟ.

ಬಿಲ್ಲಿಂಗ್ಸ್ ಸ್ಟ್ಯೂವರ್ಟ್ ರಸ್ತೆಯಿಂದ ಹೊರಟ ಜನ ಸಂದಣಿ ಯೋಧ ಗತಿಯಲ್ಲಿ ಮುಂದುವರಿಯುತಿತ್ತು. ಅಲ್ಲಿಂದ ಅರ್ಧ ಫರ್ಲಾಂಗ್ ಮುಂದೆ, ನಾಲ್ಕಾರು ರಸ್ತೆ ಕೂಡುವೆಡೆ ಇದ್ದ ರಿಚ್‌ಮಂಡ್ ವೆಲ್ಲಿಂಗ್ಟನ್ ಸರ್ಕಲ್ಲಿಗೆ ಬಂದಾಗ ಇನ್ನೇನು ಕೇಳಬೇಕೆ? ನಾಲ್ಕೂ ರಸ್ತೆಗಳಿಂದ ಸರ್ಕಲ್ ಮೂಲಕ ಹಾದು ಹೋಗುವ ವಾಹನಾದಿಗಳೂ ಜನ ರಾಶಿಯೂ ಕೂಡಿ ಸಂತೆಯನ್ನೂ ಮೀರಿಸುವಂತಹ ಗುಜುಗುಂಪು ಗದ್ದಲವುಯ.

ಮೆರವಣಿಗೆ-ಘೋಷಣೆ ಬಿಸಿರಕ್ತದ ದ್ಯೋತಕವಾದರೂ ಸಂಕುಚಿತ ಮನದ ವಿಕಟ ಚಿತ್ತಾರವೂ ಹೌದು.

ಧೂರ್ತಸಾಹಸಕ್ಕೆ ಸಜ್ಜಾಗುವ ಹುಲುಶಕ್ತಿಯನ್ನು ನೋಡಿ ವಿಧಿ ಯಾವ ದಿಶೆಯಲ್ಲಿ ನಕ್ಕಿತೋ ಏನೋ.

ರಸ್ತೆಯ ಬದಿಯಲ್ಲಿ ಫಳಾರನೆ ಮಿಂಚಿದ ಬೆಳಕನ್ನು ನೋಡಿ ಏನಿರ ಬಹುದೆಂದು ಜನ ಅತ್ತ ನೋಟ ಹೊರಳಿಸುವುದರೊಳಗಾಗಿ ಭಯಂಕರ ಸ್ಫೋಟದೊಡನೆ ಬಾಂಬು ಸಿಡಿದು ಪಾಂಥರನೇಕರು ಮಿಲಿಮಿಲಿ ಒದ್ದಾಡಿ ಪ್ರಾಣ ತೆತ್ತರು! ಬಹುಮಂದಿ ಗಾಯಗೊಂಡು ಚೀರತೊಡಗಿದರು! ಕೆಲವೇ ಕ್ಷಣಗಳ ಹಿಂದೆ ಸುಖಾನಂದದಿಂದ ವಿಜೃಂಭಿಸುತಿದ್ದ ನತದೃಷ್ಟ ಪ್ರದೇಶ ಕಟುಕರ ಕಸಾಯಿಖಾನೆಯಂತೆ ಹೃದಯ ವಿದ್ರಾಯಕವಾಯಿತು! ಅತುಲನೀಯ ಸಮರದಾಹದಿಂದ ಹಾತೊರೆಯುತಿದ್ದ ಮಂದಿಮಾಗಧರಿಗೆ ಆ ರೀತಿಯಲ್ಲಿ ಯಾರು ಉತ್ತರಿಸಿದರೋ ಏನೋ.

ಭಯ ಭೀತರಾದ ಜನ ದಿಕ್ಕೆಟ್ಟು ಓಡತೊಡಗಿದರು-ಪ್ರಾಣಾಂತಕ ವೇದನೆಯಿಂದ ನರಳುವ ಗಾಯಾಳುಗಳಿಗೆ ಸಹಾಯ ಮಾಡುವ ಯೋಚನೆ ಯನ್ನು ಸಹ ಮಾಡದೆ. ಮರುಗಳಿಗೆಯಲ್ಲಿ ಅಲ್ಲಿಗೆ ಧಾವಿಸಿ ಬಂದ ಪೋಲೀಸ್ ವ್ಯಾನು ಕಟ್ಟಿಗೆಯನ್ನು ಹೆಕ್ಕಿಕೊಳ್ಳುವಂತೆ ಗಾಯಾಳುಗಳನ್ನು ಹೆಕ್ಕಿಕೊಳ್ಳುತಿದ್ದುದು ಹೃದಯ ಸ್ಪರ್ಶಿ ಮಾತ್ರವಲ್ಲ; ಕಂಬನಿ ತರಿಸು ವಂತಹ ಕರುಣಾಜನಕ ದೃಶ್ಯವೂ ಸಹ.

ಆ ಹೇಯಕೃತ್ಯದಿಂದ ಜನ ರೊಚ್ಚಿಗೆದ್ದಿದ್ದರು. ರಾಜಕಾರಿಣಿಗಳು ಪ್ರತೀಕಾರಕ್ಕಾಗಿ ಬೊಬ್ಬಿಡಹತ್ತಿದರು—ಮೂಲೆ ಮೂಲೆಗಳಲ್ಲೂ ಪ್ರತಿಧ್ವನಿ ಸುವಂತೆ. ಎಲ್ಲಾ ಪತ್ರಿಕೆಗಳೂ ಸೂಕ್ತಕ್ರಮಕ್ಕಾಗಿ ಒತ್ತಾಯಿಸಿದುವು.

ಪುನಃ 'ನ್ಯಾಯಕ್ಕಾಗಿ ಹೋರಾಟ' ಎಂಬ ಫಲಕ ಹೊತ್ತ ಮೆರವಣಿಗೆ. ನಭೋಭೇರಿಯಾದ ಧಿಕ್ಕಾರ!

ಪೋಲೀಸರು ಅಪರಾಧಿಗಳ ಪತ್ತೆ ತರದೂದಿಗಾಗಿ ಉತ್ಸುಕರಾದರು. ಬಾಂಬು ಅಲ್ಲಿಗೆ ಬಂದ ಬಗ್ಗೆ ಎಲ್ಲರಿಗೂ ನುಂಗಲಾರದ ತತ್ತು.....ಕಾಗದದ ಸುರಳಿಯಲ್ಲಿ ಅಡಗಿದ್ದ ಅದನ್ನು ಯಾರಾದರೂ ಗಮನಿಸಿದ್ದರೆ ವಾಸ್ತವ ವಾಗಿಯೂ ಕಾಗದದ ಸುರುಳಿ ಎಂದೇ ಭಾವಿಸಿರಲೂಬಹುದು. ಅಲ್ಲಿ ಸಿಡಿಸಿ ದವರ ಕುರುಹು ಕಂಡುಬರಲಿಲ್ಲವಾದುದರಿಂದ ಅದೊಂದು ಅತ್ಯಂತ ಗಹನ ವಾದ ವಿಚಾರ. ಡಿಸ್ಟ್ರಿಕ್ಟ್ ಅಟಾರ್ನಿಯ ಮಸ್ತಕದಲ್ಲಿ ಸಂಕಷ್ಟದ ಅಲೆ ಗಳು ಸುಳಿಸುತ್ತತೊಡಗಿದುವು. ಹೇಗಾದರೂ ಹತ್ಯಾಕಾರಿಯನ್ನು ಪತ್ತೆ ಹಚ್ಚಲೇಬೇಕು; ಯಾರೆಡೆಗಾದರೂ ಬೆರಳು ತೋರದೆ ಇರುವುದು ಇಡೀ ಪೋಲೀಸ್ ಖಾತೆಗೇ ಅಪಮಾನ. ಆದರೆ, ಯಾವ ಮೂಲೆಯನ್ನೂ ಬಿಡದೆ ಕೈಕೊಂಡ ಕಾರ್ಯಾಚರಣೆ ಸೋಲೊಪ್ಪಿಕೊಳ್ಳುತ್ತ ಎಲ್ಲೆಡೆಯೂ ಗಂಭೀರ ಗತಿಗೆ ಇಂಬುಕೊಡುತಿತ್ತು. ಅದರ ಮೇಲೆ, ವಿಧಿ ಇಲ್ಲದೆ ಹೋದಾಗ ಕೊನೆಯ ಪ್ರಕರಣವಾಗಿ ಹತ್ಯಾಕಾರಿಯನ್ನು ಹುಡುಕಿಕೊಟ್ಟವರಿಗೆ ಐದು ಸಾವಿರ ಡಾಲರ್‌ಗಳನ್ನು ಬಹುಮಾನ ಕೊಡುವುದಾಗಿ ಸಾರಿತು ಆಗಿನ ಸರ ಕಾರ. ಆ ಕೂಡಲೇ ರೇಡಿಯೋಗಳು—ಟೆಲಿವಿಷನ್‌ಗಳು ಬಹುಮಾನದ ಮೊತ್ತವನ್ನು ಸಾರಿಸಾರಿ ಹೇಳಿದುವು.

ಅನಂತರ,

ಒಂದೆರಡು ದಿನಗಳೊಳಗಾಗಿ ಹತ್ಯಾಕಾರಿಯನ್ನು ಬಂಧಿಸಿರುವುದಾಗಿ ಮಿಂಚಿನ ಸುದ್ದಿಯೊಂದು ಎಲ್ಲೆಡೆಯೂ ಹರಡಿತು. ಬಹುಶಃ ಐದು ಸಾವಿರ ಡಾಲರ್‌ಗಳ ಪ್ರಭಾವವೇ ಇರಬೇಕು!

* * * *

ಮರುದಿನ ಎಲ್ಲಾ ಪತ್ರಿಕೆಗಳೂ ದಪ್ಪದಪ್ಪ ಅಕ್ಷರಗಳಲ್ಲಿ ಬಿಸಿ ಬಿಸಿ ಸುದ್ದಿಯನ್ನು ಪ್ರಕಟಿಸಿದುವು. ಐದಾರು ಸಾವಿರ ಮೈಲಿಗಳಾಚೆಯ ದೂರ ದೂರ ದೇಶಗಳ ಪತ್ರಿಕೆಗಳೂ ಸಹ ಮುಖಪುಟದಲ್ಲಿ ಸುದ್ದಿಯನ್ನು ಚಿತ್ರ ಸಹಿತ ಪ್ರಕಟಿಸಿದುವು. ವಿಷಯ ಜನಜನಿತವಾಯಿತು.

ಜಸ್ಟಿಸ್ ಬಾಬಿ ಬರ್ಟನ್ ಅಂದಿನ ದಿನಪತ್ರಿಕೆಯ ಮೇಲೆ ಅತ್ಯಂತ ಆಸಕ್ತಿಯಿಂದ ದೃಷ್ಟಿ ಹಾಯಿಸಿದ. ಅದರಲ್ಲಿ ಪ್ರಕಟವಾದ ಅಪರಾಧಿಯ ಚಿತ್ರ ಮನವನ್ನು ಸೂಜಿಗಲ್ಲಿನಂತೆ ಸೆಳೆಯಿತು. ಆಶ್ಚರ್ಯಚಕಿತನಾಗಿ ಅರಳುಗಣ್ಣುಗಳಿಂದ ನಿಟ್ಟಿಸಿ ನೋಡಿದ.

ಅರೆ....!

ಯಾರಿದು ? ಯಾರ ಮುಖ ? ಯಾರು ಹೀಗಿದ್ದರು ? ?

ಎಷ್ಟು ಯೋಚಿಸಿದರೂ ಅರ್ಥವಾಗದು. ಅಂತರಂಗ ಮಾತ್ರ ಎಲ್ಲಿಯೋ ಕಂಡುಕೊಂಡಂತೆ ಚಡಪಡಿಸಹತ್ತಿತು. ನಿಶ್ಚಲ ದೃಷ್ಟಿಯನ್ನು ಅಲ್ಲಿಂದ ಹಿಂತೆಗೆಯಲಾಗಲಿಲ್ಲ. ಹಣೆ ಮುಚ್ಚಿದ ಟೋಪಿ, ಫರ್‌ಕಾಲರ್ ಕೋಟು ಸರ್ವಾಂಗ ಭೂಷಣವಾಗಿವೆ. ಅರಳಿದ ಕಣ್ಣುಗಳಲ್ಲಿ ದಿಟ್ಟತನ, ಬಿರಿದ ತುಟಿಗಳಲ್ಲಿ ಮುಗುಳು ನಗು, ಭೀತಿರಹಿತ ಮುಖಭಾವ ಒಂದೊಂದೂ ಸದ್ಗೃಹಸ್ಥನಿಗೆ ಇರಬೇಕಾದ ಲಕ್ಷಣವನ್ನು ತೋರುತ್ತಿವೆ. ಆದರೇನು ? ಅಪರಾಧಿಯೆಂದಮೇಲೆ ಗುರುತಿಸುವ ಯೋಚನೆಯನ್ನು ಅಷ್ಟಕ್ಕೇ ಬಿಟ್ಟು 'ಕೊನೆಗೂ ಸಿಕ್ಕಿದನಲ್ಲಾ, ಕೇಡಿ! ನೋಡಿದರೆ ಇನ್ನೂ ಎಳೆಯ.....!" ಎಂದು ಕೊಳ್ಳುತ್ತಿರುವಾಗಲೇ ಬಾಗಿಲಿನ ಆಚೆ ಪಾದ ಸಪ್ಪಳ ಕೇಳಿ ಬಂತು. ಆದೇಶವೀಯದಿದ್ದರೂ ಕಣ್ಣುಗಳು ಸುಮ್ಮನೆ ಸಹಜವಾಗಿ ಅತ್ತ ಹರಿದುವು. ವ್ಯಕ್ತಿ ದರ್ಶನವನ್ನು ಬಯಸಿದ ಚಿತ್ತಪ್ರವೃತ್ತಿ ಅತ್ತಲೇ ಕೇಂದ್ರೀಕೃತವಾಗಿ ದ್ದಂತೆಯೇ ಹೆಜ್ಜೆಗಳ ತಾಡನ ಅನುಕ್ರಮವಾಗಿ ಸಮೀಪಿಸುತಿತ್ತು. ಕೆಲವು ಕ್ಷಣಗಳು ಕಳೆಯುವುದರೊಳಗಾಗಿ ಬಾಗಿಲ ಬಳಿ ಕಟಕಟ ಸದ್ದು ಕೇಳಿ ಬಂತು.

"Yes please!"

ಆ ಅನುಮತಿಗೆ ಪ್ರತ್ಯುತ್ತರವಾಗಿ ಮುಚ್ಚಿದ ಬಾಗಿಲನ್ನು ತಳ್ಳಿ ವ್ಯಕ್ತಿ ಒಳ ಹೆಜ್ಜೆ ಇಟ್ಟ. ಮುಖಮಂಡಲ ಪ್ರಸನ್ನವಾಗಿತ್ತು. ಹೊಳೆ ಹೊಳೆ ಯುವ ಹೊಂಗೂದಲು, ಜ್ವಲಿಸುವ ಕಣ್ಣುಗಳು, ಪದ್ಮರಾಗವರ್ಣ, ಉದ್ದಂಡದೇಹ ಒಂದೊಂದೂ ವ್ಯಕ್ತಿತ್ವಕ್ಕೆ ಆಕರ್ಷಣೆ ನೀಡಿವೆ. ಸ್ನೇಹಾನು ರಾಗ ಉಕ್ಕಿ ಆನಂದಾತಿಶಯದ ಸೇತುವನ್ನು ಕಟ್ಟಿತು. ಜಸ್ಟಿಸ್ ಬಾಬಿ

ಸಂಪ್ರದಾಯ ಶೀಲತೆಯಿಂದ ಎದ್ದು ನಿಂತು ಹಸ್ತಲಾಘವ ನೀಡಿ ಅತ್ಯಂತ ಆತ್ಮೀಯತೆಯಿಂದ ಅಂದ,

"ಬಾರಯ್ಯ, ನಿನ್ನನ್ನು ನೋಡಿ ಎಷ್ಟುದಿನಗಳಾಗಿತ್ತು ?"

"ಅದಕ್ಕೆಂದೇ ನಿನ್ನ ಬಳಿಗೆ ಬಂದದ್ದು !"

"ತುಂಬ ಉಪಕಾರ!" ವ್ಯಂಗ್ಯವಾಗಿ ಟೀಕಿಸಿದ ಜಸ್ಟಿಸ್ ಬಾಬಿ ಬರ್ಟನ್.

"ಅದು ನಿನಗೂ ಅನ್ವಯಿಸುತ್ತೆ !"

ಇಬ್ಬರೂ ಮುಗುಳು ನಕ್ಕರು.

ಬಾಬಿ ಗೆಳೆಯನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಕುಶಲಪ್ರಶ್ನೆ ಮಾಡಿದ ಅನಂತರ ಇಬ್ಬರೂ ಪ್ರಸ್ತುತ ಪರಿಸ್ಥಿತಿಯ ರಂಗಕ್ಕೆ ಇಳಿದರು.

"ಪರವಾಯಿಲ್ಲ; ಪೋಲೀಸ್ ಖಾತೆ ಸ್ತುತ್ಯಕಾರ್ಯ ನಡೆಸಿದೆ!" ಎಂದ ಜಾನ್ಸನ್. ನಿರಿಗಟ್ಟಿದ ಹಣೆಯಮೇಲೆ ಉಬ್ಬಿದ ನರಗಳು ಭಾವ ಸ್ಫೂರ್ತಿಯನ್ನು ಸೂಸಿದುವು.

"ಹೌದು, ಹೌದು !"

ಜಸ್ಟಿಸ್ ಬಾಬಿ ಬರ್ಟನ್ ತಲೆದೂಗಿದ.

"ನಿನ್ನೆಯವರೆಗೂ ಸಿಗದಿದ್ದುದನ್ನು ನೋಡಿ ಇನ್ನು ಸಿಗುವ ಸಂಭವ ವಿಲ್ಲ. ಎನಿಸಿತ್ತು."

ಅನಂತರ ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ.

"ಬಹುಶಃ ದ್ವೇಷ ಪ್ರಚೋದನೆಯೇ ಇದರ ಗುರಿ! ಅಥವಾ.........."

ಆ ಮಾತನ್ನು ಮುಂದುವರಿಸಗೊಡದಂತೆ ಜಾನ್ಸನ್ ನಡುವೆ ಬಾಯಿ ಹಾಕಿದ,

"ಇದೆಲ್ಲಾ ಯುದ್ಧವಾದಿಗಳ ಉದ್ಧಟತನವೇ ಸೈ.........! ಬಹುಶಃ ಯುದ್ಧಕ್ಕಾಗಿ ಶೇಖರಿಸಿದ ಬಾಂಬುಗಳ ಸಾಗಾಣಿಕೆಯಲ್ಲಿ ಕೈತಪ್ಪಿ ಬಿದ್ದು ಹೋದ ಬಾಂಬಿರಬಹುದು ಅದು !"

"ಏನೇ ಇರಲಿ, ಮತ್ತೊಮ್ಮೆ ಯುದ್ಧ ಪ್ರಚೋದನೆ ಎಂದರೆ ಎಂತಹ ಅರ್ಥಹೀನತೆ ? ಈ ಜನರಿಗೆ ತಲೆ ಕೆಟ್ಟಿದೆಯೋ ಏನೋ !"

"ಹಾಗೊಂದುವೇಳೆ ಆಗಿದ್ದರೆ ಒಳೆಯದೇ ಬಿಡು. ಮಾನಸಿಕ ಚಿಕಿತ್ಸಾ ಮಂದಿರ ಬೇಗನೆ ಭರ್ತಿಯಾಗುತ್ತೆ!"

ಜಾನ್ಸನ್ ನಗೆ ಚಟಾಕಿ ಹಾರಿಸಿ ನಕ್ಕ. ಅದಕ್ಕೆ ಪ್ರತಿಯಾಗಿ ಎಳೆ ನಗುವಿನ ಸರಳ ರೇಖೆಯನ್ನು ಹರಿಸಿ ಜಸ್ಟಿಸ್ ಬಾಬಿ ಬರ್ಟನ್ ಮುಂದು ವರಿದ "ಅನ್ಯಾಯವಾಗಿ ಎಷ್ಟೊಂದು ಮಂದಿ ಮಿಲಿಮಿಲಿ ಒದ್ದಾಡಿ ಸತ್ತ ರಲ್ಲಾ, ಆ ಪಾಪಕ್ಕೆ ಪರಿಹಾರವೇನಾದರೂ ಇದೆಯೇ? ಇದೇನು ಸಾಮಾನ್ಯ ಅಪರಾಧವೇ?"

"ಸರಿ; ಮೊಕದ್ದಮೆ ನಿನ್ನ ಮುಂದೆಯೇ ಬರುತ್ತೆ. ನೀನೇ ತೀರ್ಪಿನ ಹೊಣೆಗಾರಿಕೆ ಹೊರುವುದಷ್ಟೆ"

ಆ ವಿಚಾರ ಅದುವರೆಗೂ ತಲೆಯಲ್ಲಿ ಸುಳಿದಿರಲಿಲ್ಲವೇನೋ, ಅನಂತರ ಏನೋ ಒಂದು ರೀತಿಯ ಜುಗುಪ್ಸೆ–ಉದಾಸೀನಗಳಿಂದ ಕೂಡಿದ ಧ್ವನಿ ಯಲ್ಲಿ ಬಿತ್ತರಿಸಿದ "ಇನ್ನು ಅದೊಂದು ತಲೆನೋವು!"

"ಹತ್ಯಾಕಾರಿ ಇನ್ನೂ ವಿದ್ಯಾರ್ಥಿ!"

"ನಾನಿನ್ನೂ ಓದಲಿಲ್ಲ. ಈಗಷ್ಟೆ ಪತ್ರಿಕೆ ಕೈಗೆ ತೆಗೆದುಕೊಂಡೆ" ಎಂದವನು ಪುನಃ ತುಸು ಅನುಮಾನ ತುಂಬಿದ ದನಿಯಲ್ಲಿ ನುಡಿದ "ಈತ ನನ್ನು ಎಲ್ಲೋ ನೋಡಿದಂತಿದೆ; ಎಲ್ಲೆಂಬುದು ಈಗ ಜ್ಞಾಪಕಕ್ಕೆ ಬರುತ್ತಿಲ್ಲ. ಒಮ್ಮೆ ಹೋಟೆಲಿನಲ್ಲಿ 'ಟಾಂ ಮೂನಿ' ಎಂಬ ವಿದ್ಯಾರ್ಥಿಯನ್ನು ಕಂಡಿದ್ದೆ. ಅವನು ಒಳ್ಳೆಯ ಲೇಖಕ ಮತ್ತು ಆದರ್ಶವಾದಿ, ಹೆಸರನ್ನೋಡಿದರೆ ಅವನೇ ಇರಬಹುದೇ? ಎನಿಸುವಷ್ಟು ಅನುಮಾನ ಮೂಡುತ್ತದೆ. ಅವನ ಹಣೆ ತುಂಬ ವಿಶಾಲವಾದುದು; ಒಳ್ಳೆ ಲಕ್ಷಣವಂತ ಹುಡುಗ. ಇದರಲ್ಲಿ ಹಣೆಯನ್ನು ಪೂರಾ ಟೋಪಿ ಮುಚ್ಚಿದುದರಿಂದ ತಿಳಿಯುವುದು ಕಷ್ಟ. ಆದರೆ, ಅವನು ಇಂತಹ ಹೇಯಕೃತ್ಯಕ್ಕಿಳಿಯುವುದು ಸಾಧ್ಯವೇ ಇಲ್ಲ."

"ಇವನು 'ಟಾಂ ಮೂನಿ' ಅಲ್ಲ. ಎಫ್.ಟಿ. ಮೂನಿ!"

"ಹಾಗಾದರೆ ಬೇರೆಯೇ ಇರಬಹುದು. ಆಗಿನಿಂದಲೂ ಒಂದು ಬಗೆಯ ಆಶ್ಚರ್ಯಕರ ಅನುಮಾನ ಮನವನ್ನು ಮುತ್ತಿತ್ತು."

"ಇವನೂ ಬಹಳ ಚಟುವಟಿಕೆಯುಳ್ಳ ವಿದ್ಯಾರ್ಥಿಯಂತೆ!"

"ಅಂದರೆ ದುರ್ಮಾರ್ಗದಲ್ಲಿ....?"

ಒಡನೆ ಇಬ್ಬರ ಮುಖದಲ್ಲೂ ನಗುವಿನಲೆಯೆದ್ದಿತು.

"ಹಾಗಲ್ಲ........." ಎಂದಷ್ಟು ನುಡಿದು ಜಾನ್ಸನ್ ಸುಮ್ಮನಾದ.

"ವಿದ್ಯಾರ್ಥಿಗಳ ಚಟುವಟಿಕೆ ಯೂನಿವರ್ಸಿಟಿಗೆ ಸೀಮಿತವಾಗಿದ್ದಲ್ಲಿ ಎಷ್ಟೆಷ್ಟು ವಿಷಯ ಸಂಗ್ರಹಣೆ ಮಾಡಬಹುದು........?"

"ಹಾಗೆಂದರೆ ಅವರು ನಕ್ಕಾರು!"

ಇಬ್ಬರೂ ತಿಳಿಹಾಸ್ಯ ವ್ಯಾಪ್ತಿಯಲ್ಲಿ ಮುಗುಳು ನಗೆ ಬೀರಿದರು.

"ಹುಡುಗರು ತಮ್ಮ ವಿದ್ಯಾರ್ಥಿದೆಶೆಯಲ್ಲಿ ವಿದಾಭ್ಯಾಸವನ್ನಷ್ಟೆ ಗಮನಿಸಿದರೆ ತಮ್ಮ ಉದ್ಧಾರ ಮಾತ್ರವಲ್ಲ; ಲೋಕೋದ್ಧಾರವನ್ನೂ ಮಾಡಬಲ್ಲರು!"

"ಅದನ್ನು ಕೇಳುವವರಾರು? ವಿದ್ಯಾರ್ಥಿಗಳ ಬಯಕೆ ವಿಶ್ವಾತ್ಮಕವಾದುದು!"

ಒಡನೆ ಇಬ್ಬರೂ ಫಕಫಕನೆ ನಕ್ಕು ಬಿಟ್ಟರು.

* * * *

ಪೋಲೀಸ್ ಠಾಣ್ಯದ ಒಳಕೊಠಡಿಯ ಮೇಜಿನ ಮುಂದೆ ಮಂಡಿಸಿದ್ದ ಪೋಲೀಸ್ ಜನರಲ್ ರೂಕ್ಷ ದನಿಯಲ್ಲಿ ಸಹ ಅಧಿಕಾರಿಗೆ ಅಂದ,

"ಆತ ತೀವ್ರ ಪ್ರಗತಿಗಾಮಿ ಎಂದು ತಿಳಿದು ಬಂದಿದೆ. ನಾವು ಹೆಜ್ಜೆ ಮುಂದಿಟ್ಟು ತಪ್ಪುಮಾಡಿದ್ದಾಯ್ತು!"

"ಆಗ ಅದೊಂದೂ ತಿಳಿಯಲೇ ಇಲ್ಲ."

"ಅಂದೇ ಅವನ ಧೈರ್ಯ – ಮುಸಿಮುಸಿ ನಗು ನೋಡಿದಾಗಲೇ ನನಗೆ ಏನೋ ಒಂದು ಬಗೆ ಎನಿಸಿತ್ತು"

"ಬಹಳ ವಿಚಿತ್ರ ವ್ಯಕ್ತಿ!"

"ಈಗ ಏನು ಮಾಡೋಣ?"

"ಬಿಟ್ಟು ಬಿಡುವುದೆಂದರೆ ಅವಮಾನ!"

"ಹಾಗೆ ಒಮ್ಮೆಗೇ ಬಿಡುವುದರಿಂದಲೂ ಪ್ರಯೋಜನವಿಲ್ಲ. ಮೊದಲು ಏನಾಗಿದೆ ಎಂದು ನಾವು ಒಳಹೊಕ್ಕು ನೋಡಲೇಬೇಕಲ್ಲ? ಅನಂತರ ತೀರ್ಮಾನ."

"ಅದು ಸರಿ." ಎನ್ನುತ್ತ ತಲೆದೂಗಿದನಾತ.

"ಈಗ ಹೇಗೂ ಅರೆಸ್ಟ್‌ಮಾಡಿದ್ದಾಗಿದೆ. ಅದರ ಪಾಡಿಗೆ ಅದನ್ನು ಬಿಟ್ಟು ಬಿಡೋಣ. ಹೇಗಾದರೂ ಆಗಲಿ, ಆಗು–ಹೋಗುಗಳೆಲ್ಲ ಅವನ ಅದೃಷ್ಟ!"

"………"

"ಪರಿಸ್ಥಿತಿಗೆ ಹೊಂದಿಕೊಳ್ಳುವುದರಲ್ಲೇ ಈಗ ಹೆಚ್ಚಿನ ಮಾನ್ಯತೆ ಬರುತ್ತದೆ."

"ಹೌದು, ಹೌದು!"

"ನಿಮ್ಮ ಸಾಕ್ಷಿ ಪುರಾವೆಗಳನ್ನು ಕ್ರಮಬದ್ಧಗೊಳಿಸಿ."

"ಆಗಲಿ."

"ಕಾನೂನಿನ ಬಲೆ ಕೈ ತಪ್ಪಿ ಅಸಹ್ಯವಾಗಬಾರದು. ಒಂದುವೇಳೆ ಅವನು ನಿರಪರಾಧಿ ಎಂದು ಸಾಬೀತಾದರೆ ಬಿಡುಗಡೆಯಾಗುತ್ತೆ; ಆಗಲಿ."

"ಹಾಗಾದರೆ……."

"ನಮ್ಮ ವ್ಯವಹಾರದಲ್ಲಿ ನ್ಯೂನತೆ ಬರಬಾರದು."

"ಒಂದುವೇಳೆ ಆತ ನಿರಪರಾಧಿಯೇ ಆಗಿದ್ದರೆ ಕಾನೂನು ಬಂಧದಿಂದ ಬಹಳ ತೊಂದರೆಯಾಗಬಹುದು. ಏನು ಮಾಡೋಣ?"

"ಆಗುತ್ತೆ.....ಗೊತ್ತು.....ಆದರೆ, ಈಗ ಸಡಿಲ ಬಿಡುವುದು ಸರಿಯಲ್ಲ."

"ಹೌದು.....ಹೇಗಾದರೂ ಆಗಲಿ, ಎಲ್ಲವೂ ದೈವೇಚ್ಛೆ;"

"ಆದರಿಂದಲೇ ಹೇಳುತಿದ್ದೇನೆ; ಇನ್ನು ಮುಂದಿನ ವಿಚಾರವನ್ನು ನ್ಯಾಯಪೀಠಕ್ಕೆ ಒಪ್ಪಿಸಿ ಬಿಡುವುದು ಲೇಸು!"

"ಆಯಿತು."

ಆ ಸಲಹೆಯನ್ನು ಒಪ್ಪಿಕೊಂಡನಂತರ ಚಿತ್ರಕ್ಷೇತ್ರ ಹಲವಾರು ಕಾರ ಸ್ಥಾನಗಳ ಬೀಡಾಯಿತು. ಅವುಗಳಲ್ಲಿ ಪ್ರಾಸಿಕ್ಯೂಷನ್ನಿನ ಪರವಾಗಿ ಸಾಕ್ಷಿಗಳ ನಿರ್ಮಾಣಕಾರ್ಯ ನಡೆದಾಗ ಮುಖ್ಯರಾದವರನ್ನು ವೇಶಮರೆಸಿ ಸೆರೆಮನೆಗೆ ಕರೆದುಕೊಂಡು ಹೋಗಿ ಅಪರಾಧಿಯನ್ನು ಸೂಕ್ಷ್ಮವಾಗಿ ನೋಡಿಸುವುದು ಒಂದಾದರೆ ಪ್ರತ್ಯಕ್ಷದರ್ಶಿಗಳನ್ನು ನಿರ್ಮಿಸಿ, ಅವರ ಹೇಳಿಕೆಯ ಪ್ರಕಾರ ಛಾರ್ಜ್‌ಶೀಟನ್ನು ರಚಿಸುವುದು ಇನ್ನೊಂದು.

ಆದರೆ, ಸಲಸಲಕ್ಕೂ ಮನವನ್ನು ಚುಚ್ಚುತ್ತಿದ್ದ ವಿಷಯವೆಂದರೆ 'ಅಪರಾಧಿ' ಎನಿಸಿದವನ ಮುಖದಲ್ಲಿ ಮಿನುಗುತಿದ್ದ ಅಕಳಂಕಭಾವ ಮತ್ತು ತುಟಿಗಳಲ್ಲಿ ಮಿನುಗುವ ಅಮಾಯಾಕ ನಗು.

* * * *

ಅಂದು,

ಸಾರ್ವಜನಿಕ ರಜ ಘೋಷಿಸಲ್ಪಟ್ಟಿತ್ತು. ಅದು ಯಾವ ಕಾರಣ ವೆಂಬುದನ್ನು ನಾವು ತಿಳಿದುಕೊಂಡಿಲ್ಲ. ರಸ್ತೆಗಳಲ್ಲಿ ಕಿಕ್ಕಿರಿ ತುಂಬಿದ ರಂಗು ರಂಗಿನ ಜನಗಳ ಪ್ರಾಕೃತ ವೈಭವಕ್ಕೂ ಸಾರ್ವಜನಿಕ ರಜೆಗೂ ಸಂಬಂಧ ವನ್ನು ಯಾರಾದರೂ ಸುಲಭವಾಗಿ ಕಲ್ಪಿಸಬಹುದು. ಕಾರುಗಳ ವೇಗ–ಕಾಲುಗಳ ಮಿತಿ ಒಂದಕ್ಕೊಂದು ತಾಳೆಯಿಲ್ಲದಿದ್ದರೂ ಸ್ಪರ್ಧೆಗಿಳಿದಿರುವುದು ವಿಶೇಷವೇ.

ಜಸ್ಟಿಸ್ ಬಾಬಿ ಬರ್ಟನ್ ಗಗನಚುಂಬೀ ಗೃಹಶ್ರೇಣಿಯ ಬಾಲ್ಕನಿ ಯಲ್ಲಿ ಕುಳಿತು ಪತ್ರಿಕಾವಲೋಕನದಲ್ಲಿ ತನ್ಮಯನಾಗಿದ್ದ. ಬೆಚ್ಚನ್ನ ಬಿಸಿಲು ಮೈಗೆ ಬೆಚ್ಚಗೆ ಅಟ್ಟುತಿತ್ತು. ಮಂದಮಂದ ಸಂಚಾರೀ ಮಾರುತ ಮೌನ ಭಾಷೆಯಲ್ಲಿ ಏನೋ ಹೇಳುವಂತೆ ಈ ಬಳಿಯಲ್ಲೇ ಸುಳಿಯುತಿದ್ದಾನೆ.

ಪತ್ರಿಕಾ ಪ್ರಪಂಚದ ವಿಚಾರ ಸಂಪತ್ತಿ ಮನವನ್ನು ಹಲವಾರು ಬಗೆ ಯಲ್ಲಿ ಚುಚ್ಚುತಿತ್ತು. ತಾನು ಬಗೆದ ವಿಚಾರವೊಂದಾದರೆ ಅದು ಪ್ರಕಟಿಸಿದ ಭಾವವೇ ಬೇರೆ. ದ್ವೈದೀಭಾವಗಳ ಅಕಾಂಡತಾಂಡವ ನೃತ್ಯ ಮಸ್ತಕರಂಗ ವನ್ನು ಆವರಿಸಿತ್ತು. ಆತ ನಿಶ್ಚಲ ದೃಷ್ಟಿಯನ್ನು ರಸ್ತೆಯಮೇಲೆ ಹಾಯಿಸಿದ. ವಿಚಿತ್ರ ಜಗತ್ತಿನ ಅಂಧಶ್ರದ್ಧೆಯ ಅದ್ಭುತ ಪ್ರಭಾವವೇ ಅಲ್ಲಿ ಪ್ರವಹಿಸುವಂತೆ ಭಾಸವಾಯಿತು. ವಿಸ್ಮಯ ವಿಮುಗ್ಧನಂತೆ ನೋಡಿ ಬಿಸಿಯುಸಿರು ಬಿಟ್ಟ.

ಹೊತ್ತು ಕಳೆದಂತೆ ಬಿಸಿಲು ಕಾವೇರುತಿತ್ತು.

ಜಸ್ಟಿಸ್ ಬಾಬಿ ಬರ್ಟನ್ ಒಳಬಂದಾಗಲೇ ಅನಿರೀಕ್ಷಿತವಾಗಿ ಜಾನ್ಸನ್ ಅಲ್ಲಿ ಪ್ರತ್ಯಕ್ಷನಾದ.

ಗೆಳೆಯನಿಗೆ ಹಸ್ತ ಲಾಘವ ನೀಡಿ ಆತ್ಮೀಯತೆಯಿಂದ ಬರಮಾಡಿ ಕೊಳ್ಳುತ್ತ ಬಾಬಿ ಕೇಳಿದ,

"ಏನಪ್ಪಾ, ವಿಶೇಷ?"

"ವಿಶೇಷವೇನಿದ್ದರೂ ನಿನ್ನ ಬಳಿಯಷ್ಟೆ? ನ್ಯಾಯಾಧೀಶನಿಗೆ ತಿಳಿಯ ಬಹುದಾದಷ್ಟು ವಿಶೇಷ ನನಗೆಲ್ಲಿಂದ ಬರಬೇಕು?" ಮುಗುಳು ನಗೆಯನ್ನು ಸೂಸಿ ಉತ್ತರಿಸಿದ ಜಾನ್ಸನ್,

"ನೋಡು! ಈ ಉದ್ರೇಕಿತ ಜನತೆಗೆ ಬಾಂಬಿನ ಅಪಘಾತವೂ ಪಾಠ ಕಲಿಸಿದಂತಿಲ್ಲ!"

"ಈ ಜನ ಇದಿಷ್ಟೆಯೇನು ಕಂಡದ್ದು ?"

"ಬೇಕಾದಷ್ಟು ಕಂಡಿರಬಹುದು; ಆದರೆ ಪಾಠ ಕಲಿಯಲಿಲ್ಲ: ಅದೇ ವಿಶೇಷ !"

"ಪಾಠ ಕಲಿಯುವಂತಿದ್ದರೆ ಇಂದಿನ ಪರಿಸ್ಥಿತಿಯೇ ಬೇರೆಯಾಗುತಿತ್ತು."

"ಉದ್ರೇಕಿತ ಜನತೆಗೆ ವಿಧಿ ಆಗ್ರಹಪೂರ್ವಕವಾಗಿ ಅಣಕುಯುದ್ಧವನ್ನು ಹೂಡಿ ಉತ್ತರಿಸಿತೋ ಏನೋ !"

"ಆದರೆ, ಪೋಲೀಸರು ಹಾಗೆನ್ನಲಾರರು !"

"ಹಾಂ !" ಉದ್ಗಾರ ತೆಗೆದ ಜಸ್ಟಿಸ್ ಬಾಬಿ ಬರ್ಟನ್ ಮುಳ್ಳು ತುಳಿದವನಂತೆ ನಸು ಮಿಡುಕಿ ಮುಂದುವರಿದ "ಈ ಪ್ರಕರಣದಲ್ಲಿ ಬಂಧಿತ ವ್ಯಕ್ತಿಯ ಹೆಸರು 'ಎಪ್. ಟಿ. ಮೂನಿ' ಎಂದು ಪತ್ರಿಕೆಗಳು ಬರೆದಿದ್ದರೂ ನನಗೆ ಅವನು 'ಟಾಂ ಮೂನಿ' ಇರಬಹುದೇ ಎಂಬ ಅನುಮಾನ ಈಗಲೂ ಸಹ ಉಂಟಾಗಿದೆ. ಆ ವಿಷಯ ನಿನಗೇನಾದರೂ ಸರಿಯಾಗಿ ಗೊತ್ತೇ ?"

"ಯಾವ ಟಾಂ ಮೂನಿ.....? ಲಿಯೋನಾರ್ಡ್ ಪ್ರೈವೇಟ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಲ್ಲಿ ಅವನನ್ನು ಚೆನ್ನಾಗಿ ಕೇಳಿ ಬಲ್ಲೆ."

"ನನಗೆ ಸ್ವಲ್ಪ ಅನುಮಾನ....ಸರಿಯಾಗಿ ಊಹಿಸಲಾರೆ."

"ನನಗೂ ಹಾಗೆನಿಸುತ್ತೆ. ಪ್ರಾಸಿಕ್ಯೂಶನ್ನಿನವರ ಹೇಳಿಕೆಗೂ ಆ ಚಿತ್ರಕ್ಕೂ ಸಾಮ್ಯ ಕಂಡು ಬರುತ್ತಿದೆ. ನನಗೆ ಅದೇ ಆಶ್ಚರ್ಯ! ಪೋಲೀಸರು ಕುಡಿದು ಅಮಲೇರಿದವರಂತೆ ವರ್ತಿಸುವುದೇ ಹೆಚ್ಚು! ಹಾಗೇನಾದರೂ ಅಚಾತುರ್ಯ ನಡೆದಿರಬಹುದೇ ?"

"ಅಷ್ಟೇಕ್ಕೇಕಾತರ? ಇನ್ನೇನು ಇಷ್ಟರಲ್ಲೇ ವಿಷಯ ಹೊರಬೀಳುತ್ತೆ."

"ಒಂದುವೇಳೆ ಹಾಗಾಗಿದ್ದರೆ ಎಂತಹ ವಿಪರ್ಯಾಸ ?"

"ನ್ಯಾಯಪೀಠ ಇದ್ದೇ ಇದೆಯಲ್ಲ ?"

"ಹಾಗೆನ್ನ ಬೇಡ. ವಿನಾಕಾರಣ ಮೋಸದ ಬಲೆಯಲ್ಲಿ ಸಿಕ್ಕಿದರೆ ಕಷ್ಟ, ನಾನಾತನ ಲೇಖನಗಳನ್ನು ಓದಿರುವೆ. ಒಮ್ಮೆ ಭೆಟ್ಟಿಯಾಗುವ ಪ್ರಸಂಗವೂ ಬಂದಿತ್ತು. ಆತ ಒಳ್ಳೆ ಶಾಂತಿವಾದಿ."

ಜಾನ್ಸನ್ ಪ್ರತಿಯಾಗಿ ಏನೂ ಹೇಳಲಿಲ್ಲ. ಒಂದೆರಡು ಘಳಿಗೆ

ನಿಶ್ಚಲ ಭಂಗಿಯಲ್ಲಿ ಯೋಚಿಸುತ್ತ ಕಳೆದ. ರುದ್ರಮೌನ ಕೊಠಡಿಯನ್ನು ಆವರಿಸಿತು.

* * * *

ಜಸ್ಟಿಸ್ ಬಾಬಿ ಬರ್ಟನ್ ಕಾರ್ಯಾಲಯಗಳಿಗೆ ದೊರೆತ ವಿಶೇಷ ಬಿಡುವು ತೀರಿದನಂತರ ನ್ಯಾಯಾಲಯದ ಪೀಠವನ್ನಲಂಕರಿಸಿದಾಗ ಮೊಟ್ಟ ಮೊದಲಿಗೆ ಪೋಲೀಸರ ಪಹರೆಯಲ್ಲಿ ಒಳಬಂದ ಅಪರಾಧಿ ಕಟಕಟೆಯ ನ್ನೇರಿದ. ಅವನನ್ನು ನೋಡುತ್ತಲೇ ಉಂಟಾದ ಆಶ್ಚರ್ಯ–ಅನುತಾಪ ಗಳು ಮೈಮನಗಳೆರಡನ್ನೂ ಒಮ್ಮೆಗೇ ಮರವಟ್ಟಿಸಿದುವು. ಆಶ್ಚರ್ಯ ವಿಸ್ತೃತ ನೋಟ ಕೆಲವು ಕ್ಷಣ ಅವನನ್ನು ನೋಡಿ ಬೇರೆಡೆಗೆ ಸಿಡಿಯಿತು. ಕಟಕಟೆಯಲ್ಲಿ ನಿಂತವನು 'ಟಾಂ ಮೂನಿ' ಅವನೂ ಅಷ್ಟೇ ಆಶ್ಚರ್ಯ ಜನಿತ ದೃಷ್ಟಿಯಿಂದ ನೋಡಿ 'ಓಹೋ ಇವನು ನ್ಯಾಯಾಧಿಪತಿ ಎಂಬುದು ನನಗೆ ತಿಳಿದಿರಲಿಲ್ಲ. ಬಹುಶಃ ಇದು ನನ್ನ ಅದೃಷ್ಟವೇ ಇರ ಬೇಕು!' ಎಂದುಕೊಂಡ. ತುಟಿಗಳಲ್ಲಿ ಅವಾಯಕ ನಗು ಸುಳಿಸುಳಿ ದಾಡಿತು.

ಅವನು ಕೆಲವೊಮ್ಮೆ 'ಎಫ್. ಟಿ. ಮೂನಿ' ಎಂದೂ ಕರೆಯಲ್ಪಡು ತ್ತಿದ್ದ. ಅದು ಪ್ರಾಸಿಕ್ಯೂಶನ್ನಿಗೆ ಸುಲಭದಲ್ಲಿ ಬಣ್ಣ ಹಚ್ಚಲು ಅನುಕೂಲಿ ಸಿತು. ಅವನು ನಾಮಾಂತರದಿಂದ ಹೇಯಕೃತ್ಯ ನಡೆಸಿದ್ದಾನೆಂದೂ ಶಾಂತಿವಾದದ ಹೆಸರಿನಲ್ಲಿ ರಕ್ತ ಪಿಪಾಸಿಯಾಗಿದ್ದಾನೆಂದೂ ಆಪಾದನೆ ಹುಟ್ಟಿಕೊಳ್ಳಲು ಪ್ರಬಲವಾದ ಕಾರಣವಾಯಿತು.

ನ್ಯಾಯಪೀಠದ ಮುಂದೆ ಮೊಕದ್ದಮೆಯ ಮುಳ್ಳುಕಂಟಿ ಹರೆಗೈ ಚಾಚಿ ದಿನದಿನಕ್ಕೂ ಬೆಳೆಯುತ್ತಲೇ ಇತ್ತು–ಪ್ರಾಸಿಕ್ಯೂಶನ್ನಿನ ನಿರೀಕ್ಷಿತ ವ್ಯಾಪ್ತಿಗೂ ಮಿಗಿಲಾಗಿ! ವಾದವಿವಾದಗಳು ಪುಂಖಾನುಪುಂಖವಾಗಿ ಬೆಳೆ ದಂತೆಲ್ಲಾ ಯಾವುದೇ ಮೊಕದ್ದಮೆಯ ಕ್ಲಿಷ್ಟಕರ ಕ್ಷೇತ್ರ ಮತ್ತಷ್ಟು ಜಟಿಲ ಗೊಳ್ಳುವುದು ಅನಿವಾರ್ಯ. ದೀರ್ಘವಾದ ಕಾಲಮಾನ ನದಿನೀರಿನಂತೆ ವ್ಯರ್ಥವಾಗಿ ಕಳೆದು ಹೋದರೂ ಮೊಕದ್ದಮೆಯ ವಿಸ್ತಾರ ಇನಿತೂ ಕುಂದ ಲಿಲ್ಲ; ಅಂಕವೂ ಮುಗಿಯಲಿಲ್ಲ. ಸರಕಾರದ ಮೇಲೆ ಯಾರು ಯಾರೋ ರಾಜಕೀಯದ ಬಿರುಗಾಳಿಯನ್ನು ತೀವ್ರವಾಗಿ ಬೀಸುತಿದ್ದುದರಿಂದ ಮೊಕ

ದ್ವಮೆಯ ಕುಂಡ ಚಿತ್ರವಿಚಿತ್ರವಾಗಿ ರೂಪುಗೊಂಡು ಮಹಾಯಜ್ಞದಂತೆ ವಿಜೃಂಭಿಸುತಿತ್ತು.

ಬಾಂಬು ಸಿಡಿದ ಘಳಿಗೆಯಲ್ಲಿ ಟಾಂ ಮೂನಿಯನ್ನು ರಿಚ್‌ಮಂಡ್ ವೆಲ್ಲಿಂಗ್ಟನ್ ಸರ್ಕಲ್ಲಿನಲ್ಲಿ ತನ್ನ ಸ್ವಂತ ಕಣ್ಣುಗಳಿಂದ ನೋಡಿದುದಾಗಿ ಸಾಕ್ಷಿ ಹೇಳಿದ ಸಾಕ್ಷಿಯು ಅವನನ್ನು ನ್ಯಾಯಾಲಯದಲ್ಲಿ ಗುರುತಿಸಿ ತನ್ನ ಸಾಕ್ಷಿತ್ವಕ್ಕೆ ಸತ್ಯದ ಕಳೆಯನ್ನು ಕಟ್ಟಿ ಜಯಭೇರಿ ಹೊಡೆದ. ಆದರೂ, ಆಗಲೂ ಟಾಂ ಮೂನಿ ಆತ್ಮವಿಶ್ವಾಸ ಕಳೆದುಕೊಳ್ಳಲಿಲ್ಲ. ಆತನ ಶುಷ್ಕ ತುಟಿಗಳಲ್ಲಿ ಮಂದಹಾಸ ಮಿನುಗುತ್ತಲೇ ಇತ್ತು. ಕಣ್ಣುಗಳ ಉಜ್ವಲ ಕಾಂತಿ ಸರ್ವತ್ರ ಭೂಷಣವಾಗಿತ್ತು–ಗೆಲುವಿನ ಹಾದಿ ಸದಾ ತನ್ಮುಂದೆ ನಿಚ್ಚಳವಾಗಿ ಹೊಳೆಯುವಂತೆ !

ಹನ್ನೆರಡು ಜನ ಜೂರಿಗಳು ಮುಚ್ಚಿದ ಕೊಠಡಿಯಲ್ಲಿ ಚರ್ಚಿಸಿ ಕಂಠ ಶೋಷಣೆಗೈಯುತಿದ್ದರು. ಅಸಹನೀಯವಾದ ತರ್ಕವಿತರ್ಕಗಳಿಂದ ತಲೆ ಕೆಡಿಸಿಕೊಂಡು ಸಂತ್ರಸ್ತರಾಗಿ ಪುನಃಪುನಃ ಮತ ತೆಗೆದುಕೊಂಡು ಕಟ್ಟ ಕಡೆಗೆ ಜುಗುಪ್ಸೆ–ವ್ಯಸನಗಳಿಂದ ಅವನೇ ಹತ್ಯಾಕಾರಿ ಎಂದು ಬಹುಮತ ದಿಂದ ತೀರ್ಮಾನಿಸಿ ಹೊರಬಿದ್ದರು. ಅದು ತಮ್ಮ ಆತ್ಮದ್ರೋಹ ವೆಂಬ ಅರಿವು ಮನಃಪ್ರಾಣಗಳಿಗೆ ಮುಳ್ಳಾಗಿದ್ದರೂ ಪ್ರಾಸಿಕ್ಯೂಶನ್ನಿನ ಚಕ್ರವ್ಯೂಹದಲ್ಲಿ ಸತ್ಯಾನ್ವೇಷಣೆಗೆ ಇನಿತೂ ಆಸ್ಪದ ದೊರೆಯದಿದ್ದುದು ತೀರ ದುರದೃಷ್ಟಕರ.

ಟಾಂ ಮೂನಿ ಬಾಂಬು ಸಿಡಿದ ಸಮಯದಲ್ಲಿ ರಾಜಮಾರ್ಗವಾದ ಎಡ್ವರ್ಡ್ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿನ ಗಡಿಯಾರದ ಅಂಗಡಿಯೊಂದರಲ್ಲಿ ತನ್ನ ಗೆಳೆಯನೊಂದಿಗೆ ಮಂಡಿಸಿದ್ದ. ಆಗ ಮಧ್ಯಾಹ್ನ ನಾಲ್ಕು ಗಂಟೆ–ಇಪ್ಪತ್ತು ನಿಮಿಷ. ಟಾಂ ಮೂನಿ ಗೆಳೆಯನೊಂದಿಗೆ ಅಲ್ಲಿ ತೆಗೆಸಿಕೊಂಡ ಚಿತ್ರದಲ್ಲಿ ಮೂಡಿ ಬಂದಿದ್ದ ದೊಡ್ಡ ದೊಡ್ಡ ಗಡಿಯಾರಗಳು ಆ ವೇಳೆ ಯನ್ನು ಸ್ಪಷ್ಟವಾಗಿ ತೋರಿದ್ದುವು. ಅಲ್ಲಿಂದ ಎರಡು ಮೈಲಿಗಳಿಗೂ ಹೆಚ್ಚು ದೂರವಾಗಿದ್ದ ಸರ್ಕಲ್ಲಿನಲ್ಲಿ ಬಾಂಬು ಆಸ್ಫೋಟನೆಗೊಂಡದ್ದು ಬಹಳಮಟ್ಟಿಗೆ ಅದೇ ಸಮಯದಲ್ಲಿ. ಅದು ಎಲ್ಲರಿಗೂ ಸ್ಪಷ್ಟವಾಗಿ ತಿಳಿದ ಅಂಶ. ಟಾಂ ಮೂನಿ ತನ್ನಲ್ಲಿದ್ದ ಚಿತ್ರಸಾಕ್ಷ್ಯದಿಂದ ಸಂಪೂರ್ಣ ಉತ್ತೇ

ಜಿತನಾಗಿದ್ದ. ಆದರೆ, ಆ ಸಚಿತ್ರ ಸತ್ಯಸಾಕ್ಷ್ಯವನ್ನು ಒಪ್ಪಿಕೊಳ್ಳಲು ನ್ಯಾಯಾಲಯ ಸಿದ್ಧವಿದ್ದರೂ ಆ ಹಾದಿಯಲ್ಲಿ ಮೊಣಚುಮುಳ್ಳಿನ ಜಾಲ ಅಖಂಡವಾಗಿ ಹಬ್ಬಿತ್ತು. ಅದುವರೆಗೂ ಸ್ಥಿರಗಾಂಭೀರ್ಯದಿಂದ ಕಾಲ ಕಳೆದ ಟಾಂ ಮೂನಿ ತೀವ್ರ ಚಿಂತಿತನಾದ. ತುಟಿಗಳಲ್ಲಿ ಮಿನುಗುತಿದ್ದ ಅಮಾಯಕ ನಗು ಒಮ್ಮೆಗೇ ಮಾಯವಾಯಿತು.

ಅವನು ಫೈನಲ್ ಪರೀಕ್ಷೆಗೆ ಕೂಡುವುದಾಗಿ ಕಾಲೇಜಿಗೆ ಬರೆದುಕೊಂಡಿದ್ದ. ಪರೀಕ್ಷಕರು ಅತ್ಯಂತ ಉದಾರತೆಯಿಂದ ಅವನಿಗೆ ಪ್ರಶ್ನ ಪತ್ರಗಳನ್ನು ಜೈಲಿಗೇ ಒದಗಿಸಿ, ಪರೀಕ್ಷಕರನ್ನಿಟ್ಟು ಅವನ ಆಸೆಯನ್ನು ಪೂರೈಸಿದರು. ಅದರಲ್ಲಿ ಅವನು ಉತ್ತಮ ರೀತಿಯಲ್ಲಿ ಜಯಲಾಭ ಗಳಿಸಿದನಾದರೂ ನ್ಯಾಯಾಲಯದ ಪರೀಕ್ಷೆ ಹೆಜ್ಜೆ ಹೆಜ್ಜೆಗೂ ತೊಡಕಾಗುತ್ತಲೇ ಇದ್ದುದು ಆ ಆನಂದಸಾಗರವನ್ನು ಮೈದುಂಬಿಕೊಳ್ಳಲು ಅವಕಾಶ ಕೊಡಲೇ ಇಲ್ಲ.

ವಾದ ವಿವಾದಗಳು ಪದೇ ಪದೇ ಮುಂದುವರಿಯುತಿದ್ದುದರಿಂದ ವೃಥಾ ಕಾಲಹರಣ........ ಕಿನಿಸಿಗೆ.

ಟಾಂ ಮೂನಿಯ ಬೆಂಬಲಿಗರು ಹೂಡಿದ ವಾದವನ್ನಾಗಲೀ, ಘೋಷಣೆಗಳನ್ನಾಗಲೀ, ಹೇಳಿಕೆಗಳನ್ನಾಗಲೀ ನ್ಯಾಯಾಲಯ ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ ಅಥವಾ ತೆಗೆದುಕೊಳ್ಳುವಂತಿರಲಿಲ್ಲ. ಅಂತೂ, ಕೊನೆಯದಾಗಿ ದೀರ್ಘಾತಿದೀರ್ಘ ಅಧ್ಯಾಯ ಕೊನೆಗೊಂಡಾಗ ಗಂಟಲಿನ ಹಸಿ ಒಣಗಿ ಹೋದಂತೆ ನಾಲಿಗೆಗಳು ಸ್ತಬ್ಧಗೊಂಡುವು.

ನರಹತ್ಯಾದೋಷಕ್ಕೆ ಮರಣದಂಡನೆಗಿಂತ ಕಡಿಮೆಯಾದ ಶಿಕ್ಷೆ ಕಾನೂನಿನಲ್ಲಿ ಅಡಕವಾಗಿರಲಿಲ್ಲವಾದುದರಿಂದ ಆ ಶಿಕ್ಷೆಯು ಅನುಗ್ರಹ ಆತನಿಗೆ ವರ ಪ್ರಸಾದವಾಗಿ ಲಭಿಸಿತು.

ಶಾಂತಿವಾದಿಯ ಹೃದಯಪಕ್ಷಿ ಮೃತ್ಯುವಿನ ಪಾದಧ್ವನಿಯನ್ನು ಆಲೈಸುತ್ತ ಮಾನಸಿಕ ವಿಕ್ಷೋಭೆಗೆ ನಾಂದಿ ಹಾಡಿತು—ವಿಕಟ ವಿಕ್ಷುಬ್ಧ ಸ್ವರದಲ್ಲಿ.

* * * *

ಟಾಂ ಮೂನಿ ಜನ್ಮತಃ ಅಂತಹ ಭಾಗ್ಯವಂತನೇನೂ ಅಲ್ಲ. ಅದಕ್ಕೂ

ಮಿಗಿಲಾಗಿ ಕ್ಲಿಷ್ಟಕರವಾದ ಕಷ್ಟಪರಂಪರೆಗಳೇ ಅವನನ್ನು ಕಾಡಿವೆ. ಹದಿನಾಲ್ಕರ ಎಳೆಯನಿದ್ದಾಗಲೇ ತಂದೆಯನ್ನು ಕಳೆದುಕೊಂಡ ದುರ್ದೈವಿ. ಒಡಹುಟ್ಟುಗಳೇ ಆಗಲೀ, ಸಮೀಪ ಬಂಧುಗಳೇ ಆಗಲೀ ಇಲ್ಲದ ಅವನಿಗೆ ತಾಯಿಯೇ ಜೀವನ ಸರ್ವಸ್ವ. ಅವಳಿಗೂ ಮಗನ ಮೇಲೆ ಅಷ್ಟೇ ಪ್ರಾಣ ಜನಿತವಾದ ಪ್ರೇಮಭಾವ. ಹಾಗೂ ಹೀಗೂ ದುರ್ದಿನಗಳ ಪ್ರಾಕಾರವನ್ನು ದಾಟಿ ಪ್ರಗತಿ ಪಥದಲ್ಲಿ ಹೆಜ್ಜೆ ಇರಿಸಿದ ಮಗ ಸರ್ವಮಾನ್ಯತೆ ಪಡೆಯಲಿರುವ ಸಂದರ್ಭದಲ್ಲೇ ಸೆರೆಮನೆಗೆ ದೂಡಲ್ಪಟ್ಟ ಕ್ರೂರ ದುರಂತ ಹೆಂಗರುಳನ್ನು ಕತ್ತರಿಯಂತೆ ಕೊರೆದು ಕೋರೈಸುವುದು. ಅದು ಯಾವ ತಾಯಿಗಾದರೂ ಸಂಕಷ್ಟವೇ. ಆದರೆ, ಅವಳು ಎಲ್ಲರಂತೆ ದುಃಖಿನಿಯಾದರೂ ಧೃತಿಗೆಡು ವಷ್ಟು ಅಜ್ಞೆಯಾಗಿರಲಿಲ್ಲ. ಮೊಕದ್ದಮೆಯ ವಿದ್ಯಮಾನ ಪ್ರತಿ ಹಂತ ಹಂತದಲ್ಲೂ ನಗ್ನ ಸತ್ಯದ ಆತ್ಮದರ್ಶನ ಮಾಡಿಸಿ ಎದೆಯ ಕಿಚ್ಚಿಗೆ ಎಣ್ಣೆಯನ್ನು ಸುರಿದಂತೆ ಕೆರಳಿಸುತಿತ್ತು. ಅಹರ್ನಿಶಿ ಅದೇ ಚಿಂತನೆಯಲ್ಲಿ ಮುಳುಗಿ ವಕೀಲರಿಂದ ವಕೀಲರಿಗೆ ಅಲೆದು ಬೆವರು ಬಸಿದರೂ ಗಳಿಸಿದ ಅಖಂಡಲಾಭ ಅಪಾರವಾದ ಕಾಲವ್ಯಯ ಮತ್ತು ಅರ್ಥಹಾನಿ.

ಜಾಲಿ ಮೂನಿ ಅದರಿಂದ ಅತ್ಯಂತ ನಿರಾಶಳಾದರೂ ಸುಮ್ಮನೆ ಕೂಡಲಿಲ್ಲ. ಕೊನೆಯ ಅಂಕವಾಗಿ ಗೌರ್ನರನ್ನು ಭೇಟಿ ಮಾಡುವುದೊಂದು ಬಾಕಿ. ಅದಕ್ಕೂ ಅವಳು ತೀವ್ರ ಸಿದ್ಧತೆ ನಡೆಸಿದಳು. ಸಾಮಾನ್ಯ ಸ್ತ್ರೀಗೆ ಗೌರ್ನರ ಭೇಟಿ ಸುಲಭಸಾಧನವಲ್ಲವೆಂಬ ಅಂಶವನ್ನು ತಿಳಿದಿದ್ದ ಅವಳು ಅದಕ್ಕೂ ಜಗ್ಗಲಿಲ್ಲ. ಹಠ ಹೊತ್ತು ಪ್ರತಿನಿತ್ಯ ಅಲ್ಲಿಂದಿಲ್ಲಿಗೆ ಅಲೆದಾಡಿ ಹಾದಿ ಸವೆಸಿದನಂತರ ಅರ್ಧ ತಾಸಿನ ಭೇಟಿಗೆ ಅವಕಾಶದ ಕಾರುಣ್ಯ ಮುದ್ರೆ ಪರವಾನಗಿಗೆ ಬಿತ್ತು. ಅಷ್ಟರಿಂದಲೇ ಸಂತುಷ್ಟಳಾದ ಜಾಲಿ ಮೂನಿ ಗೌರ್ನರ ಆಸ್ಥಾನಕ್ಕೆ ಪದಾರ್ಪಣೆ ಮಾಡಿದಳು.

ಆಗ ಬೆಳಗಿನ ಒಂಭತ್ತರ ಸಮಯ.

ಪ್ರಾಂತೀಯ ಗೌರ್ನರ್ ಕಚೇರಿಯ ವಿಶೇಷ ಸಿಬ್ಬಂದಿ ತಲೆಬಾಗಿಲಿಂದ ಹಿಡಿದು ಒಳಾಂತರದವರೆಗೂ ರಾಜಭೋಗದಲ್ಲಿ ಬಹಳ ಮೆಹನತ್ತಿನಿಂದ ಕಾಣಿಸಿಕೊಳ್ಳುತಿದ್ದರು. ಭೇಟಿಯ ಪರವಾನಗಿ ಕೈಯಿಂದ ಕೈಗೆ ಚಲಿಸಿ ಅವಳನ್ನು ನಿರಾತಂಕವಾಗಿ ಆಸ್ಥಾನವನ್ನು ಮುಟ್ಟಿಸಿತು.

ಗೌರ್ನರ್ ಮುಕ್ತಮನದಿಂದ ಅವಳನ್ನು ಬರಮಾಡಿಕೊಳ್ಳುವಷ್ಟು ಉದಾರತೆ ತೋರಿದ. ಅವಳು ತನ್ನ ಭೇಟಿಗಾಗಿ ಬೇಡಿಕೆಯನ್ನು ಮುಂದಿಡುವ ಮೊದಲೇ ಮೊಕದ್ದಮೆಯ ವಿದ್ಯಮಾನ ಮನೋಗತವಾದ ಅಂಶ. ಅವಳ ಹೇಳಿಕೆ ಮತ್ತು ಬೇಡಿಕೆ ಒಟ್ಟೊಟ್ಟಾಗಿ ದ್ವಿದಳ ಧಾನ್ಯದಂತೆ ಹೊಂದಿಕೊಂಡಿದ್ದುವು. ಅವಳು ಅತೀ ವಿನಯವಂತಿಕೆಯಿಂದ ಕರುಣ ಕಾತರ ಕಂಠದಲ್ಲಿ ಪೋಲೀಸರ ಕೈವಾಡವನ್ನೂ, ನ್ಯಾಯಾಲಯದ ದೃಷ್ಟಿ ದೋಷವನ್ನೂ, ರಾಜಕಾರಿಣಿಗಳ ಕುತಂತ್ರವನ್ನೂ ಮನದಟ್ಟಾಗುವಂತೆ ವಿವರಿಸಿದಳು. ಸ್ವೀಕೃತ ಅರ್ಜಿ ಮೇಜಿನ ಮೇಲೆ ಮಂಡಿಸಿತು. ಗೌರ್ನರ್ ಹಾಳೆಗಳನ್ನು ಒಂದೊಂದಾಗಿ ತಿರಿವಿ ಹಾಕಿದ. ಆದರೆ, ಆ ವೇಳೆಗಾಗಲೇ ಗೌರ್ನರಿಗೂ ಮೊಕದ್ದಮೆಯ ಕುಟಿಲ ಸಮಸ್ಯೆಯನ್ನು ಬಿಡಿಸಲಾಗದಷ್ಟು ಕಾನೂನಿನ ಸುಭದ್ರಕೋಟೆ ಗಗನಚುಂಬಿಯಾಗಿ ಬೆಳೆದುಕೊಂಡಿತ್ತು. ಮೊಕದ್ದಮೆಯನ್ನು ಆದ್ಯಂತವಾಗಿ ಪರಿಶೀಲಿಸಿದ ಮೇಲೆ ಮರಣದಂಡನೆಯ ಕರಾಳ ಕ್ರಮದಿಂದ ತಪ್ಪಿಸಿ ಜೀವಾವಧಿ ಶಿಕ್ಷೆಗೆ ಒಳಪಡಿಸುವುದು ಮಾತ್ರ ಗೌರ್ನರಿಗೆ ಸಾಧ್ಯವಾಯಿತು. ಆತ ಅದಷ್ಟನ್ನು ನಿರ್ವಂಚನೆಯಿಂದ ನಿರ್ವಹಿಸಿದ ಎಂಬುದು ಜಾಲಿ ಮೂನಿಗೆ ಮನದಟ್ಟಾದರೂ ಸಂತೃಪ್ತಿ ಮೂಡಲಿಲ್ಲ. 'ಹೋಗಲಿ, ಇನ್ನಾದರೂ ನಾನು ಹಗಲಿರುಳು ನಿರಾಳವಾಗಿ ಉಸಿರಾಡಬಹುದು. ಅಷ್ಟಕ್ಕಾದರೂ ಅವಕಾಶ ಒದಗಿಸಿದಕ್ಕಾಗಿ ಆತನಿಗೆ ಕೃತಜ್ಞಳಾಗಿರಬೇಕು' ಎಂದು ತನ್ನನ್ನು ತಾನೇ ಸಮಾಧಾನಿಸಿಕೊಂಡಳು. ಅಲ್ಲಿಗೆ ಅವಳ ಕಾರ್ಯಭಾರ ಮುಗಿಯಲಿಲ್ಲ; ಇನ್ನೊಂದು ರೀತಿಯಲ್ಲಿ ಮೊಳಕೆಯೊಡೆಯಿತು. ಜೀವಾವಧಿ ಶಿಕ್ಷೆಯು ಕಾಲಾವಕಾಶ ಕಾರ್ಯಚತುರತೆಗೂ ಸ್ವರ್ಣಾವಕಾಶ ನೀಡಿತು ಎನ್ನಬಹುದು. ಅವಳು ಪುನಃ ರಾಜಕೀಯ ಮುಖಂಡರನ್ನೂ, ಹಿರಿಯ ವಕೀಲರನ್ನೂ ಭೇಟಿ ಮಾಡಲು ಆರಂಭಿಸಿದಳು ಟಾಂ ಮೂನಿಯ ಗೆಳೆಯರ ಗುಂಪು ತಮ್ಮದೇ ಆದ ಕಾರ್ಯಸ್ಥಾನವನ್ನು ನಿರ್ಮಿಸಿಕೊಂಡಿದ್ದು ಆಗಾಗ ಅವಳಿಗೆ ಒತ್ತಾಸೆ ನೀಡುತಿತ್ತು. ಆದರೇನು ? ಹನುಮಂತನ ಬಾಲದಂತೆ ಬೆಳೆಯುತ್ತಲೇ ಇದ್ದ ಮೊಕದ್ದಮೆ ಮುಗಿಯುವ ಸೂಚನೆಯೇ ಕಾಣಿಸಲಿಲ್ಲ. ವರ್ಷಮಾಸಗಳು ವ್ಯರ್ಥವಾಗಿ ಕಳೆದು ಹೋದುವು. ಮಾನಸಿಕ ವೇದನೆ ವಯೋಧರ್ಮ ದೈಹಿಕ ಶಕ್ತಿಯನ್ನು ದಿನ

ದಿನಕ್ಕೂ ಕುಂದಿಸುತಿತ್ತು. ಹೊಸ ಹೊಸ ರೋಗರುಜೆಗಳು ಶರೀರಗತವಾದುವು. ಇನ್ನು ಮುಂದಿನ ಕಾರ್ಯ ನಿರ್ವಹಣೆ ತನ್ನಿಂದ ಅಸಾಧ್ಯ ಎನಿಸುವಷ್ಟು ಜೀವ ಸೋಲುವುದು. ಆದರೂ, ತಾನು ಚಿರನಿದ್ರೆ ಹೊಂದುವ ಮುನ್ನ ಎಂದಾದರೂ ಮಗನ ಬಿಡುಗಡೆಯಾದರೆ ಸಾಕೆಂಬ ಆಸೆಯಿಂದ ಸಾಧನೆಯನ್ನು ಬಹಳ ಕಷ್ಟದಿಂದ ಮುಂದುವರಿಸಿದಳು ಜಾಲಿ ಮೂನಿ.

ಗೌರ್‍ನರ್ ಟಾಂ ಮೂನಿಗೆ ಜೀವದಾನ ಮಾಡಿದ ಸುದ್ದಿ ಪತ್ರಿಕೆಗಳಲ್ಲಿ ಪ್ರಚುರವಾದಾಗ ಮತ್ತೊಮ್ಮೆ ಜನಜನಿತವಾದ ವಿಚಾರವಿಪ್ಲವ ಕ್ರಮ ಕ್ರಮೇಣ ಹಳಿಯದಾಗುತ್ತ ಬಂದು ಹೊರ ಜಗತ್ತಿನ ಮನೋರಂಗದಿಂದ ಸಂಪೂರ್ಣ ಅಳಿಸಿಯೇ ಹೋಯಿತು.

* * * *

ವೃದ್ಧ ಜನನಿಯ ದುಃಖ ದುಗುಡಗಳ ವ್ಯಾಪ್ತಿಯಲ್ಲಿ ಹರಿದಾಡಿದ ಬಿಸುಸುಯ್ಲು ಬೀಸುಗಾಳಿಯೊಂದಿಗೆ ಸದ್ದಿಲ್ಲದೆ ತೇಲಿ ಹೋಗುತಿತ್ತು. ಮೇಲಾಗಿ, ಆರ್ಥಿಕ ಅಡಚಣೆ–ಅನಾರೋಗ್ಯ ಒಟ್ಟೊಟ್ಟಾಗಿ ದಾಳಿ ನಡೆಸುತ್ತವೆ. ಅತೀ ನಿರ್ದಯತೆಯಿಂದ ದಕ್ಷಾದಕ್ಷತೆಗಳನ್ನೆಲ್ಲಾ ಏಕರೀತಿಯಲ್ಲಿ ಕೊಚ್ಚಿಕೊಂಡು ಹೋಗುವುದರಲ್ಲೇ ನಿರತವಾಗಿತ್ತು ವಿಚಿತ್ರ ಕಾಲಮಾನ.

ಜಾಲಿ ಮೂನಿಯು ತನ್ನೆಲ್ಲಾ ಶಕ್ತಿ ಕುಂದುತಿದ್ದರೂ ಹಿಂತೆಗೆಯದೆ ಒಂದಲ್ಲ ಒಂದು ಪ್ರಯತ್ನದಲ್ಲಿ ತೊಡಗಿರುತಿದ್ದುದೇ ವಿಶೇಷ. ತನ್ನ ಕೊನೆಯಿಲ್ಲದ ಪ್ರಯತ್ನಕ್ಕೆ ಇದ್ದೊಂದು ವಾಸದ ಕುಟೀರವನ್ನು ಮಾರಿಕೊಳ್ಳಲೂ ಹಿಂತೆಗೆಯಲಿಲ್ಲ; ಅದೊಂದೇ ಅವಳಿಗಿದ್ದ ದಾರಿ.

ಪ್ರಾಸಿಕ್ಯೂಶನ್ನು ಯಾರ್‍ಯಾರಿಗೆ ಹಲವಾರು ದಿನಗಳತರಬೇತಿ ನೀಡಿ ಸಾಕ್ಷಿಗಳನ್ನಾಗಿ ಪರಿವರ್ತಿಸಿದ್ದರೋ ಅವರೆಲ್ಲಾ ಕಾಲಕ್ರಮದಲ್ಲಿ ಹಿಡಿತ ತಪ್ಪಿ ಸ್ವೇಚ್ಛಾಮನೋವೃತ್ತಿಯಿಂದ ತಮ್ಮತಮ್ಮ ಸಾಕ್ಷ್ಯದ ಕತೆಯನ್ನೆಲ್ಲಾ ಬಹಿರಂಗವಾಗಿ ಹೇಳಿಕೊಳ್ಳುತ್ತ ನಗೆನಾಟಕ ಎಬ್ಬಿಸುತಿದ್ದರು. "ಐಡೆಂಟಿಫಿಕೇಶ್ರ್ ಪೆರೇಡ್"ನಲ್ಲಿ ಅಪರಾಧಿಯನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತೆ ಸೆರೆಮನೆಯಲ್ಲಿ ಗುಪ್ತವಾಗಿ ನೋಡಿಸಲಾಗಿದ್ದ ಸಾಕ್ಷಿಗಳೂ ಅದರ ಕತೆಯನ್ನು ಅತ್ಯಂತ ಸ್ವಾರಸ್ಯವಾಗಿ ಹೇಳತೊಡಗಿದ್ದರು. ವಿಷಯ

ಬಾಯಿಂದ ಬಾಯಿಗೆ ಸರಾಗವಾಗಿ ಹಬ್ಬಿ ಬಿದಿರು ಮೆಳೆಯಂತೆ ಅತ್ತಿತ್ತ ಹರೆಗೈ ಚಾಚಿ ನಗ್ನನೃತ್ಯವನ್ನು ಸ್ವಚ್ಛಂದವಾಗಿ ಪ್ರದರ್ಶಿಸುತಿತ್ತು ! ಒಂದು ಕಾಲದಲ್ಲಿ ಈ ಎಲ್ಲಾ ಪ್ರಾಕಾರಗಳಲ್ಲೂ ಕೈ ಕೈ ಹಚ್ಚಿ ಕರುಣೆಯನ್ನು ಬದಿಗಿಟ್ಟು ಅತ್ಯಂತ ಹುರುಪಿದಿಂದ ಕೆಲಸಮಾಡಿದ್ದ ಪ್ರಾಸಿಕ್ಯೂರ್ಶ ಸತ್ಯ ಸಾಕಾರತೆಯ ಮುಂದೆ ಇಂಗು ತಿಂದ ಮಂಗನಂತಾಯಿತು; ಆದರೂ ಮೊಕದ್ದಮೆಯ ಜಾಲ ಸರಿಪಡಿಸಲಾಗದಷ್ಟು ಹದಗೆಟ್ಟದ್ದು ಸರ್ವೋಚ್ಛ ಸಮಾಧಾನ.

ಜಾಲಿ ಮೂನಿಗೆ ತನ್ನ ಮಗ ನಿರಪರಾಧಿ ಎಂಬುದು ಲೋಕಕ್ಕೇ ಸಾಬೀತಾಗಿರುವಾಗಲೂ ಸೆರೆಮನೆಯಲ್ಲಿ ಅನ್ಯಥಾ ಕೊಳೆಯುತ್ತಿರುವ ಸಂಕಟ ....ನ್ಯಾಯಾರ್ಜನೆಯ ರೊಚ್ಚು. ಆದರೆ, ಅಷ್ಟೇ ಅಶಕ್ತ ಪರಿಸ್ಥಿತಿ.

ಏತನ್ಮಧ್ಯೆ,

ಸೆರೆಮನೆಯಲ್ಲಿದ್ದ ಮಗನನ್ನು ಕಂಡು ಬರಲು ಉದ್ದೇಶಿಸಿದಳು ತಾಯಿ. ತನ್ನ ಕಾರ್ಯಭಾರದಿಂದ ಈಚೆಗೆ ಅವನನ್ನು ನೋಡಿ ಬರಲು ಸಾಧ್ಯವಾಗಿರಲಿಲ್ಲ. ಐಕಿಲ್ ಬೆಟ್ಟ ಸರ್ಕಲ್ಲಿನ ಬಳಿ ಬಸ್ಸು ಹಿಡಿದಾಗ ಹೊತ್ತು ಇನ್ನೂ ಎಂಟರ ಅಂಚಿನಲ್ಲಿತ್ತು. ಅಲ್ಲಿಂದ ಜೈಲಿನ ಮಹಾದ್ವಾರಕ್ಕೆ ಇನ್ನೆರಡು ಬಸ್ಸುಗಳನ್ನು ಹಿಡಿಯಬೇಕು. ಪ್ರತಿ ಬಸ್‌ಸ್ಟಾಪಿನಲ್ಲೂ ಹತ್ತು ನಿಮಿಷಗಳಿಗೊಂದು ಬಸ್ಸು ಹೊರಡುತ್ತಾದರೂ ಜನರ ಅತೀವ ನೂಕು ನುಗ್ಗಲಾಟ. ಸಶಕ್ತರು ಮೊದಲೇ ನುಗ್ಗಿ ಬಿಡುವುದರಿಂದ ಅಶಕ್ತರು ಹಿಂದುಳಿಯುವುದು ಅನಿವಾರ್ಯ. ಎರಡನೇ ಬಸ್‌ಸ್ಟಾಪಿನಲ್ಲಿ ಕಾದು ನಿಂತಿರುವಂತೆಯೇ ಅನೇಕ ಬಸ್ಸುಗಳು ಹೊರಟುವು. "ಕ್ಯೂ"ನಲ್ಲಿ ನಿಂತಿದ್ದರೂ ಆಕೆಯ ನಿಧಾನಗತಿ ಹಿಂದಕ್ಕುಳಿಸಿತು. ಅದನ್ನು ಕಂಡು ಮರುಕಗೊಂಡ ತನ್ವಂಗಿಯೊಬ್ಬಳು ಅವಳಿಗೆ ಕೈಯಾಶ್ರಯ ನೀಡಿ ಮುಂದಿನ ಬಸ್ಸನ್ನು ಹಿಡಿಯಲು ಸಹಾಯ ಮಾಡಿದಳು. ಅನಂತರದ ಪಯಣ ಸುಖಕರವಾಗಿತ್ತು. ಆ ಬಸ್ಸಿನಿಂದಿಳಿದು ಮೂರನೆಯ ಬಸ್ಸು ಹಿಡಿದಾಗ ಜನ ಒತ್ತಡವಿಲ್ಲದೆ ಕಾಯುವ ಅವಶ್ಯಕತೆ ಬೀಳಲಿಲ್ಲ. ಜಾಲಿಮೂನಿ ಸೆರೆಮನೆಯ ಮಹಾದ್ವಾರದ ಅಭಿಮುಖವಾಗಿ ಪಯಣಿಸಿದಳು. ಚಿಂತೆಯ ಕೀಟ ಹೃದಯವನ್ನು ಭೈರಿಗೆಯಂತೆ ಕೊರೆಯುತಿತ್ತು. ಅಶ್ರುಲಿಪ್ತ ನಯನಗಳು ಮಂಜು

ಮಂಜಾಗುತಿದ್ದುವು. ಜೀವನಾಡಿಯಲ್ಲಿ ಹರಿದಾಡುವ ಬಿಸಿಯುಸಿರನ್ನು ಅದುಮಿ ಹಿಡಿದುಕೊಂಡು ಬಸ್ಸಿನಿಂದಿಳಿದಾಗ ನೆತ್ತಿ ಸುಡುವಷ್ಟು ಬಿಸಿಲು ಉರಿಯುತಿತ್ತು. ಬಸ್ಸಿನ ನಿಲ್ದಾಣದಿಂದ ಸೆರೆಮನೆ ಹೆಚ್ಚು ದೂರವೇನೂ ಇರಲಿಲ್ಲ. ಏಕರೀತಿಯ ನಡಿಗೆ ಸಾಗಿತು. ಶೀರ್ಣಿತ ಶರೀರ. ಜೀರ್ಣಿತ ಉಡುಪು; ಒಂದಕ್ಕೊಂದು ಆತ್ಮೀಯತೆಯನ್ನು ಬೆಳೆಸಿಕೊಂಡಂತಿತ್ತು.

ಸೆರೆಮನೆಯ ಮಹಾದ್ವಾರದ ಒಳಗಣ ಅಂಗಣದಲ್ಲಿ ವಾಮಾಂಗದ ನೇರಕ್ಕೆ ಜೈಲರನ ಆಫೀಸು. ಜಾಲಿಮೂನಿ ಅಲ್ಲಿಗೆ ಹೋದಾಗ ಜೈಲರ್ ಮೇಜಿನ ಮುಂದೆ ಮಂಡಿಸಿದ್ದ. ಅವಳು ತನ್ನ ಭೇಟಿಗೆಪೂರ್ವಭಾವಿಯಾಗಿ ಅಪ್ಪಣೆ ಕೇಳಿರಲಿಲ್ಲವಾದ್ದರಿಂದ ನೇರವಾಗಿ ಒಳಹೋಗಲು ಅಪ್ಪಣೆ ದೊರೆಯಲಿಲ್ಲ. ಅವಳು ಭೇಟಿಯ ಬೇಡಿಕೆಯನ್ನು ದೌವಾರಿಯ ಮುಖೇನ ಅವನಿಗೆ ಕಳುಹಿಸಿಕೊಟ್ಟಳು. ಮರುನಿಮಿಷದಲ್ಲಿ ಒಳಗಡೆ ಬರಲು ಅಪ್ಪಣೆ ದೊರೆಯಿತು. ಜಾಲಿಮೂನಿ ಒಳಹೋಗಿ ಕುರ್ಚಿಯಮೇಲೆ ಮಂಡಿಸಿದಳು. ಅವಳನ್ನೊಮ್ಮೆ ಆಪಾದಮಸ್ತಕವೂ ನಿಟ್ಟಿಸಿ ನೋಡಿ ಏನೋ ಒಂದು ರೀತಿಯ ಅಸಡ್ಡೆಯಿಂದ ಅಂದ,

"ನೀನು ಹೀಗೆ ಒಮ್ಮಿಂದೊಮ್ಮೆಲೇ ಬಂದು ಭೇಟಿಮಾಡಬೇಕೆಂದರೆ ಆಗದು. ಹಿಂದೆಯೇ ಅದಕ್ಕಾಗಿ ಬರೆದುಕೊಳ್ಳಬೇಕಾಗಿತ್ತು."

ಅವನ ಅಧಿಕಾರವಾಚನ ಮನವನ್ನು ಇರಿಯಿತು. ಜಾಲಿಮೂನಿ ಅವನನ್ನು ಅಲಕ್ಷ್ಯದಿಂದ ಒಂದೆರಡು ಕ್ಷಣ ದೃಷ್ಟಿಸಿ ನೋಡಿದಳು. ಹೃದಯ ರಂಗ ದಳ್ಳುರಿಯಿಂದ ಬೇಯುತಿತ್ತು. ಆದರೂ, ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಶಾಂತಸ್ಫುಟ ಸ್ವರದಲ್ಲಿ ನುಡಿದಳು,

"ಹೌದು........ನಾನು ಮೊದಲೇ ಬರೆದುಕೊಳ್ಳಬೇಕಾಗಿತ್ತು ನಿಜ; ಆದರೆ, ಅಷ್ಟೆಲ್ಲಾ ಸಹಾಯ ಹಸ್ತ ನೀಡಲು ನನಗೆ ಯಾರಿದ್ದಾರೆ? ಈ ಇಳಿವಯಸ್ಸಿನಲ್ಲಿ ನಾನಾದರೂ ಎಷ್ಟು ಕೆಲಸ ಮಾಡಿಯೇನು?"

"ಅದಕ್ಕೆ ಉತ್ತರಿಸಬೇಕಾದದ್ದು ನಾನಲ್ಲ. ಈ ಪ್ರಶ್ನೆ ಅಪ್ರಕೃತ."

"ಆದರೂ, ಕ್ರಮಬದ್ಧವಾದ ವ್ಯವಹಾರಕ್ಕೆ ಏನೆಲ್ಲಾ ಸೌಕರ್ಯಬೇಕೋ ಅದೆಲ್ಲಾ ನನ್ನ ಬಳಿಯಲಿಲ್ಲ ಎಂಬುದನ್ನು ನೀನು ಗಮನಿಸಲೇಬೇಕು!" ಎಂದಳು ಜಾಲಿಮೂನಿ. ಮಾನಸಿಕ ವಿಕ್ಷೋಭೆ ದೃಢವಾದ ಸ್ವರದಲ್ಲಿ

ಹೊಮ್ಮಿದಾಗ ಕಣ್ಣುಗಳಲ್ಲಿ ಕಳೆದುಳಿದ ಕಳೆಯೆಲ್ಲಾ ಕ್ರೋಢೀಕರಿಸಿದಂತೆ ಮಿನುಗಿದುವು.

ಜೈಲರ್ ಸುಸುಚಿಂತಿತನಂತೆ ಒಮ್ಮೆ ಅವಳತ್ತ ವೀಕ್ಷಿಸಿ ಸುಮ್ಮನಾದ. ಮೇಜಿನ ಮೇಲಿನ ಕಡತಗಳನ್ನು ತಿರುವಿಹಾಕುತ್ತ ಸ್ವಲ್ಪಹೊತ್ತು ಯೋಚಿಸಿ ನಂತರ ನುಡಿದ,

"ಸರಿ, ಆಯಿತಲ್ಲ. ಮುಂದಿನ ವಾರ ಬಾ. ಆಗ ನೋಡಲು ಅವಕಾಶ ದೊರೆಯುತ್ತೆ."

ಜಾಲಿ ಮೂನಿಗೆ ಆ ಮಾತಿನಿಂದ ಉಂಟಾದ ಪರಿತಾಪ ಅಷ್ಟಿಷ್ಟಲ್ಲ. ಅರ್ಥವತ್ತಾದ ದೃಷ್ಟಿಯಿಂದ ನೋಡುತ್ತ ವಿಶಾದಪೂರ್ಣವಾಣಿಯಲ್ಲಿ ಕೇಳಿದಳು,

"ನಿನಗೆ ನನ್ನ ಮಗ ನಿರಪರಾಧಿ ಎಂಬುದು ಗಮನಕ್ಕೆ ಬಂದಿದೆಯಷ್ಟೆ ?"

ಆಗ ಆ ಮಾತಿಗೆ ಏನುತ್ತರ ಹೇಳಬೇಕೋ ಅವನಿಗೆ ಹೊಳೆಯಲಿಲ್ಲ. ಕೈಯ್ಯಲ್ಲಿದ್ದ ಲೇಖನಿಯನ್ನು ಮೇಜಿನ ಮೇಲಿಟ್ಟು ನಿಸ್ಸಂಜ್ಞನಂತೆ ಕೆಲವು ಕ್ಷಣ ಸುಮ್ಮನಿದ್ದು ಆನಂತರ ನುಡಿದ,

"ನಿನ್ನ ಪ್ರಶ್ನೆಗೆ ನಾನು ಉತ್ತರಿಸಲಾರೆ." ತಲೆಯಾಡಿಸುತ್ತ ಮತ್ತೆ ಮುಂದುವರಿದ "ನೀನು ಮತ್ತು ನಿನ್ನ ಮಗ ತುಂಬ ಸಂತ್ರಸ್ತರೆಂಬುದನ್ನು ಬಲ್ಲೆ. ಅಂತಲೇ ನಿನಗಿಂದು ಅವನನ್ನು ನೋಡಲು ಅವಕಾಶ ನೀಡುವೆ. ಮುಂದೆ ಅವನನ್ನು ನೀನು ನೋಡಲೇಬೇಕಾದರೆ ಪೂರ್ವಭಾವಿಯಾಗಿ ಬರೆದು ಕೊಳ್ಳಲೇಬೇಕು !"

"ಆಯಿತು. ತುಂಬ ವಂದನೆಗಳು !"

ಜಾಲಿ ಮೂನಿ ಎದ್ದು ನಿಂತಳು.

ಅವನು ಅದಾವ ಚಿಂತನೆಯಲ್ಲಿ ಮುಳುಗಿದ್ದನೋ ಮಂತ್ರಮುಗ್ಧನಂತೆ ಕುಳಿತೇ ಇದ್ದ.

"ನಾನಿನ್ನು ಹೊರಡುವೆ. ಈಗಲೇ ಪರವಾನಗಿ ಕೊಟ್ಟರೆ ತುಂಬ ಉಪಕಾರ !"

"ಹೌದು, ಕೊಡುವೆ. ಒಂದು ಕ್ಷಣ ಕುಳಿತುಕೋ," ಎನ್ನುತ್ತ

ಮೇಜಿನಮೇಲಿನ ಬೆಲ್ಲನ್ನು ಒತ್ತಿದ. ಅದರ ಟಂಟಣಿನಾದ ಹೊರಗಡೆ ಯಿದ್ದ ದೌವಾರಿಗೆ ಕರೆ ನೀಡಿತು. ಅವನು ಒಳ ಬಂದು ಅಪ್ಪಣೆಗಾಗಿ ಕಾದು ನಿಂತ. ಅಧಿಕಾರಿ ಪರವಾನಗಿಗೆ ಸಹಿಹಾಗಿ ಅವಳನ್ನು ಬಂದೀ ಖಾನೆಗೆ ಕರೆದೊಯ್ಯಲು ಅಪ್ಪಣೆ ಇತ್ತು ಜಾಲಿ ಮೂನಿಯನ್ನು ಅವನೊಂದಿಗೆ ಹೋಗಲು ಬಿನ್ನೈಸಿಕೊಂಡ. ಅವಳು ಸಂವೇದನಾಶೀಲತೆಯಿಂದ ವಂದನೆ ಸಲ್ಲಿಸಿ ಹೊರಟಳು.

ಆ ಪರವಾನಗಿ ಅಲ್ಲಿಂದ ದ್ವಾರಪಾಲಕನ ಮೂಲಕ ಇನ್ಸ್‌ಪೆಕ್ಟರನ ಕೈ ಸೇರಿತು. ಅವನು ಜಾಲಿ ಮೂನಿಯನ್ನು ಒಳಗಡೆ ಬರಮಾಡಿಕೊಂಡ.

"ಅವನನ್ನು ಇಲ್ಲಿಗೇ ಬರಮಾಡಿಸುವೆ. ನೀನು ಅದುವರೆಗೂ ಇಲ್ಲೇ ಕುಳಿತಿರು."

"ಅಂದರೆ, ನಿನ್ನ ಮುಂದೆಯೇ ನಮ್ಮ ಮಾತುಕತೆ ನಡೆಯಬೇಕೆ ?"

"ಹೌದು !"

"ಅಷ್ಟೆಲ್ಲಾ ನಿರ್ಬಂಧವೇಕೆ ? ನನ್ನ ಮಗ ನಿರಪರಾಧಿ ಎಂಬುದು ಇಡೀ ರಾಷ್ಟ್ರಕ್ಕೆ ವಿಧಿತವಾಗಿರುವಾಗ ನಿನ್ನ ಮನದಲ್ಲೇಕೆ ಸಂಶಯ ಉಳಿದಿದೆ ?"

ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ಅವನು ಒಂದು ಕ್ಷಣ ತಬ್ಬಿಬ್ಬಾದನೇನೋ. ಅನಂತರ ಚೇತರಿಸಿಕೊಂಡಂತೆ ನುಡಿದ,

"ಅದೇನೇ ಇರಲಿ, ನಾನು ನಿರ್ವಹಿಸುತ್ತಿರುವುದು ನನ್ನ ಕರ್ತವ್ಯ."

"ನನಗೊತ್ತು ! ಆದರೂ, ನಿನ್ನ ಹೃದಯದಲ್ಲಿ 'ದಯೆ' ಎಂಬುದು ಸ್ವಲ್ಪವಾದರೂ ಇದೆಯೆಂದು ನಾನು ಭಾವಿಸಿದ್ದೆ !"

"ಅದು ನಿನ್ನ ತಪ್ಪು !" ಕಟು ನುಡಿಯ ಹಿಂದೆ ತಿರಸ್ಕಾರದ ನಗು ಹೊಮ್ಮಿತು-ಸಣ್ಣತನವನ್ನು ತೋರುವಂತೆ.

"ಇರಲಿ, ಎಲ್ಲಾ ಮನುಷ್ಯರೂ ತಪ್ಪುಮಾಡುತ್ತಾರೆ. ಅದಕ್ಕೆ ನೀನೇನೂ ಹೊರತಲ್ಲ !"

ಅವನು ಸ್ವಲ್ಪಸಮಯ ಅವಳ ಉಜ್ವಲ ದೃಷ್ಟಿಯತ್ತ ನೋಟ ಹರಿಸಿ ನಸು ಲಜ್ಜಿತನಂತೆ ದೃಷ್ಟಿಯನ್ನು ದಸ್ಕತ್ತಿನ ಮೇಲೆ ಹರಿಸಿದ. ಆವುದೋ ಕಂಡರಿಯದ ಕೀಟವೊಂದು ಕೊರೈಸುತ್ತ ಮನವನು

ೋಕ್ಕಂತಾಯಿತು. ಏನು ಮಾಡುವುದೆಂದು ಯೋಚಿಸುವುದರೊಳಗಾಗಿ ಅವಳ ಪ್ರಶ್ನೆ ತೊಟ್ಟು ಕಳಚಿದಂತೆ ಹೊರಬಿತ್ತು,

"ಏನಪ್ಪಾ, ಏನಾದರೂ ಯೋಚಿಸುತಿದ್ದೀಯೇನು ? ಅಷ್ಟೊಂದು ಕಾನಿಕೆಯಾದರೂ ನಿನ್ನಲ್ಲಿ ಇದೆಯೋ ?"

ಇನ್ಸ್‌ಪೆಕ್ಟರ್ ಎಂದೂ ಅಂತಹ ಕಟು ಪ್ರಶ್ನೆಯನ್ನು ಎದುರಿಸಿರಲಿಲ್ಲ ವೇನೋ. ಒಮ್ಮೆಲೇ ಚಬುಕಿನೇಟು ತಿಂದವನಂತೆ ವಿಡುಕಿಬಿದ್ದ. ಕಣ್ಣು ಗಳಲ್ಲಿ ನಸುಕೋಪದ ಕಿಡಿಗಳು ಮೂಡಿದುವು. ಆದರೂ, ಅವಳ ತಾಯ್ತ ನದ ನೋವು-ಸಂಕಟಗಳು ಮೂರ್ತಿಮತ್ತಾದಂತೆ ತೋರಿ ಏನೋ ಒಂದು ಬಗೆಯ ಮಾರ್ದವ ಭಾವನೆಯಿಂದ ಬಂಧಿತನಾದ. ಮನದಲ್ಲಿ ನಸು ಕಾರುಣ್ಯಧಾರೆ ತನಗರಿಯದಂತೆಯೇ ಮೆಲ್ಲನೆ ಹರಿದು ಬಂತು.

"ದೇವರ ದಯದಿಂದ...." ಎಂದಷ್ಟು ಹೇಳಿ ಪರವಾನಗಿಗೆ ಕರಕರನೆ ಗೀಚಿ ತನ್ನ ಸಹಿಯನ್ನು ಹಾಕಿದ. ಮುಖದಲ್ಲಿ ಯಾವ ಭಾವಪ್ರದರ್ಶನವೂ ಮೂಡಲಿಲ್ಲ. ಕಣ್ಣುಗಳಲ್ಲಿ ಗಂಭೀರತರವಾದ ನಿಃಸಂಜ್ಞತೆ ನೆಲೆಸಿತ್ತು.

"ತುಂಬ ವಂದನೆಗಳು !"

ಅವನು ಪ್ರತಿವಂದನೆಯನ್ನು ಸಲ್ಲಿಸಿದ. ಮೂಕಶೋಕ ಮನವನ್ನು ಆವರಿಸಿತ್ತು.

* * * *

ಟಾಂ ಮೂನಿ ಸೆರೆಮನೆಯ ಆಸ್ಪತ್ರೆಯಲ್ಲಿ ಮೇಲ್‌ನರ್ಸ್ ಆಗಿ ಕೆಲಸ ನಿರ್ವಹಿಸುತಿದ್ದ. ಆ ಆವರಣಕ್ಕೆ ಹೆಜ್ಜೆಯಿಟ್ಟಮೇಲೆ ಅಲ್ಲಿನ ಕೆಲಸ-ಕಾರ್ಯ ಮತ್ತು ವಾತಾವರಣ ನೊಂದ ಮನಃಪ್ರಾಣಗಳಿಗೆ ತುಸು ನೆಮ್ಮದಿಯನ್ನು ನೀಡಿದ್ದುವು. ಆದರೂ, ಅಂತರ್ನಿಹಿತ ಚಿಂತೆ-ಸಂಕಟಗಳ ಅವ್ಯಾಹತ ಧಾಳಿ; ಇನಿತೂ ಬಿಡುವಿಲ್ಲದ ಕೆಲಸ; ನಿರ್ಬಂಧಿತ ಜೀವನ; ಯಾವ ಧ್ಯೇಯೋದ್ದೇಶಕ್ಕಾಗಿ ಅಹರ್ನಿಶಿ ಶ್ರಮಿಸುತಿದ್ದನೋ ಅದರ ಗಂಧವೇ ಇಲ್ಲ. ಮುಂದಾದರೂ ಲಭಿಸುತ್ತದೆಂಬುದು ಕನಸಿನ ಮಾತು. ಇನ್ನು ಮುಂದೆ ಯಾವರೀತಿಯ ಶ್ರಮ ಸಾಧನೆ ಕೈಕೊಳ್ಳಬೇಕೆಂಬುದು ಅರ್ಥವೇ ಆಗುತ್ತಿಲ್ಲ. ಮನಸ್ಸು-ಮಸ್ತಿಷ್ಕಗಳು ಆಲಸ್ಯದ ಬೀಡಾಗಿ

ದ್ದುವು. ಎಲ್ಲೋ ಅಲಕ್ಷಿತ ಜಡಿಮೆ-ಇನ್ನೆಲ್ಲೋ ಅರಕ್ಷಿತ ರುಜೆ ಓಡೋಡಿ ಬಂದು ಮೈಯ್ಯನ್ನು ವ್ಯಾಪಕವಾಗಿ ಆವರಿಸಿ ಬಿಟ್ಟವೆ. ಒಂದೊಂದು ಘಳಿಗೆಯನ್ನು ಕಳೆಯುವುದೂ ರಂಗಣ-ರಿಂಗಣವೆನಿಸುವಷ್ಟು ಕಿನಿಸಿಗೆ ಮಾನಸಿಕ ಸ್ಫೂರ್ತಿ, ದೈಹಿಕ ಶಕ್ತಿ ದಿಕ್ಕು ದಿಕ್ಕಿಗೆ ಪಲಾಯನ ಬೆಳಸುತ್ತಿವೆ. ಕಣ್ಣಾಲಿಗಳಲ್ಲಿ ಬೆಳಗುತಿದ್ದ ಉಜ್ವಲ ಕಾಂತಿ; ತುಟಿಗಳಲ್ಲಿ ಅನುಗಾಲವೂ ಮಿನುಗುತಿದ್ದ ಅಮಾಯಕ ನಗೆ ಮಾಯವಾಗಿ ಎಂದೋ.

ಅವನು ಹೊಸ ರೋಗಿಯೊಬ್ಬನ ಅನುಕೂಲತೆಗಳನ್ನು ಕಲ್ಪಿಸಿ ಕೊಡುತ್ತಿರುವಾಗಲೇ ತಲೆಬಾಗಿಲಿಂದ ಸಹದಾದಿಯ ಮುಖೇನ ಆಗಮಿಸಿದ ಚೀಟಿಯೊಂದು ಹಸ್ತಗತವಾಯಿತು. ಮಡಿಕೆಯನ್ನು ಬಿಚ್ಚಿ ಅಕ್ಷರಗಳ ಮೇಲೆ ಕಣ್ಣಾಡಿಸಿದ. ಗುಲಾಬಿವರ್ಣದ ಕಾಗದದ ಮೇಲೆ ಹಸುರು ಮಸಿಯು ಹರಿದಿತ್ತು. ಹಸ್ತಾಕ್ಷರ ತಾಯಿಯದು.

"ನಿನ್ನ ಭೇಟಿಗಾಗಿ ನಾನು ಬಂದಿರುವೆ."

ಟಾಂ ಮೂನಿ ಅತ್ಯಂತ ಹರ್ಷಿತನಾಗಿ ತನ್ನ ಉತ್ತರಾರ್ಧ ಕಾರ್ಯ ಭಾರವನ್ನು ಬೇರೊಬ್ಬ ಖೈದಿ ನರ್ಸ್‌ಗೆ ವಹಿಸಿಕೊಟ್ಟು ತಲೆಬಾಗಿಲತ್ತ ಧಾವಿಸಿದ. ಬಹಳ ದಿನಗಳಿಂದ ಕಾಣದ ಸ್ಫೂರ್ತಿ ಅದೆಷ್ಟು ಬೇಗ ಮೈಯ್ಯನ್ನು ಆವರಿಸಿತೋ, ಕೆಲವೇ ಕೆಲವು ಕ್ಷಣಗಳಲ್ಲಿ ಅನುಪಮ ಆನಂದ ಕಣ್ಣು-ಮುಖಗಳಲ್ಲಿ ಪ್ರಕಟಗೊಂಡಿತು. ವಿವರ್ಣವಾಗಿದ್ದ ಶುಷ್ಕ ತುಟಿಗಳಲ್ಲಿ ಎಳಿನಗು ಹರಿದಾಡಿತು.

ಕಲ್ಲು ಬೆಂಚಿನ ಮೇಲೆ ಮಗನಿಗಾಗಿ ಕಾದು ಕುಳಿತಿದ್ದ ಜಾಲಿ ಮೂನಿ ಅತ್ಯಂತ ಸಂಕಟದ ಗಣಿಯಾಗಿ ಮಗನನ್ನು ನಿಟ್ಟಿಸಿದಳು. ಕಲ್ಲು ಹೊತ್ತಂತೆ ಭಾರವಾಗಿದ್ದ ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಿತು. ಎರಡೂ ಕೈಗಳಿಂದ ಅಪ್ಪಿ ಹಿಡಿದುಕೊಂಡು ಆತ್ಮೀಯ ಆಲಿಂಗನ ನೀಡಿ, ಹೂ ಮುತ್ತನ್ನಿಟ್ಟು ನುಡಿದಳು.

"ಎಷ್ಟೊಂದು ಸೊರಗಿದ್ದಿ ಮಗನೇ !"

"ವಿಧಿ.....!"

"ಇದು ವಿಧಿ ನಿಯಮವಲ್ಲ ಮಗೂ ! ಕೇವಲ ಕಿಡಿಗೇಡಿತನ ! ಅಸೂಯೆ ! ಅಸಂಬದ್ಧ !"

"ಏನಿದ್ದರೂ ಎಲ್ಲಾ ವಿಧಿಯ ಶಾಪ !"

"ಗ್ರಹಚಾರ !"

ಟಾಂ ಮೂನಿ ಭಾರವಾದ ಉಸಿರನ್ನು ಹೊರ ಹರಿಯಬಿಟ್ಟ.

"ನಿನ್ನನ್ನು ಈ ಸ್ಥಿತಿಯಲ್ಲಿ ನೋಡುವುದೇ ನನಗೆ ಸಂಕಟ. ನಿನ್ನಂತಹ ಪ್ರತಿಭಾಶಾಲಿಯ ವಯೋಮಾನ ಈ ರೀತಿಯಲ್ಲಿ ವ್ಯರ್ಥವಾಗುತ್ತಿರುವುದು ಎಂಬ ಅನ್ಯಾಯ !"

"ಹೌದು ! ವಾದವಿವಾದಗಳಿಂದ ವೃಥಾ ಕಾಲವ್ಯಯ. ಒಮ್ಮೆ ಮರಣದಂಡನೆ' ಎಂದಾಗ ಉಂಟಾಗಿದ್ದ ಕಳವಳ ಕಾತರತೆಗಳಿಗಿಂತ ಜೀವಾವಧಿ ಶಿಕ್ಷೆ'ಗೆ ಇಳಿಸಿದಾಗ ಉಂಟಾದ ಆತಂಕವೇ ಹೆಚ್ಚು ! ಆದಷ್ಟು ಬೇಗನೆ ಈ ಪ್ರಕರಣ ಮುಗಿದುಹೋದರೆ ಸಾಕು !"

"ನಿನ್ನ ಅಮೂಲ್ಯವಾದ ಸಲಹೆ-ಶ್ರಮದಾನವೆಲ್ಲಾ ಅನ್ಯಾಯವಾಗಿ ಕಳೆದು ಹೋಯಿತು. ಕೂದಲೆಲ್ಲಾ ತೀರ ಬೆಳ್ಳಗಾಗಿದೆ, ನಿನ್ನ ಸ್ಫೂರ್ತಿ ಹೀಗೆ ವ್ಯರ್ಥವಾಗುತ್ತೆ ಎಂದು ನಾನು ಭಾವಿಸಲೇ ಇಲ್ಲ. ನಮ್ಮ ಭಾಗದ ದೈವ ಎಷ್ಟೊಂದು ಕ್ರೂರಿ !"

"..........."

ಟಾಂ ಮೂನಿ ಏನೋ ಹೇಳಲು ಬಯಸಿದ. ಆದರೆ, ತುಟಿಗಳು ಬಿರಿಯಲೊಲ್ಲವು. ನಿಜ್ಸಂಜ್ಞನಂತೆ, ಅಭಿಭೂತನಂತೆ ಚಿಂತಾಕ್ರಾಂತನಾದ. ಮನಃಪ್ರಾಣಗಳು ನೊಂದು ನೋವಿನ ಬೀಡಾಗಿದ್ದುವು.

ಅವಳು ಅಶ್ರುಪೂರ್ಣಲೋಚನಗಳಿಂದ ನೋಡುತ್ತ ಮುಂದುವರಿದಳು,

"ನಾನು ಇದುವರೆವಿಗೆ ಹೊಡೆದಾಡಿದ್ದೆಲ್ಲ ವ್ಯರ್ಥವಾಗಲಿಲ್ಲ. ಮುಖ್ಯವಾಗಿ ಜೀವ ಉಳಿಯಿತು, ಸಾಕು. ಮುಂದಾದರೂ, ನಾನು ಸುಮ್ಮನೆ ಕೂಡುವವಳಲ್ಲ, ಈ ಇಡೀ ಪ್ರಕರಣವನ್ನೇ ಪುನರ್ ಪರಿಶೀಲಿಸಲು ಗೌರ್ನರಿಗೆ ಅರ್ಜಿ ಹಾಕಿಕೊಂಡಿರುವೆ. ನನ್ನ ಜೀವಿತದಲ್ಲಿ ನೀನು ಹೇಗಾದರೂ ಬಿಡುಗಡೆ ಹೊಂದಿದರೆ ಸಾಕು, ಇನ್ನೇನೂ ಬೇಡ."

"ಅದೇ ಈಗ ಅನುಮಾನ" ಎಂಬಂತೆ ಗಂಭೀರಭಾವ ತಳೆದ ಟಾಂ ಮೂನಿ ನಿಧಾನವಾಗಿ ಅಂದ "ಹೇಗಿದ್ದರೂ ಜೀವಾವಧಿ ಶಿಕ್ಷೆ ಅನುಭವಿ

ಸುವುದು ಇದ್ದೇ ಇದೆ. ಅಷ್ಟರೊಳಗಾಗಿ ಪ್ರಯತ್ನ ಫಲಿಸಿದರೆ ಪುಣ್ಯ. ನನಗಂತೂ ಈ ಪ್ರಕರಣದಿಂದ ಬೇಸರವಾಗಿ ಬಿಟ್ಟಿದೆ. ದೇವರು ನನಗೇಕೆ ಈ ಶಿಕ್ಷೆ ಕೊಟ್ಟ ಎಂಬುದೇ ಅರ್ಥವಾಗುತ್ತಿಲ್ಲ."

ದನಿ ಎದೆಯಾಳದಿಂದ ಸಂಕಟ ಪೂರ್ವಕವಾಗಿ ಹರಿದು ಬಂದಿತು–ಮುಖಬಿಂಬ ನಸುಗೆಂಪು ತಳೆಯುವಂತೆ.

ಆ ಮಾತು ಹೃದಯಾಂತರಾಳದಲ್ಲಿ ಕೈಯಾಡಿಸಿತು. ಅದುವರೆಗೆ ಹಿಡಿದಿದ್ದ ಹತೋಟಿ ಸ್ವಲ್ಪ ತಪ್ಪಿತೇನೋ. ಅವಳ ಕಣ್ಣುಗಳು ತಟ್ಟನೆ ತುಂಬಿ ಬಂದುವು. ರೆಪ್ಪೆಯಂಚಿನಲ್ಲಿ ಬೆಳ್ಳಿಯ ಗೆರೆಯಂತೆ ಮಿಂಚಿದ ಕಂಬನಿಯನ್ನು ಕರವಸ್ತ್ರದಿಂದ ತೀಡಿಕೊಂಡು ನುಡಿದಳು,

"ಈ ಪ್ರಶ್ನೆ ನನಗೂ ಆಗಾಗ ಉದ್ಭವಿಸುತ್ತೆ. ಇದುವರೆವಿಗೂ ಅದಕ್ಕೆ ಉತ್ತರ ಲಭಿಸಿಲ್ಲ. ಮುಂದೆ ಎಂದಾದರೂ ಲಭಿಸಿಯೇ ತೀರುತ್ತೆ ಎಂಬ ನಂಬಿಕೆಯನ್ನು ನಾನು ಬಿಟ್ಟುಕೊಟ್ಟಿಲ್ಲ."

"ಆ ದೃಢಸಂಕಲ್ಪವಿಲ್ಲದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಅದ ರಿಂದಾಗಿಯೇ ನಾನಿನ್ನೂ ಉಸಿರಾಡುತ್ತಿರುವೆ."

ಆ ಮಾತು ಹೊರಬಿದ್ದಾಗ ತುಟಿಗಳಲ್ಲಿ ಒಣನಗೆ ಮಿನುಗಿ ಮಾಯ ವಾಯಿತು. ಟಾಂ ಮೂನಿ ಧೈರ್ಯಭಾವ ಪ್ರದರ್ಶಿಸಿದ.

"ನ್ಯಾಯ ಸತ್ತುಹೋಗಿಲ್ಲ. ಒಂದಲ್ಲ ಒಂದು ದಿನ ಬೆಳಕಿಗೆ ಬರಲೇ ಬೇಕು.!"

"ಬಂದೇ ಬರುತ್ತೆ ! ಅದು ನನಗೂ ಗೊತ್ತು. ಆದರೆ, ಅದಿನ್ನೂ ಎಷ್ಟುಕಾಲ ತೆಗೆದುಕೊಳ್ಳುತ್ತೋ, ಈ ಇಳಿ ವಯಸ್ಸಿನಲ್ಲಿ ನಿನಗಂತೂ ತುಂಬ ಕಷ್ಟ."

"ನಿನ್ನ ಗೆಳೆಯ–ಗೆಳತಿಯರ ಸಹಕಾರ ನನ್ನ ಎಷ್ಟೋ ಭಾರವನ್ನು ಕಳೆಯುತ್ತದೆ."

ತಾಯಿಯ ನುಡಿ ಮನದಾಳಕ್ಕಿಳಿಯಿತು. ಹಿಂದೆಲ್ಲಾ ಗೆಳೆಯ ರೊಂದಿಗೆ ಕೂಡುತಿದ್ದ ಕೂಟ, ಚರ್ಚಿಸುತಿದ್ದ ವಿಷಯ, ಬರೆಯುತಿದ್ದ ಬರವಣಿಗೆ ಅವುಗಳ ಪ್ರಸಾರ ಮತ್ತು ಪ್ರತಿಕ್ರಿಯೆ ಅಕ್ಷಿಪಟಲದ ಮೇಲೆ ಸುಳಿಸುಳಿದು ಮಾಯವಾದುವು. ತನ್ನ ಆಶೆ ಆಕಾಂಕ್ಷೆಗಳು ಧೂಳೀಪಟ

ಾದ ಬಗೆ ಹೃದಯವನ್ನು ಭೈರಿಗೆಯಂತೆ ಕೊರೆಯಿತು. ಅವನು ಮಂತ್ರ ಮುಗ್ಧನಂತೆ ಸುಮ್ಮನಾದ. ದೈಹಿಕ ಚಾಲನೆ ಯಾಂತ್ರಿಕವಾಗಿ ನಡೆ ಯುತ್ತಿತ್ತು.

ಕಾರಿಡಾರಿನಲ್ಲಿ ಹಾದುಹೋಗುವ ಮಂದಿಗೇನೂ ಕೊರತೆಯಿರಲಿಲ್ಲ. ನಿಮಿಷ ನಿಮಿಷಕ್ಕೂ ನಾಲ್ಕಾರು ಜೋಡಿ ಹೆಜ್ಜೆಗಳು ಒಟ್ಟೊಟ್ಟಾಗಿ ಚಲಿಸು ತ್ತವೆ. ಮುಚ್ಚಿದ ಅರ್ಧಬಾಗಿಲ ಆಚೆ ನಡೆಸುವ ಮಾತಿನ ಮರ್ಮರ–ನಗೆ ಚಾಟಿಕೆ ಕರ್ಣಪಟಲದ ಮೇಲೆ ಮತ್ತೆ ಮತ್ತೆ ಪ್ರತಿಧ್ವನಿಸುತ್ತವೆ. ಬೇಡದ ವಿಷಯ–ಒಲ್ಲದ ಧ್ವನಿ.

ಜಾಲಿ ಮೂನಿ ಅವುದೋ ವಿಚಾರವನ್ನು ಮನದಲ್ಲಿ ಮೆಲಕು ಹಾಕುತ್ತ ಭಾವಾವಿಷ್ಟಳಾಗಿ ನುಡಿದಳು,

“ನೀನು ಬಂಧನದಲ್ಲಿದ್ದಿ. ಹೊರ ಪ್ರಪಂಚದ ಘೋರಣೆ ನಿನಗೆ ಲವಲೇಶವೂ ತಿಳಿಯದು. ಜನರೆಲ್ಲಾ ಬಹುತೇಕವಾಗಿ ನಿನ್ನ ಕಡೆಗೇ ಇದ್ದಾರೆ....”

“ನನಗೊತ್ತು, ಅಮ್ಮಾ! ನನ್ನ ಗೆಳೆಯವೃಂದ ಒಂದಲ್ಲ ಒಂದು ವಿಚಾರ ತರುತ್ತಿರುತ್ತಾರೆ. ಸುಳ್ಳು ಸಾಕ್ಷಿಗಳೆಲ್ಲಾ ತಿರುಗಿ ಬಿದ್ದಿದ್ದಾರಂತೆ. ನಾನು ನಿರಪರಾಧಿ ಎಂಬುದನ್ನು ರಾಷ್ಟ್ರವೇ ಬಲ್ಲುದು. ಆದರೂ, ನ್ಯಾಯಾ ಲಯದ ನಿರ್ಲಕ್ಷ್ಯ ಬಹಳ ಖೇದವನ್ನುಂಟುಮಾಡುತ್ತಿದೆ.”

ಒಡಲ ಸಂಕಟವನ್ನು ಪೂಸಿಕೊಂಡು ವಿಜಾತೀಯವಾದ ಧ್ವನಿ ದುಃಖ ಪರಿತಾಪಗಳಿಂದ ಕೂಡಿದ ಹೃದಯ ತನುಮನಗಳನ್ನು ಬಂಧಿಸಿ ದುವು. ಜಾಲಿ ಮೂನಿ ಮಾತಾಡದೆ ದೀರ್ಘವಾದ ಬಿಸಿಯುಸಿರೊಂದನ್ನು ಹೊರ ಹಾಕಿದಳು.

“ನೋಡೋಣ; ಏನೇನು ಆಗುತ್ತೋ. ರಾಜಕೀಯ ಮುಖಂಡರೂ ಬಾರ್ ಕೌನ್ಸಿಲ್ಲಿನ ಧುರೀಣರೂ ಇಲ್ಲಿಯ ತನಕ ಬಂದು ನನ್ನ ಹೇಳಿಕೆ ರಿಕಾರ್ಡ್ ಮಾಡಿಕೊಂಡಿದ್ದಾರೆ. ನಾಳೆ ನಗರದ ಮೇಯರ್ ಬರುತ್ತಾ ರೆಂದು ವರ್ತಮಾನ. ನನ್ನ ಗೆಳೆಯರು ಒಟ್ಟಾಗಿ ಮತ್ತೆ ಅಪೀಲ್ ಹಾಕುವುದರಲ್ಲಿ ನಿಮಗ್ನರಾಗಿದ್ದಾರೆ. ಏನೇ ಇರಲಿ, ಎಲ್ಲರ ಸಹಕಾರ ಮತ್ತು ಅನುರಾಗಗಳನ್ನು ನೋಡಿದರೆ ಆನಂದವುಂಟಾಗುತ್ತದೆ. ಜೀವಾ

ವಧಿ ಕೊಳೆಯುವುದಕ್ಕಿಂತ ಹೀಗೊಂದು ಪ್ರಯತ್ನ ಪಡುವುದು ಲೇಸು."

"ಯಾಕೋ ನಮ್ಮ ಅದೃಷ್ಟ ಚೆನ್ನಾಗಿಲ್ಲ."

ಜಾಲಿ ಮೂನಿ ಅಷ್ಟೆಂದು ಸುಮ್ಮನಾದಳು. ಇದುವರೆವಿಗೂ ಫಲಿಸದ ಶತಪ್ರಯತ್ನ ಸುತ್ತಮುತ್ತ ಹಲ್ಕಿರಿದು ಅಣಕಿಸುತಿತ್ತು. ಹೆಂಗರುಳಿನ ಹಸಿ ಒಣಗಿ ಬರುವಂತೆ.

ಹೊರವಲಯದ ತರುನಿಕರದಲ್ಲಿ ಕಣ್ಣುಮುಚ್ಚಾಲೆಯಾಡುತಿದ್ದ ತಂಗಾಳಿ ಕಿಟಕಿಯಲ್ಲಿ ಭರ್ರನೆ ನುಗ್ಗಿ ಬಂತು.

* * * *

ತೀವ್ರ ಅಸ್ವಸ್ಥನಾದ ಜಸ್ಟಿಸ್ ಬಾಬಿ ಬರ್ಟನ್ ಚಿಕಿತ್ಸಾರ್ಥವಾಗಿ ಡಾ|| ಫ್ರಾಂಕ್ ಆಕ್ಸ್‌ಮನ್ ನರ್ಸಿಂಗ್ ಹೋಮಿಗೆ ದಾಖಲಾಗಿದ್ದ. ರೋಗದಗ್ಧ ಚೇತನ ದಿನಗಳೆದಂತೆ ಕ್ರಮಾನುಕ್ರಮವಾಗಿ ಚೇತರಿಸಿಕೊಳ್ಳುತ್ತಿದ್ದುದರಿಂದ ಅವನು ನಿರ್ಯೋಚನೆಯಿಂದ ವಿಶ್ರಾಂತಿ ತೆಗೆದುಕೊಳ್ಳಹತ್ತಿದ. ರೋಗಿಯ ಅನುಕೂಲಕ್ಕೆ ಅಗತ್ಯವಾದ ಸಕಲ ಸೌಕರ್ಯಗಳಿದ್ದ ಒಂಭತ್ತನೇ ನಂಬರ್ ಕೊಠಡಿಯೇ ಅವನ ವಿಶ್ರಾಂತಿಧಾಮ. ದಿನವೂ ಒಂದಲ್ಲ ಒಂದು ಬಗೆಯ ಜಟಿಲಸಮಸ್ಯೆಯಲ್ಲಿ ಮಿಲಿಮಿಲಿಗೊಳ್ಳುತ್ತ ಬಳಲುತಿದ್ದ ಚಿತ್ತಪ್ರವೃತ್ತಿಗೆ ಆರಾಮವಾಗಿ ವಿಚಾರಸಾಹಿತ್ಯಗಳಲ್ಲಿ, ಕತೆಕಾದಂಬರಿಗಳಲ್ಲಿ ಸಾರವತ್ತಾದ ಸವಿಯುಣ್ಣುವುದೆಂದರೆ ಸ್ವರ್ಗಸೌಖ್ಯ. ಹೃದಯಮಂದಿರದಲ್ಲಿ ಕಲೆತಸಮಯೋಚಿತ ಭಾವಶಾಂತಿ ಹನಿಹನಿಯಾಗಿ ಶೇಖರಣೆಯಾಗುವ ಜೇನಿಗಿಂತಲೂ ಸಿಹಿ.

ಪ್ರತಿದಿನ ಬೆಳಗ್ಗೆ ಹೊತ್ತು ಒಂಭತ್ತರ ಗಡಿಯನ್ನು ದಾಟುವ ಮುನ್ನ ತಪ್ಪದೆ ದಿನಚರಿಯಲ್ಲಿ ತೊಡಗುತಿದ್ದ ಡಾ|| ಫ್ರಾಂಕ್ ಆಕ್ಸ್‌ಮನ್ ಅಂದು ಹನ್ನೊಂದು ಗಂಟೆಯಾದರೂ ಆಸ್ಪತ್ರೆಗೆ ಬಂದಿರಲಿಲ್ಲ. ಅಸಿಸ್ಟೆಂಟ್ ಡಾಕ್ಟರು ಬಾಬಿಗೆ ಸಮಯೋಚಿತ ಚಿಕಿತ್ಸೆಯನ್ನು ಆಗಲೇ ಪೂರೆಸಿದ್ದರು. ಅವನು ನಿತ್ಯಕರ್ಮಗಳನ್ನು ಪೂರೈಸಿದನಂತರ ಅಂದಿನ ದೈನಿಕದ ಮೇಲೆ ಕಣ್ಣಾಡಿಸುತ್ತ ಹೊಂಬಿಸಿಲು ಹರಡಿದ ಪರಿಶುಭ್ರ ವಾತಾವರಣಕ್ಕೆ ಮೈಗೊಟ್ಟು ಆರಾಮುಕುರ್ಚಿಯ ಮೇಲೆ ಸುಖಾಸೀನನಾದ. ನಗರವಲಯದ ಸದ್ದು ಗದ್ದಲಗಳಿಂದ ದೂರವಾದ ನರ್ಸಿಂಗ್‌ಹೋಮ್ ಶಾಂತ–

ಶೀತಲ–ಸುಂದರ ಸಮುದಾಯದಲ್ಲಿ ಸಮಗ್ರ ಪ್ರಶಾಂತಿಯನ್ನು ಆಸ್ವಾದಿಸು ತಿತ್ತು.

ಪತ್ರಿಕಾ ಪ್ರಪಂಚದ ಪ್ರಾಕಾರದಲ್ಲಿ ವಿಷಯದಿಂದ ವಿಷಯಕ್ಕೆ ವಿಚರಿಸುವ ಅಕ್ಷಿಪಕ್ಷಿಗೆ ಪ್ರಪ್ರಥಮವಾಗಿ ಕಂಡಬಂದದ್ದು ರಿಪಬ್ಲಿಕ್ ಪಕ್ಷದ ಅಧೀವೇಶನ ಮತ್ತು ಅದರ ಚಟುವಟಿಕೆ. ಆ ಲೇಖವನ್ನು ಆದ್ಯಂತವಾಗಿ ಓದಿದರೆ ವಿಶೇಷ ಅಧಿವೇಶನದಲ್ಲಿ ಕಂಡು ಬಂದ ಅನೇಕ ಚಟುವಟಿಕೆಗಳಲ್ಲಿ ಪ್ರಧಾನ ಅಂಶವಾಗಿ ವ್ಯೆದೋರಿದ್ದು ಟಾಂ ಮೂನಿಯ ವಿಚಾರ. ಸಭೆ ಒಮ್ಮತದಿಂದ ಅವನು 'ನಿರಪರಾಧಿ' ಎಂಬುದನ್ನು ತೀರ್ಮಾನಿಸಿದ ಬಳಿಕ ಅವನ ಬಿಡುಗಡೆಗಾಗಿ ಒತ್ತಾಯಿಸಿತ್ತು. ಅವನ ವಿಚಾರಧಾರೆಯನ್ನೂ, ವಿಶ್ವಶಾಂತಿಯಲ್ಲಿದ್ದ ಶ್ರದ್ಧಾವಿಶ್ವಾಸವನ್ನೂ ಬಣ್ಣಿಸಿ, ಅಂತಹ ವ್ಯಕ್ತಿ ಇರುವುದೇ ರಾಷ್ಟ್ರದ ಪುಣ್ಯಯೋಗ ಎಂದು ಮುಂತಾಗಿ ಮುಕ್ತ ಕಂಠದಿಂದ ಕೊಂಡಾಡಿತ್ತು. ಅದನ್ನು ಓದಿದ ಮೇಲೆ ಇನ್ನೊಮ್ಮೆ ಮೊಕದ್ದಮೆಯ ಸಾರಾಸಾರಗಳನ್ನು ವಿಂಗಡಿಸಿ ಬಿಡಿಬಿಡಿಯಾಗಿ ಹರವಿ ತನ್ನ ಮುಂದೆ ಇಟ್ಟಂತಾಯಿತು. ಆ ಅಕಳಂಕ ಮುಖಭಾವ, ತುಟಿಗಳಲ್ಲಿ ಮಿನುಗುವ ಅಮಾಯಕ ನಗು. ನವ ಕಾಂತಿಯಿಂದ ಹೊಳೆಯುವ ಕಣ್ಣುಗಳು ಅಕ್ಷಿಪಟಲದ ಮೇಲೆ ಸುಳಿಸುಳಿದು ಮಾಯವಾದುವು. ಪತ್ರಿಕೆಯನ್ನು ಹಾಗೇ ಮಡಿಸಿ ಬದಿಗಿಟ್ಟ. ಒಡಲಲ್ಲಿ ಮೂಡಿದ ಸಂಕಟಾಗ್ನಿ ನರನಾಡಿಗಳಲ್ಲಿ ಉಷ್ಣವಾಹಿನಿಯಂತೆ ಹರಿದಾಡಿತು. ಎಷ್ಟೇ ಪ್ರಯತ್ನಿಸಿದರೂ ಆ ವಿಚಾರಸಾಹಿತ್ಯದಿಂದ ಮನವನ್ನು ಹಿಂತೆಗೆದುಕೊಳ್ಳಲಾಗಲಿಲ್ಲ, ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಹೊತ್ತು ಹನ್ನೊಂದರ ಅಂಚನ್ನು ಮುಟ್ಟಿದಾಗ ಕಾರಿಡಾರಿನ ತುತ್ತ ತುದಿಯಲ್ಲಿ ಡಾ|| ಫ್ರಾಂಕ್ ಆಕ್ಸ್‌ಮನ್‌ನ ಪದಘಾತಗಳು ಕೇಳಿಬಂದುವು. ಜಸ್ಟಿಸ್ ಬಾಬಿ ಬರ್ಟನ್ ಕಣ್ಮನಗಳನ್ನು ಅತ್ತಲೇ ನೆಟ್ಟ. ಸ್ವಲ್ಪ ಹೊತ್ತಿನೊಳಗಾಗಿ ಡಾ|| ಫ್ರಾಂಕ್ ಆಕ್ಸ್‌ಮನ್ ತ್ವರಿತಗತಿಯಲ್ಲಿ ಆಗಮಿಸಿದ. ಬಾಹ್ಯಪ್ರಜ್ಞೆಯಲ್ಲಿ ತೀವ್ರತೆ ಕಾಣಿಸುತ್ತಿತ್ತು. ಆತ ಸನಿಹಕ್ಕೆ ಬರುತ್ತಲೂ ವಿಶಾದವನ್ನು ಸೂಚಿಸುವಂತೆ ನುಡಿದ,

"ದಯವಿಟ್ಟು ಕ್ಷಮಿಸು. ಇಂದು ನನಗೆ ಬರುವುದು ತಡವಾಯಿತು.

ಅದರಿಂದ ನಿನಗೆ ಅಡಚಣೆಯಾಯಿತೇ ? ಅಥವಾ ಲೋಪದೋಷಗಳು ಕಂಡು ಬಂದುವೇ ?"

"ಪರವಾಯಿಲ್ಲ ಡಾಕ್ಟರ್; ಇದರಿಂದ ಯಾವ ಕೊರತೆಯೂ ಬೀಳಲಿಲ್ಲ. ಚಿಕಿತ್ಸೆ ಅನುಕ್ರಮವಾಗಿ ನಡೆದಿದೆ. ನೀನೇನೂ ಚಿಂತಿಸಬೇಕಾಗಿಲ್ಲ."

"ಅದು ಸರಿ." ಎಂದು ತಲೆದೂಗಿದ ಡಾ|| ಫ್ರಾಂಕ್ ಆಕ್ಸ್‌ಮನ್ ಆತನ ಸ್ಥಿತಿಗತಿಯನ್ನು ವಿಚಾರಿಸಿಕೊಂಡನಂತರ ಪ್ರಸ್ತುತ ಪರಿಸ್ಥಿತಿಯ ಕಡೆ ಮನವನ್ನು ಹರಿಯಬಿಟ್ಟ–"ಬೆಳಗ್ಗೆ ನಾನು ಎದ್ದಾಗಲೇ ಜೈಲಿನಿಂದ ನನಗೆ ತುರ್ತುಕರೆ ಬಂದಿತು. ಅದೇ ಕೂಡಲೇ ನಾನು ಅಲ್ಲಿಗೆ ಹೋದೆ. ಆ ವಿವಾದಗ್ರಸ್ತ ಟಾಂ ಮೂನಿ ನಿನಗೆ ಗೊತ್ತಿದೆಯಷ್ಟೆ ? ಅವನು ನಿನ್ನೆಯಿಂದ ತೀವ್ರ ಅಸ್ವಸ್ಥನಾಗಿದ್ದಾನೆ. ಅದಕ್ಕಾಗಿ ಬೇರೆ ವ್ಯವಸ್ಥೆ ಮಾಡುವುದಿತ್ತು; ಮಾಡಿದ್ದಾಯಿತು."

"ಓ....ಹೋ ! ಇಲ್ಲಿಗೆ ಕರೆತಂದಿದ್ದೀಯೇನು ?"

"ಇಲ್ಲಪ್ಪಾ ! ಹಾಗೆ ಕರೆತರಬಹುದಾಗಿದ್ದರೆ ತುಂಬ ಅನುಕೂಲ ವಾಗುತಿತ್ತು. ಈಗ ಬೇರೆ ನರ್ಸಿಂಗ್ ಹೋಮಿಗೆ ಸೇರಿಸಿದೆ. ದಿನವೂ ಹೋಗಿ ಬರಲು ತುಂಬ ದೂರ."

"ಅದೇಕೆ....?"

"ಇಲ್ಲಿ ನೀನಿರುವುದರಿಂದ ಅವನನ್ನೂ ಇಲ್ಲಿ ಸೇರಿಸುವುದು ಸರಿಯಲ್ಲ; ಅದರಿಂದ ಮುಂದೇನಾದರೂ ತೊಂದರೆ ಸಂಭವಿಸಬಹುದು."

"ಓ ! ಸರಿ. ಅದು ನೆನಪಿಗೆ ಬರಲೇ ಇಲ್ಲ."

"ಅವನು ಮೊದಲಿನಿಂದಲೂ ನನಗೆ ಚೆನ್ನಾಗಿ ಗೊತ್ತು. ಅವನನ್ನು ವಿನಾಕಾರಣ ಜೈಲಿಗೆ ಕೂಡಿದ್ದಿ. ಬಹಳ ಅನ್ಯಾಯವಾಯಿತು."

ಆ ಮಾತು ಮೊನಚಾದ ಬಾಣದಂತೆ ಮನದಾಳಕ್ಕೆ ಇಳಿಯಿತು. ಜಸ್ಟಿಸ್ ಬಾಬಿ ಬರ್ಟನ್ ಮಾತಾಡದೆ ಸುಮ್ಮನೆ ಕುಳಿತ. ಪೋಲೀಸರ ಚಕ್ರವ್ಯೂಹ ಅಕ್ಷಿಪಟಲದ ಮೇಲೆ ಚಲನಚಿತ್ರದಂತೆ ನಲಿಯಿತು.

ಡಾ|| ಫ್ರಾಂಕ್ ಆಕ್ಸ್‌ಮನ್ "ಅವನು ಯುದ್ಧ ವಿರೋಧಿ; ತೀವ್ರ ಶಾಂತಿವಾದಿ. ಅಂತಹವನ ಮೇಲೆ ಈ ಕ್ಷುದ್ರ ಅಪರಾಧವನ್ನು ಹೊರಿಸಲು ಹೇಗೆ ಸಾಧ್ಯವಾಯಿತು ಎಂಬುದೇ ಆಶ್ಚರ್ಯ !"

"ಪೋಲೀಸರ ಅಚಾತುರ್ಯ!"

"ಅಲ್ಲ; ಅಲ್ಲ. ನೀನು ತಪ್ಪು ತಿಳಿದುಕೊಂಡಿದ್ದಿ! ಅಚಾತುರ್ಯ ಅಲ್ಲ! ಚಾ-ತು-ರ್ಯ!"

ಇಬ್ಬರ ಮುಖದಲ್ಲೂ ನಗುವಿನ ಅಲೆಯೆದ್ದಿತು.

ಅದೇ ವೇಳೆಗೆ ಮುಂಬಾಗಿಲಿನ ಬಳಿ ಪ್ರಾಂತಿಯ ಗೌರ್ನರ್ ಬಂದಿಳಿದ ಸುದ್ದಿ ಮೇಲ್‌ನರ್ಸ್ ಮೂಲಕ ಕಿವಿಗೆ ತಾಗಿತು. ಆ ಕ್ಷಣ ಬಿಟ್ಟ ಬಾಣ ದಂತೆ ಡಾ|| ಫ್ರಾಂಕ್ ಆಕ್ಸ್‌ಮನ್ ಆತನನ್ನು ಸ್ವಾಗತಿಲು ಹೆಬ್ಬಾಗಿಲಿಗೆ ಧಾವಿಸಿದ.

* * * *

....ಕಾಲಮಾನ ನಿರಂತರ ಉರುಳುತ್ತಲೇ ಇತ್ತು. ಕಲಿತವರೂ ಕಲಿಯದವರೂ ಜಡನಿದ್ದೆಯಲ್ಲಿರುವುದನ್ನು ಗಮನಿಸುತ್ತ.

....ಮೃತ್ಯುವಿನ ಹೊಸ್ತಿಲಿನ ಮೇಲೆ ಅರಳುವ ಜಗಜ್ಜೀವನ ಮಂಕು-ಮಾಯೆಗಳ ವೈಭವದಲ್ಲಿ ಮೈಮರೆತಿತ್ತು.

....ಬಳ್ಳಿಯಂತೆ ದಿನದಿನವೂ ಕವಲೊಡೆಯುವ ವಾಸ್ತವಿಕ ವಿಜ್ಞಾನ ದಲ್ಲಿ ಕರ್ತವ್ಯಾಕರ್ತವ್ಯಗಳ ಅದ್ಭುತ ಅರಿವು ಮೂಡುತ್ತಲೇ ಇಲ್ಲ. ಚಟುಲ ಮತ್ಸ್ಯಗಳಂತಹ ಚಂಚಲ ನೇತ್ರಗಳ ಬಯಕೆಯೊಂದಾದರೆ ಆಂತರಂಗಿಕ ಅನುವರ್ತನೆಯೇ ಬೇರೆ.

ಪ್ರಾಂತೀಯ ಗೌರ್ನರ್ ಮುಂದೆ ಜಾಲಿ ಮೂನಿ ಮತ್ತೊಮ್ಮೆ ತನ್ನ ಬೇಡಿಕೆಯನ್ನು ಮಂಡಿಸಿದ್ದಾಳೆ. ಮಗನ ಜೀವನ ಚಿತ್ರವುದಲ್ಲಿ ಆತನ ಆಶಾಭಾವನೆ ಮತ್ತು ಶಾಂತಿ ಸಂದೇಶ ಎಲ್ಲಾ ಪುಟಪುಟದಲ್ಲೂ ಗೌರವ ಯುತವಾಗಿ ಹರಿದಿದೆ. ದುಃಖಾಂತ ಹೃದಯದ ಮೊರೆ ದಗ್ಧ ಕಂಠದಿಂದ ಈ ರೀತಿ ಹೊರಬಿತ್ತು,

"ವಿಚಾರವನ್ನು ಪುನರ್ ಪರಿಶೀಲಿಸಲು ದಯವಿಟ್ಟು ಆಜ್ಞೆಮಾಡಿರಿ. ಇದು ಎಲ್ಲಿಲ್ಲದ ಮೋಸದ ಬಲೆ."

ಅವನು ಮರುಮಾತಾಡದೆ ಅವಳ ಅರ್ಜಿಯ ಮೇಲೆ ದೃಷ್ಟಿ ಹಾಯಿ ಸಿದ. ಮರಣ ಶಿಕ್ಷೆಯಿಂದ ಜೀವಾವಧಿ ಶಿಕ್ಷೆಗಿಳಿಸಿದ ಸಂದರ್ಭ ಚಿತ್ರಭಿತ್ತಿ ಯಲ್ಲಿ ಸುಳಿಸುಳಿದಳಿಯಿತು.

"ಜೀವಾವಧಿ ಶಿಕ್ಷೆಯಿಂದ ಅವನಿಗೆ ಬಂದ ಭಾಗ್ಯವಾದರೂ ಏನು? ರೋಗಬಾಧೆಯಿಂದ ನರಳುವ ಸ್ಥಿತಿ ಒದಗಿ ಬಂದಿದೆ. ಅದಕ್ಕಿಂತ ಮರಣ ದಂಡನೆ ಲೇಸಾಗಿತ್ತು."

ಮಾತೃಹೃದಯದಿಂದ ಅಕ್ಷರ ಅಕ್ಷರವೂ ನಿಧಾನ ಗತಿಯಲ್ಲಿ ಕರುಳು ಹರಿಯುವಂತೆ ವಿಜಾತೀಯವಾಗಿ ಹರಿದುಬಂದಾಗ ಅನಿರೀಕ್ಷಿತವಾಗಿ ಕಣ್ಣು ಗಳಂಚಿನಲ್ಲಿ ಮೊಳೆತ ಸ್ಥೂಲ ಸ್ಥೂಲ ಅಶ್ರು ಬಿಂದುಗಳು ಉದುರಿ ಮೇಲಂಗಿಯ ಮೇಲೆ ವರ್ತುಲಾಕಾರವಾದ ಮುದ್ರೆಯೊತ್ತುತ್ತಲೂ ತಕ್ಷಣ ಎಚ್ಚತ್ತುಕೊಂಡವಳಂತೆ ತನ್ನನ್ನು ತಾನೇ ನಿಗ್ರಹಿಸಕೊಳ್ಳುತ್ತ ಕಂಬನಿ ಯನ್ನು ಕರವಸ್ತ್ರದಿಂದ ನಿವಾರಿಸಿಕೊಂಡಳು. ಆದರೂ ಆ ಅನೀಪ್ಸಿತ ಪ್ರಸಂಗ ಅವಳನ್ನು ತುಸು ಲಜ್ಜಿತಳನ್ನಾಗಿ ಮಾಡಿತು.

ಗೌರ್ನರನ **ನೋಟ ಒಂದು ಕ್ಷಣ ಆಕೆಯ** ಮೇಲೆ ಹರಿದು ಪುನಃ ಅರ್ಜಿಯ ಕಡೆ ಸಿಡಿಯಿತು. ಅವಳ ಒಡಲ ಸಂಕಟ ಹೃದಯವಾರ್ಧಿಯನ್ನು ಮೆಲ್ಲಮೆಲ್ಲನೆ ಕಲಕತೊಡಗಿತು. ಸ್ವಲ್ಪ ಹೊತ್ತು ಮೌನವಾಗಿ ಅರ್ಜಿಯ ಪರಿಶೀಲನೆಯಲ್ಲಿ ಮನವನ್ನು ತೊಡಗಿಸಿದ. ಅಂದು, ಡಾ|| ಫ್ರಾಂಕ್ ಆಕ್ಸ್ ಮನ್ ಪ್ರಾಸಂಗಿಕವಾಗಿ ಅದೇ ವಿಚಾರವನ್ನು ಪ್ರಸ್ತಾಪಿಸಿ ಪ್ರಾಸಿಕ್ಯೂಷನ್ನಿನ ಮೋಸದ ಬಲೆಯನ್ನು ಮುಂದಿಟ್ಟು "ಇನ್ನಾದರೂ ಈ ಅಧ್ಯಾಯವನ್ನು ಮುಚ್ಚಿ ಬಿಡುವುದು ಲೇಸು" ಎಂದಿದ್ದ. ಮೇಲಾಗಿ, ಹೊರಜಗತ್ತಿನ ಧೋರಣೆ ಏನೆಂಬುದು ಗೊತ್ತು. ಅವನು ನಿರಪರಾಧಿ ಎಂಬುದು ಕರತಲಾ ಮಲಕ. ಅಂತಲೇ ಅವನು ಬಹಳಷ್ಟು ಯೋಚನೆಮಾಡಿ ಆ ಇಡೀ ಪ್ರಕರಣದ ಪುನರ್ ಪರಿಶೀಲನೆಗೆ ಆಜ್ಞೆಮಾಡಲು ಮನದಲ್ಲೇ ತೀರ್ಮಾ ನಿಸಿದ.

ಗೌರ್ನರನ ಕೃಪಾದೃಷ್ಟಿಯಿಂದ ಮೊಕದ್ದಮೆ ಮತ್ತೊಮ್ಮೆ ಮೊಕದ್ದಮೆ ಕಟಕಟೆಯನ್ನೇರಿ ಹೊಸ ದಾಖಲೆಯನ್ನು ಸಂಸ್ಥಾಪಿಸಿತು. ಹಿಂದಿನ ಪುರಾವೆ ಗಳೆಲ್ಲಾ ಬುಡಮೇಲಾದ ಮೇಲೆ ಸಚಿತ್ರ ರೀತಿಯಲ್ಲಿ ಪ್ರತ್ಯಕ್ಷವಾಯಿತು. ಹಳೆಯ ಪ್ರಕರಣ.

ಆದರೆ....!

ನ್ಯಾಯಾಲಯದ ದೃಷ್ಟಿಕೋನ ದಿಶೆಯಿಂದ ದಿಶೆಗೆ ಹರಿದರೂ ಅರ್ಥೈಸಿದ ರೀತಿಯೇ ಬೇರೆ. ಜ್ಯೂರಿಗಳಲ್ಲಿ ಬಹು ಮಂದಿ ತಮ್ಮ ಹಿಂದಿನ ಪಟ್ಟನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ....ಟಾಂ ಮೂನಿ ಸ್ವತಃ ಕೊಲೆಗಾರನಲ್ಲದಿದ್ದರೂ ಬಾಂಬನ್ನು ಪೇಟಿಯ ಚೌಕದಲ್ಲಿ ಹಾಕಿ ಸಿಡಿಸಿದವರ ಜಾಲದಲ್ಲಿ ಖಂಡಿತ ಇದ್ದಿರಲೇಬೇಕು. ಅಂದಮೇಲೆ, ಸತ್ತುಹೋದ ಹತ್ತು ಮಂದಿಯಲ್ಲಿ ಒಬ್ಬನನ್ನಾದರೂ ಕೊಲೆಗೈದ ಅಪರಾಧಿಯಂತೂ ಹೌದು ! ಎಂಬ ಸರ್ವೋದ್ಗಾರ ಹೊರಬಿತ್ತು !

ಆ ತೀರ್ಪನ್ನು ಕೇಳಿ ಭಯಚಕಿತ ಹಿತೈಷಿಗಳು ಸ್ತಬ್ಧ ಹೃದಯಿಗಳಾದರು. ಕಠೋರ ವಿಡಂಬನೆ–ಕಠೋರ ವಿಪರ್ಯಾಸ ಎಲ್ಲೆಡೆ ನರ್ತಿಸಹತ್ತಿತು.

ಅನಂತರ,

ವಿಚಿತ್ರ ರೀತಿಯಲ್ಲಿ ನೊಳೆತ ವಾದವಿವಾದವು ಟಾಂ ಮೂನಿಗೆ ಮತ್ತೊಮ್ಮೆ ಅಪೀಲು ಮಾಡಿಕೊಳ್ಳಲು ಅವಕಾಶ ನೀಡಿತು. ಅಷ್ಟು ಹೊತ್ತಿಗೆ ಆ ನತದೃಷ್ಟ ವ್ಯಕ್ತಿಯ ವಯೋಮಾನವೆಲ್ಲ ಹರಿದೋಡುವ ನೀರಿನಂತೆ ಕಳೆದುಹೋಗಿತ್ತು. ಆರೋಗ್ಯವೂ ಅಷ್ಟಾಗಿ ಸುಧಾರಿಸಿಕೊಂಡಿರಲಿಲ್ಲ. ಒಂದು ಕಾಲದಲ್ಲಿದ್ದ ಅತೀವ ಉತ್ಸಾಹದ ಸಂಪುಟವನ್ನು ಜುಗುಪ್ಸೆ–ಉದಾಸೀನಗಳು ಆವರಿಸಿಕೊಂಡಿದ್ದುವು. ಅವನು ಒಲ್ಲದ ಮನಸ್ಸಿನಿಂದ ಅಪೀಲು ಮಾಡಿಕೊಂಡ. ಹೃದಯಾಗಾರ ಬೇಗುದಿಯಿಂದ ಬೇಯುತಿತ್ತು.

ಆ ಹೃದಯವಿದ್ರಾವಕ ಕ್ರೀಡೆ ಕ್ರಮಬದ್ಧವಾಗಿ ಕೊನೆಯ ಹಂತವನ್ನು ಮುಟ್ಟಿದಾಗ ಅವ್ಯಕ್ತಶಕ್ತಿಯ ವಜ್ರಮುಷ್ಟಿಯಲ್ಲಿ ದಶಮಾನಗಳೇ ಉರುಳಿ ಹೋಗಿದ್ದುವು. ಜಸ್ಟಿಸ್ ಬಾಬಿ ಬರ್ಟನ್ ನ್ಯಾಯಪೀಠದಿಂದ ನಿವೃತ್ತಿ ಹೊಂದಿ ವಿಶ್ರಾಂತಿವೇತನ ಪಡೆಯುತಿದ್ದ. ಜ್ಯೂರಿಗಳಲ್ಲಿ ಇಬ್ಬರು ಅಪಘಾತಕ್ಕೆ ಈಡಾಗಿದ್ದರು; ಮೂವರು ಮರಣಹೊಂದಿದ್ದರು. ಮಗನ ಬಿಡುಗಡೆ ಇಂದು–ನಾಳೆ ಆಗಿಯೇ ತೀರುತ್ತದೆ ಎಂಬ ಆಶಾಭಾವನೆಯಲ್ಲಿಯೇ ಜಾಲಿ ಮೂನಿ ಕೊನೆಯುಸಿರೆಳೆದಿದ್ದರೂ ಅವಳ ಸಂದರ್ಶನಕ್ಕಾಗಲೀ ಅಂತ್ಯ ಸಂಸ್ಕಾರಕ್ಕಾಗಲೀ ಟಾಂ ಮೂನಿಗೆ ಬಿಡುಗಡೆ ಆಗಲಿಲ್ಲ.

ಸೆರೆಮನೆಯಲ್ಲಿಯೇ ಕಂಬನಿಯ ಕಾಣಿಕೆಯನ್ನು ಅಗಲಿದ ಜನನಿಗೆ ಅರ್ಪಿಸುವ ಪ್ರಸಂಗ ಬಂತು.

ಅಪಾರವಾದ ಕಾಲವ್ಯಯವಾದ ನಂತರ ಅವನೊಮ್ಮೆ ಜೈಲಿನ ಬಂಧನದಿಂದ ಬಿಡುಗಡೆ ಹೊಂದಿದ!

ಟಾಂ ಮೂನಿ ಯಾವ ಸಮರ ನಿರೋಧಕ್ಕಾಗಿ ಅಹರ್ನಿಶಿ ಹೆಣಗಿದ್ದನೋ ಆ ಸಮರ ಮುಗಿದು ಹೆಚ್ಚುಕಡಿಮೆ ಎರಡು ದಶಕಗಳು ಸಂದಿದ್ದುವು. ಆ ಭಯಂಕರ ಸಂಕಷ್ಟವನ್ನು ಸಂಪೂರ್ಣ ಮರೆತುಬಿಟ್ಟದ್ದ. ಯುದ್ಧವಾದೀ ಹುಚ್ಚು ಪ್ರಜೆಗಳು ಇನ್ನೊಂದು ಸಮರಕ್ಕೆ ಕಿಡಿಯುರಿಸಿ ಸಿದ್ಧರಾಗುತ್ತಿದ್ದರು. ಶಸ್ತ್ರಾಗಾರಗಳು ತುಂಬಿತುಳುಕುತಿದ್ದುವು. ಗಡಿಪ್ರದೇಶದಲ್ಲಿ ಮಿಲಿಟರಿ ಪಡೆ ಹಗಲಿರುಳೂ ತಪ್ಪದೆ ಕಾವಲು ಕಾಯುತಿತ್ತು. ಕ್ರಾಂತಿಕಾರಿಗಳು-ರಾಜಕಾರಿಣಿಗಳು ವೇದಿಕೆಯ ಮೇಲೆ ದರ್ಪೋದ್ಧತ ಭಾಷಣ ಬಿಗಿಯುತಿದ್ದರು. ಯುದ್ಧಕಹಳೆ ನೆರೆ ಪ್ರಾಂತ್ಯಗಳ ಕಿವಿ ಕಿವುಡಾಗುವವರೆಗೂ ಧೀಂಕಿಡುತಿತ್ತು.

ಟಾಂ ಮೂನಿ ಸೆರೆಮನೆಯಿಂದ ಹೊರಬಂದಾಗ ಬೆಂಬಲಿಗರು ಸುತ್ತಮುತ್ತ ಮುತ್ತಿಕೊಂಡರು. ಸುಖದುಃಖಗಳ ನೆರೆ ಮುಖಮಂಡಲಗಳ ಮೇಲೆ ಚಿತ್ರಿಸಿದಂತೆ ಮುದ್ರಿತವಾಗಿತ್ತು. ಅವನು ಅಕಾಲ ವೃದ್ಧನಾಗಿ ಲವಲವಿಕೆಯನ್ನು ಕಳೆದುಕೊಂಡಿದ್ದ. ಸ್ಥಿತಿಗತಿ ಕರುಣಾಜನಕವಾಗಿತ್ತು. ಆದರೂ, ಆ ಗಳಿಗೆಯಲ್ಲಿ ಅತ್ಯಂತ ಉತ್ಸಾಹದಿಂದ ಅಲ್ಲಿ ನೆರೆದ ಎಲ್ಲರಿಗೂ ಪ್ರಸಂಗೋಚಿತವಾಗಿ ಹಸ್ತಲಾಘವ ನೀಡಿದ. ಕೈಯಿಂದ ಕೈಗೆ ಯಾಂತ್ರಿಕವಾಗಿ ಚಲಿಸುತಿತ್ತು ಅಕಳಂಕ ಹಸ್ತ.

ಆ ಹೃದಯಸ್ಪರ್ಶೀ ಮುಹೂರ್ತ ಕಳೆದ ಮೇಲೆ ಅವನನ್ನು ಹೊತ್ತ ನೀಲವರ್ಣರಂಜಿತ ವಾಹನ ಬೃಹದ್ ಮೆರವಣಿಗೆಯಲ್ಲಿ ಹೊರಟಿತು. ಅದೇ ಜನನಿಬಿಡವಾದ ರಸ್ತೆ; ಅದೇ ಅಂಗಡಿಗಳ ಸಾಲು; ಅದೇ ವ್ಯಾಪಾರ ಕೇಂದ್ರ; ಅದೇ ಉತ್ತೇಜಿತ ಜನ; ಕೊರಳೆತ್ತಿ ಅಂಗಡಿಗಳ ಕಡೆ ನೋಡಿದ. ಕಳೆದ ಎರಡು ದಶಕಗಳ ಅವಧಿಯಲ್ಲಿ ಗೃಹ ಶ್ರೇಣಿಗಳಲ್ಲಿ ಬೇಕಾದಷ್ಟು ಬದಲಾವಣೆ ಕಂಡಿತು. ಖಾಲಿ ನಿವೇಶನಗಳಲ್ಲಿ ಹೊಸ ಹೊಸ ಮನೆಗಳೆದ್ದಿದ್ದುವು. ಹಳೆಯ ಕಟ್ಟಡಗಳ ದುರಸ್ತಿಯೂ ನಡೆದಿತ್ತು. ಜನ

ಜಂಗುಳಿಯಲ್ಲೂ ಅಂತಹದೇ ಬದಲಾವಣೆ. ಮುಂದೆ ಮುಂದೆ ಪಯಣಿಸಿದ ಮೇಲೆ ಅಂದು ತಾನು ಕುಳಿತುಕೊಂಡಿದ್ದ ಗಡಿಯಾರದ ಅಂಗಡಿ ದೃಷ್ಟಿಗೆ ಬಿತ್ತು. ಯಜಮಾನ ಕುಳಿತುಕೊಳ್ಳುತಿದ್ದ ಕುರ್ಚಿಯಲ್ಲಿ ಮಗ ಮಂಡಿಸಿದ್ದ. ಆ ಅಂಗಡಿಯ ವ್ಯವಸ್ಥೆಯಲ್ಲಿ ಅಂತಹ ಬದಲಾವಣೆ ಏನೂ ಕಂಡುಬರಲಿಲ್ಲ. ಬಗೆ ಬಗೆಯ ಗಡಿಯಾರಗಳು ಜೀವಂತ ಸಾಕ್ಷಿಯಂತೆ ಈಗಲೂ ಕಂಗೊಳಿಸುತ್ತಿದ್ದುವು.

ಟಾಂ ಮೂನಿ ಅತ್ಯಂತ ಆಸ್ಥೆಯಿಂದ ಕಣ್ಣೆವೆ ಮಿಟುಕಿಸದೆ ಅತ್ತಲೇ ನೋಡಿದ. ಅದೇ ಅಂಗಡಿ; ಅದೇ ಕುರ್ಚಿ; ಅದೇ ಗಡಿಯಾರ; ಅದರಲ್ಲಿ ಯಾವುದಾದರೂ ಆತನ ನಿರಪರಾಧಿತ್ವದ ಸಜೀವ ಸಾಕ್ಷಿಇರಬಹುದೋ.....?

(ಇದು ಪರ ದೇಶದಲ್ಲಿ ನಡೆದ ನೈಜ ಕತೆ.)

ಭಿಕ್ಷುಣಿ ಸೋಮಾ

....ಜುಳು ಜುಳು ಮಂಜುಳನಾದನೊಡನೆ ಪ್ರವಹಿಸುವ ಗಂಗಾ ವಾರಿಧಿ.

....ತಣ್ಣಗೆ ತೀಡುವ ತಣ್ಣೆಲರ ಲೀಲಾಲೋಲುಪ್ತಿಯಲ್ಲಿ ಮರ್ಮರಿಸುವ ವನರಾಜಿ.

ಸೋಮಾ ಮೈಬಾಗಿ ಬಿಂದಿಗೆಗಳಿಗೆ ಗಂಗೋದಕವನ್ನು ತುಂಬಿಕೊಂಡು ಒಂದರಮೇಲೊಂದರಂತೆ ತಲೆಯ ಮೇಲೆ ಹೊತ್ತು ಎದ್ದು ನಿಂತಾಗ ದೀಪ್ತ ಲಲಾಟದ ಮೇಲೆ ಗಾಂಭೀರ್ಯದ ತೆರೆ ಹರಡಿತ್ತು. ಬೆಳಗಿನ ಶೀತವಾತಕ್ಕೆ ರೋಮರಾಜಿ ನಿಮಿರಿ ಆತ್ಮವಿಶ್ವಾಸವನ್ನು ಪ್ರಕಟಿಸಿದುವು. ಆ ಹರವಾದ ತಟಾಕದಿಂದ ಸಲಸಲಕ್ಕೂ ಮುಂದಿಡುವ ಹೆಜ್ಜೆ ಪದತಲ ಭೂಮಿಯನ್ನು ದಿಮ್ಮನೆ ಒತ್ತಿ ಥಣತ್ಕಾರ ಮೂಡಿಸುವಷ್ಟು ಮಣಭಾರ-ಫಳಫಳ ಮಿಂಚುವ ಗಂಗೋದಕಬಿಂದಿಗೆಗಳು. ಆಗಲೇ ನಾಲ್ಕು ಬಾರಿ ನೀರನ್ನು ಒಯ್ದಿದ್ದರೂ ಗೆಳತಿ-ಬಿಂದೂ ಇನ್ನೂ ಏಕೆ ನೀರಿಗೆ ಬರಲಿಲ್ಲವೋ ಅದು ಅವಳಿಗೆ ಅರ್ಥವಾಗಲಿಲ್ಲ. ಕುತೂಹಲಭರಿತ ದೃಷ್ಟಿ ಆಗಾಗ ಶೀಳುಹಾದಿಯ ಕಡೆ ಹರಿದು ನಿರಾಶೆಯಿಂದ ಹಿಮ್ಮರಳುತಿತ್ತು.

ಮೂಡಣದಲ್ಲಿ ಉದಯಮಾನ ಶೋಭೆ ಜ್ವಲಂತವಾಗಿ ಹರಡುತಿತ್ತು-ಇನ್ನೇನು ಇಷ್ಟರಲ್ಲೇ ಹೊಂಗಿರಣಗಳು ಉದ್ಭೂತವಾಗುವಂತೆ.

ಸೋಮಾ ಮರಳಿನ ದಟ್ಟವಾದ ಹಾಸನ್ನು ಹಾಯ್ದು ದಡವನ್ನು ಹತ್ತಿದಾಗ ಎರಡೂ ಬಿಂದಿಗೆಗಳ ಗಂಗೋದಕ ತುಳುಕಿ ಬಿದ್ದು ಎದೆಯ ಮೇಲೆ ಒದ್ದೆಯ ಮುದ್ರೆಯನ್ನು ಒತ್ತಿ ಲಜ್ಜೆ ಮೂಡಿಸಿತು. ಅಲ್ಲಿಂದ ನಾಲ್ಕು ಹೆಜ್ಜೆ ತೆಗೆದು ಸಮತಲವಲ್ಲಿ ನಿಂತುಕೊಂಡು, ಒದ್ದೆಯಾದ ಸೆರಗನ್ನು ಹಿಂಡಿ ಸರಿಪಡಿಸಿಕೊಳ್ಳುತ್ತಿರುವಾಗಲೇ ನಸುದೂರದಲ್ಲಿ ಸೀಳುಹಾದಿಯ ನೇರಕ್ಕೆ ಪಾದಸಪ್ಪಳ ಕೇಳಿ ಬಂತು. ಆ ಅಲ್ಪ ಸದ್ದುಮಾತ್ರ

ನಿಂದಲೇ ಅದು ಬಿಂದೂವಿನ ಹೆಜ್ಜೆಯೆಂಬುದು ಪ್ರಾಣಸಿದ್ಧಾಂತ. ಸೋಮಾ ನಿಂತಲ್ಲಿಂದ ಕದಲದೇ ಅವಳ ಸಂದರ್ಶನವನ್ನೇ ಎದುರು ನೋಡ ತೊಡಗಿದಳು. ಹೆಜ್ಜೆಗಳು ಅನುಕ್ರಮವಾಗಿ ಸಮೀಪಿಸುತಿದ್ದುದು ಕರ್ಣ ಗತ. ಆಮೇಲೆ ಬಹಳ ಹೊತ್ತಿನ ನಂತರ ಅದೇ ಶೀಳು ಹಾದಿಯಲ್ಲಿ ಅವಳೇ ಕಾಣಿಸಿಕೊಂಡಳು ಸಹ, ಗಿಡಮರಗಳ ಮರೆಯಿಂದ ಹೊರಬಿದ್ದು.

ಆದರೆ, ಅದೆಂತಹ ಮಾರ್ಪಾಡು ಅವಳಲ್ಲಿ ?

ಅವಳು ಒಂದು ಕಾಲದಲ್ಲಿ ಚಿಗರಿಯನ್ನೂ ಮೀರಿಸುವಂತಹ ಚಟುವಟಿಕೆ ಹೊಂದಿದ್ದಳೆಂದರೆ ಈಗ ಯಾರೂ ನಂಬಲಾರರೇನೋ. ಅವಳ ಬಾಳಿನ ಬವಣೆಯೇನೂ ಕಡಿಮೆಯದಲ್ಲ. ಆದರೂ, ಆತ್ಮವಿಶ್ವಾಸವನ್ನು ಕಳೆದು ಕೊಂಡಿರಲಿಲ್ಲ. ಪ್ರಾಣಪಣದಿಂದ ದಿನಗಳೆದಿದ್ದಾಳೆ. ಇಂದಿನ ಸ್ಮಶಾಣ ಶಾಂತಿಯ ನಿಧಾನಗತಿ ಅರ್ಥವೇ ಆಗುವುದಿಲ್ಲ.

ಆಲೋಚನಾಭಾರದಿಂದ ನೀಳವಾದ ಶ್ವಾಸವನ್ನು ಹರಿಯಬಿಟ್ಟಳು ಸೋಮಾ.

ತಲೆಯ ಮೇಲಿನ ಬಿಂದಿಗೆಗಳ ಭಾರದಿಂದ ಹೆಚ್ಚು ಹೊತ್ತು ನಿಲ್ಲುವ ಸಹನೆಯಿಲ್ಲ. ಆದರೆ, ಅವಳು ಇತ್ತ ನೋಡುತಿದ್ದರೂ ತನುಮನಗಳ ಚಾಲನೆಯಲ್ಲಿ ಇನಿತೂ ತುಷ್ಟಳಾಗಲಿಲ್ಲ; ನಡಿಗೆ ಯಥಾಪ್ರಕಾರ ಕೂರ್ಮ ಗತಿ.

ಇವಳು ಇಲ್ಲಿಂದಲೇ ಕೂಗಿದಳು,

"ಏಕೆ ಅಷ್ಟು ನಿಧಾನ ? ಬೇಗನೇ ಬರಬಾರದೇ ಬಿಂದೂ ?"

"ಬಂದೇ !"

"ನನಗಾದರೆ ಬಿಂದಿಗೆ ಭಾರ. ನೀನು ಹಗುರವಾಗಿದ್ದಿ !"

"ಹಗುರಾದರೆ ಏನು ? ನಡೆಯುವುದೇ ಕಷ್ಟ !"

ಅಷ್ಟು ಮಾತುಕತೆಯೊಳಗಾಗಿ ಇಬ್ಬರೂ ಸಮೀಪಿಸಿದರು. ನೋಡಿದರೆ, ಅವಳ ಮೈಕೈಯೆಲ್ಲಾ ಹೊಡೆತ ಬಡಿತದ ಬಾಸುಂಡೆ! ಕೆಂಪಗೆ ಊದಿ ಕಂದಿದ ಮಾಂಸಖಂಡಗಳು !

"ಇದೇನು ಬಿಂದೂ?" ಒಂದೇ ಉಸುರಿಗೆ ಕೇಳಿದಳು ಸೋಮಾ— ಶೋಕಾರ್ತ ಹೃದಯದಿಂದ.

"ನಿನಗೆ ಗೊತ್ತೇ ಇದೆಯಲ್ಲಾ. ಮತ್ತ್ಯಾಕೆ ಕೇಳುತ್ತಿ ಬಿಡು !"

"ನೀನು ಈ ಸ್ಥಿತಿಯಲ್ಲಿ ನೀರು ಕೊಂಡೊಯ್ಯುವುದು ಹೇಗೆ ?"

"ನೀರಿಲ್ಲದೆ ಹೇಗೆ ಅಡಿಗೆ ಮಾಡಲಿ ? ಮಾಡದಿದ್ದರೆ ಮತ್ತೆ ಯಥಾ ಪ್ರಕಾರ ದಂಡನೆ !"

"ನೀನು ನನ್ನೊಂದಿಗೆ ಬಾ. ಈ ನೀರು ನಿನ್ನ ಮನೆಯಲ್ಲಿ ಸುರಿದು, ನಾನು ಬೇರೆ ಕೊಂಡೊಯ್ಯುವೆ."

"ಬೇಡ ಕಣೆ ! ನಿನಗೇಕೆ ತೊಂದರೆ ? ಆಗಲೇ ನಾಲ್ಕುಬಾರಿ ನೀರು ಹೊತ್ತಿರಬೇಕು !"

"ಇರಲಿ, ಪರವಾಯಿಲ್ಲ."

"ಬರಿಗೈಯ್ಯಲ್ಲಿ ನಾನು ಮನೆಗೆ ಹೇಗೆ ಹೋಗಲಿ ? ಬಗ್ಗುವುದಕ್ಕಾಗುವುದಿಲ್ಲ. ಒಂದು ಬಿಂದಿಗೆ ನೀರು ಮೊಗೆದುಕೊಟ್ಟರೆ ಉಪಕಾರ."

ಆ ಮಾತಿಗೆ ಮಣಿದ ಸೋಮಾ ತನ್ನ ಬಿಂದಿಗೆಗಳನ್ನಿಳುಹಿ ಅವಳಿಗೊಂದು ಬಿಂದಿಗೆಯನ್ನು ತುಂಬಿ ಹೊರಿಸಿದನಂತರ, ತನ್ನ ಬಿಂದಿಗೆಗಳನ್ನು ಅವಳೊಂದಿಗೆ ಒಯ್ದು ಅವಳ ಮನೆಯಲ್ಲಿ ಸುರಿದು, ಪುನಃ ಮನೆಗೆ ನೀರನ್ನು ತುಂಬಿಕೊಂಡು ಹೋಗುವಾಗ ಹೊಟ್ಟೆಯು ಕರುಳೆಲ್ಲಾ ಚೂರಿಯಿಂದ ತಿವಿದು ಕೋರೈಸಿದಂತೆ ನಲುಗಿತ್ತು. 'ಅಷ್ಟೊಂದು ಹಿಂಸೆಯನ್ನು ಸಹಿಸಿಕೊಂಡು ಎಷ್ಟು ಕೆಲಸ ನಿರ್ವಹಿಸುತ್ತಾಳೆ ಬಿಂದು ! ಪಾಪ, ಬಹಳ ಗಟ್ಟಿ ಹುಡುಗಿ !' ಎಂದು ತನ್ನಲ್ಲಿ ತಾನೇ ಹೇಳಿಕೊಂಡಳು. ಗಲ್‌ಗಲ್ಲೆಂದು ಹೆಜ್ಜೆ ಮುಂದಿಡುವಾಗ ಗಂಗೋದಕ ತುಳುಕಿ ಉಡುಪು ಮತ್ತೆ ಮತ್ತೆ ತೊಯ್ಯುತಿತ್ತು. ಅತ್ತ ಹೆಚ್ಚು ಲಕ್ಷ್ಯಕೊಟ್ಟರೆ ಮನೆ ಮುಟ್ಟುವುದು ನಿಧಾನ. ಅರ್ಧ ಫರ್ಲಾಂಗ್ ದೂರದ ಕಾಲುಹಾದಿಯನ್ನು ಕಳೆದು ಮನೆಯನ್ನು ಮುಟ್ಟಿದಾಗಲೂ ಗ್ರಾಮವಲಯದಲ್ಲಿ ಹೆಚ್ಚಿನ ಸದ್ದು ಗದ್ದಲಗಳ ಸೊಲ್ಲೇ ಇರಲಿಲ್ಲ. ಭುವನ ಮಂಡಲ ಭಕ್ತಿಸಮುಜ್ವಲವಾಗಿದ್ದಂತೆ ಬೆಳಗಿನ ವಾತಾವರಣ ಪ್ರಶಾಂತವಾಗಿತ್ತು. ಸೋಮಾ ಬಿಂದಿಗೆಗಳನ್ನು ಬದಿಯಲ್ಲಿಟ್ಟು ದಿನಚರಿಯಲ್ಲಿ ನಿರತಳಾದಳು. ಮೂರು ದಿನಗಳ ಹಿಂದೆ ಮಳೆಯಲ್ಲಿ ಸೌದೆಗಳು ಪೂರಾ ತೊಯ್ದಿದ್ದುದರಿಂದ ಬೇಗನೆ ಉರಿಯಲೊಲ್ಲವು. ಸುತ್ತ ಪುಡಿಕೆಗಳನ್ನಿಟ್ಟ ಕೈಗೊಳವಿಯಲ್ಲಿ ಊದತೊಡಗಿದಳು.

ಹಸುಗಳಿಗೆ ಮೇವು ನೀಡಲು ಹಟ್ಟಿಗೆ ಹೋಗಿದ್ದ ಗೋಪಾ ಒಳ
ಬಂದಾಗ ಇನ್ನೂ ಒಲೆ ಹೊತ್ತಿಸುವುದರಲ್ಲಿದ್ದ ಮಗಳನ್ನು ಕಂಡು "ಇಂದೇ
ಮ್ಮಾ, ಇಷ್ಟು ಹೊತ್ತು ?" ಎಂದಳು. ಮುಖಚರ್ಯೆಯಲ್ಲಿ ಆಶ್ಚರ್ಯ
ಭಾವ ಮಿನುಗಿತು. ನಿಮಿರಿದ ನಯನ ಪಕ್ಷ್ಮಗಳು ಚಲಿಸಲಿಲ್ಲ.

"ಆಗಲೇ ಐದು ಬಾರಿ ನೀರು ತಂದೆ. ಬಿಂದೂಗೆ ಎರಡು ಬಿಂದಿಗೆ
ಎಯ್ದುಕೊಟ್ಟು ಬಂದೆ. ಅವಳ ಸ್ಥಿತಿಗತಿ ನೋಡಿದರೆ ಸಂಕಟವಾಗುತ್ತೆ."

"ನನಗೂ ತಿಳಿಯಿತು, ಪಾಪ! ಭುವನ ಕುಡಿಯದಿದ್ದಾಗ ಸರಿ
ಯಾಗಿರುತ್ತಾನಂತೆ! ಕುಡಿದರೆ ಕಷ್ಟ."

"ಅವನು ಕುಡಿಯದಿರುವುದು ಯಾವಾಗ ?"

ಮಾತನ್ನು ಅಷ್ಟಕ್ಕೆ ತುಂಡುಗಡಿದು ಒಲೆಯನ್ನು ಪುನಃ ಊದತೊಡ
ಗಿದಳು ಸೋಮಾ. ಒಳಗೆಲ್ಲಾ ಹೊಗೆ ತುಂಬಿದ್ದುದರಿಂದ ಉಸಿರು ಕಟ್ಟು
ತಿತ್ತು.

"ನೀನು ಎಷ್ಟು ಊದಿದರೂ ಇಷ್ಟೆ. ಮೊನ್ನೆ ರಾತ್ರಿಯ ಮಳೆಯಲ್ಲಿ
ತೊಯ್ದ ಸೌದೆ. ಸ್ವಲ್ಪ ತಾಳು, ಕೊಟ್ಟಿಗೆಯಿಂದ ಕೆಲವು ಒಣ ಪುಡಿಕೆ
ಗಳನ್ನಾಯ್ದು ತರುವೆ" ಎನ್ನುತ್ತ ಹೊರ ಹೋದಳು ತಾಯಿ ಅವಳಿಗೆ
ಮಗಳಿಂದ ಉತ್ತರವನ್ನು ನಿರೀಕ್ಷಿಸುವಷ್ಟು ಸಮಯ–ಸಹನೆ ಎರಡೂ ಇರ
ಲಿಲ್ಲ, ಹೊತ್ತು ಏರುತಿದ್ದುದರಿಂದ ಇನ್ನಷ್ಟು ಅವಸರ.

ಹೊರ ಜಗತ್ತಿನ ವಾತಾವರಣದಲ್ಲಿ ಬೆಚ್ಚನ್ನ ಬಿಸಿಲು ಬೆಚ್ಚಗೆ ಮೈಗ
ಟ್ಟುತಿತ್ತು. ಪಕ್ಷಿಗಳ ಇನಿಗೊರಳಲ್ಲಿ ಹೊಮ್ಮುವ ಜೀವನ ಸಂಗೀತ ಕರ್ಣ
ಮನೋಹರವಾಗಿ ಕೇಳಿಬರುತಿತ್ತು. ಮನೆಯಂಗಳದಲ್ಲಿ ಬೆಚ್ಚಗೆ ಮೈ
ಮುದುಡಿ ಮಲಗಿದ ನಾಯಿಯ ಕನಸಿನ ಚಿತ್ರ ಬೇರೆಯೇ ಇರಬಹುದು.

ಗೋಪಾ ಕೊಟ್ಟಿಗೆಯಲ್ಲಿದ್ದ ಒಣಕಡ್ಡಿಗಳನ್ನು ಮುರಿದು ಜೋಡಿಸಿ
ಕೊಂಡು ಒಳಬಂದಾಗಲೂ ಸೋಮಾ ಮೈಬಾಗಿ ಬೆಂಕಿಯನ್ನು ಊದು
ತ್ತಲೇ ಇದ್ದಳು. ಗೋಪಾ ಒಣಕಡ್ಡಿಗಳನ್ನು ಕಿಚ್ಚಿನ ಸುತ್ತ ಒಟ್ಟಿ ಅನು
ಕೂಲಿಸಿದ ನಂತರ ಬೆಂಕಿಯನ್ನು ಉರಿಸಿ ಅಡಿಗೆಗೆ ಕೈಹಚ್ಚುತ್ತ ಮಗಳಿ
ಗೆಂದಳು,

"ನಿನ್ನೆ ಎಳೆಗರುಗಳಿಗೆ ಗರಿಕೆ ಹುಲ್ಲು ತರಲು ಬಿಡುವೇ ಆಗಲಿಲ್ಲ."

"ಅದೆಷ್ಟೊತ್ತು ? ಅನಂತರ ನಾನೇ ತರುವೆ." ಎಂದ ಸೋಮಾ ವಿಷಯದಿಂದ ವಿಷಯಕ್ಕೆ ಸರಿದು ಶೋಕಭರಿತವಾಣಿಯಲ್ಲಿ ನುಡಿದಳು "ಇಂದು ಬಿಂದೂವನ್ನು ನೋಡಿ ಅದೆಷ್ಟು ಸಂಕಟವಾಯಿತೋ ಹೇಳಲಾರೆ."

"ಆತನಿಗೆ ಹೇಳುವವರು ಯಾರೂ ಇಲ್ಲ; ಅದೇ ಕೊರತೆ."

"ಹೇಳಿದ್ದು ಕೇಳುವಂತಿದ್ದರೆ ಇನ್ನಾವ ಕಷ್ಟವಿತ್ತು ?"

"ಪಾಪ, ಚಿಕ್ಕ ಹುಡುಗಿ."

"ಹೌದಮ್ಮಾ, ನನ್ನ ಜೊತೆ ಆಟಕ್ಕೆ ಬರುತ್ತಿದ್ದ ಹುಡುಗಿಗೆ ಇಂತಹ ಸಂಸಾರ !"

"ಜನ್ಮ ಜನ್ಮಾಂತರ ಕರ್ಮ !"

"ಬಿಡಿ, ಬಿಡಿ. ಅವಳು ಎಷ್ಟು ಬಾರಿ 'ಒಲ್ಲೆ' ಎನ್ನಲಿಲ್ಲ ? ಸುಮ್ಮನೆ ಒತ್ತಾಯಿಸಿ ನರಕಕ್ಕೆ ತಳ್ಳಿದ್ದು !"

"ಅದನ್ನೇ ಅಂದದ್ದು ಜನ್ಮಾಂತರ ಕರ್ಮ ಅಂತ !"

"ಮಾಡುವುದೆಲ್ಲಾ ಮಾಡಿ ಆ ಉತ್ತರ ಹೇಳಿದರೆ ಏನೆನ್ನಬೇಕು ?"

"ಯಾರಿಗೆ ಗೊತ್ತಮ್ಮ ಹೀಗಾಗುತ್ತೆ ಅಂತ ? ಯಾರ್‍ಯಾರ ಹಣೆಯಲ್ಲಿ ವಿಧಿ ಏನೇನು ಬರೆದಿದ್ದಾನೋ !"

ಆ ಮಾತನ್ನು ಮನದಲ್ಲೇ ಮೆಲಕು ಹಾಕಿದಳು ಸೋಮಾ. ಅವಳು ಬಾಲ್ಯ ಗೆಳತಿಯಾದುದರಿಂದ ಅವಳ ಸ್ವಭಾವವೆಲ್ಲಾ ಗೊತ್ತು. ಅವಳಲ್ಲಿ ಯಾವ ಕೆಟ್ಟ ಗುಣವೂ ಇರಲಿಲ್ಲ. ಮತ್ತೇಕೆ ಅವಳಿಗೆ ಹೊಡೆತ-ಬಡಿತ ? ಎಂಬುದು ಮನ ಕೊರೆಯುವ ಪ್ರಶ್ನೆ.

ಗೋಪಾ ಆ ವಿಚಾರವನ್ನು ಅಷ್ಟಕ್ಕೆ ಬಿಟ್ಟುಕೊಟ್ಟು ದಿನಚರಿಯಲ್ಲಿ ಗಮನವಿರಿಸಿದಳು.

ಸುತ್ತಮುತ್ತಲಿನ ಪರಿಸರವೆಲ್ಲಾ ತುಂಬು ಬೆಳೆಯಿಂದ ಕೂಡಿದ ಹಚ್ಚ ಹಸರಿನ ಸುಂದರ ವಿಸ್ತೀರ್ಣ. ಗದ್ದೆಯ ಅಂಚಿನಲ್ಲಿ ಸಣ್ಣ ಸಣ್ಣ ಕುಟೀರಗಳು ಕಾಣಬರುತ್ತವೆ. ಅವು ಅಂತಹ ಹತ್ತಿರದಲ್ಲೇನೂ ಇಲ್ಲ. ಸಾಮಾನ್ಯ ರೈತರ ಸಾಮಾನ್ಯ ಜೀವನಕ್ಕೆ ಅನುಗುಣವಾಗಿ ರೂಪುಗೊಂಡಿದ್ದ ಅವು ಪ್ರಕೃತಿ ಸೌಂದರ್ಯಕ್ಕೆ ಇಂಬುಗೊಟ್ಟವೆ. ಗದ್ದೆಯಂಚಿ

..ಂದ ಗರಿಕೆಯನ್ನು ಕೊಯ್ದು ತರಲು ಸಿದ್ಧಳಾದ ಸೋಮಾ ತಾಯಿ ..ಗೆಂದಳು,

"ಎಳೆಗರುಗಳಿಗೆ ಹುಲ್ಲು ಕೊಯ್ದು ತರುವೆ."

"ಈಗಲೇ ?"

"ಹೌದು. ಅನಂತರ ಬಿಸಿಲೇರುತ್ತೆ ; ಈಗಲೇ ಹಿತ."

ಅದು ಹೌದೆನಿಸಿತು ಗೋಪಳಿಗೆ. ಅವಳು ಮರು ನುಡಿಯಲಿಲ್ಲ.

ಕೂಡಲೇ ಸಣ್ಣ ಕುಡುಗೋಲನ್ನು ತೆಗೆದುಕೊಂಡು ಹೊರಹೊರಟಳು ಸೋಮಾ. ಹೆಜ್ಜೆಗಳು ಉತ್ಸುಕವಾದರೂ ಏನೋ ಒಂದು ಬಗೆಯ ನವ ವ್ಯಾಕುಲ-ಆಶಂಕೆಯ ಭಾವ ಮನದಲ್ಲಿ. ವಸ್ತುತಃ ಏನೆಂಬುದು ಅರ್ಥ ವಾಗದಿದ್ದರೂ ಕೀಟದಂತೆ ಕೊರೆಯುತಿತ್ತು ಅದು. ಗರಿಕೆಯ ಪಾತ್ರ ಸಮಾಪಿಸಿದರೂ ಅದರ ಅರಿವು ಮೂಡಲಿಲ್ಲ. ಸುಮ್ಮನೆ ತಲೆಬಾಗಿ ಮುಂದು ವರಿಯುತ್ತಿದ್ದಾಗಲೇ ಆತ್ಮೀಯ ಬಾಲ್ಯ ಗೆಳತಿ ದುರ್ಗಾ ಎದುರಾದಳು. ನೋಡಿದರೆ ಮುಖದಲ್ಲಿ ಖಳೆಯೇ ಇಲ್ಲ ! ಶೋಕವೇ ಮೈವೆತ್ತು ಬಂದಂತೆ ರಂಗುರಂಗಾದ ಕಣ್ಣಾಲಿಗಳು. ತೊಟ್ಟು ಕಳೆದ ಹೂವಿನಂತೆ ತಾಪತಪ್ತ ಮುಖಬಿಂಬ. ತಲೆಯ ಸುತ್ತ ಅಸ್ತವ್ಯಸ್ತವಾಗಿ ತುಂಬಿ ಹರಡಿದ ಕರಿಯ ಕುರುಳು.

ಅರೆ..........ಎಂತಹ ಆಶ್ಚರ್ಯ !

ಒಮ್ಮೆಗೇ ಆಶ್ಚರ್ಯ ಕುತೂಹಲಗಳ ಗಣಿಯಾಗಿ ಪ್ರಶ್ನಿಸಿದಳು ಸೋಮಾ,

"ಏನಮ್ಮಾ ಹೀಗಾಗಿದ್ದಿ ?"

"ಹಣೆ ಬರೆಹ !" ಅಲಸಕಂಠದಿಂದ ಉತ್ತರಿಸಿದಳು ದುರ್ಗಾ.

"ಅದು ಯಾರಿಗಿಲ್ಲ ? ಅದಕ್ಕೇಕೆ ಚಿಂತೆ ?"

"ನಂಬಿ ಕೆಟ್ಟೆ.....!" ಮುಂದೆ ಮಾತು ಹೊರಡಲಿಲ್ಲ. ಉಕ್ಕಿ ಬಂದ ದುಃಖವನ್ನು ತಡೆಯಲಾರದೆ ತುಟಿಕಚ್ಚಿದಳು ದುರ್ಗಾ. ಕಣ್ಣುಗಳಲ್ಲಿ ಫಳಕ್ಕನೆ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು.

"ಅಷ್ಟು ಚಿಂತಾಕ್ರಾಂತಳಾಗಬೇಡ ದುರ್ಗಾ. ಅದಕ್ಕೇನು ಪರಿಹಾರವೋ

ಅದನ್ನು ಕಂಡುಕೊಳ್ಳುವುದೇ ಪ್ರಾಥಮಿಕ ಪೂಜೆ. ಅನಂತರ ಪರಿಹಾರದ ಮಂಗಳಾರತಿ." ಎಂದಳು ಸೋಮಾ ಅಸ್ಖಲಿತವಾಣಿಯಲ್ಲಿ.

"ಏನು ಮಾಡಲಿ, ಸೋಮಾ ? ನನ್ನ ಹೃದಯ ಬಹಳ ಚಿಕ್ಕದು. ಅದು ಇಷ್ಟೆಲ್ಲಾ ವ್ಯವಹಾರವನ್ನು ಭರಿಸಲಾರದು."

"ಚಿಕ್ಕದಿರಬಹುದು; ಅದನ್ನಿಲ್ಲವೆನ್ನಲಾರೆ. ಆದರೆ, ಬೆಳೆಸಿಕೊಳ್ಳಲು ಪ್ರಯತ್ನಿಸು."

ಅವಳ ಕೈಗಳನ್ನು ಬಿಗಿಯಾಗಿ ಅದುಮಿ ಹಿಡಿದುಕೊಂಡು ಅತ್ಯಂತ ಆತ್ಮೀಯತೆಯಿಂದ ನುಡಿದ ಸೋಮಾ ಸ್ವಲ್ಪಹೊತ್ತು ಸುಮ್ಮನಿದ್ದು ಪುನಃ ಮುಂದುವರಿದಳು,

"ಜೀವನದಲ್ಲಿ ಬರಬಹುದಾದ ಗಂಡಾಂತರಗಳಿಗೆ ಗಮನ ಕೊಡುವುದೇ ತಪ್ಪು. ಇಲ್ಲಿ ಜೀವನ ಪ್ರಾಮುಖ್ಯವೇ ಹೊರತು ಗಂಡಾಂತರಗಳಲ್ಲ. ಅವುಗಳನ್ನು ತಳ್ಳಿ ಮುನ್ನಡೆಯುವುದೇ ಮಾನವ ಗುರಿ. ಯಾವುದೂ ಮನಸ್ಸಿಗೆ ಹಚ್ಚಿಕೊಳ್ಳಲೇ ಬೇಡ."

"ನಾವು ಅಷ್ಟೊಂದು ಪ್ರಾಜ್ಞರೇ ?"

ಆ ಪ್ರಶ್ನೆ ಮೊಳಗಿದಾಗ ಕಣ್ಣುಗಳಲ್ಲಿ ಭಾವಜ್ಯೋತಿ ದೈನ್ಯತೆಯಿಂದ ಮಿನುಗಿತು.

"ಹೌದಮ್ಮ, ಹೌದು. ನಾವು ಪ್ರಾಜ್ಞರು ಅಂದುಕೊಂಡರೇನೇ ಜೀವನ."

ಅವಳು ಮಾತಾಡಲಿಲ್ಲ.

"ಏಕೆ ಹೀಗಾಗಿದ್ದಿ ? ಏನಾಯಿತು ಹೇಳು ?"

"ನಾನು ಬಯಸಿದ್ದು ಸ್ವರ್ಣ ನಿಕ್ಷೇಪ. ವಿಧಿ ನೀಡಿದ್ದು ಇದ್ದಲಿನ ಗಣಿ !"

"ಹೋಗಲಿ ಬಿಡು. ಒಲೆಯುರಿಸಲಿಕ್ಕಾದರೂ ಬರುತ್ತೆ !"

ಒಡನೆ ಇಬ್ಬರ ಮುಖಬಿಂಬದಲ್ಲೂ ನಗುವಿನ ಚೆಲುವು ಉಕ್ಕಿ ಹರಿಯಿತು.

* * * *

ಹತ್ತು ನಿಮಿಷ ಉರುಳುವುದರೊಳಗಾಗಿ ದುರ್ಗಳ ತಂದೆ ರಾಮು

ದುರ್ಗಾ ಅಲ್ಲಿಗೆ ಅನಿರೀಕ್ಷಿತವಾಗಿ ಆಗಮಿಸಿದ. ಮಧ್ಯ ಹಣೆಯ ಮೇಲೆ ಹುರಿಯೆದ್ದ ನೀಲನರಗಳು, ಏನನ್ನೋ ಹೇಳಲು ವ್ಯಗ್ರವಾಗಿಅದುರುತಿದ್ದ ಕೆಂದುಟಿಗಳು ಮೊಟ್ಟಮೊದಲಿಗೇ ಅವನ ಅಸಮಾಧಾನವನ್ನು ಪ್ರಕಟಿಸಿ ಮವು. ಮರುಕ್ಷಣದಲ್ಲಿ ಹುಬ್ಬು ಗಂಟಿಕ್ಕಿಕೊಂಡು ಸ್ವಾಭಿಮಾನದಿಂದ ತನ್ನ ಕಂಠವನ್ನು ಜಾಗಟೆ ಬಾರಿಸಿದಂತೆ ಹರಿಹಾಯಿಸಿದ,

"ನಿನಗೆಷ್ಟು ಹೇಳಲಿ ದುರ್ಗಾ ? ಮತ್ತೆ ಅದೇ ಪ್ರಸ್ತಾಪ? ಯಾವುದು ಕೈಗೂಡುವುದಿಲ್ಲವೋ ಅದನ್ನು ಬಿಟ್ಟು ಬಿಡುವುದು ಲೇಸು."

ದುರ್ಗಾ ಮಂತ್ರಿತ ಫಣಿಯಂತೆ ಸುಮ್ಮನೆ ನಿಂತು ಬಿಟ್ಟಳು. ಅವನು ಅಷ್ಟಕ್ಕೆ ಸುಮ್ಮನಾಗದೆ ರೂಕ್ಷದನಿಯಲ್ಲಿ ಪುನಃ ಮುಂದುವರಿದ "ಈ ಜಗತ್ತಿನಲ್ಲಿ ಯಾವುದು ಶಾಶ್ವತ ? ನೀನು ಇದೇ ಆಗಬೇಕು ಅದೇ ಆಗಬೇಕು ಎಂದು ಬಯಸುವುದೇನು ಚೆಂದ ? ನಿನ್ನ ಜನ್ಮ ಇಲ್ಲಿ ಶಾಶ್ವತವೇ ? ಹಿರಿಯರ ಮುಂದೆ ನಿಂದೇನು? ನಾವು ಹೇಗೆ ಹೇಳಿದರೆ ಹಾಗೆ ಕೇಳಬೇಕು! ಹೆಣ್ಣಾದವಳು ಅತಿಯಾಗಬಾರದು."

ಆ ವೃದ್ಧನ ದರ್ಪೋದ್ಧತ ಕಂಠಸ್ವರ ಹೊಮ್ಮಿದಾಗ ಶಿರದ ನರಗಳು ಹುರಿಗಳಂತೆ ಉಬ್ಬಿಕೊಂಡಿದ್ದು, ಮುಖಭಾವದಲ್ಲಿ ಕೋಪದ ಕಾವು ಕಾಣಿಸುತಿತ್ತು. ರೋಮರೋಮಗಳಿಂದಲೂ ಆತ್ಮವಿಶ್ವಾಸವನ್ನು ಪ್ರಕಟಗೊಳಿಸುವಂತೆ ಪುನಃ ಕಂಠಸ್ವನವನ್ನು ಹರಿಯಬಿಟ್ಟ,

"ಈ ಗೆಳತಿ ಆ ಗೆಳತಿ ಎಂದು ಊರೆಲ್ಲಾ ನಿನ್ನ ಕತೆ ಹೇಳುತ್ತಾ ಹೋದರೆ ನಿನ್ನ ಮರ್ಯಾದೆಯನ್ನು ನೀನು ಕಳೆದುಕೊಳ್ಳುವುದೇ ಸೈ. ನಡೆ ಮನೆಗೆ. ಕೆಲಸ-ಕಾರ್ಯ ನೋಡಿಕೊಂಡು ಗಂಭೀರವಾಗಿರು!"

ಆ ವಾಕ್ಸರಣಿ ಕರ್ಣಪಟಲಗಳಿಗೆ ತಾಗಿದಾಗ ನಿದ್ರಿತರ ಮೇಲೆ ತಣ್ಣೀರೆರಚಿದಂತಾಯಿತು ಇಬ್ಬರಿಗೂ. ಅಂತರಂಗಿಕ ಸ್ತಬ್ಧತೆಯಲ್ಲಿ ಸೋಮಾ ದೈನ್ಯದೃಷ್ಟಿಯನ್ನು ಗೆಳತಿಯ ಮೇಲೆ ಹರಿಸಿದಳು. ಆ ಅನುತಾಪದಗ್ಧ ಶರೀರ ಕಮ್ಮಾರನ ತಿದಿಯಂತೆ ಏರಿ ಇಳಿಯುತ್ತ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲು ಇಷ್ಟಪಡದೆ ಮೌನಗತಿಯಲ್ಲಿ ನಿಂತಿತ್ತು.

ಕೆಲವು ಕ್ಷಣಗಳು ನಿರಾತಂಕವಾಗಿ ಕಳೆದುವು.

ಅವಳ ಅಂತರ್ಯುದ್ಧದ ಕೋಲಾಹಲವನ್ನು ನೋಡಲಾರದೆ ಅನುಕಂಪ ದಿಂದ ನುಡಿದಳು ಸೋಮಾ,

"ಹೋಗಲಿ, ಬಿಡು ದುರ್ಗಾ. ಇನ್ನು ಚಿಂತೆ ಹಚ್ಚಿಕೊಳ್ಳುವುದರಿಂದ ಏನಾದೀತು ? ನಿನ್ನ ಜೀವನ ಕುಸುಮವನ್ನು ಆತ್ಮಪೂರ್ವಕವಾಗಿ ಭಗವಂತ ನಿಗೆ ಅರ್ಪಿಸಿಬಿಡು. ಒಳ್ಳಿತು–ಕೆಡಕು ಅವನಿಗೇ ಸೇರಲಿ. ನೀನು ಯೋಚಿ ಸಲೇ ಬೇಡ."

ಆ ಮಾತು ಹಿತವೆನಿಸಿತು ರಾಮದುರ್ಗನಿಗೆ; ಮತ್ತೆ ಅವನು ಏಕಾಂತ ನಿಷ್ಠೆಯಿಂದ ನುಡಿದ,

"ಇದೀಗ ನೀನು ಹೇಳಿದ್ದು ಸರಿ. ಹೆಣ್ಣಾಗಿ ಹುಟ್ಟಿ ಆಸೆಪಟ್ಟೇನು ಫಲ ? ಮೂರು ದಿನದ ಬಾಳು. ಹೇಗಾದರೂ ಹೊಂದಿಕೊಂಡರೆ ಆಯಿತು."

ಇಬ್ಬರ ನೋಟವೂ ಅವನೆಡೆಗೆ ಹೊರಳಿ ಹಿಮ್ಮರಳಿತು. ತುಟಿಗಳು ಬಿರಿಯಲಿಲ್ಲ.

ವೃದ್ಧ ಮಹಾಶಯ ಸೋಮಾ ಕಡೆಗೆ ದೃಷ್ಟಿ ಹೊರಳಿಸಿ ಅಜ್ಞಾ ಪೂರ್ವಕವಾಗಿ ಅಂದ,

"ನಿನ್ನ ಗೆಳತಿಗೆ ಆಗಾಗ ಸ್ವಲ್ಪ ಹೇಳುತ್ತಿರು. ಅವಳಿಗೆ ತಿಳಿವಳಿಕೆ ಸಾಲದು. ತೀರಾ ಹುಚ್ಚು ಹುಡುಗಿ!"

ಅನಂತರ,

ಅವನು ಸೋಮಳ ಪ್ರತ್ಯುತ್ತರವನ್ನೇನೂ ನಿರೀಕ್ಷಿಸದೆ ತನ್ನ ಮಗ ಳೊಡನೆ ಗೃಹಾಭಿಮುಖವಾಗಿ ಹೊರಟ. ಗದ್ದೆಯಂಚಿನಲ್ಲಿ ನಡೆಯುತ್ತ ದುರ್ಗಾ ಸೋಮಳ ಕಡೆ ಹಿಂತಿರುಗಿ ನೋಡಿ ಖಿನ್ನಮನಸ್ಕಳಾಗಿ ಮುಂದು ವರಿದಳು. ಹಿಂದಿಲಿಂದ ಸೋಮಳ ನಯನ ಚೈತ್ಯಾಕ್ಷಿಗಳು ಅವರು ಮರೆ ಯಾಗುವವರೆಗೂ ನಿಟ್ಟಿಸಿದುವು. ಗೆಳತಿಯ ಸಂಕಟ ಎದೆಯಾಳದಲ್ಲಿ ಕಸಿವಿಸಿ ಮೂಡಿಸಿತು. ಸೋಮಾ ಕುಡುಗೋಲಿಗೆ ಕೈಹಚ್ಚಿ, ಚಿತ್ತವನ್ನು ಆಲೋಚನಾ ಸಾಮ್ರಾಜ್ಯದಲ್ಲಿ ನೆಟ್ಟು ಗರಿಕೆಯನ್ನು ಕೊಯ್ಯತೊಡಗಿದಳು. ಹಾಗೆ ಅದೆಷ್ಟು ಹೊತ್ತು ಉರುಳಿತೋ; ತನಗೆ ಬೇಕಾದುದಕ್ಕಿಂತಲೂ ಹೆಚ್ಚಾಗಿ ಕೊಯ್ದಿದ್ದರೂ ಅದರೆಡೆಗೆ ಪರಿವೆಯೇ ಇಲ್ಲ.

ಮನೆಯ ಮೆಟ್ಟಲಲ್ಲಿ ನಿಂತ ಗೋಪಾ ಕೂಗಿ ಕರೆದಳು,

"ಇನ್ನೂ ಮುಗಿಯಲಿಲ್ಲವೇ ಸೋಮಾ ?"

"ಆಯಿತು, ಬಂದೆ."

ಅಲ್ಲಿಂದಲೇ ನೇರವಾಗಿ ಉತ್ತರಿಸಿದ ಸೋಮಾ ಮನೆಯ ಕಡೆ ಗರಿಕೆಯೊಡನೆ ಹೊರಟಳು. ಹೊರಬಾಗಿಲಲ್ಲೇ ಎದುರಾದ ಗೋಪಾ ಕಾತರ-ತವಕ-ಅವಸರಗಳ ವಶೀಭೂತಳಾಗಿ ತಟ್ಟನೆ ಪ್ರಶ್ನಿಸಿದಳು,

"ನೀನಿಂದು ನೀರಿಗೆ ಹೋದಾಗ ಬಿಂದೂ ಕಾಣಸಿಗಲಿಲ್ಲವೇ ?"

"ಇಲ್ಲವಲ್ಲಾ."

"ನೋಡು ! ಅವಳೀಗ ಪತ್ತೆಯೇ ಇಲ್ಲವಂತೆ !"

"ಅಂದರೆ.....?" ಅಷ್ಟೇ ಆಶ್ಚರ್ಯದಿಂದ ಕೇಳಿದಳು ಸೋಮಾ.

"ಅದೇ ಆಗಲೇ ಹೇಳಿದೆನಲ್ಲಾ. ಅವಳೆಲ್ಲೋ ಕಾಣೆಯಾಗಿದ್ದಾಳೆ!"

"ಯಾವಾಗಿನಿಂದ.....?"

"ಇದೇ ಬೆಳಗ್ಗೆ ಅವಳೂ ನೀರಿಗೆ ಹೋಗಿದ್ದಳಂತೆ !"

"ನಾನು ನಾಲ್ಕುಬಾರಿ ಅದೇ ದಾರಿಯಲ್ಲಿ ಓಡಾಡಿದೆ. ಅವಳೆಲ್ಲೂ ಕಾಣಿಸಲೇ ಇಲ್ಲ," ಎಂದ ಸೋಮಾ ಯೋಚನೆಯ ಭಾರದಲ್ಲಿ ಮರವಟ್ಟಂತೆ, ನಿಶ್ಚೇಷ್ಟಳಂತೆ ನಿಂತುಬಿಟ್ಟಳು. ಹಿಂದಿನ ದಿನದ ಅವಳ ಕರುಣಾಜನಕ ಚಿತ್ರಾರ ಅಕ್ಷಿಪಟಲದ ಮೇಲೆ ಮಿಂಚಿ ಮಾಯವಾಯಿತು. ಭಾರಭಾರವಾದ ಉಸಿರನ್ನು ಹೊರಹಾಕಿ ಅತ್ಯಂತ ವಿಷಾದಪೂರ್ಣ ದನಿಯಲ್ಲಿ ನುಡಿದಳು,

"ಎಂತಹ ಪ್ರಮಾದ! ಏನಾದರೂ ಅನಾಹುತವಾಯಿತೋ ಏನೋ."

"ದೇವರಿಗೇ ಗೊತ್ತು !"

"ಪಾಪ, ಬಿಂದೂ! ಅವಳೆಷ್ಟು ಒಳ್ಳೆ ಹುಡುಗಿ? ಹೇಗೆ ತಾನೇ ಆ ಹಿಂಸೆ ಸಹಿಸಿಯಾಳು ?"

"ಏನುಮಾಡುವುದಕ್ಕಾಗುತ್ತೆ ? ಜೀವನಬಂಧ ಯಾರಿಗೆ ತಪ್ಪಿದ್ದು ? ಹೆಚ್ಚು-ಕಡಿಮೆ ಇದು ಎಲ್ಲರ ಬಾಳಲ್ಲೂ ಇದ್ದದ್ದೆ! ಅವಳು ಮನಸ್ಸಿಗೆ ಸ್ವಲ್ಪ ಹಚ್ಚಿಕೊಂಡಳು ಎನಿಸುತ್ತೆ !"

"ಅಷ್ಟೊಂದು ಹಿಂಸೆ ಇರುವಾಗ ಹಚ್ಚಿಕೊಳ್ಳದೆ ಇನ್ನೇನು ಮಾಡಿಯಾಳು ?"

"ನೀನಿನ್ನೂ ಚಿಕ್ಕವಳು ! ನಿನಗೆ ಇದೆಲ್ಲಾ ಅರ್ಥವಾಗುವುದಿ
ಏನಿದ್ದರೂ ಸಹಿಸಿಕೊಳ್ಳಬೇಕು ! ಈಗ ಅವಳು ಏನು ಸಾಧಿಸಿದ ಹಾ
ಯಿತು ? ಓಡಿಹೋಗುವುದರಿಂದ ಮಾನಕ್ಕೆ ಕುಂದಲ್ಲವೇ ?"

ತಾಯಿಯ ಅತ್ಯಂತ ದೃಢವಾದ ನಿಲುವು ಮಗಳಿಗೆ ಎಲ್ಲಿಲ್ಲದ ಆಶ್ಚ
ಮೂಡಿಸಿತು. ಹುಬ್ಬೆತ್ತಿ ನೋಡುತ್ತ ದೃಢ ಕಂಠದಿಂದ ನುಡಿದಳು,

"ಹೋಗಲಿ ಬಿಡಿ, ಮಾನಗೇಡಿನ ಕೆಲಸ ಅವಳೇನೂ ಮಾಡಲಾರಳ
ಎಲ್ಲಾದರೂ ಅವಳ ಅನ್ನವನ್ನು ಅವಳು ದುಡಿದುಕೊಳ್ಳುತ್ತಾಳೆ."

"ದುಡಿಯುವುದೇನು ಹೆಚ್ಚು ? ಮುಖ್ಯವಾಗಿ....."

ತಾಯಿಯ ಮಾತನ್ನು ಮುಂದುವರಿಸಗೊಡದಂತೆ ನಡುವೆ ಬಾಯಿ
ಹಾಕಿದಳು ಸೋಮಾ,

"ಪ್ರಾಣಕ್ಕೆ ಸುಖವಿಲ್ಲದ ಮೇಲೆ ಇನ್ನೇನು ಬೇಕಾದೀತವಳಿಗೆ ?"

"ಪ್ರಾಣ ಹೋದರೂ ಮಾನಬಿಡಬಾರದು ಮಗೂ !"

ಅಲ್ಲಿಗೆ ಪ್ರಶ್ನೋತ್ತರಗಳ ಪ್ರವಾಹ ನಿಂತು ಹೋಯಿತು. ಸೋಮಾ
ಆಶ್ಚರ್ಯಚಕಿತಳಾದರೂ ಸ್ತ್ರೀಜೀವನದ ಕಡೆ ಲಕ್ಷ್ಯವಿಟ್ಟು ನೋಡಿದಳು
ದುಃಖ-ದುಗುಡ-ಪರಿತಾಪಗಳ ನಾನಾ ಮುಖಗಳು ಸ್ಮರಣೆಯ ಹಾದಿಯಲ್ಲಿ
ಸಾಗಿಹೋದುವು. ಬದುಕಿನ ಬೇಗೆ ನರನರಗಳನ್ನು ಸುಡಹತ್ತಿತು. ಚಿಂತೆಯ
ಒತ್ತಡದಿಂದ ಭಾರವಾದ ಹೃದಯವನ್ನು ಹೊರಲಾರದೇ ಹೊತ್ತು ಸುಮ್ಮ
ನಿಂತು ಬಿಟ್ಟಳು. ಒಂದೆರಡು ಕ್ಷಣ ಕಣ್ಣ ಮುಂದಿನ ವಸ್ತುಗಳೆಲ್ಲಾ ಮೆಲ್ಲ
ಮೆಲ್ಲನೆ ತೇಲಿ ಹೋಗುತ್ತಿರುವಂತೆ ಭಾಸವಾಯಿತು ; ಅಂಗಳದಲ್ಲಿ ಮೈಮು
ದುಡಿ ಮಲಗಿದ ನಾಯಿಯೂ ಸಹ.

* * * *

ಮನೆಯಂಗಳದ ಅಂಚಿನಲ್ಲಿ ನಿಂತ ಸೋಮಾ ದೂರ ಗದ್ದೆಯ ಕಡೆ
ದೃಷ್ಟಿ ಹರಿಸಿದಳು. ಹೊಂಬಣ್ಣಕ್ಕೆ ತಿರುಗುವುದರಲ್ಲಿದ್ದ ಭತ್ತದ ಸಸಿಗಳ
ಗಾಳಿಯಲೆತದಿಂದ ತಲೆದೂಗುವ ದೃಶ್ಯ ಅಲೆಯಲೆಯಾಗಿ ಸಮುದ್ರದ
ಗಳಂತೆ ತೋರುತಿದ್ದುವು. ಎಳೆಗರುಗಳ ಮುಂದೆ ಚಿಗುರು ಹುಲ್ಲನ್ನು ಚೆ
ಅಂಗಳಕ್ಕೆ ಕಾಲಿಟ್ಟ ಸೋಮಾ ಒಳಹೋಗುವುದರಲ್ಲಿದ್ದಾಗ ದೂರದ ಗದ್ದೆ
ಯಂಚಿನ ದಿಣ್ಣೆಯ ಮೇಲೆ ನಡೆದು ಬರುತಿದ್ದ ದುರ್ಗಾ ಕಣ್ಣಿಗೆ ಕಾಣಿ

ಕೊಂಡಳು. ಆಗ ಒಳಹೋಗುವ ಯೋಚನೆಯನ್ನು ಅಷ್ಟಕ್ಕೆ ಬಿಟ್ಟು ಕೊಟ್ಟು ಅವಳಿಗಾಗಿ ಅಲ್ಲೇ ಕಾದು ನಿಂತಳು ಸೋಮಾ. ಅವಳು ಆ ತಗ್ಗುದಿಣ್ಣೆಯ ಹಾದಿಯನ್ನು ಹತ್ತಿ ಇಳಿದು ಕ್ರಮಿಸುವಾಗ ಉಂಟಾದ ಅನುಭವ ಮನವನ್ನು ಯಾವುದೋ ಕಂಡರಿಯದ ಪರಿಸ್ಥಾನಕ್ಕೆ ಎಳೆ ಯೊಯ್ಯುತ್ತಿರುವಂತೆ ಭಾಸವಾಯಿತು. ಅವಳು ಹತ್ತು ನಿಮಿಷದ ಹಾದಿ ಯನ್ನು ಕಳೆದು ಅಂಗಳಕ್ಕೆ ಕಾಲಿಟ್ಟಳು ದೀಪ್ತ ಲಲಾಟದ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡಿದ್ದುವು. ಅಂತರ್ಯದ ಪರಿ ಸ್ಥಿತಿ ಯಥಾರೀತಿ ಇದ್ದು, ಮೈಯಲ್ಲಿ ಇಸಿತೂ ಉತ್ಸಾಹದ ಸುಳಿವಿರದೆ ನೋಡಿದವರ ಮನಸ್ಸು ಮಂಜಿನಂತೆ ಕರಗುವಂತಹ ಕರುಣಾಜನಕ ಚಿತ್ತಾರ. ಸೋಮಾ ಮನಮರುಗಿ ಸ್ವಾಗತಪೂರ್ವಕವಾದ ಎಳೆನಗುವನ್ನು ಹಾರ್ದಿಕವಾಗಿ ಸೂಸಿ ನುಡಿದಳು,

"ಬಾಮ್ಮಾ, ದಿನದಿನಕ್ಕೂ ಸೊರಗುತ್ತಲೇ ಇದ್ದೀ. ನಿನ್ನನ್ನು ನೋಡಿದರೆ ಸಂಕಟವಾಗುತ್ತೆ."

"ಹೋಗಲಿ, ಬಿಡು. ಈ ಬದುಕು ಯಾರಿಗೆ ಬೇಕಾಗಿದೆ ?"

"ಅಷ್ಟು ಸುಲಭವಾಗಿ ಯಾವುದನ್ನೂ ತಳ್ಳಿಹಾಕುವಂತಿಲ್ಲ. ಬದುಕಿ ರುವಷ್ಟು ಕಾಲ ಲವಲವಿಕೆಯನ್ನು ಉಳಿಸಿಕೊಳ್ಳಲೇ ಬೇಕಲ್ಲ ?"

"ಹೇಗಾದರೂ ಆಗಲಿ. ನನಗದರ ಚಿಂತನೆಯೇ ಇಲ್ಲ."

"ಹಾಗೆಂದರೆ ಬದುಕನ್ನು ಸಾಗಿಸುವವಳು ನೀನು ತಾನೇ ?"

"ಅದೇನು ಹೆಚ್ಚಲ್ಲ." ತಲೆಯಾಡಿಸುತ್ತ ನುಡಿದಳು ದುರ್ಗಾ.

"ನೀನು ತಿಳಿದುಕೊಂಡಷ್ಟು ಸುಲಭವಲ್ಲ ಬದುಕು."

"ಈ ವಿಚಿತ್ರ ಜಗತ್ತಿನಲ್ಲಿ ನಮ್ಮ ಯಾವ ಬಯಕೆಯನ್ನೂ ಪೂರೈಸು ವುದು ಕಷ್ಟ. ಮತ್ತೇಕೆ ಬದುಕಿನ ಮೇಲೆ ಆಸೆ ? ಒಳ್ಳಿತು–ಕೆಡಕು ಜೀವನದಲ್ಲಿ ಇದ್ದದ್ದೇ."

"ಈಗ ಎರಡೂ ನಿನ್ನ ಬಳಿ ಇಲ್ಲ. ಅದರಿಂದಲೇ ಈ ಯಮು ಧೈರ್ಯ. ಅವು ಸಂಜನಿಸಿದಾಗ ನೀನೀ ಸ್ಥೈರ್ಯವನ್ನು ಉಳಿಸಿಕೊಂಡಲ್ಲಿ ಖಂಡಿತ ಸುಖಿಯಾಗುವಿ."

"ನಾನೀಗ ಏನನ್ನೂ ಕೂಡ ಬಯಸುತ್ತಿಲ್ಲವಲ್ಲಾ ?"

ಒಡನೆ ಇಬ್ಬರ ಮುಖಗಳಲ್ಲೂ ಅಮಾಯಕ ಭಾವ ಭಾರದ ನೀರಸ ನಗೆ ಕಂಡೂ ಕಾಣದಂತೆ ಮಿನುಗಿ ಮಾಯವಾಯಿತು.

ದೂರದಲ್ಲಿ ದೃಷ್ಟಿಯ ನೇರಕ್ಕೆ ಅಲ್ಲಲ್ಲಿ ಧವಳಾಂಬರಧಾರಿಗಳು ಅನಿರೀಕ್ಷಿತವಾಗಿ ಕಂಡುಬಂದುದಲ್ಲದೆ ಮನೆ ಮನೆಗಳಿಂದ ಇನ್ನೂ ಹೊರಬರುತ್ತಲೇ ಇದ್ದಾರೆ. ಗದ್ದೆಯಂಚಿನಲ್ಲಿ ಹಾದು ಎಲ್ಲರೂ ಉತ್ತರೀತಟದ ಮಾರ್ಗ ಹಿಡಿದುದೂ ಸಹ ವಿಶೇಷವೇ.

"ಯಾವ ವಿಶೇಷ ಅವರನ್ನು ಆಕರ್ಷಿಸಿರಬಹುದು ? ಎಲ್ಲಿಗೆ ಪಯಣಿಸುತ್ತಿದ್ದಾರೆ....?" ಎಂದಳು ದುರ್ಗಾ ಅತ್ಯಾಶ್ಚರ್ಯದಿಂದ.

"ನನಗೂ ಆಶ್ಚರ್ಯವೇ. ಎಲ್ಲರೂ ಬಿಳಿಯುಡುಪು ತೊಟ್ಟಿರುವುದನ್ನು ನೋಡಿದರೆ ಬುದ್ಧದೇವ ಬಂದಿದ್ದಾರೇನೋ ಎನಿಸುತ್ತೆ !"

"ನಮ್ಮ ಪ್ರಾಂತಕ್ಕೇ ಬಂದಿರಬಹುದು. ಆಗೆಲ್ಲಾ ನಮ್ಮವರು ಹೆಂಗಳೆಯರ ಮೇಲೆ ಗದ್ದೆಗಣ್ಣಗಳನ್ನು ಬಿಟ್ಟು ಹೊರ ಪ್ರಾಂತಕ್ಕೆ ಹೋಗಿಬಿಡುತಿದ್ದರು. ಈಗ ನೋಡಿದರೆ ಎಲ್ಲಾ ಇಲ್ಲೇ ಎಲ್ಲೋ ಜಮಾವಣೆಯಾಗುವಂತಿದೆ!"

"ಇರಬಹುದು.....ತಾಳು ಯಾರನ್ನಾದರೂ ಕೇಳೋಣ."

"ಅವರು ನಮಗೆ ಹೇಳುವಷ್ಟು ಸಹನೆ ತೆಗೆದುಕೊಂಡರಷ್ಟೆ ; ಬಿಡು ನಮ್ಮಂತಹವರು ತಿಳಿದುಕೊಂಡು ಮಾಡುವುದಾದರೂ ಏನು ?"

"ಅದೇಕಷ್ಟು ನಿರಾಸೆ ?"

"ಅಯ್ಯೋ ಕೈಗೆಟುಕದ ಫಲ ಬಯಸಿ ಮಾಡುವುದಾದರೂ ಏನು ? ಒಂದುವೇಳೆ ತಿಳಿದುಕೊಂಡರೂ ಏನು ಪ್ರಯೋಜನ ?" ಎಂದಳು ದುರ್ಗಾ ಮನೋವೇದನೆಯನ್ನು ಸೂಸಿ.

ಆ ಪ್ರಶ್ನೆ ಮನದಾಳಕ್ಕಿಳಿಯಿತು. ಒಂದೆರಡು ಘಳಿಗೆ ಮರವಟ್ಟಂತೆ ಸುಮ್ಮನೆ ನಿಂತುಬಿಟ್ಟಳು ಸೋಮಾ. ಗೆಳತಿಗೆ ಏನು ಹೇಳಬೇಕೋ ಬಗೆಹರಿಯಲಿಲ್ಲ. ಅಷ್ಟರೊಳಗಾಗಿ ಅತ್ಯಂತ ದೈನ್ಯವಾಣಿಯಲ್ಲಿ ಅವಳೇ ಮುಂದುವರಿದಳು,

"ಬಹುಶಃ ತಪ್ಪುಮಾಡಿದವರನ್ನೆಲ್ಲಾ ಹೆಣ್ಣಾಗಿ ಹುಟ್ಟಿಸಬಹುದು ದೇವರು ! ಜೀವಕೋಟಿಗೆ ಈ ಸ್ತ್ರೀ ಜೀವನವೇ ನರಕ ! ಇದಕ್ಕಿಂತಲೂ

ತುಚ್ಛ ಯಾವುದೂ ಇಲ್ಲ!"

"ಹೇಗೆ ಭಾವಿಸಿದರೆ ಹಾಗೆ!" ಎನ್ನುತ್ತ ಗಂಭೀರವಾದಳು ಸೋಮಾ.

"ಭಾವಿಸುವುದೇನು ? ಪ್ರತ್ಯಕ್ಷ ಪ್ರಮಾಣ !"

ಆ ಮಾತು ಕರ್ಣ ಪಟಲಗಳ ಮೇಲೆ ತಾಗಿದಾಗ ಸ್ತ್ರೀ ಜೀವನದ ನಾನಾ ಮುಖಗಳ ಮೇಲೆ ದೃಷ್ಟಿ ಹರಿಯಿತು. ಸ್ವಲ್ಪ ಹೊತ್ತು ನಿಶ್ಚಲ ಭಂಗಿಯಲ್ಲಿ ಯೋಚನಾಮಗ್ನಳಾದಾಗ ನಖಶಿಖಾಂತ ನಸುಕಂಪನದ ಅಲೆ ಹರಿದಾಡುತ್ತಿರುವಂತೆ ಭಾಸವಾಯಿತು. ಮರುಘಳಿಗೆಯಲ್ಲಿ ತನ್ನನ್ನು ತಾನೇ ಸಮಾಧಾನಿಸಿಕೊಳ್ಳುತ್ತ ಮೌನ ಮುರಿದಳು,

"ಚಿಂತಿಸಬೇಡ ದುರ್ಗಾ, ಕಾಲ ಎಂದೂ ಒಂದೇ ತೆರನಾಗಿರುವುದಿಲ್ಲ. ಕ್ರಮಕ್ರಮೇಣ ನಮ್ಮಲ್ಲೂ ಮಹತ್ತರವಾದ ಬದಲಾವಣೆಗಳು ಆಗಲೇ ಬೇಕು; ಒಂದಲ್ಲ ಒಂದುದಿನ ಆಗಿಯೇ ತೀರುತ್ತವೆ."

"ಸರಿ; ಆ ದಿನಗಳು ಬರುವಾಗ ನಮ್ಮ ಮೂಳೆಗಳೂ ಉಳಿದಿರಲಾರ ವೇನೊ."

ಹಾಗೆಂದು ತೀರಾ ನಿರಾಸಕ್ತಿಯಿಂದ ನುಡಿದ ದುರ್ಗಾ ನೋಟವನ್ನು ಗದ್ದೆಯಮೇಲೆ ಚೆಲ್ಲಿಕೊಟ್ಟಳು. ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದ ಧವಳಾಂ ಬರ ಧಾರಿಗಳೆಲ್ಲಾ ಉತ್ತರೀತಟದ ಮಾರ್ಗವನ್ನು ಅವಲಂಬಿಸಿ ಎಳೆಸೇರಿಸಿ ಪೋಣಿಸಿದಂತೆ ಎಲ್ಲರೂ ಒಂದಾಗಿ ನಡೆಯುತ್ತಿದ್ದಾರೆ. ನಡಿಗೆಯಲ್ಲಿ ಅತ್ಯಂತ ತೀವ್ರತೆ ಕಾಣಿಸುತ್ತಿದೆ.

* * * *

ತಂಗಾಳಿಯೊಡನೆ ಚಿನ್ನಾಟಕ್ಕಿಳಿದಿದ್ದ ಸೀರೆಯ ಸೆರಗನ್ನು ತಲೆಯ ಮೇಲೆ ಸರಿಯಾಗಿ ಹೊದ್ದು ಗದ್ದೆಬಯಲಕಡೆ ದಿಟ್ಟಿಯನ್ನು ಹರಿಸಿದಳು ಸೋಮಾ. ಮನೆಯಿಂದ ಆಗತಾನೇ ಹೊರಬಿದ್ದ ದುರ್ಗಳ ಅಣ್ಣ–ಚೆನ್ನ ದುರ್ಗಾ ಕಾಣಿಸಿಕೊಂಡ. ಅವನೂ ಸಹ ಬಿಳಿಯ ಉತ್ತರೀಯ ಹೊದ್ದಿದ್ದಾನೆ! ಕಾಲುಗಳು ಮಾರಿಗೊಂದು ಹೆಜ್ಜೆ ಇಡುತ್ತಿವೆ!

"ದುರ್ಗಾ! ನೋಡಲ್ಲಿ, ನಿನ್ನಣ್ಣನೂ ಹೊರಟಿದ್ದಾನೆ!"

ಅವನನ್ನು ನೋಡುತ್ತಲೂ ಉತ್ಸಾಹದಿಂದ ಕೂಗಿ ಕರೆದಳು ದುರ್ಗಾ,

"ಓ ! ಚಿನ್ನಣ್ಣಾ, ಒಂದು ನಿಮಿಷ ಇಲ್ಲಿ ಬಂದು ಹೋಗು !"

ಅವನು ಅಲ್ಲಿಂದಲೇ ಕೇಳಿದ "ಏನು ವಿಷಯ ? ಏತಕ್ಕೆ ಕರೆದೆ ?"

"ನಿನಗೆ ಒಂದು ನಿಮಿಷ ಇಲ್ಲಿಗೆ ಬಂದರೇನು ನಷ್ಟ? ಅಲ್ಲಿಂದಲೇ ಕೇಳುತ್ತಿದ್ದೀಯೆ ?"

"ಹೆಚ್ಚು ಸಮಯವಿಲ್ಲ. ಅವರೆಲ್ಲಾ ಮುಂದೆ ಹೋಗಿ ಬಿಡುತ್ತಾರೆ !"

"ಅಷ್ಟ್ಯಾಕೆ ಚಿಂತೆ ? ಒಂದೇ ನಿಮಿಷ ಅಷ್ಟೆ."

ಅವನು ಓಡೋಡಿ ಬಂದು ಅಂಗಳ ಹತ್ತುತ್ತಲೂ ದುರ್ಗಾ ಸರಸ ಸಲಿಗೆಯಿಂದ ಟೀಕಿಸಿದಳು,

"ಒಳ್ಳೆ ಹುಡುಗಿಯಂತೆ ವರ್ತಿಸುತಿದ್ದಿ !"

"ಅದೆಲ್ಲಾ ಇರಲಿ, ಈಗ ಏನು ಹೇಳು !"

"ಉತ್ತರೀಯ ಹೊದ್ದು ಎಲ್ಲಿಗೆ ಹೊರಟೆ ?"

"ಜಾಹ್ನವೀತಟಕ್ಕೆ ಬುದ್ಧದೇವ ಬರುತ್ತಾರಂತೆ !"

"ಯಾರು ಹೇಳಿದ್ದು ?"

"ಊರವರೆಲ್ಲಾ ಅತ್ತ ಹೋಗುತ್ತಿರುವುದು ಕಾಣಿಸುತ್ತಿಲ್ಲವೇ ?"

ಅಷ್ಟೆಂದವನು ಅಲ್ಲಿ ನಿಲ್ಲದೆ ಬಿಟ್ಟ ಬಾಣದಂತೆ ಓಡಿದ.

ಹುಡುಗಿಯರಿಬ್ಬರೂ ವಿಷಯವನ್ನರಿತನಂತರ ಆನಂದ ಪುಳಕಿತರಾದರು. ನರನಾಡಿಗಳೆಲ್ಲ ಉಲ್ಲಸಿತಗೊಂಡು ಕಾಲ ಕೆಳಗಿನ ಭೂಮಿ ಸ್ವತಃ ಉತ್ತರೀತಟದೆಡೆಗೆ ಸರಿಯುತ್ತಿರುವಂತೆ ಭಾಸವಾಯಿತು. ಸೋಮಾಮಂತ್ರಮುಗ್ಧ ಫಣಿಯಂತೆ ನಿಶ್ಚಲಭಂಗಿಯಲ್ಲಿ ನೋಟವನ್ನು ಅತ್ತಲೇ ಹರಿಯಬಿಟ್ಟಳು. ಹೃದಯದ ಹೊಂಗಡಲು ಉಕ್ಕೇರಿ ಬಂದು, ಹಲವಾರು ಭಾವನೆಗಳು ತಲೆಯಲ್ಲಿ ತುಂಬಿ ನಲಿಯಲಾರಂಭಿಸಿದುವು. ಮರುಕ್ಷಣದಲ್ಲೇ ಹೃದಯದಾಳದಿಂದ ಪ್ರಶ್ನೆ ಹೊರಬಿತ್ತು,

"ನಾವೂ ಅಲ್ಲಿಗೆ ಹೋಗೋಣವೇ ದುರ್ಗಾ ?"

ಆ ಮಾತಿಗೆ ಏನು ಉತ್ತರಿಸಬೇಕೋ ತಿಳಿಯಲಿಲ್ಲ ದುರ್ಗಳಿಗೆ. ಆನಂದಾತಿಶಯದಿಂದ ಮೂರ್ತಿವತ್ತಾಗಿ ನಿಂತು ಬಿಟ್ಟಳು.

"ಏಕೆ ? ಮಾತೇ ಇಲ್ಲವಲ್ಲ."

"ಈ ದೇಶದಲ್ಲಿ ಬರಬರುತ್ತ ಎಂತಹ ಗಾಳಿ ಬೀಸುತ್ತಿದೆ..... ೋಮಾ !"

"ನೋಡಿದರೆ ಆಶ್ಚರ್ಯ ಅಲ್ಲವೇ ?"

"ಹೌದು; ಅದರಲ್ಲೂ ಧರ್ಮಕರ್ಮ ಅರಿಯದ ಮಂದಿ ; ವೈದಿಕ ಶಕ್ತಿ ಲುಪ್ತವಾದ ಸಮಯ. ಅದಕ್ಕೆಂದೇ ಬುದ್ಧದೇವ ಬಂದಿದ್ದಾನೆ ಹುಶಃ."

"ದಕ್ಷಿಣ ಧೃವ ಉತ್ತರ ಧೃವಗಳ ಮಧ್ಯೆ ನೆಲೆನಿಂತ ಜೀವ ಎತ್ತ ರಿಯಿಡಬೇಕೋ ತಿಳಿಯದೆ ತೊಳಲುವಂತಹ ಪರಿಸ್ಥಿತಿಯಲ್ಲಿ ಜೀವನಾ ರ್ಗ ಬರೀ ಬಿಸಿಲ್ಗುದುರೆಯಂತೆ ಕಾಣಿಸುವುದು ಸಹಜವೇ. ದುಃಖಭರಿತ ಾದ ಈ ಜೀವನವನ್ನು ಯಾವರೀತಿ ಉದ್ಧರಿಸಬೇಕೋ ಅರ್ಥವಾಗದಿ ರೂ ಜನಸಮುದಾಯದಲ್ಲಿ ಕಂಡುಬರುವ ಉತ್ಸಾಹಶೀಲತೆ ಮಹಾ ಶೇಷವೇ."

"ಸರಿ ; ನೋಡೋಣ. ಅದರಿಂದ ನಮಗೂ ಏನಾದರೂ ಪ್ರಯೋ ನವಾದೀತೋ ?"

"ಹೆಂಗಸರ್‍ಯಾರೂ ಹೋಗುತ್ತಲೇ ಇಲ್ಲ. ನಾವು ಹೋಗಬಹುದೋ ೇಗೋ ಎಂಬ ಯೋಚನೆ."

ದೂರ ಮರದ ನೆತ್ತಿಯಮೇಲೆ ಕೋಗಿಲೆಯೊಂದು ಕೂಗಿತು,
ಕೂೂೂವು ; ಕೂೂೂವೂ !

ಅರೆ !

ಆದರಿಂದ ಹೊಮ್ಮಿದ ತಾರಕಮಂತ್ರವಾದರೂ ಏನು ? ಹೋಗು ೋಮಾ ! ಹೋಗು ಸೋಮಾ !

ಅದೇ ಬಯಲು, ಅದೇ ಮರ, ಅದೇ ಕೋಗಿಲೆ, ಅದೇ ಸುಸ್ವರ
ೂೂೂೂವು ! ಕೂೂೂೂವೂ ! ಹೋಗು
ೋಮಾ ! ಹೋಗು ಸೋಮಾ ! !

ಸೋಮಾ ಆ ಮುಹೂರ್ತದಲ್ಲಿ ಸ್ವರ್ಗದ ಸೋಪಾನವನ್ನು ಆಗಲೇ ುಟ್ಟಿದಷ್ಟು ಸಂತುಷ್ಟಳಾದಳು. ದೇಹದಾದ್ಯಂತ ಉತ್ಸುಕತೆಯ ಸ್ರೋತ ುಲ್ಲನೆ ಹರಿದಾಡಿತು.

* * * *

......ಜಾಹ್ನವೀ ನದಿಯ ಉತ್ತರೀ ತಟಾಕದಲ್ಲಿ ನೆಲೆಸಿಂತ ಪುರಾತನ ಬೋಧೀ ವೃಕ್ಷದೇವ !

......ಘನ ಕೃಷ್ಣಶಿಲೆಯ ಪೀಠದಮೇಲೆ ಪದ್ಮಾಸನಸ್ಥನಾದ ಭಗವಾನ್ ಬುದ್ಧದೇವ !

ಬೌದ್ಧ ಧರ್ಮಾಮೃತಧಾರೆ ಅವನ ಮುಖಪದ್ಮದಿಂದ ನಿರರ್ಗಳವಾಗಿ ಹರಿಯುತಿತ್ತು. ಅಸಂಖ್ಯಾತ ಮಂದಿ ಸುತ್ತಲೂ ಕುಳಿತು ಮಂತ್ರಮುಗ್ಧರಂತೆ ಮುಕ್ತಮನದಿಂದ ಆಲೈಸುತ್ತ ಮೈಮರೆತಿದ್ದಾರೆ. ಜನ್ಮ ಜನ್ಮಾಂತರಗಳ ಕೃತಾರ್ಥತೆಯಲ್ಲಿ ಅಥವಾ ಸ್ವಪ್ನಾವೇಶದ ಮಾಯೆಯಲ್ಲಿ ಬಾಹ್ಯ ಜಗತ್ತಿನ ಪರಿವೇ ಇಲ್ಲ ; ಅಥವಾ ಅರ್ಥಾತ್ ಬೇಡವಾಗಿತ್ತು.

ದೂರ ಗಗನನಾಂಗಣದ ಮೂಲೆಯಲ್ಲಿ ಕೃಷ್ಣಪಕ್ಷದ ಚಂದ್ರನು ಇಣಿಕಿ ನೋಡುವಂತೆ ಇದೀಗ ಉದಿಸುತಿದ್ದಾನೆ. ಬೆಳ್ಮೋಡಗಳ ಮಾಲೆ ನಿಧಾನ ಗತಿಯಲ್ಲಿ ಚಲಿಸುತ್ತಿವೆ. ಸುತ್ತಮುತ್ತಣ ತರು ಸಮೂಹಗಳಲ್ಲಿ ಕಲೆತ ಪಕ್ಷಿ ಸಮೂಹ ಮನಮೋಹಕ ದನಿಯಲ್ಲಿ ರಾಗಾಲಾಪನೆಗೈಯ್ಯುತ್ತಿವೆ. ಬೇರಾವ ಸದ್ದು-ಗದ್ದಲಗಳಿಲ್ಲದ ಶಾಂತ ಸಾಮ್ರಾಜ್ಯದಲ್ಲಿ ಏಕನಿಷ್ಠೆಯಿಂದ ಹರಿಯುವ ಬುದ್ಧದೇವನ ಅನುಭವಾಮೃತ ಸಹಸ್ರ ಸಹಸ್ರ ಸ್ರೋತಗಳಾಗಿ ವಿಭಜಿತಗೊಂಡು ಮನಃಪ್ರಾಣಗಳನ್ನು ಮುತ್ತಿ ರಂಜಿಸುತಿತ್ತು.

ಆ ಸುಂದರ ಸನ್ನಿವೇಶದಲ್ಲಿ ಅಲ್ಲಿಗೆ ಆಗಮಿಸಿದ ಧವಳಾಂಬರ ಧಾರಿಣಿಯರಾದ ತರುಣಿಯರಿಬ್ಬರು ತಲೆಯಮೇಲೆ ಉತ್ತರೀಯವನ್ನು ಹೊದ್ದು ಭಕ್ತಿಯಿಂದ ಒಂದು ಮೂಲೆಯಲ್ಲಿ ತಲೆಬಾಗಿ-ಜನರ ಗುಂಪಿನಿಂದ ದೂರವಾಗಿ ಕುಳಿತು ಬುದ್ಧಾನುಭವ ಹೀರಿ ಆತ್ಮಾನುಭವ ಪಡೆಯುತೊಡಗಿದ್ದರು. ಮನಸ್ಸಾಗರದ ಮೋದಕತೆ ಕಣ್ಣುಗಳಲ್ಲಿ ದಿವ್ಯಾನಂದಪ್ರಭೆಯನ್ನು ಹೊಮ್ಮಿಸಿತು.

ಭಗವಾನ್ ಬುದ್ಧದೇವ ಪಂಚಶೀಲಗಳ ಪ್ರವಚನ ಮುಗಿಸಿದನಂತರ ದಿಟ್ಟಿಯನ್ನು ತರುಣಿಯರ ಕಡೆ ಹರಿಸಿ ಅತ್ಯಂತ ಆದರಣೀಯವಾದ ಕರೆ ನೀಡಿದ,

"ತಂಗಿಯರೇ, ಇಬ್ಬರೂ ಇಲ್ಲಿ ಬನ್ನಿರಿ !"

"ಹಸಾದ ತಂದೆ!"

ಇಬ್ಬರೂ ಅಲ್ಲಿಂದೆದ್ದು ಬಂದು ಶ್ರದ್ಧಾಭಕ್ತಿಗಳಿಂದ ತಲೆಬಾಗಿ ಪ್ರಣಾಮ ಸಲ್ಲಿಸಿದರು.

ಬುದ್ಧದೇವನ ದೀಪ್ತಕಂಠ ಅನುಕಂಪದಿಂದ ಮೊಳಗಿತು,

"ಆವ ಮಹೋದ್ದೇಶದಿಂದ ಇಬ್ಬರೂ ಇಲ್ಲಿಗೆ ಬರೋಣವಾಯಿತು ಸೋದರಿಯರೇ ?"

ಸೋಮಾ ಬಾಗಿದ ತಲೆಯೆತ್ತದೆ ಕರಗಳನ್ನು ಜೋಡಿಸಿಕೊಂಡು ಇಬ್ಬರ ಪರವಾಗಿಯೂ ನುಡಿದಳು,

"ಪ್ರಭುದೇವಾ ! ನಾನೂ ಮತ್ತು ನನ್ನ ಗೆಳತಿ ದುರ್ಗಾ ಇಬ್ಬರೂ ಕೂಡಿ ಸಂನ್ಯಾಸಿನಿಯರಾಗಿ ದೀಕ್ಷೆ ಕೈಕೊಳ್ಳಲು ಇಚ್ಛಿಸಿದ್ದೇವೆ. ದಯ ಮಾಡಿ ಅನುಗ್ರಹಿಸಬೇಕು."

"ನಿಮ್ಮನ್ನೆ ?" ಗುರುದೇವ ಮುಗುಳು ನಕ್ಕ.

"ಗುರುದೇವಾ ! ತಾವು ಹೇಗೆ ಹೇಳಿದರೆ ಹಾಗೆ ಕೇಳಲು ಸಿದ್ಧ !"

"ಸ್ತ್ರೀಯರನ್ನು ಸಂಘಕ್ಕೆ ಸೇರಿಸಿ ಕೊಳ್ಳಲಾಗದು ಮಗಳೇ !"

"ನಾವು ಅಂತಹ ಪಾಪಿಗಳೇ ತಂದೇ ?"

"ಹಾಗಂತಲ್ಲ ಮಗುವೇ ! ನಮ್ಮ ನಿಯಮಾನುಸಾರ ಸ್ತ್ರೀಯರನ್ನು ಸಂಘಕ್ಕೆ ಸೇರಿಸಿಕೊಳ್ಳುವುದು ನಿಷಿದ್ಧ."

"ನೀವು ಯಾವುದೇ ಕಟ್ಟಪ್ಪಣೆ ಮಾಡಿದರೂ ನಾವದಕ್ಕೆ ಪ್ರಮಾಣ ಪೂರ್ವಕವಾಗಿ ಬದ್ಧರು ಗುರುದೇವ !"

"ತಂಗೀ, ಆದರೂ ಸಹ ಸಾಧ್ಯವಿಲ್ಲ. ಸ್ತ್ರೀಯರಾದ ನೀವು ಗೃಹ ಜೀವನದಲ್ಲೇ ಧರ್ಮಾವಲಂಭಿಗಳಾಗಿ ಜನ್ಮ ಸಾಫಲ್ಯ ಪಡೆಯಿರಿ."

"ಗುರುದೇವ ! ದಯಮಾಡಿ ಅನುಗ್ರಹಿಸಿರಿ."

ಮುಗಿದ ಕೈ ಇಳಿಯಲಿಲ್ಲ. ಮಂಡಿಯೂರಿದ ಶರೀರ ಎದ್ದೇಳಲಿಲ್ಲ. ದೈನ್ಯವೇ ಮೈವೆತ್ತು ಬಂದಂತೆ ಕುಳಿತ ಅವರನ್ನು ಕಂಡು ಮನಗರಗಿದರೂ ಗುರುದೇವ ಮರು ನುಡಿಯಲಿಲ್ಲ. ಸಂಘಟಿತ ಮಂದಿಯಲ್ಲಿ ಕೆಲವು ಶಿಷ್ಯರು ಆಜ್ಞಾಪೂರ್ವಕವಾಗಿ ತರುಣಿಯರಿಗೆ ನುಡಿದರು,

"ಕತ್ತಲು ಕವಿಯುವ ಮುನ್ನ ನೀವು ಮನೆಯನ್ನು ಸೇರಿಕೊಳ್ಳಲೇ ಬೇಕು. ಈಗಲೇ ಹೊರಡಿ. ಖಂಡಿತ ನಿಧಾನಿಸಬೇಡಿ !"

ಆಗ ಚಿತ್ತೈಕಾಗ್ರತೆಯಿಂದ ತಟ್ಟನೆ ಎಚ್ಚತ್ತು ಕಣ್ದೆರೆದು ನೋಡಿದರೆ ಸುತ್ತಲೂ ಮಸುಗತ್ತಲು ಕವಿಯುತ್ತಿದ್ದುದು ಗಮನಕ್ಕೆ ಬಂತು. ಇನ್ನು ಅಲ್ಲಿಂದ ಆಕ್ಷಣವೇ ಹೊರಡದೆ ಗತ್ಯಂತರವಿರಲಿಲ್ಲ. ಗುರುದೇವನ ಚರಣ ಕಮಲಗಳಿಗೆ ಪ್ರಣಾಮವನ್ನು ಸಲ್ಲಿಸಿ ಪಾದಧೂಳಿಯನ್ನು ಸ್ವೀಕರಿಸಿ ಇಬ್ಬರೂ ಭಾರವಾದ ಹೃದಯವನ್ನು ಹೊರಲಾರದೇ ಹೊತ್ತು ಹೊರಟರು–ಮನಃಪ್ರಾಣಗಳನ್ನು ಹಿಂದೆಯೇ ಬಿಟ್ಟು ಬಂದಂತೆ. ಸ್ವಲ್ಪದೂರ ನಡೆದಿದ್ದರೇನೋ.........ಅಷ್ಟರಲ್ಲೇ ನಭೋಭೇರಿಯಂತೆ ಮೊಳಗಿತು ಬುದ್ಧಾನುಯಾಯಿಗಳ ಒಕ್ಕೊರಲ ಘೋಷಣೆ !

ಬುದ್ಧಂ ಶರಣಂ ಗಚ್ಛಾಮಿ.

ಸಂಘಂ ಶರಣಂ ಗಚ್ಛಾಮಿ.

ಧರ್ಮಂ ಶರಣಂ ಗಚ್ಛಾಮಿ.

ಇಬ್ಬರೂ ಭಾವೋದ್ವೇಗದಿಂದ ಸ್ವಲ್ಪಹೊತ್ತು ಹೆಜ್ಜೆ ಕೀಳದೆ ಅಲ್ಲೇ ನಿಂತು ಬಿಟ್ಟರು. ನಿರಾಸೆಯ ಸಂಘಾತದಿಂದ ಮನಸ್ಸು ತೀವ್ರ ಆಹತವಾಗಿದ್ದರೂ ಆ ಕ್ಷಣ ಅಪೂರ್ವ ಸುಖಾನಂದವನ್ನು ಅನುಭವಿಸಿತು. ಆದರೂ ಅಲ್ಲಿ ಇನ್ನೊಂದು ಕ್ಷಣ ನಿಲ್ಲಲೂ ಸಮಯವಿಲ್ಲ. ಮನೆಯ ಹಾದಿಯನ್ನು ಅರ್ಧ ತಾಸಿನೊಳಗಾಗಿ ಕ್ರಮಿಸದಿದ್ದಲ್ಲಿ ಹಾದಿಯಲ್ಲಿ ಕತ್ತಲಾವರಿಸಿ ತೊಂದರೆಗೆ ಸಿಕ್ಕುವುದಂತೂ ಖಂಡಿತ. ಅಂತಲೇ ಹೆಜ್ಜೆಗಳ ಗತಿ ಆದೇಶವೀಯದಿದ್ದರೂ ಕ್ಷಣಕ್ಷಣಕ್ಕೂ ತೀವ್ರಗೊಳ್ಳುತಿತ್ತು. ಆದರೆ, ಕತ್ತಲು ಕವಿದಷ್ಟೂ ಕದ್ದಿಂಗಳು ವೃದ್ಧಿಸುತಿದ್ದುದರಿಂದ ಮಾರ್ಗಾನುಕ್ರಮಣ ಅಷ್ಟೇನೂ ಕಷ್ಟವೆನಿಸಲಿಲ್ಲ. ಇಬ್ಬರೂ ಕೈಕೈ ಹಿಡಿದುಕೊಂಡು ಸರಸರನೆ ಮುಂದುವರಿಯುತ್ತಿದ್ದಂತೆಯೇ ತಮ್ಮ ಊರಿನವರೇ ಆದ ಗೃಹಾಭಿಮುಖೀ ಬುದ್ಧಾನುಯಾಯಿಗಳು ಆ ಬಯಲಿನ ತುಂಬ ಹಾಲು ಕೊಕ್ಕರೆಗಳಂತೆ ಬೆಳ್ಳಗೆ ಕಾಣಿಸಿಕೊಂಡು ತದೇಕ ಚಿಂತನೆಯಲ್ಲಿ ಮುಳುಗಿ ಆನಂದತುಂದಿಲರಾಗಿ ಒಕ್ಕೊರಲಿಂದ ಘೋಷಿಸಿದರು !

ಬುದ್ಧಂ ಶರಣಂ ಗಚ್ಛಾಮಿ.

ಅದೇ ಘೋಷಣೆ ಕಂಠಪೂರ್ತಿ ಮತ್ತೆ ಮತ್ತೆ ಹೊರಬೀಳುತಿತ್ತು.

ಗೆಳತಿಯರ ಜೀವ ಒಮ್ಮೆಗೇ ಪುಳಕಗೊಂಡಿತು. ಸಾಮಾಜಿಕ ಯದಿಂದ ತುಂಬಿದ್ದರೂ, ಪರಾಧೀನತೆಯ ನೋವಿದ್ದರೂ, ಬೌದ್ಧ ಸಂಘ ಂದ ವರ್ಜಿತರಾದರೂ ಅನುನಯದಿಂದ ಅವರು ದನಿಗೂಡಿಸಿದರು–ಬೇರಾ ಗೂ ಕೇಳಿಸದಂತೆ.

ನೀಲಾಕಾಶವು ಅಚ್ಛೋದ ಸರೋವರದಂತೆ ಸ್ವಚ್ಛ ಸುಂದರವಾಗಿತ್ತು. ಳುಮ್ಮಿಗಿಲುಗಳು ಮನೋಹರ ಭಂಗಿಯಲ್ಲಿ ಹರಿದಾಡುತಿದ್ದುವು.

* * * * *

ಸೋಮಾ ಪಕ್ಷಿಲೋಕದ ಸ್ವಾತಂತ್ರ್ಯಕ್ರೀಡೆಯಮೇಲೆ ದೃಷ್ಟಿಯನ್ನು ಲ್ಲಿಕೊಟ್ಟಿದ್ದಾಳೆ. ಹೃತ್ಸಾಗರದ ಅಲೆಗಳು ಏರುಪೇರಾಗಿದ್ದರೂ ನಯನ ಳು ಸತೃಷ್ಣವಾಗಿವೆ. ಭಾವವಿಹ್ವಲತೆಯ ಪೆಂಪು ಮುಖಬಿಂಬದಲ್ಲಿ ಹರ ತ್ತು. ಕೌಲೀನದ ಬಿಮ್ಮು ಭಕ್ತಿಭಾವದ ಹುಮ್ಮು ಒಂದನ್ನೊಂದು ಎಳೆ ಾಡುತ್ತಿವೆ. ಯಾವ ಸಾಧನೆಯನ್ನು ಮನಃಪ್ರಾಣಗಳು ಬಯಸಿದ್ದುವೋ ದು ಸಾಮಾಜಿಕವಲಯದಲ್ಲಿ ಅದ್ಭುತ ಅಪರಾಧ. ತನ್ನ ದುರದೃಷ್ಟವನ್ನು ದೆಷ್ಟುಬಾರಿ ಧಿಕ್ಕರಿಸಿಕೊಂಡಳೋ ಬಹುಶಃ ಅವಳೇ ಅರಿಯಳು. ಭಕ್ತಿ ಗ್ಧ ಚಿತ್ತ ಬುದ್ಧದೇವನ ಚರಣ ಕಮಲಗಳ ಬಳಿ ಹೊರಳಾಡುತಿತ್ತು. ಯಾವ ರೀತಿ ಸ್ತ್ರೀತ್ವದ ಸೀಮಿತ ಕ್ಷೇತ್ರವನ್ನು ದಾಟಿ ಶಾಂತಿ–ಸಮಾಧಾನ ಳನ್ನು ಆರ್ಜಿಸಬೇಕೋ ಅರ್ಥವಾಗದು. ಅದೇ ಚಿಂತನೆಯಲ್ಲಿ ಆಳವಾಗಿ ಮುಳುಗಿರುವಾಗಲೇ ಗೋಪಾ ಹೊರಬಂದಳು.

"ಮಗೂ ! ಬಿಂದೂವನ್ನು ಹುಡುಕಿಕೊಂಡು ಊರೂರು ತಿರುಗಿದವ ಲ್ಲಾ ಹಿಂದಿರುಗಿ ಬಂದರಂತೆ. ಪಾಪ, ಏನಾಯಿತೋ. ಅವಳ ಸುಳಿವು ಸಿಕ್ಕಿಯೇ ಇಲ್ಲ!"

"ಅವಳೆಲ್ಲೋ ಕೆರೆ ಬಾವಿ ಕಂಡಿದ್ದಾಳು !" ಎಂದು ಭಾರವಾದ ದನಿ ುಲ್ಲಿ ಬಿತ್ತರಿಸಿದ ಸೋಮಾ ಸ್ವಲ್ಪಹೊತ್ತು ಚಿಂತಾಭಾವದಿಂದ ಸುಮ್ಮ ದ್ದು ಅನಂತರ ಮುಂದುವರಿದಳು "ಅವಳು ತನ್ನ ಜೀವನಶಕ್ತಿಯನ್ನು ರ್ಲಕ್ಷಿಸಿ ಹೋದ ಅದ್ಭುತ 'ತ್ಯಾಗಶೀಲತೆ' ಸಾಮಾನ್ಯವಲ್ಲ. ಆದರೂ, ಈ ವಿಚಿತ್ರ ಲೋಕ ಆ ತ್ಯಾಗವನ್ನು 'ಓಡಿಹೋಗುವುದು' ಎಂಬ ಅಷ್ಟ

ಹೆಸರಿನಿಂದ ಅವಮಾನಿಸುತ್ತದೆ. ಅಂತಹ ಕಳಂಕವನ್ನು ಹೊತ್ತು ಇಡಿ
ಜೀವಮಾನವನ್ನು ವ್ಯರ್ಥಗೊಳಿಸುವುದು ನನಗಿಷ್ಟವಿಲ್ಲ. ಏನಾದರೂ
ಒಂದು ರೀತಿಯಲ್ಲಿ ಜೀವನ ಸಾರ್ಥಕ್ಯ ಪಡೆಯಬೇಕೆಂಬುದು ನನ್ನ ಅತೀವ
ಅಭಿಲಾಷೆ"

"ಹೆಣ್ಣಾಗಿ ಹುಟ್ಟಿ ಏಕೆ ಅದೆಲ್ಲಾ ಬಯಸುತ್ತಿ ಹೇಳು ?"

"ನೋಡೋಣ........ನನ್ನ ಕೈಯಿಂದೇನಾದೀತೋ."

"ಮಗಳೇ, ಹಾಗೊಂದು ಪಟ್ಟು ಹಿಡಿಯಬೇಡ ; ಜನ ಏನೆಂ
ದಾರು ?"

"ಆ ವಿಚಾರ ಇರಲಿ, ಈಸಬೇಕು ; ಇದ್ದು ಜೈಸಬೇಕು"

"ಬಿಡು....ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ. ಆತನ
ಮೇಲೆ ಎಲ್ಲಾ ಭಾರವನ್ನೂ ಬಿಟ್ಟರೆ ಆಯಿತು."

"ಅದು ನಿಜವಾದರೂ ಅಷ್ಟೊಂದು ಸುಲಭವಾಗಿ ಭಾವಿಸಬಾರದು."

ಆ ವಿಚಾರದೋಹನ ಮನದಲೆಗಳನ್ನು ಹೊಡೆದೆಬ್ಬಿಸಿ ತಾರ್ಕಿಕ
ಜಗತ್ತಿಗೆ ಹಚ್ಚಿದಾಗ ಸ್ವಲ್ಪ ಹೊತ್ತು ಹಾಗೇ ಯೋಚಿಸಿದಳು ಸೋಮಾ.
ಆವುದೋ ಅವ್ಯಕ್ತ ಚಿಂತನೆ ಮನವನ್ನು ಸೂಜಿಗಲ್ಲಿನಂತೆ ಸೆರೆಹಿಡಿಯಿತು.

ಗೋಪಾ ಮಗಳ ಚಿಂತಾಕ್ರಾಂತತೆಯನ್ನು ಗಮನಿಸಿ ಗಂಭೀರಭಾವ
ದಿಂದ ನುಡಿದಳು,

"ಯಾರ ಜೀವನ ಸುಖವಾಗಿರುತ್ತೆ ಹೇಳು ? ರಾಜಮಹಾರಾಜರುಗ
ಳಿಗೂ ಬಾಳು-ಬವಣೆ ತಪ್ಪಿದ್ದಲ್ಲ ; ಸಾಮಾಜಿಕ ಬಂಧನ ಇಲ್ಲದಿಲ್ಲ. ಅದ
ಕ್ಕೆಲ್ಲಾ ಅಂಜಿಕೊಂಡರೆ ಆಗುತ್ತದೆಯೇ ?"

ಆ ಮಾತಿಗೆ ಉತ್ತರಿಸುವ ತೊಂದರೆ ತೆಗೆದುಕೊಳ್ಳದೆ ಕ್ಷಣಿಕ ಮೌನ
ದನಂತರ ನುಡಿದಳು ಸೋಮಾ,

"ದುರ್ಗಾ ಮದುವೆಯಾಗುವುದಿಲ್ಲೆಂದು ಹಠಹಿಡಿದರೂ ಬಿಡದೆ
ಮದುವೆ ನಿಶ್ಚಯಿಸಿದ್ದಾರೆ. ಇನ್ನು ಒಲ್ಲದವನೊಡನೆ ಸಂಸಾರ ; ಅವಳ
ಗೋಳು ಹೇಳತೀರದು. ಇದನ್ನೆಲ್ಲಾ.........."

ನಡುವೆ ಬಾಯಿ ಹಾಕಿದಳು ತಾಯಿ,

"ಪ್ರಾಪ್ತ ವಯಸ್ಕಳಾದ ಮಗಳನ್ನು ಹಾಗೆಯೇ ಮನೆಯಲ್ಲಿಟ್ಟು

ಳ್ಳುವುದೇ ” ಹೆಣ್ಣಾದವಳಿಗೆ ಒಂದು ‘ಗತಿ’ ಬೇಡವೇ ? ಮದುವೆ
ಾಗುವುದಿಲ್ಲ ಎಂದರೆ ಹೇಗೆ ಹೇಳು ?”

“ಅವಳಿಗಿಷ್ಟವಿಲ್ಲದಮೇಲೆ ಬಲಾತ್ಕರಿಸುವುದು ಸರಿಯಲ್ಲ.”

“ಲಜ್ಜಾವಂತ ಮಕ್ಕಳು ಹೇಳುವುದೇ ಹಾಗೆ ! ಅದಕ್ಕೆಲ್ಲಾ ಎಷ್ಟು
ಲೆ ಕೊಡಬಹುದು ? ಮುಖ್ಯವಾಗಿ ತಂದೆ ತಾಯಿ ಬದುಕಿರುವಾಗ
ಂತಹ ವ್ಯವಹಾರವೆಲ್ಲಾ ಒಪ್ಪವಾಗಿ ಬಿಡುವುದು ಲೇಸು !”

“ಸರಿ ; ಬಿಡಿ. ಇದಕ್ಕೇ ನಮ್ಮ ಬದುಕು ಇನ್ನೂ ಅಪ್ರಬುದ್ಧವಾ
ದೆ. ನಮ್ಮ ಅದ್ಭುತ ಸಂಸ್ಕೃತಿಯಲ್ಲಿ ಅನಾರಿಕತೆ ಬೆಳೆಯುತ್ತಿರುವುದು
ಶಾದಕರ !” ತೀವ್ರ ಅಸಮಾಧಾನದಿಂದ ನುಡಿದಳು ಸೋಮಾ.

“ನಿನ್ನ ಭಾವನೆ ತಪ್ಪು, ಸಂಸ್ಕೃತಿ ಉಳಿಯಬೇಕೆಂದರೆ ವಿಧೇಯತೆ
ಳೆಯಬೇಕು !”

ಸೋಮಾ ನೀಳವಾದ ಉಸಿರನ್ನು ಹೊರ ಹರಿಯಬಿಟ್ಟಳು. ಈ
ಗೆಯ ತರ್ಕಕ್ಕಿಳಿಯಲು ಮನಸ್ಸು ಇಚ್ಛಿಸುತ್ತಲೇ ಇಲ್ಲ. ತಲೆಯ
ಮೇಲಿನ ಸೆರಗು ಸರಿದುದೂ ಸಹ ಗಮನಕ್ಕೆ ಬಾರದಷ್ಟು ವಿವಶವಾಯಿತು
ಚಿತ್ತ ಪ್ರಪಂಚ.

ಲರಕ್, ಲರಕ್, ಲರಕ್, ಲರಕ್.

ನೋಟ ಸದ್ದು ಬಂದೆಡೆಗೆ ಸುಮ್ಮನೆ ಸಹಜವಾಗಿ ಹೊರಳಿದಾಗ
ಂಡು ಬಂದವಳು ದುರ್ಗಾ. ದರುಗೆಲೆಗಳ ಮೇಲೆ ಹೆಜ್ಜೆಗಳನ್ನಿಡುತ್ತ
ಸಂಕಟ–ದೈನ್ಯಗಳೇ ಮೈವೆತ್ತು ಬಂದಂತೆ ಬರುತ್ತಿದ್ದಾಳೆ. ಅವಳ ತುದಿ
ಾಲಮೇಲೆ ಚಿಮ್ಮುವ ನಿರಿ ಏರುಪೇರಾಗಿದ್ದರೂ ಅಲಂಕಾರಿಕವಾಗಿವೆ.
ಸೋಮಾ ಗೆಳತಿಯ ಮುಖದ ಮೇಲೆ ತರಂಗಿತವಾಗುವ ಅನುಭಾವ ವಿಶೇ
ಷದ ಮೇಲೆ ದೃಷ್ಟಿಯನ್ನು ನೆಟ್ಟು ಆತ್ಮೀಯತೆಯಿಂದ ಕರೆದಳು.
“ಬಾಮ್ಮಾ, ದುರ್ಗಾ !”

ಅವಳು ಸಮೀಪಿಸಿದೊಡನೆ ಸ್ನೇಹ ಹಸ್ತಗಳೆರಡೂ ಬಿಗಿ ಹಿಡಿದು
ಕೊಂಡುವು.

“ನಿನ್ನನ್ನು ನೋಡಿದರೆ ಬಹಳ ಹಚ್ಚಿಕೊಂಡಂತೆ ತೋರುತ್ತಿ, ಅದು
ಕೂಡದು.”

ಅವಳು ಅದಕ್ಕೆ ಪ್ರತಿಯಾಗಿ ಏನೂ ಹೇಳಲಿಲ್ಲ. ಹೊಳಪುಗಣ್ಣು ಗಳಲ್ಲಿ ಸಣ್ಣಗೆ ಬೆಳ್ಳಿಯಗೆರೆಯಂತೆ ನೀರಾಡಿತು. ಆದರೂ, ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ಪ್ರಯತ್ನಿಸಿದಳು.

"ಸುಮ್ಮನೆ ಚಿಂತಿಸುವುದರಿಂದ ಏನೂ ಪ್ರಯೋಜನವಿಲ್ಲ."

"ಏನು ಮಾಡಲಿ ಹೇಳು ?"

"ಚಿಂತಿಸುವುದಕ್ಕಿಂತ ಪ್ರಯತ್ನ ಪಡುವುದು ಲೇಸು. ನಿಮ್ಮಪ್ಪ ನಿಗೆ ಇನ್ನಷ್ಟು ಹೇಳಿನೋಡು. ಅವರೊಪ್ಪಿದರೆ ಸಮಸ್ಯೆ ಪರಿಹಾರವಾ ಗುತ್ತೆ."

"ಬಿಡು; ಅವರು ಇನ್ನೊಂದು ಜನ್ಮಕ್ಕೂ ಒಪ್ಪುವುದಿಲ್ಲ. ಹಿಡಿದ ಹಠವೇ ಹಠ !"

"ನನಗೂ ಇನ್ನು ಹೆಚ್ಚು ಹೇಳುವುದಕ್ಕೆ ತೋರುವುದಿಲ್ಲ ದುರ್ಗಾ!"

"ಯಾವುದೋ ದೇಶದಲ್ಲಿ ಹೆಣ್ಣು ಮಕ್ಕಳು ಹುಟ್ಟಿದರೆ ಕತ್ತು ಹಿಸುಕಿ ಕೊಂದು ಬಿಡುತ್ತಾರಂತೆ. ಅದು ಯಾವ ದೇಶ ?"

"ಏಕೆ ? ಅಲ್ಲಿಗೆ ಹೋಗಬೇಕೆಂದಿದ್ದೀಯೇನು ?"

ಒಡನೆ ಇಬ್ಬರ ಮುಖದಲ್ಲೂ ಎಳೆನಗು ಮೂಡಿ ಮಾಯವಾಯಿತು

ಸೋಮಾ ಅತ್ಯಂತ ಆತ್ಮೀಯತೆಯಿಂದ ಹೇಳಿದಳು,

"ಸುಮ್ಮನೆ ಚಿಂತೆ ಹಚ್ಚಿಕೊಳ್ಳುವುದಕ್ಕಿಂತ ಹದಗೆಟ್ಟ ಬದುಕಿಗೆ ಯಾವ ರೂಪುಕೊಡಬೇಕು ಎಂಬುದನ್ನು ಯೋಚಿಸುವುದು ಒಳ್ಳಿತು. ಅದ ರಿಂದ ನಿನಗೆ ಮಾತ್ರವಲ್ಲ, ಎಲ್ಲರಿಗೂ ಪ್ರಯೋಜನವಿದೆ."

ದುರ್ಗಾ ಆ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ ಏನೋ ಒಂದು ರೀತಿಯ ಉದಾಸೀನದಿಂದ ಉತ್ತರಿಸಿದಳು,

"ಈ ಜೀವನ ಯಾರಿಗೆ ಬೇಕಾಗಿದೆ ಹೇಳು ! ಈಗ ನನ್ನನ್ನು ಹೀಗೆ ಕೊಲ್ಲುವುದಕ್ಕಿಂತ ಹಿಂದೆಯೇ ಕತ್ತು ಹಿಸಕಿದ್ದರೆ ಲೇಸಾಗಿತ್ತು."

"ಸಾಯುವುದು ಎಷ್ಟೊತ್ತಿನ ಕೆಲಸ ? ಇದ್ದು ಗೆಲ್ಲುವುದೇ ಜೀವನ; ಅದೇ ಮಾನವತೆಯ ಜೀವಾಳ."

"ಎಲ್ಲರಿಗೂ ಆ ದೃಢ ಸಂಕಲ್ಪ ಬರುವುದಿಲ್ಲ; ಬಿಡು."

"ಅಂತಲೇ ಭಗವಂತ ಸಾಕಷ್ಟು ಕಾಲಾವಕಾಶ ಕೊಟ್ಟಿದ್ದಾನೆ."

"ನಿಜ." ಎಂದುಕೊಂಡಳು ದುರ್ಗಾ. ಸಂವೇದನಾಶೀಲತೆಯಲ್ಲಿ ಮಾತುಗಳೇ ಹೊರಡಲಿಲ್ಲ. ನಿಶ್ಚಲದೃಷ್ಟಿ ದೂರದಲ್ಲಿ ನೆಲೆ ನಿಂತಿತ್ತು.

"ಏನೇ ಬರಲಿ, ಧೃತಿಗೆಡಬೇಡ."

ಕರ್ಣಪಟಲಗಳ ಮೇಲೆ ತಾಗಿದ ಹಿತನುಡಿ ಅಲ್ಲೇ ಪುನಃಪುನಃ ಪ್ರತಿಧ್ವನಿಸುತಿತ್ತು. ಅವಳು ಯೋಚನಾಭಂಗಿಯಲ್ಲಿ ಮಂತ್ರಿತಳಂತೆ ನಿಂತುಬಿಟ್ಟಳು.

ಆ ವೇಳೆಗೆ ಅಲ್ಲಿಗೆ ಬಂದ ಗೋಪಾ ದುರ್ಗಳನ್ನು ಕುರಿತು ಹೇಳಿದಳು,

"ಹೆಣ್ಣಾಗಿ ಹುಟ್ಟಿದ ಮೇಲೆ ಪಾಲಿಗೆ ಬಂದದ್ದು ಪರಮಾನ್ನ! ವಿಶೇಷ ಬಯಕೆ ಸಲ್ಲ."

"ಅದಕ್ಕೇ..............." ಅಷ್ಟಕ್ಕೆ ಕಂಠ ಗದ್ಗದವಾದುದರಿಂದ ಮಾತು ತುಂಡುಗಡಿಯಿತು.

"ಮೂರು ದಿನದ ಬಾಳಿಗೆ ಹೇಗಿದ್ದರೇನು ಹೇಳು ?"

"ಮೂರು ದಿನವೇ ಆಗಲಿ, ಮೂರು ಘಳಿಗೆಯೇ ಆಗಲಿ....."

ಆ ಮಾತನ್ನು ಮುಂದುವರಿಸಗೊಡದಂತೆ ನಡುವೆ ಬಾಯಿ ಹಾಕಿದಳು ಗೋಪಾ.

"ಈ ಜನ್ಮ ಅಷ್ಟೊಂದು ಬೆಲೆಯುಳ್ಳದ್ದು ಎಂತಾಗಲೀ, ಕೇವಲ ಇಚ್ಛಾ ಭೋಗಕ್ಕೆ ಒಡೆದು ಮೂಡಿದೆ ಎಂತಾಗಲೀ ಭಾವಿಸಿದಲ್ಲಿ ಅದರಿಂದ ಎಂತಹವರಿಗೂ ನೋವೇ!"

"ನಾನು ಅಷ್ಟೊಂದು ಮರುಳಲ್ಲ ಅಮ್ಮಾ!"

"ಗೊತ್ತು ಮಗೂ! ಆದರೂ, ನೀನು ಹಚ್ಚಿಕೊಂಡ ಚಿಂತೆ ಕಡಿಮೆಯದೇನೂ ಅಲ್ಲ."

"........."

ಆ ಪುರಾತನ ತತ್ವಕ್ಕೆ ಏನೋ ಹೇಳ ಬಯಸಿದಳು ದುರ್ಗಾ. ಆದರೆ, ಹೇಳಿದ್ದೇ ಹೇಳಿ ಬೇಸರವಾದುದರಿಂದ ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಮುಖಬಿಂಬ ಪರಿಮ್ಲಾನವಾಯಿತು.

ಸೋಮಾ ಗೆಳತಿಯ ಸಹಾಯಕ್ಕೆ ಮುಂದಾದಳು,

"ಪಾಪ, ಅವಳಿಗೇ ಅರ್ಥವಾಗದ ಪರಿಸ್ಥಿತಿ, ನಿಮಗೇನೆಂದು ಉತ್ತರಿಸಿಯಾಳು."

"ಇನ್ನೇನು, ಅರ್ಥಮಾಡಿಕೊಳ್ಳಲೇ ಬೇಕಲ್ಲ ?"

"ಅದು ನಿಜ ; ಆದರೂ ಅಪ್ರಬುದ್ಧ ಮನಕ್ಕೆ ಇನ್ನೂ ಸಾಧ್ಯವಾಗಿಲ್ಲ. ಮುಂದೆಯೂ ಸಾಧ್ಯವಾಗುತ್ತೋ ಇಲ್ಲವೋ ದೇವರಿಗೇ ಗೊತ್ತು. ಸುಮ್ಮನೆ ಒತ್ತಾಯಿಸುವುದರಿಂದ ಪ್ರಯೋಜನವೇನೂ ಆಗದು."

ಗೋಪಾ ಏನೂ ಹೇಳದೆ ಸುಮ್ಮನಾದಳು. ಮನಃಪ್ರಾಣಗಳು ಕಲಕಲಮವಾಗಿದ್ದುವು.

* * * *

.........ಪೂರ್ವ ದಿಗಂತದ ಸ್ವಚ್ಛ ನೀಲಕಾಂತಿಯ ತೆರೆಯಮೇಲೆ ಅರುಣೋದಯ ಶ್ರೀ !

.........ಜ್ಯೋತಿರ್ಮಯೀ ಅರುಣ ಕಿರಣಗಳ ವೇಗ ಲೀಲಾಲೋಲುಪ್ತಿಯ ವಿಜಯಘೋಷಣೆ!

ಆ ಬೆಳಗಿನ ಸುಂದರ ಶಾಂತ ಪ್ರಶಾಂತ ವಾತಾವರಣದಲ್ಲಿ ಮೆಟ್ಟಲಿಳಿದ ಸೋಮಾ ಮೈಯೆಲ್ಲಾ ಮನಸ್ಸಾದಂತೆ ಉಲ್ಲಸಿತಳಾಗಿದ್ದಾಳೆ. ಉಟ್ಟ ಧವಳಾಂಬರ ತಂಗಾಳಿಯೊಡನೆ ಚಿನ್ನಾಟವಾಡುತ್ತ ಅತ್ತಿತ್ತ ಚಲಿಸುತಿತ್ತು. ಸಿಂಧೂರಯುಕ್ತ ಬೈತಲೆ, ತಿಲಕ ಶೋಭಿತ ಲಲಾಟ, ತಲೆಯಮೇಲಿನ ವಾಸಂತೀ ಉತ್ತರೀಯ, ನಡಿಗೆಯ ಚುರುಕು, ನಯನಗಳ ಉಜ್ವಲ ದೀಪ್ತಿ ಒಂದೊಂದೂ ವ್ಯಕ್ತಿಶೋಭೆಗೆ ಕಳಶವಿಟ್ಟವೆ. ಹರವಾದ ಪ್ರಾಂಗಣವನ್ನು ದಾಟುವುದರೊಳಗಾಗಿ ಮನೆಯ ನೆಚ್ಚಿನ ನಾಯಿ ಬಾಲ ಆಡಿಸುತ್ತ ಹಿಂದೆಯೇ ಬಂದಿತು. ಪ್ರೇಮಾತಿಶಯದಿಂದ ಅದರ ತಲೆಯನ್ನು ತಟ್ಟಿ ಮುದ್ದುಗೈದು ಒಳಹೋಗಲು ಅಪ್ಪಣೆ ಮಾಡಿದಳು,

"ಒಳಗೆ ಹೋಗು,ರಾಜಿ ! ನೀನಿಲ್ಲಿ ಬರಬೇಡ !"

ಆದರೆ, ಅದು ಕೇಳಬೇಕಲ್ಲ. ಬಾಲ ಆಡಿಸುತ್ತ ಹಿಂದಿಂದೆಯೇ ಹಿಂಬಾಲಿಸಿ ಬಂತು.

"ಹೋಗು ರಾಜಿ ! 'ಹೋಗು' ಅಂದರೆ ಕೇಳಬೇಕು !"

ಆದು ಪಾದಗಳ ಬಳಿ ಉರುಳಿ ಅತ್ಯಂತ ಆತ್ಮೀಯತೆಯಿಂದ ವಿಶ್ವಾಸ

ವನ್ನು ಪ್ರಕಟಿಸಿತು. ಸೋಮಾ ಸ್ವಲ್ಪಹೊತ್ತು ಹೆಜ್ಜೆ ತೆಗೆಯದೆ ಅಲ್ಲೇ ನಿಂತಳು. ಆಗಲೂ ಅದು ಅಲ್ಲಿಂದೆದ್ದು ಒಳಹೋಗುವ ಸೂಚನೆಯನ್ನು ಸ್ವಲ್ಪವೂ ತೋರಲಿಲ್ಲ. ಅನಂತರ ಅದನ್ನು ಬಲಾತ್ಕಾರವಾಗಿ ನಿರೋಧಿಸಲು ಅವಳಿಗೂ ಇಷ್ಟವಾಗಲಿಲ್ಲ. ಅದರ ಮುಗ್ಧಪ್ರೇಮ ಮೈಗಾವಲಿಗೆ ಪೂರಕ; ಮತ್ತೇಕೆ ನಿರೋಧ ? ಎಂಬ ಪ್ರಶ್ನೆ ಚಿತ್ತಭಿತ್ತಿಯಲ್ಲಿ ಮೂಡಿ ನಿಂತಿತು. ಸೋಮಾ ಸಂತುಷ್ಟಳಾಗಿ ಅದರೊಡನೆ ಪ್ರಾಂಗಣವನ್ನು ದಾಟಿದಳು. ಅಲ್ಲಿಂದ ಮುಂದೆ ಹೊಲಗದ್ದೆಗಳ ಮಹಾವಿಸ್ತೀರ್ಣ. ಆಗಲೇ ಬೆಳೆ ಕೊಯ್ದು ತಾಣವೆಲ್ಲ ಬರಿದಾಗಿದ್ದರೂ ನಾಗಾಲಿನ ಪಶುಮಂದೆ ಹುಲ್ಲಿನ ಬೇರಿಗೆ ಬಾಯಿಡುತ್ತಿವೆ. ಗೋವಳರಿಲ್ಲದ ಮಂದೆ ಸ್ವಚ್ಛಂದವಾಗಿ ಎಲ್ಲೆ ಡೆಯೂ ಓಡಾಡುವುದನ್ನು ನೋಡುವುದೇ ಆನಂದ. ಕುರಿಗಳು 'ಮ್ಯಾ' ಕಾರ ಒಸರಿ ಪ್ರೇಮದ ಕರೆಯನ್ನು ನೀಡಿದುವು. ಸೋಮಾ ಅಲ್ಲಲ್ಲಿ ಅವು ಗಳ ಬೆನ್ನಿನಮೇಲೆ ಕೈ ಯಾಡಿಸಿ ಪ್ರೇಮಧಾರೆಯನ್ನು ಸೂಸಿ ಮುಂದು ವರಿದಳು.

ಮೈಲು ಮೈಲು ಮಹಾ ಮೈಲುಗಳಿಗೂ ಮೀರಿ ಹಬ್ಬಿದ ಹೊಲಗದ್ದೆ ಗಳ ಬಯಲು ಪ್ರಾಂತ್ಯವನ್ನು ದಾಟಿ ವನದೇಶಕ್ಕೆ ಪದಾರ್ಪಣೆ ಮಾಡಿದಾಗ ಬಾನೇರಿ ನಡುನೆತ್ತಿಯಲ್ಲಿ ವಿಜೃಂಭಿಸುತಿದ್ದ ಪ್ರೌಢರವಿ ; ಬೆಳ್ಮೋಡಗಳ ಮೋಹಕತಾಶೈಲಿಯಲ್ಲಿ ಪರಿದೃಶ್ಯಮಾನವಾದ ಗಗನತಲದ ನೀಲಿಮೆ ; ವನವಲಯದ ಹಸರು ಚಪ್ಪರದಡಿಯಲ್ಲಿ ನೆರಳು-ಬೆಳಕುಗಳ ಜೋಡನೆ, ಉದುರಿದ ಹಣ್ಣೆಲೆ, ಕುಸುಮದಳ-ಕುಸುಮರೇಣುಗಳಿಂದ ಚಿತ್ರಿತವಾದ ವರ್ಣಮಯ ರಂಗೋಲಿ ; ಒಂದನ್ನೊಂದು ಗೌರವಭೂತ ಸ್ಪರ್ಧೆಯಲ್ಲಿ ಮೀರಿಸುವಂತಿದ್ದುವು.

ರಾಜಿ ಮಂದೆಮುಂದೆ ನಡೆಯುತ್ತಿದೆ. ಸೋಮಾ ಹಿಂಬಾಲಿಸುತಿ ದ್ದಾಳೆ. ಬಯಲು ಪ್ರದೇಶದಲ್ಲಿ ಉರಿಯುತಿದ್ದ ನೆತ್ತಿ ವನದೇಶವನ್ನು ಸೇರಿದ ಮೇಲೆ ಒಮ್ಮೆಗೇ ತಣ್ಣಗಾಯಿತು. ಭೂಮಿಯೇ ಮುಂದೆ ಮುಂದೆ ಸರಿದು ಹೋಗುತ್ತಿರುವಷ್ಟು ಕಾಲ್ನಡಿಗೆಯ ಉಲ್ಲಾಸ. ಕಾಣದ ಹಾದಿ, ನೋಡದ ಪ್ರಾಂತ್ಯ. ಅದರೂ ಮೈಯೆಲ್ಲಾ ಮನಸ್ಸು. ಮನಸ್ಸೆಲ್ಲಾ ಪ್ರಾಣಮಯ. ಹಿಡಿದಹಾದಿ ಗಂಗಾತಟದವರೆಗೂ ಹರಿದು ಮುಟ್ಟಿಸಿತು.

ಆ ಮಹಾಮಾರಿಯಲ್ಲಿ ಮುಳುಗೆದ್ದು ದಣುವಾರಿಸಿಕೊಂಡಾಗ ಉದ್ರಿಕ್ತ ನರ ನಾಡಿಗಳಲ್ಲಿ ತಣ್ಣಗೆ ತಣ್ಪು ತಳೆಯಿತು, ರಕ್ತವಾರಿ.

ನದೀ ತಟಾಕದಲ್ಲಿ ಹೆಮ್ಮರಗಳಿಗೇನೂ ಕೊರತೆಯಿಲ್ಲ.

ಹಾಗೇ ನೋಡುತ್ತ ಮುಂದುವರಿದಷ್ಟೂ ಯಾವುದು ಸೂಕ್ತ ಎಂಬ ಪ್ರಶ್ನೆಯೇ ಹಿರಿದು. ಅರಳಿಮರವಾದರೆ ಅನುಕೂಲ ಎಂಬ ಚಿಂತನೆ, ಬುದ್ಧದೇವ ಇಲ್ಲೆ ಎಲ್ಲೊ ತಪಸ್ಸು ಮಾಡಿದ್ದಿರಬೇಕು ಎಂಬ ಕೌತೂಹಲ. ಒಂದೊಂದೂ ಮುಂದೆಳೆಯುತ್ತವೆ–ಮೂಗುದಾರ ಹಾಕಿದಂತೆ. ಮುಂದೆ ಸ್ವಲ್ಪದೂರದಲ್ಲಿ ನದೀತಟಾಕಕ್ಕೆ ಸಮೀಪವಾಗಿ ಅಶ್ವತ್ಥವೃಕ್ಷವೊಂದು ತಾಮ್ರವರ್ಣದ ಕಿಸಲಯಗಳಿಂದ ತುಂಬಿ ಆಕರ್ಷಣೀಯವಾಗಿತ್ತು. ಅದರ ಎತ್ತರ ಮತ್ತು ಗಾತ್ರವನ್ನು ನೋಡಿದರೆ ಅದು ಎಷ್ಟು ಶತಮಾನಗಳ ಸೊಂಪನ್ನುಂಡು ಮೈದುಂಬಿಕೊಂಡಿದೆಯೋ ಊಹಿಸುವುದು ಕಷ್ಟ. ಆ ಅಮೋಘ ಸೃಷ್ಟಿಯಲ್ಲಿ ಅದೆಂತಹ ಪವಿತ್ರಕಾರಿತೆ? ನೋಡಿದಷ್ಟೂ ಮನಸ್ಸು ಅರಳಿ ಉತ್ಸಾಹ ಗರಿಗೂಡಿಕೊಳ್ಳುತಿತ್ತು. "ನನ್ನ ಮನೋ ನಿಶ್ಚಯದ ಸಫಲತೆಗೆ ಉತ್ಕಂಠ ಪ್ರತಿಜ್ಞೆಯ ಲಕ್ಷ್ಯಸಿದ್ಧಿಗೆ ಇದುವೇ ಸರಿ ಯಾದ ಸ್ಥಳ! ಇನ್ನು ಜನ್ಮ ಸಾಫಲ್ಯತೆ ಬಹಳ ದೂರವಿಲ್ಲ!" ಎಂದು ತನಗೆ ತಾನೇ ಭಾವೋದ್ವೇಗದಿಂದ ಹೇಳಿಕೊಂಡಳು ಸೋಮಾ.

ಆ ಮರದ ತಣ್ಣೆಳಲಲ್ಲಿ ಕಲ್ಲುಹಾಸಿನ ನುಣ್ಣನೆಯ ಪೀಠ. ಸುತ್ತಮು ತ್ತಲೂ ಹಸುರೊಸರುವ ಕುರುಚಲು ಗಿಡಗಳು. ನಸುದೂರದಲ್ಲಿ ನದೀ ಪಾತ್ರ. ಅಲ್ಲಲ್ಲ ಕಣ್ಣಾಲಿಗಳು ಹರಿದಾಡಿದಷ್ಟೂ ಅದೆಷ್ಟು ಹಿತಕರವೋ.

ಎಲ್ಲೋ ಅಡವಿಯ ಒಳಾಂತರಕ್ಕೆ ನುಗ್ಗಿದ ನಾಯಿ ಅಲ್ಲೇ ಹಸಿವು ಹಿಂಗಿಸಿಕೊಂಡು ಬಳಿಗೆ ಬಂದು ಬಾಲ ಆಡಿಸುತ್ತ ಕೊರಳೆತ್ತಿ ನೋಡಿತು. ನಲ್ಮೆಯಿಂದ ಅದರ ತಲೆಯನ್ನು ನೇವರಿಸಿ ಮುದ್ದುಗೈದು "ಬುದ್ಧ ದೇವನ ಕೃಪೆಯಿಂದ ನಿನಗಿಲ್ಲಿ ಅವ ತೊಂದರೆಯೂ ಆಗದಿರಲಿ." ಎಂದು ಅರಳೀ ಮರದ ಬುಡದಲ್ಲಿದ್ದ ಕಲ್ಲುಹಾಸಿನ ಮೇಲೆ ಪದ್ಮಾಸನ ಹಾಕಿ ಕುಳಿತು ಕೊಂಡಳು. ರಾಜಿ ಅಲ್ಲಿಗೆ ಓಡಿ ಬಂದು ಮಗ್ಗುಲಲಿ ಬಿದ್ದುಕೊಂಡಿತು. ಅದರೆಡೆಗೆ ಕಾರುಣ್ಯ ಪೂರ್ಣ ದೃಷ್ಟಿಯನ್ನು ಬೀರಿ, ಭಕ್ತಿ ವಿಶೇಷದ ಮಾಯಕತೆಯಲ್ಲಿ ಕಣ್ಣುಗಳನ್ನು ಮುಚ್ಚಿದಳು. ಮನಃಪ್ರಾಣಗಳು

ತಮ್ಮ ಅಸ್ತಿತ್ವವನ್ನು ಸಂಪೂರ್ಣ ಕಳೆದುಕೊಂಡಂತೆ ಸ್ತಬ್ಧಗೊಂಡುವು. ಆ ಅಪೂರ್ವವಾದ ಆನಂದಾನುಭೂತಿಯಲ್ಲಿ ಘಳಿಗೆ ಘಳಿಗೆಗಳೂ ತಾಸು ತಾಸುಗಳೂ ನಿರಾತಂಕವಾಗಿ ಉರುಳಿದುವು. ಸೋಮಾ ಭಕ್ತಿಯ ಸ್ವರ್ಗವನ್ನೇರಿ ರಾರಾಜಿಸಿದಳು. ಆ ಅದ್ಭುತ ತಪಶ್ಚರ್ಯದಿಂದ ಸಂತುಷ್ಟಳಾದ ವನದೇವಿ ಅತ್ತಲೇ ಕೇಂದ್ರೀಕೃತ ಜೀವನಿಯಾಗಿ ಅಭಯಹಸ್ತದೊಡನೆ ನುಡಿದಳು. "ಮಗೂ ಸೋಮಾ, ಈ ತಪಶ್ಚರ್ಯ ನಿನಗೆ ತಪ್ಪುಕರ. ಹೆಣ್ಣು ತಪಸ್ವಿನಿಯಾಗಬಾರದೆಂದೇನೂ ಅಲ್ಲ. ಮಾನವೀಯ ಪ್ರಜ್ಞೆ ಇಲ್ಲದ ಸಮಾಜದಲ್ಲಿ ನಿನ್ನಂತಹ ತರುಣಿ ಇಂಥ ಕಠಿಣ ರಂಗದಲ್ಲಿ ನಿಭಾಯಿಸುವುದು ಕಷ್ಟ. ಅಂದರೆ, ನಾನು ನಿನ್ನನ್ನು ಮನಗೆಡಿಸುತಿದ್ದೇನೆಂದು ಖಂಡಿತಾ ಭಾವಿಸಬೇಡ. ಈಗಾಗಲೇ ನಿನಗೆ ಅನುಭವ ಸಾಕಷ್ಟು ಆಗಿದೆ. ನಿನ್ನ ತಪಶ್ಚರ್ಯ ಸ್ತ್ರೀಕುಲಕ್ಕೆ ಒಳ್ಳಿತು ಎಂಬುದನ್ನು ಅಲ್ಲಗೆಳೆಯಲಾರೆ. ಮಕ್ಕಳನ್ನು ಮುಂದ್ದಿಟ್ಟು ಕಾಪಿಡುವ ಹೃನ್ಮನ ಮತ್ತು ಅನ್ನಪೂರ್ಣಾವತಾರಿಯ ಮಾತೃಹೃದಯವನ್ನು ನೀನು ಕಿತ್ತೆಸೆಯಲಾರೆ. ಆದ್ದರಿಂದ, ನೀನು ಕಠೋರ ತಪಸ್ಸಿಗಿಳಿದು ನಿನ್ನ ಸೂಕ್ಷ್ಮ ಶರೀರ ಭರಿಸಲಾರದೇ ಹೋದರೆ ನಿನ್ನ ಚಿಂತೆ ಅಧಿಕವಾಗಬಹುದು. ಈಗಲೇ, ನೀನು ನಿನ್ನ ಜೀವನವನ್ನು ನಿರ್ಧರಿಸುವುದು ಒಳ್ಳಿತು. ಹೆಣ್ಣಿಗೆ ಮನೆಯೇ ಸುಖ ಸಾಧನ! ಯೋಚಿಸಿ ಯೋಚಿಸಿ ನಿರ್ಧರಿಸು, ನೀನು ಜೀವನ ಮತ್ತು ತಪಸ್ಸುಗಳ ಎರಡು ಮುಖಗಳನ್ನೂ ಅರಿತವಳು. ನಿನ್ನ ತಿಳಿವಳಿಕೆ ನಿನ್ನನ್ನು ಸರಿಯಾದ ನೆಲೆಗೆ ಹಚ್ಚಲಿ!"

ಹಾ....! ಎಷ್ಟು ಸ್ಪಷ್ಟವಾಗಿ ಕೇಳಿಸಿತು ನುಡಿಗಟ್ಟು! ಎಲ್ಲಿಂದ ಕೇಳಿಸಿತು? ಎಲ್ಲಿ.... ಯಾರ ಧ್ವನಿ ಅದು? ಹರೆ ರಾಂ! ಕಣ್ಣಿಗೆ ಯಾರೂ ಕಾಣಿಸುತ್ತಿಲ್ಲ....! ನನ್ನ ಒಳದನಿ ಇರಬಹುದೇ? ಆ ಪ್ರಶ್ನೆ ಎದ್ದಾಗಲೇ ಧ್ವನಿ ಪುನಃ ಮೊಳಗಿತು,

"ಕೇಳು ಮಗೂ, ನೀನು ಕೇವಲ ಸ್ತ್ರೀ ಎಂಬ ತುಚ್ಛೀಕರಣವಲ್ಲ. ಪ್ರಯತ್ನ ಕಠಿಣ, ನೀನು ಭರಿಸಲಾರೆ ಎಂಬ ಆತಂಕ ಅಷ್ಟೆ. ಯೋಚನೆ ಮಾಡು. ಯೋಚಿಸುವುದರಲ್ಲಿ ಬಾಧಕವೇನೂ ಇಲ್ಲ. ನಿನ್ನ ನಿರ್ಧಾರ ಒಳ್ಳೆಯದು. ಆದರೆ, ತುಂಬಾ ಕಠಿಣ ಎಂಬುದೊಂದೇ ಆತಂಕ. ನಿನ್ನಲ್ಲೇ ತಿಳಿದು ನೋಡು!"

ಸೋಮಾ ಸ್ವಲ್ಪ ಹೊತ್ತು ಯೋಚನೆಗೊಳಗಾದಳು. ಮೈಯಲ್ಲಿ ನೂರ್ಮಡಿಯು ಉತ್ಸಾಹ ! ಎದೆಯಲ್ಲಿ ಭರಿಸುವ ಧೈರ್ಯ. ಹೆಜ್ಜೆ ಹಿಂದೆಗೆಯ ಬೇಡ ಎಂದು ಆದೇಶ ನೀಡುವ ಮನಸ್ಸು....ಎಲ್ಲವೂ ಏಕ ರೀತಿಯಲ್ಲಿ ಹಿಗ್ಗಾ ಮುಗ್ಗಾ ಎಳೆದಾಡುತಿದ್ದರೆ ಒಂದೆರಡುಗಳಿಗೆ ಡವಡವಿಸಿತು ಹೃದಯ ಪಕ್ಷಿ. ಕ್ಷಣಕ್ಷಣಗಳು ನಿಮಿರಿ ನಡೆದುವು ; ಗಳಿಗೆಗಳಿಗೆಗಳು ಧೂರ್ತಗತಿಯಲ್ಲಿ ಸಾಗಿದುವು. ಸೋಮಾ ಒಂದೆರಡು ಕ್ಷಣ ತಬ್ಬಿಬ್ಬಾದರೂ ಸಾವರಿಸಿಕೊಂಡಳು. ಧೈರ್ಯಗೆಡಲಿಲ್ಲ.

“ಸಲಹೆ ನೀಡಿದ ನೀನು ಯಾರೇ ಆಗಿರು. ನಿನಗೆ ಧನ್ಯವಾದಗಳು. ನಾನು ನನ್ನ ಪ್ರಯತ್ನವನ್ನು ಮಾತ್ರ ಕೈಬಿಡಲಾರೆ. ನನ್ನ ಹಠಸಾಧನೆಯಿಂದ ಕಾರ್ಯ ಸಾಧಿಸುವ ಧೈರ್ಯ ನನಗುಂಟು. ನಾನು.......ನಾನು ಸಾಧಿಸಿಯೇ ತೀರುವೆ !”

ಆ ಮಾತಿಗೆ ಮರು ಧ್ವನಿ ಮೂಡಲಿಲ್ಲ.

ಮಂದ ಮಾರುತ ಸುಯ್ ಸುಯ್ಯನೆ ಸುಯ್ಧನಿಯೊಡನೆ ನುಗ್ಗಿ ಬಂದು ಮೈಮನಗಳನ್ನು ಮುದ್ದಿಸಿ ಪ್ರೋತ್ಸಾಹಿಸಿದ. ಅರಣ್ಯವಾರ್ಧಿಯ ಎಲೆಗಳ ಮರ್ಮರ ಶ್ರುತಿ ಕರ್ಣ ಪಟಲಗಳ ಮೇಲೆ ಅಪ್ಯಾಯಮಾನವಾಗಿ ಮೊಳಗಿತು. ಪಕ್ಷಿ ಸಮಾಜದ ಚಿಲಿಪಿಲಿ ರಾಗವೂ ಮಧುರಾತಿಮಧುರವಾಗಿ ಮೊಳಗುತ್ತಿದೆ. ಅದು ವಿನಾ ಮತ್ತಾವ ಸದ್ದೂ ಇಲ್ಲವೇ ಇಲ್ಲ. ರುದ್ರ ಮೌನ ಸ್ವಲ್ಪಹೊತ್ತು ರಾಜ್ಯವಾಳಿತು.

ಅನಂತರ ಧ್ವನಿ ಮೊಳಗಿತು “ನಿನ್ನ ಧೈರ್ಯಕ್ಕೆ ಮೆಚ್ಚಿದೆ. ದೇವರು ನಿನಗೆ ಒಳ್ಳಿತನ್ನು ಮಾಡಲಿ. ನೀನು ಸಾಧನೆಯನ್ನು ಮುಂದುವರಿಸು.”

ಆ ಮಾತು ಎದೆಯಾಳಕ್ಕೆ ಇಳಿಯಿತು. ಭಿಕ್ಷುಣಿಯ ಮನಃಪ್ರಾಣಗಳು ಹಗುರವಾದುವು. ನೋಟ ಸುತ್ತಮುತ್ತ ಹರಿದಾಡಿತು. ಎಲ್ಲಿಂದ ಎಲ್ಲಿಯವರೆಗೂ ಹಸುರೇ ಹಸುರು. ಹಸುರು ಜಗತ್ತಿನಲ್ಲಿ ವರ್ಣವರ್ಣಾಂತ ಪಕ್ಷಿಗಳ ಪ್ರಪಂಚ ಹಾಗೂ ಪುಷ್ಪಿತ ಪುಷ್ಪಲೋಕ. ಮನಃಪ್ರಾಣಗಳಿಗೆ ಮುತ್ತು ಬರಿಸುವಂತಹ ಸುಸುಂದರ ಚಿತ್ತಾರ.

ಬಳಿಯಲ್ಲಿ ಮೈಮುದುಡಿ ಮಲಗಿದ್ದ ರಾಜಿ ಥಕ್ಕನೆ ಎದ್ದು ದೊಡ್ಡ

ದನಿಯಲ್ಲಿ 'ಬೌ ಬೌ' ಎನ್ನುತ್ತ ಅತ್ತಿತ್ತ ದೃಷ್ಟಿ ಹೊರಳಿಸಿ ನೋಡಿ ಪುನಃ ಜೋರಾಗಿ ಬೋಗಳಿತು. ಭಿಕ್ಷುಣಿ ಅದರ ತಲೆಯನ್ನು ನೇವರಿಸಿ ತಟ್ಟಿ ಮುದ್ದುಗೈದು ಸಮಾಧಾನ ಪಡಿಸಿದಳು. ರಾಜಿ ಸ್ವಲ್ಪಹೊತ್ತು ಅತ್ತಿತ್ತ ನೋಡುತ್ತ ನಿಂತಿದ್ದು ತನ್ನ ಸಂಶಯಕ್ಕೆ ಕಾರಣವಿಲ್ಲವೆಂಬುದನ್ನರಿತಂತೆ ಸುಮ್ಮನಾಯಿತು

ಸೋಮಾ ತಪಃತಾಪದಲ್ಲಿ ಕರಗಿ ಹೋದಳು.

ಹೊತ್ತು ಉರುಳಿತು. ಬಹುಶಃ ಮೂರು ನಾಲ್ಕು ತಾಸುಗಳೇ ಉರುಳಿ ಹೋದುವು ಸದ್ದಿನ ಸೊಲ್ಲಿಲ್ಲದೆ. ಸೋಮಾ ಕಣ್ತೆರೆದಾಗ ಮುಸ್ಸಂಜೆಯು. ಮಸುಗಪ್ಪು ಮುಸುಗ ತೊಡಗಿತ್ತು. ಪಕ್ಷಿಗಳು ಗೂಡುಗಳನ್ನು ಅರಸುತ್ತ ಮರದಿಂದ ಮರಕ್ಕೆ ಹಾರುತ್ತ ಕಾರ್ಯಾಚರಣೆಯೊಂದಿಗೆ ಸಾಂಧ್ಯ ಗೀತೆಯನ್ನು ಉಲಿಯುತ್ತಿವೆ ಮನಮೋಹಕವಾಗಿ. ಅಂಬರದಲ್ಲಿ ಮಂಡಲಾಕಾರವಾಗಿ ಹಾರುತ್ತಿರುವ ಕಾಮುಳ್ಳಿಗಳ ಕರಿಯ ದಂಡಿಗೆ ತಮ್ಮ ತಮ್ಮ ಗೂಡಿನ ಜಾಡು ಸಿಗಲಿಲ್ಲವೇನೋ ಇನ್ನೂ ಸುಳಿಸುತ್ತಿ ಹಾರಾಡುತ್ತಲೇ ಇವೆ. ಎಲ್ಲಿಂದ ಎಲ್ಲಿಯವರೆಗೂ ಸದ್ದಿಲ್ಲದ ಶಾಂತಿಯ ಮಹಾಹರವು.

ಭಿಕ್ಷುಣಿ ಸೋಮಾ ಎದ್ದು ಮನೆಯ ಹಾದಿಹಿಡಿದಳು. ರಾಜಿ ಹಿಂಬಾಲಿಸಿತು.

ಒಡನೆ ವನಪ್ರದೇಶವೇ ಪುಳಕಿತಗೊಳ್ಳುವಂತೆ ಖಗಗಾನ ಮೊಳಗಿತು ಮಂಗಳದನಿಯಲ್ಲಿ.

* * * *

.....ಬೃಹದ್ ಆಲದ ಮರದ ತಣ್ಣೆಳಲಲ್ಲಿ ಬುದ್ಧದೇವ ಪದ್ಮಾಸನ ಬದ್ಧನಾಗಿ ಮಂಡಿಸಿದ್ದಾನೆ.

ಆತನನ್ನು ಸುತ್ತಮುತ್ತಲೂ ಸುತ್ತುವರಿದ ಶಿಷ್ಯಕೋಟಿ ಏಕನಿಷ್ಠೆಯಿಂದ ಪ್ರತಿಮಾ ವಿಧಾನದಲ್ಲಿ ಮೈಮರೆತು ಕುಳಿತಿದ್ದಾರೆ.

ನೀರವ....ನಿಷ್ಪಂದ ....ನಿರ್ವಿಕಲ್ಪ.

ಬುದ್ಧದೇವ ಬೋಧನ ಕ್ರಮವನ್ನು ಮುಗಿಸಿದ ಮೇಲೆ ಮಂತ್ರಿತರಂತೆ ಮೈಮರೆತು ಕುಳಿತ ಮಂದಿಯನ್ನು ನೋಡುತ್ತ ಭಾವೋದ್ವೇಗದಿಂದ ಅಂದ,

"ಈಗೀಗ ಸೋದರಿಯರನೇಕರು ಸಂಘ ಸದಸ್ಯಿಣಿಯರಾಗಲು ಬಯಸು ತಿದ್ದಾರೆ. ಇನ್ನು ಮುಂದೆಯೂ ಬಹಳ ಮಂದಿ ಬರಬಹುದು. ಅವರನ್ನೆಲ್ಲಾ ಕಡ್ಡಾಯವಾಗಿ ನಿರಾಕರಿಸಲು ಮನಸ್ಸು ಬರುವುದಿಲ್ಲ. ಅವರಿಗೆಲ್ಲಾ ಯಾವ ರೀತಿಯ ಧಮ್ಮಪದವನ್ನು ಪಾಲಿಸಲು ವಿನಂತಿಸಿಕೊಳ್ಳಬೇಕೋ ಯೋಚಿಸಬೇಕಾಗಿದೆ. ಅವರ ವಿಚಾರ ಇನ್ನೂ ವಿಮರ್ಶಿತವಾಗದೇ ಉಳಿದಿರುವುದು ಸರಿಯಲ್ಲ."

ಅದೇ ವೇಳೆಗೆ ಅಕ್ಷತೆ ನೀಡಿ ಕರೆದಂತೆ ಸೋಮಾ ಅಲ್ಲಿ ಪ್ರತ್ಯಕ್ಷಳಾದಳು. ತೇಜೋರಾಶಿಯಿಂದ ಕೂಡಿದ ಅವಳ ವ್ಯಕ್ತಿತ್ವ ವನದೇವಿಗೆ ಉಪಮಾನವಾಗುವಂತಿತ್ತು. ಅವಳು ಮುಂದಿಡುವ ಒಂದೊಂದು ಮೆಲು ಹೆಜ್ಜೆಗೂ ಭೂಮಿ 'ಗಲ್' ಎನ್ನುವಂತೆಉದ್ಭಾಸಿತವಾಗುತಿತ್ತು.

ಬುದ್ಧದೇವ ಅವಳ ಕಡೆ ಪ್ರದೀಪ್ತ ನಯನಗಳನ್ನು ಹರಿಸಿ ಹಸನ್ಮುಖಿಯಾಗಿ ಅನುನಯದಿಂದ ಅಂದ,

"ಬಾ, ಮಗಳೇ ! ನಿನ್ನ ಧೈರ್ಯ-ಸ್ಥೈರ್ಯ-ಪ್ರಯತ್ನ ಎಲ್ಲವೂ ಅದ್ಭುತವಾದುವು. ನೀನು ಪಡೆದುಕೊಂಡ ಅಂತಃಸಿದ್ಧಿ ಶ್ಲಾಘನೀಯವಾದುದು. ನಿನಗೆ ಸ್ಥೈರ್ಯ ಮೂಡಲಿ!"

ಭಿಕ್ಷುಣಿ ಸೋಮಾ ಸಂಧ್ಯಾಂಗನೆಯೇ ಮೂರ್ತಿಯೆತ್ತಿ ಬಂದಂತೆ ನಡೆದು ಬಂದು ದೂರದಲ್ಲಿ ಕುಳಿತುಕೊಂಡಳು. ಜನಸ್ತೋಮ ಭಕ್ತಿ ಸಮುಜ್ವಲಭಾವದಿಂದ ಕೂಡಿದ ಅವಳ ಮುಖಮಂಡಲವನ್ನು ನೋಡಿ ಆಶ್ಚರ್ಯ ಚಕಿತರಾದರು.

ಬುದ್ಧದೇವ ಸ್ನೇಹ ಮಧುರ ವಾಣಿಯಲ್ಲಿ ನುಡಿದ,

"ಕೇಳು ಮಗಳೇ ! ನಾರೀ ಸತ್ಯವೇ ಬೇರೆ. ಪುರುಷ ಸತ್ಯವೇ ಬೇರೆ. ನೀನು ನಾರೀ ಶರೀರ ಧಾರಣೆ ಮಾಡಿದ್ದಿ. ನಿನಗೆ ಲೋಕಾನುಭವವುಂಟಾಗಿದೆ. ನಿನ್ನಂತೆಯೇ ಧರ್ಮಪದವನ್ನು ಅವಲಂಬಿಸ ಬಯಸಿದ ಸ್ತ್ರೀಕೋಟಿಗೆ ಮಾರ್ಗದರ್ಶಿನಿಯಾಗು. ಸಂಸಾರ ಬಂಧನದಲ್ಲಿ ಸಿಕ್ಕಿ ಕ್ರಿಮಿ ಕೀಟಗಳಂತೆ ನರಳುವ ಮಾನಿನಿಯರನ್ನು ಉದ್ಧರಿಸುವುದರಲ್ಲಿ ಪ್ರತಿಜ್ಞೆ ತೊಡು.... ನಿನ್ನ ಧೀಶಕ್ತಿಯನ್ನು ಮೆಚ್ಚಿದೆ. ನಿನಗೆ ಮಂಗಳವಾಗಲಿ"

ಭಿಕ್ಷುಣಿ ಸೋಮಾ ಅತ್ಯಂತ ವಿನಮ್ರತೆಯಿಂದ ಕೈಗಳನ್ನು ಜೋಡಿಸಿಕೊಂಡು,

"ಗುರುದೇವ ! ತಮ್ಮಲ್ಲಿ ನನ್ನದೊಂದು ಅರಿಕೆಯಿದೆ"

"ಹೇಳು, ಮಗಳೇ !"

"ಮಹಾ ಪ್ರಭೂ ! ತಾವು ನನಗೆ ಸಂಘ ಸದಸ್ಯತ್ವಗೊಡಲು ನಿರಾಕರಿಸಿದಿರಿ. ಏಕಾಂಗಿಯಾದ ನಾನು ಯಾವ ರೀತಿ ನನ್ನ ಕಾರ್ಯಭಾರವನ್ನು ನಿರ್ವಹಿಸಲಿ ? ದಯಮಾಡಿ ತಿಳಿಸಿಕೊಡಿ."

"ಮಗಳೇ ! ಏಕಾಂಗಿಯಾಗಿ ತಪಸ್ಸನ್ನಾಚರಿಸಿದ ನಿನಗೆ ಕೆಲವು ಮಂದಿ ಹೆಂಗಳೆಯರನ್ನು ಕೂಡಿಸಿಕೊಳ್ಳುವುದು ಕಷ್ಟವೇನಲ್ಲ. ಧೈರ್ಯದಿಂದ ಸರ್ವತ್ರ ಸಾಧನೆಯನ್ನು ಕೈಕೊಳ್ಳುವ ಚೈತನ್ಯ ನಿನಗುಂಟು. ಯೋಚಿಸಬೇಡ."

"ಆಶೀರ್ವದಿಸಿರಿ ಗುರುದೇವ !"

"ನೀನು ಧೈರ್ಯಸಂಪನ್ನೆಯಾಗು ! ನಿನ್ನಿಂದ ಸ್ತ್ರೀಕುಲ ಉದ್ಧಾರವಾಗಲಿ !"

"ಹಸಾದ ಮಹಾಪ್ರಭು !"

"ನಿನಗೆ ಒಳ್ಳಿತಾಗಲಿ ಮಗಳೇ !"

ಭಿಕ್ಷುಣಿ ಸೋಮಾ ಗುರುದೇವನಿಗೆ ಅತ್ಯಂತ ಭಕ್ತಿಭಾವದಿಂದ ನಮಸ್ಕರಿಸಿ ಹೊರಟಳು. ಬುದ್ಧದೇವನ ಕಾರಣ್ಯ ಪೂರ್ಣ ನೇತ್ರಗಳು ನಲ್ಮೆಯಿಂದ ಬೀಳ್ಕೊಟ್ಟುವು.

* * * *

ಭಿಕ್ಷುಣಿ ಸೋಮಾ ಅದೇತಾನೇ ಪ್ರತ್ಯಗ್ನ ಸ್ನಾನ ಮಾಡಿದ್ದಾಳೆ. ತುದಿಗೂದಲಿನಲ್ಲಿ ತಣ್ಣೀರು ಹನಿಹನಿಯಾಗಿ ತೊಟ್ಟಿಕ್ಕುತ್ತಿದೆ. ಕಣ್ಣುಗಳ ರಾಮಣೀಯಕ ದೀಪ್ತಿ ಬಲೂ ಮನೋಜ್ಞ. ತಲೆಯ ಮೇಲೆ ಹೊದ್ದ ಸೆರಗು ಜಾರದಂತೆ ತುದಿಬೆರಳಲ್ಲಿ ಹಿಡಿದುಕೊಂಡೇ ಹೆಜ್ಜೆ ತೆಗೆದಳು ಹೊಲದಂಚಿನ ಮಾಮರಗಳ ತಣ್ಣನೆಯ ತೋಪಿನಲ್ಲಿ ಅವಳ ಧಮ್ಮಪದ ಬೋಧನೆ. ಇನ್ನೇನು ಅಲ್ಲಿಗೆ ಹೊರಡಬೇಕು. ಅಷ್ಟರಲ್ಲಿ ದುರ್ಗಾ ಅನಿರೀಕ್ಷಿತವಾಗಿ ಅಲ್ಲಿ ಕಾಣಿಸಿಕೊಂಡಳು. ಮುಖಭಾವ ಉದ್ವೇಗದಿಂದ ಕೂಡಿತ್ತು. ಅತ್ಯಂತ ವಿಜಾತಿಯವಾದ ವಾಣಿಯಲ್ಲಿ ನುಡಿದಳು.

"ಬಿಂದೂ ಕತೆ ನಿನಗೊತ್ತೇ ?"

“ಇಲ್ಲವಲ್ಲಾ, ಏನು ಸಮಾಚಾರ !”

“ಅವಳು ಬದುಕಿದ್ದಾಳೆ !”

“ಓ ! ಎಲ್ಲಿದ್ದಾಳೆ ?”

“ಅವಳಾಗ ತಡೆಯಲಾರದ ಹಿಂಸೆಪಟ್ಟದ್ದು ನಿನಗೆ ತಿಳಿದಿದೆಯಷ್ಟೆ? ಪಾಪ, ಅವಳಿಗೆ ಜನ್ಮ ಸಾಕಾಗಿತ್ತು. ಹೋಗಿ ಗಂಗಾನದಿಗೆ ಬಿದ್ದಿದ್ದಾಳೆ. ಆಗ ಅಂಬಿಗರಾರೋ ನೋಡಿ ಎತ್ತುವಷ್ಟರಲ್ಲಿ ಪ್ರಜ್ಞೆ ತಪ್ಪಿತ್ತು. ತಮ್ಮ ಊರಾದ ಪೂರನ್‌ಪುರಿಗೊಯ್ದು ಶೈತ್ಯೋಪಚಾರ ನಡೆಸಿ ಇಲ್ಲಿ ಕರೆತಂದರೆ ಅವಳ ಮನೆಯವ ಸೇರಿಸಿಕೊಳ್ಳಲು ನಿರಾಕರಿಸುತಿದ್ದಾನೆ. ಅವಳಿಗೆ ಪುನಃ ನದಿಗೆ ಬೀಳುವುದಾಗಿ ಹೇಳುತಿದ್ದಾಳೆ ಛೀ ! ಅವಳ ಸಂಕಟ ನೋಡಿದರೆ ಕರುಳು ನುಲಿಯುತ್ತೆ.”

“ಈಗಲೇ ನೀನು ಅವಳಲ್ಲಿಗೆ ಹೋಗು ದುರ್ಗಾ ! ಅಷ್ಟಕ್ಕೆ ಅವಕಾಶ ಕೊಡಬಾರದು. ಅವಳಿಗೆ ಬದುಕಿನ ಹಾದಿಯನ್ನು ತೋರಿಕೊಡುವೆ. ಅವಳನ್ನಿಲ್ಲಿ ಕರೆದುತಾ.”

“ಹೌದು. ಘಾಗೊಂದು ದಾರಿಮಾಡು.”

“ಮನದಲ್ಲಿ ಧೈರ್ಯವಿದ್ದರೆ ಆಶ್ರಯ ಬೇಕಿಲ್ಲ.”

“ಅಂದರೆ....?”

“ದೀಕ್ಷೆಕೊಡುವೆ. ಅದರಿಂದ ಧೈರ್ಯ ಮೂಡುತ್ತದೆ.”

“ಆ ವಿಚಾರದಲ್ಲಿ ನಿನ್ನನ್ನು ನಾನೂ ಒಂದು ಮಾತು ಕೇಳಬೇಕಾಗಿದೆ.”

“ಅದಕ್ಕೆ ಸಂಕೋಚವೇಕೆ ?”

“ನನಗೂ ದೀಕ್ಷೆ ಕೊಡು.”

“ನಿನ್ನವರು ಒಪ್ಪಬೇಕಲ್ಲ ?”

“ಅವರು ಒಪ್ಪದಿದ್ದರೂ ಚಿಂತೆಯಿಲ್ಲ. ನನ್ನ ಮುಂದಿನ ದಾರಿ ಎಂದರೆ ದೀಕ್ಷೆ ಅಥವಾ ಸಾವು ದೀಕ್ಷೆ ದೊರೆಯದಿದ್ದಲ್ಲಿ ಸಾವೇ ಮೋಕ್ಷ ನನಗೆ !”

“ಮೊದಲು ಬಿಂದೂ ಎಲ್ಲಿದ್ದಾಳೆ ಕರೆದು ತಾ. ಎಲ್ಲಾದರೂ ಹೊಳೆ–ಬಾವಿ ಬಿದ್ದಾಳು !”

“ನನ್ನ ಮೇಲೆ ಆ ಸಂಶಯವಿಲ್ಲವೆ ನಿನಗೆ !”

“ನಿನ್ನಮನಸ್ಸು ಅಷ್ಟೊಂದು ದುರ್ಬಲವಲ್ಲ. ಎಂಬುದು ನನಗೆ ಗೊತ್ತು ದುರ್ಗಾ !”

"ಹಾಗಾದರೆ.....?"

"ಏನು ಹೇಳು? ಯಾವುದನ್ನೂ ಮುಚ್ಚಿಡಬಾರದು."

"ಮುಚ್ಚಿಡುವುದೇನು ? ಸ್ತ್ರೀ ಜೀವನವೇ ತೆರೆದ ಅಧ್ಯಾಯ. ಅದ
ಕ್ಕಾಗಿ ಮರುಗುವವರು ಯಾರಿದ್ದಾರೆ ?"

"ಮರುಗುವುದು ಒತ್ತಟ್ಟಗಿರಲಿ, ಸುತ್ತಮುತ್ತ ಅಗಾಧವಾದ
ಮುಳ್ಳಿನ ಬೇಲಿ! ಅದನ್ನು ದಾಟಬೇಕಾದರೆ ಮನಸ್ಥೈರ್ಯಬೇಕು; ಸಾಧನೆ
ಬೇಕು."

"ಆ ಸಾಧನೆಗಿಳಿದಾಗಲೇ 'ಸ್ವೇಚ್ಛಾವರ್ತಿನಿ' ಎಂಬ ಬಿರುದು ಬರುತ್ತೆ.
ಅದನ್ನು ಹೊರುವ ದಿಟ್ಟತನ ಯಾರಿಗಿದ್ದೀತು ? ಅದಕ್ಕಿಂತ ಗಂಗಾ
ಮಾತೆಯ ಉಡಿಯೇ ಸರ್ವೋತ್ತಮ !"

"ಇರಲಮ್ಮಾ, ಹೋಗು, ಮೊದಲು ಬಿಂದೂವನ್ನು ಕರೆದು ತಾ."

"ಅವಳೊಂದಿಗೆ ನನಗೂ ದೀಕ್ಷೆ ಕೊಡು. ನಾನೂ ನನ್ನ ಸಂಕಟಾ
ವತರಣದಿಂದ ಬಿಡುಗಡೆ ಹೊಂದುವೆ."

"ಆಗಬಹುದು."

ದುರ್ಗಾ ಅನುನಯದಿಂದ ಕರಗಳನ್ನು ಜೋಡಿಸಿ ಅಲ್ಲಿಂದ ಹೊರ
ಟಳು.

ಸಂದರ್ಶನ

"ಸ್ವಾಮಿ, ಕೂಲಿ !"

"ನಾನು ಬರಲೇ ?"

"ನಾನು ಬರುವೆ : ಸ್ವಾಮಿ !"

"ನಾನು.........ನಾನು !"

"ನಾನು ಮೊದಲು ಬಂದುದ್ದು. ಇತ್ತ ಕೊಡಿ ಸ್ವಾಮಿ !"

ಹಲವಾರು ಬಗೆಯ ಧ್ವನಿಗಳು ಒಮ್ಮೆಗೇ ಗೋಗರೆದುವು.

ನಾನು ಎಲ್ಲರನ್ನೂ ಒಂದು ಕ್ಷಣ ಜುಗುಪ್ಸೆಯಿಂದ ನೋಡಿದೆ. ರೈಲು ನಿಲ್ದಾಣಕ್ಕೆ ಕಾಲಿಟ್ಟದ್ದೇ ತಡ ಕೂಲಿಗಳ ತಂಡ ನನ್ನನ್ನು ಮುತ್ತಿಗೆ ಹಾಕಿತ್ತು. ಅವರ ಸ್ಥಿತಿಗತಿ ನೋಡಿದರೆ ಅವರ ಕೈಯಲ್ಲಿ ಪೆಟ್ಟಿಗೆ ಕೊಡುವುದಕ್ಕಿಂತ ನಾನೇ ತೆಗೆದುಕೊಂಡು ಹೋಗುವುದು ಲೇಸು ಎಂಬ ಅಸಹನೀಯ ಪರಿಸ್ಥಿತಿ.

ಮರುಕ್ಷಣದಲ್ಲಿ ನಾನು ಅತ್ಯಂತ ನಿಷ್ಠುರನಾಗಿ ಸಿಡುಕಿದೆ.

"ಬೇಡ.....ಬೇಡ ! ಕೂಲಿ ಬೇಡ. ಏನೂ ಬೇಡ !"

ಅಲ್ಲಿಂದ ತ್ವರಿತಗತಿಯಲ್ಲಿ ನಾಲ್ಕು ಹೆಜ್ಜೆ ತೆಗೆಯುವುದರೊಳಗೆ ನನ್ನ ನಿಷ್ಠುರತೆಯ ಅರಿವಾಗಿ ಕ್ಲೇಶಪೂರ್ಣ ಗಲಿಬಿಲಿ ಮೂಡಿತು ಮನದಲ್ಲಿ. ಹಿಂದೆಂದೂ ನಾನು ಅಷ್ಟೊಂದು ನಿಷ್ಠುರನಾಗಿರಲಿಲ್ಲ. 'ಛೇ ! ಹಾಗೆನ್ನಬಾರದಿತ್ತು !' ಎಂದು ನನಗೆ ನಾನೇ ಹೇಳಿಕೊಂಡೆ. ಮರುಗಳಿಗೆಯಲ್ಲಿ ಕರುಣ ಕಾತರ ದೃಷ್ಟಿ ವಿನಾಕಾರಣ ಅವರ ಕಡೆ ಹೊರಳಿತು. ಆ ದೀನ ದರಿದ್ರರು ತಮ್ಮತಮ್ಮೊಳಗೆ ಕದನ ಹೂಡಿದ್ದುದು ಕಂಡು ಬಂತು ಯಾರಿಗೂ ದಕ್ಕದ ಕೂಲಿಗಾಗಿ. ಆ ದುರದೃಷ್ಟಕರ ಚಿತ್ತಾರ ಕಣ್ಣನ್ನು ಕೂರಿಗೆಯಂತೆ ತಿವಿಯಿತು ಎಂದರೆ ಅತಿಶಯೋಕ್ತಿಯಲ್ಲ. ಆ ತಕ್ಷಣವೇ ಅಲ್ಲಿಂದ ದೃಷ್ಟಿಯನ್ನು ಹಿಂತೆಗೆದು ಮುಚ್ಚಿ ಒಂದು ಕ್ಷಣ ನೋವನ್ನು

ನ್ನಲ್ಲೇ ನುಂಗಿಕೊಂಡೆ. ಹೃದಯಕುಂಡ ಕಾರುಣ್ಯಲಹರಿಯಿಂದ ತುಂಬಿಹೋಯಿತು.

ಆದರೇನು ?

ಈ ದೇಶದ ಸ್ಥಿತಿಗತಿ ತುಂಬಿ ಬರಬೇಕಾದರೆ ಇನ್ನೂ ಬಹಳಷ್ಟು ಕಾಲಾವಕಾಶಬೇಕು ಎಂಬುದು ಆತ್ಮಗತ. ಆದ್ದರಿಂದ ನಾನು ಆ ಚಿಂತನೆಯವಾದ ವಿಚಾರವನ್ನು ಹಾಗೇ ಬದಿಗಿಟ್ಟು ಅಭಿರಾಮಭಂಗಿಯಲ್ಲಿ ಮುಂದುವರಿದೆ. ನಿಲ್ದಾಣದುದ್ದಕ್ಕೂ ಕಾಣಸಿಗುವ ಪಯಣಿಗರ ವೈವಿಧ್ಯಮಯವಾದ ಅದ್ಭುತ ವರ್ಣಸಂಕರವು ಕಣ್ಣುಗಳಿಗೆ ಹಬ್ಬ ಮಾತ್ರವಲ್ಲ, ಮನಸ್ಸಿಗೆ ಅದರಿಂದ ವಿಚಾರ ವಿಮರ್ಶಕತಾ ಸಂಕೀರ್ಣವು ಉಪಲಬ್ಧ ; ಕಿವಿಗಳಿಗೆ ನಾನಾ ಭಾಷೆಗಳ ಸ್ವರ ವಿಶೇಷವು ಅವ್ಯಾಹತ ಸಂಗೀತ.

ಹೊಸ ರೈಲು ನಿಲ್ದಾಣ ಹಿರಿಯ ಅಜಗರದಂತೆ ವೈಚಾಚಿತ್ತು–ನಡೆದಷ್ಟೂ ಮುಂಬೆಳೆಯುತ್ತಿದೆಯೇನೋ ಎಂಬಷ್ಟು ಆಲೋಚನೆ ಮೂಡಿಸುವಂತೆ. ನೋಟ ಅನಿರೀಕ್ಷಿತವಾಗಿ ಗಡಿಯಾರದ ಮೇಲೆ ಹೊರಳಿತು. ರೈಲು ಹೊರಡಲು ಇನ್ನು ಐದು ನಿಮಿಷ ಮಾತ್ರ ಉಳಿದಿದೆ. ಮೊದಲೇ ಸೀಟು ರಿಜರ್ವ್ ಮಾಡಿಸಿದ್ದರಿಂದ ಅವಸರಕ್ಕೇನೂ ಕಾರಣವಿರಲಿಲ್ಲ. ಮನಸ್ಸು ಮುಂಬೈಯಲ್ಲಿ ನಾನು ಮಾಡಬೇಕಾದ ಕೆಲಸವನ್ನೂ, ನೋಡಬೇಕಾದ ವ್ಯಕ್ತಿಗಳನ್ನೂ ಕುರಿತು ಉದ್ದುದ್ದ ಪಟ್ಟಿ ಮಾಡುತಿತ್ತು. ಇನಿತೂ ಬಿಡುವಿಲ್ಲದ ನಾಲ್ಕು ದಿನಗಳ ಕಾರ್ಯಕ್ರಮ ಮುಂಬೈನಲ್ಲಿ. ಈ ದೀರ್ಘಾವಧಿ ರೈಲಿನ ಪಯಣಕ್ಕಿಂತ ವಿಮಾನದಲ್ಲಿ ಸೀಟು ಸಿಕ್ಕಿದ್ದರೆ ಎಷ್ಟೋ ಅನುಕೂಲ. ಆದರೆ, ಅದೂ ಸಿಗಲಿಲ್ಲ. ವಾರಗಟ್ಟಲೆ ಕಾಯುವಷ್ಟು ಸಮಯವೂ ಇರಲಿಲ್ಲ.

"ಸ್ವಾಮಿ, ಭಿಕ್ಷೆ ನೀಡಿ !"

ಕೀರಲು ಧ್ವನಿ ಹತ್ತಿರದಲ್ಲೇ ಮೊಳಗಿತು.

ನಾನು ಕಿಸೆಯಿಂದ ಒಂದುರೂಪಾಯಿ ನಾಣ್ಯವನ್ನು ತೆಗೆದು ಆ ಮುದುಕಿಯ ಕೈಗೆ ಇಡುವಷ್ಟು ಉದಾರತೆ ತೋರಿದೆ-ಮೊದಲು ಮಾಡಿದ ತಪ್ಪಿಗೆ ಪರಿಹಾರರೂಪವಾಗಿ.

ಅಸಂಖ್ಯ ಜನರಾಶಿಯಿಂದ ಕೂಡಿದ ರೈಲು ನಿಲ್ದಾಣದಲ್ಲಿ ನಾಗರಿಕ

ಯಾಂತ್ರಿಕ ಸೌಲಭ್ಯ ಶಬ್ದಾಯಮಾನವಾಗಿದ್ದರೂ ಅಂತಹ ಹೆಚ್ಚಿನ ವಿಶೇಷವೆನಿಸಲಿಲ್ಲ ನನಗೆ. ನಾಲ್ಕು ವರ್ಷಗಳಲ್ಲಿ ಉಂಟಾಗಿರುವ ಹಲ ಕೆಲವು ಮಾರ್ಪಾಡುಗಳನ್ನು ಅಳೆಯುವುದರಲ್ಲಿ ನಿಯುಕ್ತವಾಗಿತ್ತು ನನ್ನ ಕುತೂಹಲಭರಿತ ದೃಷ್ಟಿ ಅಸಂಖ್ಯ ವಿದ್ಯುದ್ದೀಪಗಳಿಂದ ಪ್ರಕಾಶಿತವಾದರೂ ಸ್ವಚ್ಛತೆಯ ಅಭಾವದಿಂದ ಪುರಾತನ ವೈಶಿಷ್ಟ್ಯವೇ ಆಗಲೀ, ನಾಗರಿಕ ವೈಭೋಗವೇ ಆಗಲೀ ಕಾಣುವಂತಿರಲಿಲ್ಲ. ಸಾಮಾನ್ಯ.....ಎಲ್ಲವೂ ಸರ್ವೇಸಾಮಾನ್ಯ.

ನಾನು ಒಳಾವರಣಕ್ಕೆ ಪದಾರ್ಪಣೆ ಮಾಡಿದಾಗಲೇ ಹೃದಯದ ರಸಧಾರೆಯಲ್ಲಿ ಉಕ್ಕುತಿದ್ದ ಆತುರತೆಯಲ್ಲಿ ಕೊಚ್ಚಿಹೋಗುವಂತಿದ್ದೆ. ಅದಕ್ಕೆ ಕಾರಣ ಬೇರೆ ಏನೇ ಇದ್ದರೂ ಮುಖ್ಯವಾಗಿ 'ಆತುರತೆ' ನನ್ನ ಸ್ವಭಾವ ಜನ್ಯ. ನನ್ನ ಬೋಗಿ ದೊರೆಯುವವರೆಗೂ ನನ್ನ ಮುನ್ನಡೆಗೆ ನಿಲುಗಡೆಯಿಲ್ಲ. ಪರದೇಶದಲ್ಲಿ ನಮ್ಮ ಪೆಟ್ಟಿಗೆಗಳನ್ನು ಹೊತ್ತು ತಿರುಗಿದ ಅಭ್ಯಾಸ ಬಲದಿಂದ ನನಗೆ ಅದೇನೂ ಭಾರವೆನಿಸಲಿಲ್ಲ. ಅಲ್ಲಿಂದ ಮುಂದೆ ಹತ್ತು ಮಾರು ಕಳೆದನಂತರ ಎದುರುಗಡೆಯಿಂದ ಬರುತಿದ್ದ ವ್ಯಕ್ತಿ ನನ್ನ ಗಮನವನ್ನು ತೀವ್ರ ಸೆಳೆದುಕೊಂಡ. ಅದಕ್ಕೆ ಮುಖ್ಯ ಕಾರಣ, ಅವನ ವಿಚಿತ್ರ ಚರ್ಯೆ. ಅಚ್ಚರಿಯ ನೆರೆಯುಕ್ಕಿದರೂ ಅವನನ್ನು ಈ ಹಿಂದೆ ಎಲ್ಲಿಯೋ ನೋಡಿದ ನೆನಪು. ಆದರೆ, ಎಲ್ಲೆಂಬುದು ಬಗೆ ಹರಿಯದ ಸಮಸ್ಯೆ. ಅವನು ನನ್ನನ್ನು ಕೋಪಾನಲದಿಂದ ಸುಟ್ಟು ಬಿಡುವಂತೆ ತೀಕ್ಷ್ಣವಾಗಿ ಮತ್ತೆ ನೋಡಿದ; ಯಾರೊಡನೆಯೋ ಸಂಭಾಷಿಸುತಿದ್ದು ಮಧ್ಯೆ ಮಧ್ಯೆ ನನ್ನೆಡೆಗೆ ದೃಷ್ಟಿ ಹೊರಳಿಸಿ ನೋಡುತಿದ್ದುದು ಕಾಣಬಂತು. ನಾನು ಅತ್ಯಂತ ವಿಸ್ಮಿತನಾಗಿ ಮತ್ತೆ ಆ ವ್ಯಕ್ತಿಯ ಕಡೆಗೆ ನನ್ನ ದೃಷ್ಟಿ ಹೊರಳದಂತೆ ಎಚ್ಚರ ವಹಿಸಿದೆ. ನನ್ನ ಬೋಗಿ ಅಲ್ಲೇ ಸಿಕ್ಕಿದುದರಿಂದ ನನಗೆ ಮುಂದುವರಿಯುವ ಅವಶ್ಯಕತೆ ಅನಂತರ ಬೀಳಲಿಲ್ಲ.

ನಾನು ಪ್ರಥಮ ತರಗತಿಯ ಡಬ್ಬಿಯೊಳಗೆ ಪೆಟ್ಟಿಗೆಗಳನ್ನು ಇರಿಸಿದಾಗ ನಿರ್ಜನ ಸೌಖ್ಯ ಮನಸ್ಸಿಗೆ ಸಮಾಧಾನ ಮೂಡಿಸಿತು. ಆದರೂ, ಬೇರೆ ಯಾರಾದರೂ 'ರಿಜರ್ವೇಶನ್' ಚೀಟಿ ಹಚ್ಚಿದ್ದಾರೆಯೇ ಎಂದು ಬಾಗಿಲ ಬಳಿ ಇಣಿಕಿನೋಡಿದೆ; ಅಲ್ಲಿ ನನ್ನ ಹೆಸರು ವಿನಾ ಅದೃಷ್ಟವಶಾತ್

ನ್ನಾರದೂ ಇರಲಿಲ್ಲ. ನರನಾಡಿಗಳಲ್ಲಿ ನೆತ್ತರಿನ ಝರಿ ನಿರಾಳವಾಗಿ ಹರಿ ೨ಡಿತು. ನಾನು ಬಾಗಿಲಲ್ಲಿ ನಿಂತು ಸುಮ್ಮನೆ ಸಹಜಭಾವದಿಂದ ದೃಷ್ಟಿ ಯನ್ನು ನಿಲ್ದಾಣದ ಕಡೆ ಚೆಲ್ಲಿ ಕೊಟ್ಟೆ. ಮತ್ತೆ ಅದೇ ವ್ಯಗ್ರಭಾವದ ವ್ಯಕ್ತಿ ನನ್ನನ್ನೇ ದುರುಗುಟ್ಟಿ ನೋಡುತ್ತಿರುವುದು ಕಾಣಿಸಿತು. ಆಗಿನ ನನ್ನ ಮಾನಸಿಕ ಉತ್ಕ್ಷೇಪ ಅವರ್ಣನೀಯ. ಆದರೂ, ನಾನು ಸ್ವಲ್ಪವೂ ಚಲಿತನಾಗದೆ ಸ್ವಾಭಾವಿಕವಾಗಿ ಒಳಬಂದಂತೆ ಬಂದು ಸೀಟಿನ ಮೇಲಿದ್ದ ಧೂಳನ್ನು ಹಳೆಯ ಪತ್ರಿಕೆಯಿಂದ ಝಾಡಿಸಿ ಕುಳಿತುಕೊಂಡೆ. ರೈಲು ಹೊರಡುವ ಸಮಯವಾಗಿದ್ದರೂ ಹೊರಡುವ ಸೂಚನೆ ಮಾತ್ರ ಕಂಡು ಬರಲಿಲ್ಲ. ಬಾಗಿಲ ಬಳಿಯಲ್ಲಿದ್ದ ಕೂಲಿಯನ್ನು ಇನ್ನಾರೋ ಆ ಬಗ್ಗೆ ಪ್ರಶ್ನಿಸಿದಾಗ ಅವನು "ಈವತ್ತು ಹತ್ತು ನಿಮಿಷ ತಡವಂತೆ ಸ್ವಾಮಿ!" ಎಂದುದು ಕಿವಿಗೆ ಬಿತ್ತು.

ಇನ್ನು ಸುಮ್ಮನೆ ಕೂಡುವುದು ಕಷ್ಟ. ನೈರಾಶ್ಯಭಾವ ಮನವನ್ನು ಕ್ಷಣ ಕ್ಷಣಕ್ಕೂ ಹಿಂಡಹತ್ತಿತು. ಮಾಸಿಕವಾಗಲೀ ದಿನಪತ್ರಿಕೆಯಾಗಲೀ ತರೋಣವೆಂದು ಎದುರಿನ ಪುಸ್ತಕಗಳ ಸ್ಟಾಲಿಗೆ ಹೋದೆ. ಅಲ್ಲಿ ಬಹಳಷ್ಟು ಗಿರಾಕಿಗಳು ತುಂಬಿದ್ದರು. ನೋಡಿದರೆ ಅವರಲ್ಲಿ ಅವನೂ ಒಬ್ಬ! ಮತ್ತೆ ತೀಕ್ಷ್ಣ ದೃಷ್ಟಿ ಬಾಣದಂತೆ ನನ್ನ ಮೇಲೆರಗಿತು. ನಾನು ನಿರ್ಲಕ್ಷ್ಯ ಭಾವನೆಯಿಂದ ನನ್ನ ವ್ಯಾಪಾರವನ್ನು ಮುಗಿಸಿ ಡಬ್ಬಿಗೆ ಹಿಮ್ಮರಳಿದೆ. ಅವನೂ ಸಹ ಚಿಲ್ಲರೆಯನ್ನು ತೆಗೆದುಕೊಂಡು ದಡದಡನೆ ಹೊರಟು ಹೋದ ಚಲನೆಯಲ್ಲಿ ಅತ್ಯಂತ ಬಿಗುಮಾನವಿತ್ತು ; ಅಂತಃಶಿಥಿಲತೆಯ ಪರಿತಾಪ ವಿತ್ತು. ಮೃತ್ಯುವಿನಾಸ್ಥಾನದ ಹೊಸ್ತಿಲಿನ ಮೇಲೆ ನಿಂತು ಜೀವನದ ಯಶಸ್ಸನ್ನು ಹೀಗೇಕೆ ಕಲಂಕಿತಗೊಳಿಸುತ್ತಿರುವನೋ ತಿಳಿಯಲಿಲ್ಲ. ನಾನು ಮನವನ್ನು ಗತಕಾಲಕ್ಕೆ ತೆತ್ತು, ಹಳೆಯ ವಿಚಾರಗಳನ್ನು ಮೆಲಕು ಹಾಕ ತೊಡಗಿದೆ. ವಿಷಯ ನುಂಗಲಾರದ ತುತ್ತಾಯಿತು.

ಪೆಟ್ಟಿಗೆ ತೆರೆದು ದುಪ್ಪಟಿಯೊಂದನ್ನು ತೆಗೆದು ಸೀಟಿನ ಮೇಲೆ ಹಾಸಿ, ದಿಂಬನ್ನು ಎತ್ತರಿಸಿ ಇಟ್ಟು ಅರ್ಧ ಶಯನಾವಸ್ಥೆಯಲ್ಲಿ ಒರಗಿ ಪತ್ರಿಕಾವ ಲೋಕನದಲ್ಲಿ ತಲ್ಲೀನನಾದೆ. ಆದರೆ, ಆ ವ್ಯಕ್ತಿಯನ್ನು ಚಿತ್ತಭಿತ್ತಿಯಿಂದ ತಳ್ಳಿಹಾಕುವುದು ನನ್ನಿಂದ ಸಾಧ್ಯವಾಗಲಿಲ್ಲ. ನನ್ನ ಕಾಲೇಜಿನ ದಿನಗಳಲ್ಲಿ

ಅವನನ್ನು ಎಲ್ಲೋ ನೋಡಿದ ನೆನಪು ಸ್ಮೃತಿ ಪಥದಲ್ಲಿ ಸುಳಿದಳಿದರೂ ಯಾರೆಂಬುದನ್ನು ಖಚಿತವಾಗಿ ಊಹಿಸಲಾಗಲಿಲ್ಲ. ಅವನ ವಿಚಿತ್ರ ವೈರತ್ವವಂತೂ ಇನ್ನೂ ವಿಶೇಷ ಸಮಸ್ಯೆ. ನನಗೆ ಜ್ಞಾಪಕವಿದ್ದಂತೆ ನಾನು ಯಾರೊಂದಿಗೂ ವೈರತ್ವ ಬೆಳೆಸಿಕೊಂಡವನಲ್ಲ. ಇದಂತೂ ತೀರ ವಿಚಿತ್ರ.

ರೈಲು ಅತ್ಯಂತ ಕರ್ಕಶ ದನಿಯಲ್ಲಿ ಶಿಳ್ಳೆ ಹಾಕಿತು.

ಕ್ಹೂ ಊ ಊ ಊ ಊ ಊ ! ಕ್ಹೂ ಊ ಊ ಊ ಊ

ನಾನು ಎದ್ದು ಬಾಗಿಲುಗಳನ್ನು ಭದ್ರಪಡಿಸಿ, ಎರಡು ಕಿಟಕಿಗಳನ್ನು ತೆರೆದು ಉಳಿದವುಗಳನ್ನು ಮುಚ್ಚಿದೆ. ಕೊನೆಯ ಅಂಕವಾಗಿ ಹಲ್ಲುಜ್ಜಿ ಮುಖ ಮಾರ್ಜನ ಮಾಡಿಕೊಂಡು, ಶೌಚದ ಕೊಠಡಿಯ ದೀಪನಂದಿಸಿ ಬಾಗಿಲನ್ನು ಮುಚ್ಚಿ ಪಲ್ಲಂಕದ ಮೇಲೆ ಕುಳಿತೆ. ವಿದ್ಯುತ್ ಚಾಲಿತ ರೈಲು ಮಾನವ ಶಕ್ತಿಯ ಮೂರ್ತರೂಪ ನಾಗರಿಕ ಜೀವನ ಮೌಲ್ಯವನ್ನು ಒರೆ ಗಲ್ಲಿಗೆ ಹಚ್ಚಿತು. ನಾನು ಅವನ ವಿಚಾರವನ್ನು ಸಂಪೂರ್ಣ ತಳ್ಳಿಹಾಕಿದೆ. ರೈಲು-ಸ್ವಲ್ಪ ನಿಧಾನ ಗತಿಯಲ್ಲಿ ನಿಲ್ದಾಣದ ವ್ಯಾಪ್ತಿಯನ್ನು ದಾಟಿದ ಬಳಿಕ ಕರಾಳ ಕತ್ತಲೆಯ ಅತಲಗರ್ಭವನ್ನು ತೀವ್ರಗತಿಯಲ್ಲಿ ಹೊಕ್ಕಿತು.

ಕೃಷ್ಣಪಕ್ಷದ ರಾತ್ರಿ. ನಕ್ಷತ್ರ ಖಚಿತ ಆಕಾಶ.

ಪತ್ರಿಕಾ ಪ್ರಪಂಚದ ಸಾರಾಸಾರಗಳನ್ನು ಸವಿದನಂತರ ಅದನ್ನು ಬದಿಗಿಟ್ಟು ಕೈ ಪೆಟ್ಟಿಗೆಯಿಂದ ಪುಸ್ತಕಗಳನ್ನು ಹೊರತೆಗೆದೆ. ಹೊರಡುವ ಅವಸರದಲ್ಲಿದ್ದಾಗ ಚಂದ್ರಮುಖಿ ಬೀರುವಿನಿಂದ ನಾಲ್ಕು ಪುಸ್ತಕಗಳನ್ನು ತೆಗೆದು ಪೆಟ್ಟಿಗೆಗೆ ಹಾಕಿದ್ದಳು. ಅವುಗಳನ್ನು ಆರಿಸಿಕೊಳ್ಳುವಷ್ಟು ಸಮಯ ನನಗಾಗಲೀ ಅವಳಿಗಾಗಲೀ ಆಗ ಇರಲಿಲ್ಲ. ಉತ್ಸಾಹಪೂರ್ಣ ದೃಷ್ಟಿಗೆ ಮೊದಲಿನ ಮೂರು ಪುಸ್ತಕಗಳ ಆಳ ತೀರ ಸಾಮಾನ್ಯವಾಗಿ ತೋರಿತು. ಅವನ್ನು ಬದಿಗಿಟ್ಟು ನಾಲ್ಕನೆಯ ಪುಸ್ತಕವನ್ನು ತೆಗೆದುಕೊಂಡೆ. ಅದರ ಮೊದಲ ಪುಟವನ್ನು ತೆರೆದಾಗ ಉಂಟಾದ ಆಶ್ಚರ್ಯ ವರ್ಣನಾತೀತ. ಅದು ವಿನೋದಿನಿಯ ಪುಸ್ತಕ. ಅದರಲ್ಲಿ ಅವಳ ಸಹಿ ಮತ್ತು ವಿಳಾಸಗಳು ಇದ್ದುವು. ನಾನು ಅತ್ಯಂತ ಕುತೂಹಲಭರಿತನಾಗಿ ಒಳಪುಟಗಳನ್ನು ತಿರುವಿ ಹಾಕಿದೆ. ಒಳಗಣ ಕ್ಲಿಷ್ಟಪದಗಳಿಗೆ ಅಲ್ಲಲ್ಲಿ ಅರ್ಥ ಬರೆದಿದ್ದಾಳೆ.

ಪುಟ ಪುಟಗಳಲ್ಲೂ ಅವಳ ಹಸ್ತಾಕ್ಷರ ಪ್ರತಿ ಮುದ್ರಿತವಾಗಿದೆ. ಅದರ ಂಭಾಗದ ರಕ್ಷಾ ಕವಚದ ಒಳಗಡೆ ಅವಳ ಚಿತ್ರವನ್ನು ಅಂಟಿಸಲಾಗಿತ್ತು. ುವಮಾರು ಐದು ವರ್ಷಗಳ ಹಿಂದೆ ಅವಳನ್ನು ನೋಡಿದ್ದು ; ಅನಂತರ ನೋಡಿರಲಿಲ್ಲವಾದ್ದರಿಂದ ಅದನ್ನು ನೋಡುವುದರಲ್ಲಿ ನನಗೆ ಆಸ್ತೆ ಮೂಡಿತು. ಆದರೆ, ಪುಸ್ತಕವು ಪ್ಲಾಸ್ಟಿಕ್ ಕವಚವನ್ನು ಹೊಂದಿದ್ದು ಅದರೊಳಗೆ ಪಟ ಅಡಕವಾಗಿದ್ದುದರಿಂದ ಮುಸಕು ಮುಸಕಾಗಿ ಕಾಣಿಸುತಿತ್ತು. ನಾನು ಪಟವನ್ನು ಸರಿಯಾಗಿ ನೋಡುವ ಉದ್ದೇಶದಿಂದ ಜಾಕೆಟ್ ಕಳಚಿದೆ. ಜಾಕೆಟ್ಟಿನ ಆಶ್ರಯದಲ್ಲಿದ್ದ ಪಟ ಸ್ವಚ್ಛವಾಗಿತ್ತು. ಆ ಮನಮೋಹನೀಯ ವಾದ ರೂಪು ಹಳೆಯ ವಿಚಾರವನ್ನೆಲ್ಲಾ ಸ್ಮೃತಿ ಪಥದಲ್ಲಿ ಪ್ರತಿಬಿಂಬಿ ಸಿತು. ಹಾಗೇ ಮಂತ್ರಿತ ಭಂಗಿಯಲ್ಲಿ ನೋಡತೊಡಗಿದೆ.

ನಾನು ಇಂಗ್ಲೆಂಡಿನಲ್ಲಿದ್ದಾಗ ಕಳೆದ ವರ್ಷ ಅವಳು 'ಲೆಕ್ಚರರ್' ಆದ ಸುದ್ದಿಯನ್ನು ಪ್ರಸಂಗವಶಾತ್ ಯಾರೋ ನಮಗೆ ಮುಟ್ಟಿಸಿದ್ದರು. ಅದು ಬಿನಾ ಅವಳ ವಿಚಾರ ಅನಂತರ ಏನೂ ತಿಳಿದಿರಲಿಲ್ಲ ; ತಿಳಿದುಕೊಳ್ಳುವ ಅವಶ್ಯಕತೆಯೂ ಇರಲಿಲ್ಲ. ಅವಳು ನನ್ನ ಸಹ ವಿದ್ಯಾರ್ಥಿನಿ. ತುಂಬ ಚುರುಕು ಸ್ವಭಾವದ ಹುಡುಗಿ. ಆಗ ನಮ್ಮಿಬ್ಬರಿಗೂ ಇದ್ದ ಸ್ನೇಹ ಸಂಬಂಧ ಅಪಾರ. ಅವಳ ಮಧುರ ಕಂಠದ ಭಾವಗೀತೆಗಳಿಗೆ ತಲೆದೂಗದ ವರಿಲ್ಲ. ಒಮ್ಮೆ ಅವಳೊಡನೆ ನಾಟಕವೊಂದರಲ್ಲಿ ಅಭಿನಯಿಸುವ ಪುಣ್ಯ ಪ್ರಸಂಗವು ನನಗೆ ಒದಗಿ ಬಂದಿತ್ತು. ಅಂದು ನಾನು ನಿಜವಾಗಿಯೂ ಧನ್ಯ ಎಂದೇ ಭಾವಿಸಿದ್ದೆ. ಇಂದು ಆ ವಿಚಾರವನ್ನು ನೆನೆದೊಡನೆ ನಗು ಉಕ್ಕಿ ಬಂತು. ನಗು ಮುಖದಿಂದಲೇ ಪುಟಪುಟಗಳನ್ನು ತಿರುವಿಹಾಕಿದೆ. ಆದರೆ, ಕ್ರಮೇಣ ರಕ್ತದ ಪ್ರತಿಕಣವೂ ತುಳುಕುವಂತೆ ತೋರಿಬಂತು. ನನ್ನ ಅಸ್ತಿತ್ವವನ್ನೆಲ್ಲಾ ಗತಕಾಲದಲ್ಲೇ ನೆಟ್ಟು ಆ ಚಿತ್ರವಾಸಿನಿಯನ್ನು ನೋಡತೊಡಗಿದೆ. ಅವಳ ಬೊಗಸೆಗಂಗಳಲ್ಲಿ ಆತ್ಮನಿವೇದನೆ ಹೊಮ್ಮುತ್ತಿ ರುವಷ್ಟು ಭಾವಸಮೃದ್ಧಿ.....! ತುಟಿಗಳಲ್ಲಿ ಆವುದೋ ಹೇಳಲಾಗದ ವಿಚಾರವಿದ್ದು ಸರಿಯಾದ ಸಂದರ್ಭಕ್ಕಾಗಿ ಕಾದಿರುವಂತಹ ಗಂಭೀರತೆ.....!

ಹೊತ್ತು ನಿರಾತಂಕವಾಗಿ ಉರುಳುತಿದ್ದುದರಿಂದ ಮನೋಗತಿಗೆ ಸರಾ ಗವಾದ ಇಂಬು ದೊರೆಯುತಿತ್ತು.

ಆ ದಿನಗಳಲ್ಲಿ ಅವಳೊಂದಿಗೆ ಕೇವಲ ವ್ಯಾವಹಾರಿಕವಾಗಿ ಬೆಳಸಿಕೊಂಡ ಸ್ನೇಹಸಂಬಂಧ ಅನಂತರ ನನಗರಿಯದಂತೆಯೇ ರಾಗಾನುರಾಗಗಳಲ್ಲಿ ತನುಮನಗಳನ್ನು ಬಂಧಿಸಿದ ಬಗೆ ಹಸಿರುಹಸಿರಾಗಿ ಅಕ್ಷಿಪಟಲದ ಮುಂದೆ ಸಾಗಿ ಹೋದಾಗ ಮನುಸ್ಸು ಜೇಡಬಾಂಧವನ ತಂತು ಕೃತಿಯಲ್ಲಿ ಸಿಕ್ಕಿದ ಕೀಟದಂತೆ ಮಿಲಿಮಿಲಿಗೊಂಡಿತು. ಹೃದಯ-ಮಸ್ತಿಷ್ಕಗಳುಭಾರಭಾರವಾಗತೊಡಗಿದುವು. ಅದೇ ವಿಚಾರ ವಿಮರ್ಶೆಯಲ್ಲಿ ಸ್ವಲ್ಪ ಹೊತ್ತು ಕಳೆದು ಹೋಯಿತು. ಅನಂತರ ನೋಟವನ್ನು ಗಡಿಯಾರದ ಮೇಲೆ ಹೊರಳಿಸಿದೆ. ಕಿರಿಯ ಮುಳ್ಳು ಹನ್ನೊಂದರ ಸಂಖ್ಯೆಯ ಬಳಿ ಸಾರಿತ್ತು. ಇನ್ನು ನನ್ನನ್ನು ನಾನು ನಿಗ್ರಹಿಸಿಕೊಳ್ಳದೆ ವಿಧಿ ಇರಲಿಲ್ಲ. ಆ ಪುಸ್ತಕವನ್ನು ಮುಚ್ಚಿ ಮಂಗಳ ಹಾಡುವ ಉದ್ದೇಶದಿಂದ ರಕ್ಷಾ ಕವಚವನ್ನು ಯಥಾರೀತಿ ಅಳವಡಿಸುವ ಪ್ರಯತ್ನದಲ್ಲಿದ್ದಾಗ, ಅದರ ಬಲಭಾಗದ ರಕ್ಷಾ ಕವಚದ ಆಶ್ರಯದಲ್ಲಿದ್ದ ಒಂದು ಕಾಗದ ಅಕಸ್ಮಾತ್ತಾಗಿ ದೃಷ್ಟಿಗೆ ಬಿತ್ತು. ಅದನ್ನು ತೆಗೆದು ಮಡಿಕೆಯನ್ನು ಬಿಚ್ಚಿದೆ. ಅದರಲ್ಲಿ ಹರಿದ ನೀಲಿಯ ಮಸಿಯೊರತೆ ಅವಳ ಲೇಖನಿಯದೆ. ಅಂದಮೇಲೆ, ಕೇಳಬೇಕೆ? ಕುತೂಹಲ ಮಿಂಚಿನಂತೆ ಕೆರಳಿ, ಅದರ ಮೇಲೆ ಹರಿದಾಡಿತು ದೃಷ್ಟಿ. ಅದು ಯಾರಿಗೋ ಬರೆದ ಕಾಗದದ ಮಧ್ಯಭಾಗವಿರಬಹುದು. ಅಂತೂ ಬರವಣಿಗೆ ಅಪೂರ್ಣ ಎಂಬುದು ಸುಸ್ಪಷ್ಟ. ಇನ್ನೊಬ್ಬರ ಕಾಗದವನ್ನು ಓದಬಾರದೆಂಬ ನಿಯಮಕ್ಕೆ ನಾನು ಮೊದಲಿನಿಂದಲೂ ಬದ್ಧ. ಆದರೂ, ಆ ಮುಹೂರ್ತದಲ್ಲಿ ನಾನು ಸಂಪೂರ್ಣ ಸೋತುಹೋದೆ ಎಂದು ಒಪ್ಪಿಕೊಳ್ಳಲೇಬೇಕು. ಅದನ್ನು ನಿರ್ಲಜ್ಜೆಯಿಂದ ಒಪ್ಪಿಕೊಳ್ಳುವೆ.

ಮೊದಲ ಪುಟ ಇರಲಿಲ್ಲ.

.... ಆಗ ನನ್ನ ಮನದಲ್ಲಿ ಮಹಾ ವಿಕ್ಷೋಭೆಯ ಪ್ರಭಂಜನ ನಡೆದು ಹೋಯಿತು! ಆಲೋಚನಾಶಕ್ತಿಯ ತರಂಗಗಳು ಏರುಪೇರಾದುವು–ಬಿರುಗಾಳಿಗೆ ಸಿಕ್ಕಿದ ನಾವೆಯಂತೆ. ನನ್ನ ದೇಹದಾದ್ಯಂತ ನವಿರುಗಳು ನಿಮಿರಿನಿಂತು ಜಗತ್ತೆಲ್ಲವೂ ಒಂದು ಪ್ರವಾಹದಂತೆ ಕಂಡು ಬಂತು. ನಾನು ಅದುವರೆಗೂ ಆತ್ಮಸಂಯಮದಲ್ಲಿ ಎಷ್ಟು ಯಶಸ್ವಿಯಾಗಿದ್ದೆನೋ ಅದೆಲ್ಲವೂ ಆ ಕ್ಷಣದಲ್ಲೇ ಕುಸಿದು ಬೀಳುವಂತೆ ಭಾಸವಾಗಿ ಎರಡು ಕಣ್ಣು

ಗಳಲ್ಲೂ ಗಂಗೆ–ಯಮುನೆಯರು ಅವ್ಯಾಹತವಾಗಿ ಹರಿಯತೊಡಗಿದರು. ಎಷ್ಟೋತ್ತಾದರೂ ನನ್ನನ್ನು ನಾನು ನಿಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನನ್ನ ಜೀವಮಾನದ ಅನೇಕಾನೇಕ ಮೈಲಿಗಲ್ಲುಗಳು ಸ್ಮೃತಿಪಥದಲ್ಲಿ ತೇಲಿ ಹೋದುವು. ಈ ಭಾಸಮಾನ ಜಗತ್ತಿನ ಅಂತರಾಳದಲ್ಲಿ ಅದೆಂತಹ ವಿಷ ಕೀಟಗಳು ಅಡಗಿವೆಯೋ ದೇವರಿಗೇ ಗೊತ್ತು. ಯಾರ ಹೃದಯಕರಂಡ ದಲ್ಲಿ ನನ್ನನ್ನು ಆತ್ಮಪೂರ್ವಕವಾಗಿ ಅರ್ಪಿಸಿಕೊಂಡೆನೋ ಆ ಸಂಭ್ರಾಂತಿ ದೈವಾಯತ್ತವಾಗಿರಬಹುದು....ಆದರೆ ನನಗಾಗಿ ಅಹರ್ನಿಶಿ ಕಾದಿದ್ದವರನ್ನು ಯಾರಿಗಾಗಿ ತಿರಸ್ಕರಿಸಿದೆನೋ ಅದು ಮಾತ್ರ ದೈವದತ್ತವಲ್ಲ; ಎಂದು ನನ್ನ ಆತ್ಮವಾಣಿ ಕೂಗಿ ಹೇಳಿತು. ನಾನು ವಂಚಿತಳಾದದ್ದು ನಿಜ. ಅದಕ್ಕೆ ಸರ್ವಾಂತರ್ಯಾಮಿ ಸಾಕ್ಷಿ. ಆದರೆ, ಅವನ ಲೀಲೆಯನ್ನು ಯಾರುಬಲ್ಲರು? ಅವನ ಉದ್ದೇಶವನ್ನು ಅಳೆಯುವುದೆಂತು ? ಇಂಥ ಕಠಿಣ ಪ್ರಸಂಗದಲ್ಲಿ ಸಿಕ್ಕಿ ಈ ಜೀವನ ತೊಳಲುತ್ತೆಂದು ನಾನೆಂದೂ ಅರಿತಿರಲಿಲ್ಲ. ಈಗಲಾದರೂ ಈ ಜೀವನ ಪ್ರಕರಣವನ್ನು ಕಾವೇರಿ ನದಿಯ ಚಟುಲತರಂಗಗಳಿಗೆ ಅರ್ಪಿಸಿ ಪಾಪಪುಣ್ಯಗಳನ್ನು ತೊಳೆದುಬಿಡುವ ಹುಮ್ಮಸ್ಸು ಕಡಿಮೆ ಇಲ್ಲ. ಆದರೆ, ಈ ಜೀವನ ಮೌಲ್ಯವೇನೆಂಬುದೇ ಇನ್ನೂ ನಿರ್ಣೀತವಾಗಿಲ್ಲ. ಏನೇ ಇರಲಿ ಮನಃಪ್ರಾಣಗಳು ಕಿಂಕುರ್ವಾಣತೆಯಿಂದ ತುಂಬಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ನಾನೇ ನಾನಾಗಿ ಏನನ್ನೂ ಸಾಧಿಸಲಾರೆ ಅಥವಾ ನಿರ್ಣಯಿಸ ಲಾರೆ. ಆ ಸರ್ವಶಕ್ತನಾದ ಭಗವಂತ ಮಾತ್ರ ನನಗೆ ದಾರಿ ತೋರಲು ಶಕ್ತ. ಆತನ ಕೃಪೆಗಾಗಿ ಕಾದಿರುವೆ–ಮಳೆ ನೀರಿಗಾಗಿ ಕಾದಿರುವ ಚಾತಕ ಪಕ್ಷಿ ಯಂತೆ. ಇನ್ನು ರಕ್ಷಿಸುವುದೂ ಬಿಡುವುದೂ ಆತನಿಗೆ ಸೇರಿದ್ದು.

ಯಾರಿಗೂ ತಲೆಬಾಗದೆ ಯಾರ ಹಂಗೂ ಇಲ್ಲದೆ ಎಂ.ಎ., ಕೋರ್ಸನ್ನು ಮುಗಿಸಿಕೊಳ್ಳುವ ಮಹತ್ವೈರ್ಯ ಎಷ್ಟೊಂದು ಸರಾಗವಾ ನನ್ನ ಎದೆಯ ನೆತ್ತರವಾರಿಯನ್ನು ಆವರಿಸಿಕೊಂಡಿತ್ತು ? ಆ ದಿಶೆಯಲ್ಲಿ ನಾನೆಷ್ಟು ಸುಖಿಯಾಗಿದ್ದೆ ? ಆದರೆ ಆದುದೇನು ? ಇಡೀ ವರ್ಷವಾನ ವೆಲ್ಲಾ ಪುಸ್ತಕವನ್ನು ಮುಟ್ಟಲಾಗಲಿಲ್ಲವಲ್ಲಾ ? ವಿನಾಕಾರಣ ಎಂತಹ ಅಪಾದನೆಗೆ ಗುರಿಯಾದೆ ? ನಾನು ದೇವಮಂದಿರವೆಂದೇ ಭಾವಿಸಿದ್ದ ಈ ಶರೀರಕ್ಕೆ ಲಭಿಸಿದ ವರವಾದರೂ ಎಂತಾದ್ದು ? ಕದಡಿ ಬಗ್ಗಡವಾದ ಮನ ಸ್ಸಿಗೆ ಯಾವರೀತಿಯಲ್ಲಿ ಶಾಂತಿಯನ್ನು ಪಡೆದುಕೊಳ್ಳಲಿ ? ಯಾರು ನನಗೆ ದಾರಿ ತೋರಿಯಾರು ?

ಆದರೆ,

ಇನ್ನು ಯಾರನ್ನಾದರೂ ನಂಬುವುದು ಸಾಧ್ಯವೇ ? ಈ ಜಗತ್ತು ಇಷ್ಟೆ, ಕುಟಿಲ.........ಕ್ಷುದ್ರ..........

ಹಾಯ್ ! ಆವುದೋ ಕೀಟ ಹೃತ್ಕಮಲವನ್ನು ಭೈರಿಗೆಯಂತೆ ಕೊರೆಯುತ್ತಿದೆ. ತಾಳಲಾರೆ, ನೋಯಲಾರೆ, ಈ ಸೂಕ್ಷ್ಮಾತಿಸೂಕ್ಷ್ಮ ವಿಚಾರವನ್ನು ಆರಮುಂದೆ ನಿವೇದಿಸಿಕೊಳ್ಳಲಿ ? ಎಂತು....

ಪುಟ ಅಲ್ಲಿಗೆ ಕೊನೆಗೊಂಡಿದ್ದು ಮುಂದಿನ ಪುಟ ಇರಲಿಲ್ಲವಾದುದರಿಂದ ವಿಷಯ ಅಷ್ಟಕ್ಕೆ ಮೊಟಕಾಗಿತ್ತು. ಕುತೂಹಲ-ಆಸಕ್ತಿಗಳು ತುಂಬಿದ ಮನಕ್ಕೆ ತನಿಗತ್ತಲೆಯ ತೆರೆಯನ್ನು ಹಿಡಿದಂತಾಯಿತು. ನಾನು ನೀಳವಾದ ನಿಟ್ಟುಸಿರನ್ನು ಹೊರಹಾಕಿದೆ. ಏಕಾಗ್ರಚಿತ್ತ ಭಾವಾವಿಷ್ಟತೆಯಲ್ಲಿ ಮುಳುಗಿ ಹೋಯಿತು.

ವಸ್ತುಸ್ಥಿತಿ ಅವಳದೇ. ಮುಖ್ಯವಾಗಿ ಅವಳ ಪುಸ್ತಕ ಈ ಕಾಗದದ ಸಹಿತ ಹೇಗೆ ನಮ್ಮ ಮನೆಗೆ ಬಂತೆಂಬುದು ಅರ್ಥವಾಗದ ವಿಷಯ. ಅದೇ ವಿಚಾರವನ್ನು ಚರ್ವಿತಚರ್ವಣಗೈದಾಗ ನನ್ನ ವಿದ್ಯಾರ್ಥಿ ಜೀವನ ಅಕ್ಷಿಪಟಲದ ಮೇಲೆ ಚಲನ ಚಿತ್ರದಂತೆ ಸುಳಿದಳಿಯಹತ್ತಿತು.

ಅಂದು,

ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ ವಿದ್ಯಾರ್ಥಿಗಳು ನಾಟಕವೊಂದನ್ನು ಅಭಿನಯಿಸಿದರು. ಅದರಲ್ಲಿ ಅದೃಷ್ಟವಶಾತ್ ನಾಯಕನ ಪಾತ್ರ ಲಭಿಸಿ ಎಲ್ಲರ ವಿಶ್ವಾಸಭಾಜನನಾದ ನಾನು ಆಗಿನ ಸಂದರ್ಭದಲ್ಲಿ ನಾಯಕಿಯ ಪಾತ್ರಕ್ಕೆ ವಿನೋದಿನಿಯನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿ ಪಾತ್ರ ವರ್ಗಕ್ಕೆ ಕಳೆಗೊಟ್ಟೆ. ಅವಳೂ ಸಹ ಯಾವ ಅಡ್ಡಿ ಆತಂಕಗಳೂ ಇಲ್ಲದೆ ಒಪ್ಪಿಕೊಂಡಳು. ಅವಳು ಅಭಿನಯ ಚತುರೆ, ವಾಕ್ಚತುರೆ, ಸಂಗೀತ ಕೋವಿದೆ ಅಂದಮೇಲೆ ಹೇಳಬೇಕೆ ? ಪ್ರೇಕ್ಷಕವೃಂದ ಬಾರಿಬಾರಿಗೂ ಹರ್ಷೋದ್ಗಾರ ಮಾಡಿ ಮೆಚ್ಚಿಗೆ ಸೂಸಿತು. ನಾನು ನಾಟಕದಲ್ಲಿ ನಾಟಕೀಯವಾಗಿ ಅವಳಿಗೆ ನೀಡಿದ ಪ್ರೇಮದ ಕಾಣಿಕೆಯಾದ ಬಿಳಿಯ ಗುಲಾಬಿಯನ್ನು ಜೀವನ ನಾಟಕದಲ್ಲೂ ಕೊಡಲು ಉತ್ತೇಜಿತನಾದೆ. ದಿನದಿನಕ್ಕೂ ರಾಗಾನುರಾಗಗಳ ಕುಡಿ ಹೃದಯಾಂತರಾಳದಲ್ಲಿ ಉನ್ಮತ್ತ ಭಾವದಿಂದ ಬೆಳೆ

ಯುತಿತ್ತು. ತನುಮನಗಳು ದಟ್ಟಪುಷ್ಟವಾದುವು. ನಾನು ಆನಂದದಿಂದ ಆಬದ್ಧನಾಗಿ ನನ್ನ ಪ್ರಶ್ನೆಯನ್ನು ಬಹಳ ವಿನಯವಂತಿಕೆಯಿಂದ ಅವಳ ಮುಂದಿಡುವ ಸನ್ನಾಹ ನಡೆಸಿದೆ.

"ನೀವು ದಯವಿಟ್ಟು ನನ್ನನ್ನು ಕ್ಷಮಿಸುವಿರೆಂದೇ ನನ್ನ ಪ್ರಶ್ನೆಯನ್ನು ನಿಮ್ಮ ಮುಂದಿಡುವೆ."

"ಏನು ಹೇಳಿ ? ಅಷ್ಟೊಂದು ಸಂಕೋಚವಾದರೂ ಏಕೆ ?"

ಆ ಮಾತು ಆ ಸರಳತೆ ನನಗೆ ನೂರು ಬಗೆಯ ಉತ್ತೇಜನ ನೀಡಿತು. ನಾನು ನಿಸ್ಸಂಕೋಚವಾಗಿ ದನಿಯನ್ನು ಹರಿಯ ಬಿಟ್ಟೆ.

"ನೀವು ನಾಟಕದಲ್ಲಿ ನನ್ನೊಡನೆ ಸಹಭಾಗಿಯಾದಂತೆ ಜೀವನ ನಾಟಕದಲ್ಲೂ ಸಹಭಾಗಿಯಾದರೆ ನಾನು ಧನ್ಯನಾಗುವೆ ; ದಯಮಾಡಿ ನನ್ನ ಅಭಿಮಾನಕ್ಕೆ ಧಕ್ಕೆ ತರಬೇಡಿರಿ."

ಆ ಕೋರಿಕೆ ಮನವನ್ನು ಮುಟ್ಟಿದಾಗ ಅವಳು ಇನಿತೂ ವಿಚಲಿತಳಾಗಲಿಲ್ಲ, ಮುಖಭಾವ ಗಂಭೀರತೆಯಿಂದ ಕೂಡಿತ್ತು. ಕೆಂದುಟಿಗಳು ಯಾಂತ್ರಿಕವಾಗಿ ಬಿರಿದುವು,

"ನಿಮ್ಮದು ತುಂಬ ದುರದೃಷ್ಟಕರವಾದ ಪ್ರಶ್ನೆ. ದಯವಿಟ್ಟು ಕ್ಷಮಿಸಿಬಿಡಿ."

"ನೀವು ಅಷ್ಟೊಂದು ನಿರ್ದಯರಾಗಬಾರದು."

"ದಯಾದಯೆಗಳ ಪ್ರಶ್ನೆಯೆ ಅಲ್ಲ. It is too late."

"ನಿಜವಾಗಿಯೂ ?"

"ಹೌದು."

ಅಷ್ಟಕ್ಕೆ ಹಿಂತೆಗೆಯಲು ನನ್ನ ಕಾಮುಕ ಬುದ್ಧಿ ಸರ್ವಥಾ ಸಮ್ಮತಿಸಲಿಲ್ಲ. ಅದು ನನ್ನ ಹೃದಯಕ್ಕೆ ಬಡಿದ ಅಸಹನೀಯ ಆಘಾತ ; ನಾನು ತೀವ್ರ ಚಿಂತಿತನಾದೆ. ನನ್ನ ಕಂಠಸ್ವರ ಭಾರವಾಯಿತು. ಅಂತರ್ಯದ ನೋವನ್ನೆಲ್ಲಾ ಹೊರಗೆಡಹಿ ಅತೀ ದೈನ್ಯತೆಯಿಂದ ಬೇಡಿದೆ,

"ನಿಮಗೆಲ್ಲಾ ಗೊತ್ತು. ಆದರೂ...."

ಅವಳು ನನ್ನ ಮಾತನ್ನು ಮುಂದುವರಿಸಗೊಡದಂತೆ ನಡುವೆ ಬಾಯಿ ಹಾಕಿದಳು,

"ಇದೆಲ್ಲಾ, ಬರೀ ನಾಟಕ ; ಎಂದಲ್ಲವೇ ನಿಮ್ಮ ಮನೋಭಾವ ?"

"ಇರಬಹುದು."

"ನೀವು ಕೊನೆಯಪಕ್ಷ ಒಂದು ವರ್ಷ ಹಿಂದೆಯೇ ಯೋಚಿಸಿದ್ದರೆ ಒಳ್ಳೆಯದಿತ್ತು."

"ಆ ಮಾತನ್ನು ನಾನು ಒಪ್ಪುವುದಿಲ್ಲ."

"ಏಕೆ ?"

"ಎಲ್ಲಕ್ಕೂ ಕಾಲ ಪಕ್ವವಾಗಬೇಕು. ಬಹುಶಃ ಆಗ ನೀವು...." ಅಷ್ಟಕ್ಕೆ ಗಂಟಲಿನ ಹಸಿ ಒಣಗಿತು. ನಾನು ಸುಮ್ಮನಾದೆ.

ಆಗ ಅವಳು ಏನೋ ಒಂದು ರೀತಿಯ ತೀವ್ರ ಉದಾಸೀನಭಾವದಿಂದ ಹೇಳಿದಳು "ನಿಮ್ಮ ಪ್ರಶ್ನೆ ಅಪ್ರಕೃತ. ಈ ವಿಚಾರದಲ್ಲಿ ಯಾರೂ ನನ್ನನ್ನು ಬಲಾತ್ಕರಿಸಿಲ್ಲ. ಪ್ರಾಯಶಃ, ಪ್ರತಿಯೊಬ್ಬರ ಬಾಳೂ ದೈವಯೋಗದಿಂದಲೇ ರೂಪಿತಗೊಳ್ಳುತ್ತದೆ. ಅಂದಮೇಲೆ, ನಿಮ್ಮ ತರ್ಕ ಉಚಿತವಲ್ಲ."

"ಅದು ಕೇವಲ ನಿಮ್ಮ ಅಭಿಪ್ರಾಯದ ಮಾತು...."

"ಇರಲಿ, ನಾನೇನೂ ಅದನ್ನು ತಳ್ಳಿಹಾಕಲಾರೆ.....ಎಲ್ಲರಿಗೂ ಅವರವರ ಅಭಿಪ್ರಾಯ ಇದ್ದೇ ಇರುತ್ತದೆ. ಆದರೂ ಸಹ, ಅದರಲ್ಲಿ ಅಂತಃಸತ್ವ ಇಲ್ಲ ಎಂದು ನೀವು ದೃಢವಾಗಿ ಪ್ರತಿಪಾದಿಸಲಾರಿರಿ. ನನ್ನ ಬಗೆಗೆ ನನ್ನ ಅಭಿಪ್ರಾಯ ಖಂಡಿತ ಮುಖ್ಯ," ಎಂದಾಗ ಅವಳ ಹರವಾದ ಕಣ್ಣುಗಳಲ್ಲಿ ಹೊಂಪುಳಿಯೇಳಿಸುವ ಕಾಂತಿ ಮಿನುಗಿತು.

ಅವಳ ದೃಢಭಾವವನ್ನು ಮೆಚ್ಚಿದರೂ ನಾನು ಅತ್ಯಂತ ನಿರಾಶನಾದೆ. ಭಾರಾಕ್ರಾಂತವಾದ ಹೃದಯವನ್ನು ಹೊರಲಾರದೆ ಕಾಲುಗಳು ಬಳುಕುವಂತಾದುವು. ಕಣ್ಣುಗಳಲ್ಲಿ ದೈನ್ಯಭಾವ ತುಂಬಿಬಂತು. ನಾನು ಮತಿಶೂನ್ಯನಂತೆ ಮತ್ತೆ ಅಂಗಲಾಚಿದೆ,

"ನಿಮ್ಮ ಅಭಿಪ್ರಾಯಕ್ಕೆ ಮಾನ್ಯತೆ ಕೊಡಲಾರೆ ಎಂದೆನ್ನುವಷ್ಟು ಕಟು ಧೈರ್ಯ ನನ್ನಲ್ಲಿಲ್ಲ. ನಿಮ್ಮ ಅಂತರಂಗವನ್ನು ಬಿಚ್ಚಿ ತೋರುವಷ್ಟು ಉದಾರತೆ ನಿಮ್ಮ ಬತ್ತಳಿಕೆಯಲ್ಲಿದೆ ಎಂಬ ನಂಬುಗೆ ನನ್ನನ್ನು ಇನ್ನೂ ಆಶಾಬದ್ಧನನ್ನಾಗಿಸಿದೆ."

ಅವಳು ಮಾತನಾಡಲಿಲ್ಲ. ಕ್ಷಣಕ್ಷಣಗಳೂ ಸ್ಥಿರಗಾಂಭೀರ್ಯದಲ್ಲಿ ಉರುಳಿ ಹೋದುವು.

"ಏಕೆ ಮಾತೇ ಇಲ್ಲವಲ್ಲಾ ?"

ನಸು ಕಂಪನಯುಕ್ತವಾಣಿಯಲ್ಲಿ ಅವಳು ಪ್ರತಿ ನುಡಿದಳು,

"ನನ್ನ ಹೃದಯ–ಮಸ್ತಿಷ್ಕಗಳು ಅಷ್ಟು ಉತ್ಸಾಹಿತವಾಗಿಲ್ಲ."

"ನಿಮ್ಮ ಮಾತುಗಳು ತುಂಬ ಅರ್ಥಗರ್ಭಿತವಾಗಿರುತ್ತವೆ. ಅವನ್ನು ಯಾವರೀತಿ ಅರ್ಥೈಸಬೇಕೋ ತಿಳಿಯುತಿಲ್ಲ."

ಈಸಲ ಆಕೆ ಅತ್ಯಂತ ಅಸಡ್ಡೆಯಿಂದ ಉತ್ತರಿಸಿದಳು,

"ನಿಮಗೆ ಅರ್ಥೈಸುವ ವ್ಯರ್ಥ ಶ್ರಮವೂ ಬೇಡ ಬಿಡಿ."

"ಅಂದರೆ ನಿಮ್ಮ ಹೃದ...."

"ಹಾಗೆ ಅಂದುಕೊಳ್ಳಿ. ಅದರಿಂದ....." ಅಲ್ಲಿಗೆ ಕಂಠ ಗದ್ಗದವಾದುದರಿಂದ ಅವಳು ಸುಮ್ಮನಾದಳು, ಆ ಅನಿರೀಕ್ಷಿತ ಭಾವೋದ್ವೇಗದಿಂದ ಆಕೆ ಸಮಸ್ಯಾತ್ಮಕ ವ್ಯಕ್ತಿಯಾಗಿ ತೋರಿದಳು. ಅವಳ ಸೂಕ್ಷ್ಮಾತಿಸೂಕ್ಷ್ಮವಾದ ಮರ್ಮಾಂತಿಕ ವೇದನೆಯನ್ನು ಕಂಡು ನಾನು ಅನುಭವಿಸಿದ ಪರಿತಾಪ ಅವರ್ಣನೀಯ.

"ಏನೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಎಲ್ಲಾ ಭಗವಂತನ ಇಚ್ಛೆ!" ನುಣ್ದನಿ ಕರ್ಣಪಟಲಗಳಮೇಲೆ ಪ್ರತಿಧ್ವನಿಸುತ್ತಲೂ ಮನಸ್ಸು ಯೋಚನೆಯಿಂದ ವಿಮುಕ್ತವಾಯಿತು. ನಾನು ಆವಿಷ್ಟನಂತೆ, ಅಭಿಭಾವುಕನಂತೆ ಕೇಳಿದೆ,

"ಆ ಮೂರ್ಖತೆಯ ಪರಮಾಧಿಯಲ್ಲಿ ನೀವು ಇನ್ನೂ ಇದ್ದೀರಾ ?"

ಪ್ರಶ್ನೆ ಮೊನಚು ಮುಳ್ಳಿನಂತೆ ಅವಳ ಮನವನ್ನು ಚುಚ್ಚಿತೇನೋ, ಆ ಘಳಿಗೆಯಲ್ಲಿ ಅದಕ್ಕೆ ಸರಿಯುತ್ತರವನ್ನು ಹೊಂದಿಸಿಕೊಳ್ಳಬೇಕಾದರೆ ಸ್ವಲ್ಪ ಸಮಯ ತೆಗೆದುಕೊಂಡಳು. ಅನಂತರ ದೀನಕಂಠದಿಂದ ನುಡಿ ಹೊರಬಿತ್ತು,

"ನಿಮ್ಮ ಪ್ರಶ್ನೆ ಎಷ್ಟೊಂದು ಔಚಿತ್ಯವೋ ಅಷ್ಟೇ ಸುಲಭವೂ ಆಗಿದೆ."

"ಅಂದರೆ ....?"

"ನಿಮಗೆ ವಿವರಿಸಬೇಕಾದ್ದು ಏನಿದೆ ? ನೀವೇ ಊಹಿಸಿಕೊಳ್ಳಿ !"

"ಊಹಿಸುವುದೆಂದರೆ ನಾನಾರ್ಥ ಮೂಡಬಹುದು. ನಿಮ್ಮ ಮನೋಭಾವ ತಿಳಿದರೆ ಸಾಕು."

"ನನ್ನ ಹೃದಯ ನಿಘಂಟಿನಲ್ಲಿ ಬರೆದ ಅರ್ಥಕ್ಕೆ ನಾನು ತಲೆಬಾಗಿರುವೆ. ಅದು ನನ್ನ ಧರ್ಮ. ಅದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ."

"ಇಂದು ನನ್ನ ಹೃನ್ಮಂದಿರ ಬರಿದಾಯ್ತು. ನಾನಿನ್ನು...."

ನುಡಿ ಅಪೂರ್ಣವಾದರೂ ಅರ್ಥಭರಿತವಾಗಿದ್ದುದರಿಂದ ಅವಳು ಸುಲಭವಾಗಿ ಗ್ರಹಿಸಿ ಉತ್ತರಿಸಿದಳು,

"ದೈವ ಸಂಕಲ್ಪ !"

ಒಂದೆರಡು ಕ್ಷಣ ಕಣ್ಣಮುಂದಿನ ವಸ್ತುಗಳೆಲ್ಲ ಗಿರಗಿರ ಸುತ್ತಿದಂತಾಯಿತು. ದೇಹದಾದ್ಯಂತ ಕದಂಬ ಕೇಸರದಂತೆ ಮೈ ನವಿರು ನಿಮಿರಿ ನಿಂತುವು. ಹೃದಯದಾಳದಿಂದ ಹರಿದು ಬಂದ ನಿಟ್ಟುಸಿರೊಂದು ನನಗರಿಯದಂತೆಯೇ ತಪ್ಪಿಸಿಕೊಂಡಿತು. ಏನು ಹೇಳಬೇಕೋ ಹೊಳೆಯಲಿಲ್ಲ. ಆಕೆ ಹತಾಶೆಯ ಕುಂಡದಲ್ಲಿ ದಗ್ಧವಾಗಿದ್ದರೂ ಧವಳಗಿರಿಯಂತೆ ಮಹೀಯಸಿಯಾಗಿದ್ದಾಳೆ!

ನಾನು ಮೂಕವಿಸ್ಮಿತನಾದೆ. ನೋಟ ಹತ್ತಿರದಲ್ಲಿದ್ದರೂ ಏನನ್ನೂ ನೋಡುತ್ತಿರಲಿಲ್ಲ. ಎದೆಯಾಳದಲ್ಲಿ ಅಂತರ್ವಾಣಿ, ಕೂಗಿ ಹೇಳಿತು "ಈ ಜೀವನಶಾಂತಿಯ ಉತ್ತರದಾಯಿತ್ವಕ್ಕೆ ನೀನಲ್ಲದೆ ಇನ್ನಾರೂ ಸುಪಾತ್ರರಲ್ಲ !"

ಆದರೇನು ?

ನನ್ನ ಭವಿಷ್ಯ ಆಶಾದಾಯಕವಾಗಿರಲಿಲ್ಲ. ಉರುಳುವ ಪ್ರತಿಯೊಂದು ಕ್ಷಣಗಳೂ ನನ್ನಮೇಲೆ ಘೋರಯುದ್ಧವನ್ನು ಸಾರಿ ಹಿಂಸಿಸತೊಡಗಿದುವು. ಹೃದಯ ನುಚ್ಚುನೂರಾದಂತೆ ಭಾಸವಾಯಿತು. ಆಗ ಹೇಗೆ ನನ್ನನ್ನು ನಾನು ಹತೋಟಿಗೆ ತೆಗೆದುಕೊಂಡೆ ಎಂಬುದನ್ನು ಬಣ್ಣಿಸುವುದು ಕಷ್ಟ. ಅಂತೂ, ಆ ಪ್ರಕರಣ ಅಲ್ಲಿಗೆ ಮುಕ್ತಾಯವಾಯಿತು.

ಅನಂತರ ಅವಳನ್ನು ಒಂದು ವರ್ಷಮಾನ ಪರ್ಯಂತ ಕಾಣಲಾಗಲಿಲ್ಲ. ಬಹುಶಃ ಅವಳು ಪರಸ್ಥಳಕ್ಕೆ ಹೋಗಿದ್ದಳೆಂದು ತೋರುತ್ತದೆ; ಆಗ ಅವಳ ಹಿಂದೆ ಹರಡಿದ ಸುದ್ದಿ–ಕುಕಲ್ಪನೆಗಳಿಗೆ ಇತಿಮಿತಿಯೇ ಇರಲಿಲ್ಲ. ಕೆಲವೊಮ್ಮೆ ನಂಬುವುದು ಕಷ್ಟವಾದರೆ ಇನ್ನು ಕೆಲವೊಮ್ಮೆ ನಂಬದಿರುವುದು ಕಷ್ಟ. 'ಸ್ತ್ರೀ' ಎಂದಮೊಲೆ 'ನಿಂದೆ' ಎಂಬುದು ಬೆನ್ನು ಹಿಂದೆಯೇ

ಪನ್ಮತಾಳುತ್ತದೆ ; ಎಂದರೆ ಸಾಕು ; ಅದಕ್ಕಿಂತ ಹೆಚ್ಚು ವಿಸ್ತರಿಸುವುದು ಅನಾವಶ್ಯಕ.

ಆ ದುರ್ದಿನಗಳು ಹೇಗೆ ಉರುಳಿದುವೋ ದೇವರಿಗೇ ಗೊತ್ತು. ಕೆಲವೊಮ್ಮೆ ಅವು ಬಹು ಕಠಿಣವೆನಿಸಿದರೂ ನನ್ನ ಹಾದಿಯಿಂದ ನಾನು ಹಿಂಜರಿಯದೆ ಗತ್ಯಂತರವಿರಲಿಲ್ಲ. ಜೀವನದ ಪೂರ್ವಾರ್ಧವನ್ನು ಸುವ್ಯಸ್ಥಿತ ರೀತಿಯಲ್ಲಿ ನಡೆಸಿಕೊಂಡು ಬಂದ ನನ್ನ ಮಾತಾಪಿತೃಗಳಿಗೆ ಉತ್ತರಾರ್ಧವನ್ನು ವ್ಯವಸ್ಥಿತ ಗೊಳಿಸುವುದು ಕಷ್ಟವೆನಿಸಲಿಲ್ಲ. ಅವರು ಮತ್ತೊಂದು ರೀತಿಯಲ್ಲಿ ಸನ್ನದ್ಧಗೊಳಿಸಿದರು.

"ಇದುವರೆಗೂ ನಿನ್ನ ಜೀವನದ ಸ್ವಯಂ ಸಿದ್ಧತೆಯನ್ನು ಕಣ್ತುಂಬ ಕಂಡಿದ್ದಾಯ್ತು. ಇನ್ನು ನಮ್ಮ ಯೋಜನೆಗೆ ಸೂಕ್ತ ಗಮನಕೊಡು 'ಇಲ್ಲ' ಎನ್ನಬೇಡ" ಎಂದರು ನನ್ನ ಅಮ್ಮ.

ನುಡಿ ಎದೆಯಾಳದಿಂದ ಒತ್ತಾಯ ಪೂರ್ವಕವಾಗಿ ಹರಿದಾಗ ಪ್ರತಿವಾದನೆ ಹೂಡಲು ಒಣಗಿದ ನಾಲಿಗೆ ಹೊರಳಲಿಲ್ಲ. ಒಂದೆರಡು ಘಳಿಗೆ ಯೋಚಿಸಿ ನಿಧಾನವಾಗಿ ಉತ್ತರಿಸಿದೆ "ಈಗ ನನ್ನ ಜೀವನಕ್ಕೆ ಬಂದ ಕೊರತೆಯಾದರೂ ಏನು ? ಹೇಗೂ ಸಾಗುತ್ತಿದೆ ; ಹೀಗೆಯೇ ಸಾಗಲಿ ಬಿಡಿ ; ಮತ್ತೇಕೆ ಗಲಿಬಿಲಿ ಹಚ್ಚಬೇಕು ?"

"ಇನ್ನೂ ಎಷ್ಟು ಕಾಲ ಹೀಗೆ ?"

"ಪರವಾಯಿಲ್ಲ; ಚಿಂತೆ ಬೇಡ."

"ನಾವು ಬದುಕಿರುವಾಗ ನಮ್ಮ ಕರ್ತವ್ಯ ಮುಗಿಯಬೇಕು ; ಇಲ್ಲದಿದ್ದಲ್ಲಿ ನಮಗೆ ಸಾವಿನಲ್ಲೂ ಶಾಂತಿ ಸಿಗುವುದಿಲ್ಲ."

"........."

ಅಲ್ಲಿಗೆ ಸಂಭಾಷಣೆ ಮುಗಿದರೂ ಪ್ರಕರಣ ಮುಗಿಯಲಿಲ್ಲ.

ಪರಿಸ್ಥಿತಿಯ ಒತ್ತಡಕ್ಕೆ ಮಣಿದು ನಾನು ಗೃಹಸ್ಥನಾದೆ. ಚಂದ್ರಮುಖಿ ಜೀವನ ಜ್ಯೋತಿಯನ್ನು ಸಾನಂದದಿಂದ ಬೆಳಗಿದಳು. ನಾನು ಕ್ರಮಕ್ರಮೇಣ ಉತ್ಸುಕ ಜೀವನಪಟುವಾದೆ: ವಿನೋದಿನಿ ನನ್ನ ಮನಸ್ಸಿನಿಂದ ಮರೆಯಾಗತೊಡಗಿದಳು. ಆದರೂ, ಆಗಾಗ ಅನುದಿನದ ನಾನಾ ಘಟನೆಗಳೊಂದಿಗೆ ಅವಳ ನೆನಪು ಮೂಡಿ 'ಛೆಃ ! ಪಾಪ, ಅವಳ

ಕತೆ ಏನಾಯಿತೋ, ಎಂದು ಯೋಚನೆ ಬರುತಿದ್ದುದುಂಟು. ಮರುಗಳಿಗೆಯಲ್ಲಿ ಎಲ್ಲವನ್ನೂ ಬದಿಗೊತ್ತಿ ದಿನಚರಿಯಲ್ಲಿ ತೊಡಗುತಿದ್ದೆ. ಆದರೂ, ಆ ಏಕಾಂತ ಸ್ಮರಣೆಯಲ್ಲಿ ಸುಖದುಃಖಗಳು ನನಗರಿಯದಂತೆಯೇ ಹರಿದಾಡಿ ಹೋಗುತಿದ್ದುವು. ನಾನು ಆಶ್ವಸ್ತನಾದರೂ, ಭಾವನಾಮಯಿಯಾದರೂ ಆ ಅಜ್ಞಾತ ಆಶಂಕೆಯನ್ನು ಪೂರ್ತಿ ತಳ್ಳಿಹಾಕಲಾಗಲಿಲ್ಲ.

ಒಮ್ಮೆ ಚಂದ್ರಮುಖಿ ಲಘುಹಾಸ್ಯ ಭರಿತವಾಣಿಯಲ್ಲಿ ನುಡಿದಳು,

"ನಿಮ್ಮ ಕನಸು-ಮನಸುಗಳಲ್ಲಿ ಹಾದುಹೋದ ವಿನೋದಿನಿಯ ಪರಿಚಯ ನನಗೂ ಇತ್ತು."

"ಖಂಡಿತವಾಗಿ.....?"

"ಹೌದು."

"ಎಲ್ಲಿ.....ಹೇಗೆ ?" ಎಂದೆ. ಚಿಂತನೀಯವಾದ ವಿಚಾರ ಕುತೂಹಲವನ್ನು ಕೆರಳಿಸಿತು.

"ಒಂದಾನೊಂದು ಕಾಲದಲ್ಲಿ ಅವಳೂ ನಾನೂ ನೆರೆಹೊರೆಯವರಾಗಿದ್ದೆವು. ನಮ್ಮ ನಮ್ಮಲ್ಲಿ ಸ್ನೇಹ ಸಲಿಗೆಯೂ ಇತ್ತು."

"ಹಾಗಾದರೆ, ನಿನಗವಳ ವಿಚಾರ ಚೆನ್ನಾಗಿ ತಿಳಿದಿರಬಹುದಷ್ಟೆ ?"

"ತಿಳಿಯದೆ ಏನು ?"

"ಈಚೆಗೆ ಅವಳು ಕಾಣುತ್ತಿಲ್ಲವಲ್ಲಾ, ಏನಾದಳು ?"

"ಸಿಂಹಳದಲ್ಲಿ ಅವಳ ಅಕ್ಕ ಇದ್ದಾಳೆ. ಅಲ್ಲಿಗೆ ಹೋಗಿದ್ದಾಳೆ."

"ಫೈನಲ್ ಪರೀಕ್ಷೆಗೆ ಕೂಡದೆ ಹೋಗುವಂತಹ ವಿಶೇಷವೇನು ? ಅದರಲ್ಲೂ ವರ್ಷದ ಮೇಲಾಯಿತಲ್ಲ ? ಅವಳ ಭವಿಷ್ಯದ ಕತೆಯೇನು ?"

"ಸ್ತ್ರೀಯಾದವಳಿಗೆ ಅದೇನು ವಿಶೇಷವಲ್ಲ. ಹಿಂದೂಸ್ಥಾನದಲ್ಲಿ ಹೆಣ್ಣು ಓದಿದರೂ ಒಂದೇ ; ಬಿಟ್ಟರೂ ಒಂದೇ ! ಎಲ್ಲೋ ಕೆಲವರು ಮುಂದೆ ಬರಲು ಅವಕಾಶ ಪಡೆಯುತ್ತಾರೆ, ಅದೆಲ್ಲ ಯಾವ ಮಹಾ ಲೆಖ್ಖ ಹೇಳಿ."

"ಆಗಲಿ, ವರ್ಷಾನುಕಾಲ ಅಕ್ಕನ ಮನೆಯಲ್ಲಿ ಅಂದರೆ ಅದೂ ಒಂದು ವಿಶೇಷವೇ !"

"ಅವಳಿಗೆ ಏನೋ ಒಂದು ಬಗೆಯ ಮಾನಸಿಕ ವೇದನೆ ಇದ್ದಂತಿದೆ. ಮದುವೆಯನ್ನೂ ಮುಂದೂಡಿದ್ದಾರೆ. ಕೋರ್ಸೂ ಮುಗಿಯಲಿಲ್ಲ.

ನೆಯುವರನ್ನು ಕೇಳಿದಾಗ ಸರಿಯಾದ ಉತ್ತರ ದೊರೆಯಲಿಲ್ಲ. ಏನೋ ಂದು ರೀತಿಯ ಉದಾಸೀನ ಭಾವನೆ ಎಲ್ಲರಲ್ಲೂ ಕಾಣಿಸುತ್ತದೆ."

"ಸೋಜಿಗ.....!"

"ಅವಳು ಅಲ್ಲಿಗೆ ಹೋದನಂತರ ಒಮ್ಮೆಯೂ ಬಂದು ಹೋಗಲಿಲ್ಲ. ಲ್ಲಿ ಕೆಲಸಕ್ಕೆ ಸೇರಿರಬಹುದೇನೋ ಎಂದು ಕೊಂಡಿದ್ದೆ, ಅದೂ ಇಲ್ಲವಂತೆ."

"ಅವಳು ಬಹಳ ಚಟುವಟಿಕೆಯ ಹುಡುಗಿ; ಇದೆಲ್ಲ ಕೇಳಿದರೆ ನಂಬು ವುದಕ್ಕಾಗುವುದಿಲ್ಲ."

"ಸ್ತ್ರೀ ಜೀವನ ಎಷ್ಟೆಂದರೂ ಇಷ್ಟೆ !"

"ಅಷ್ಟು ಅಲ್ಲಗಳೆಯಬಾರದು. ಮುನ್ನುಗ್ಗಿ ನಿಲ್ಲಬೇಕು !"

"ಸರಿ.........!" ಹರವಾದ ಹೊಳಪುಗಣ್ಣುಗಳಲ್ಲಿ ಮಿಂಚನ್ನು ಸೂಸಿ ಉದ್ಗಾರ ತೆಗೆದಳು ಮಡದಿ. ಮುಖಮುದ್ರೆಯಲ್ಲಿ ಗಂಭೀರತರವಾದ ಉದಾಸೀನಭಾವ ಮೂಡಿ ಮಾಯವಾಯಿತು. ಸ್ವಲ್ಪ ಹೊತ್ತು ಸುಮ್ಮ ನಿದ್ದು ಅನಂತರ ದಿಟ್ಟತನದಿಂದ ನುಡಿದಳು "ಉದಾಹರಣೆಗೆ ನನ್ನನ್ನೇ ತೆಗೆದುಕೊಳ್ಳಿ. ನನ್ನಂತಹವಳು ನಿಮ್ಮೊಂದಿಗೆ ಎಷ್ಟು ಹೊಡೆದಾಡ ಬಲ್ಲೆ ?"

"ಬರೀ ಬಿ. ಎ., ಓದಿ ನೀನು ಮಾಡುವುದಾದರೂ ಏನು ?"

"ಬಿ. ಎ., ಓದಿದ ಗಂಡಸರೆಲ್ಲಾ ಈಗ ಮನೆಯಲ್ಲಿಯೇ ಕೂರು ತ್ತಾರೆಯೆ?"

"ಅದೇ ಪ್ರಶ್ನೆ ಎಲ್ಲೆಡೆಯೂ ಏಳುತ್ತೆ ! ಆದರೆ...."

ಅಂದಿನ ಆ ಸಂಭಾಷಣೆಯ ಸಾರವೆಲ್ಲಾ ನನ್ನ ಸ್ಮೃತಿಪಟಲದಲ್ಲಿ ಚಲನ ಚಿತ್ರದಂತೆ ಸುಳಿದಳಿಯಿತು. ಅದೇ ವಿಚಾರಮಗ್ನನಾಗಿ ಪುಸ್ತಕ ವನ್ನು ತಿರುವಿಹಾಕಿದೆ. ನೋಟ ಅವಳ ಭಾವಚಿತ್ರದ ಕಡೆ ಹರಿಯಿತು. ಉನ್ಮಥಿತನಂತೆ ಸ್ವಲ್ಪಹೊತ್ತು ನಿಟ್ಟಿಸಿನೋಡಿ ಪುಸ್ತಕವನ್ನು ಮುಚ್ಚಿದೆ. ಮನಸ್ಸು ದಣಿದುದರಿಂದ ಓದುವುದು ಬೇಡವಾಗಿತ್ತು. ಎರಡೂ ಕೈಗಳನ್ನು ತಲೆಯಡಿ ಜೋಡಿಸಿ ಹಾಗೇ ವಿಶ್ರಮಿಸಿದೆ. ಪಕ್ಕದ ಖಾಲಿ ಸೀಟು ನಿರ್ಜನ ಶಾಂತಿಯಲ್ಲಿ ಆರಾಮವಾಗಿತ್ತು. ಪುಸ್ತಕಗಳನ್ನು ತೆಗೆದು ಡೆಸ್ಕಿನ ಮೇಲಿಟ್ಟು, ಉರಿಯುತ್ತಿದ್ದ ಮೂರು ದೀಪಗಳಲ್ಲಿ ಎರಡನ್ನು ನಂದಿಸಿದೆ. ಇನ್ನೊಂದು ದೀಪ ಕ್ಷೀಣರೇಖೆಗಳನ್ನು ಚೆಲ್ಲುತ್ತ ಡಬ್ಬಿಯಲ್ಲಿ ಆಬದ್ಧವಾಗ

ಮಸಕು ಬೆಳಕು ನೀಡಿತ್ತು. ಕಿಟಕಿಬಾಗಿಲುಗಳನ್ನು ಭದ್ರಪಡಿಸಿ ಪಲ್ಲಂಕವನ್ನು ಸೇರಿ ದುಪ್ಪಟಿಯನ್ನು ಎಳೆದುಕೊಂಡೆ. ಸ್ವಲ್ಪ ಹೊತ್ತಿನ ನಂತರ ಕಣ್ಣುಗಳಿಗೆ ಜೊಂಪು ಹತ್ತಿತು.

....ಶಾಂತ ಸುಂದರ ಜಗತ್ತನ್ನು ಹೃದಯಂಗಮಗೊಳಿಸುವ ಬ್ರಾಹ್ಮೀ ಮುಹೂರ್ತ.

.....ಶೀತಲಶೀಲನಾದ ಮಂದಮಾರುತನ ವಿನೋದಲೀಲಾ ಖೇಲನ.

ಜಾರಿದ್ದ ಹೊದ್ದಿಕೆಯನ್ನು ಎಳೆದುಕೊಳ್ಳಲೆಂದು ನಾನು ಮೈ ಬಾಗಿದಾಗ ಕೈ ಬಳೆಗಳ ಮಧುರರವ ಕರ್ಣಪಟಲದ ಮೇಲೆ ಮೃದುವಾಗಿ ತಾಗಿತು. ಇನ್ನೂ ನಿದ್ದೆಯ ಮಂಪರದಲ್ಲಿದ್ದ ನನಗೆ ಎಲ್ಲೋ, ಯಾವುದೋ ಲೋಕದಲ್ಲಿ ಪ್ರತಿಧ್ವನಿಸಿದಂತೆ ಭಾಸವಾದುದರಿಂದ ಅತ್ತ ಹೆಚ್ಚು ಗಮನ ಹೊರಳಿಸದೆ ಹೊದ್ದಿಕೆಯನ್ನು ಎಳೆದುಕೊಂಡೆ. ಪುನಃ ಕಿಣಿಕಿಣಿರವ ! ಮನಸ್ಸು ತಟ್ಟನೆ ತಿಳಿಯಾಯಿತು. ಹೊದ್ದಿಕೆ ತೆಗೆದು ಸುತ್ತಮುತ್ತ ದೃಷ್ಟಿಯನ್ನು ಹರಿಸಿದೆ. ಪಕ್ಕದ ಸೀಟಿನಮೇಲೆ ಸ್ತ್ರೀ ಮೂರ್ತಿಯೊಂದು ಕುಳಿತು ಪುಸ್ತಕಾವಲೋಕನದಲ್ಲಿ ತೀವ್ರ ತಲ್ಲೀನವಾದುದು ಗೋಚರಿಸಿತು. ನಾನು ಆಶ್ಚರ್ಯದಿಂದ ಎವೆಯಿಕ್ಕದೆ ನೋಡಿದೆ ; ಶ್ವೇತಾಂಬರಿ, ಕಟ್ಟಿದ ಮುಡಿ, ಕಣ್ಣಿಗೆ ಕನ್ನಡಕ, ಹಣೆಯಲ್ಲಿ ತಿಲಕ, ಆಕರ್ಷಣೀಯ ವ್ಯಕ್ತಿತ್ವ. ಒಂದೆರಡುಕ್ಷಣ ನಿಟ್ಟಿಸಿ ಆಶ್ಚರ್ಯ ಚಕಿತನಾಗಿ ಕೇಳಿದೆ,

"ನೀವು ಯಾರು ?"

ಆವಳು ಪುಸ್ತಕ ಪ್ರಪಂಚದಿಂದ ವಿಮುಖಳಾಗಿ ಪ್ರಶ್ನಿಸಿದಳು "ನಾನು ಗೊತ್ತಾಗಲಿಲ್ಲವೇ ?"

"ಯಾ.....ರು ?"

"ವಿ–ನೋ–ದಿ–ನಿ !"

"ಈ ಸರಿ ರಾತ್ರಿಯಲ್ಲಿ ಇಲ್ಲಿಗೆ ಬಂದುದು ಹೇಗೆ ?"

ಆವಳು ಕಿಲಕಿಲನೆ ನಕ್ಕಳು. ಆ ಮೋಹಕ ನಗೆಯ ಮಾಧುರ್ಯ ನನ್ನ ಮನವನ್ನು ಮಾಯೆಯಂತೆ ಆವರಿಸಿತು. ದುಪ್ಪಟಿಯನ್ನು ಬದಿಗೆ ತಳ್ಳಿ ನಾನು ಎದ್ದು ಕುಳಿತು ಹೇಳಿದೆ,

"ನಿಮ್ಮ ಅನಿರೀಕ್ಷಿತ ಭೇಟಿ ಎಂತಹ ಆಶ್ಚರ್ಯ.....?"

ಅವಳು ಮಾತನಾಡದೆ ಮುಗುಳು ನಕ್ಕಳು.

"ನಾನು ಒಳಗಡೆ ಅಗಣಿ ಹಾಕಿದ್ದೆ. ಹೇಗೆ ಬಂದಿರಿ ?"

"ಆಗ ನೀವೇ ಎದ್ದು ಕದ ತೆರೆದಿರಲ್ಲ ?"

ಎಂತಹ ಆಶ್ಚರ್ಯ ?

"ನಾನು.........ತೆರೆದನೆ ? ?"

"ನೀವಲ್ಲದೆ ಇನ್ನಾರು ತೆರೆಯಬೇಕು ?"

ನಾನು ಒಂದು ಘಳಿಗೆ ಯೋಚಿಸಿದೆ. ಕದ ತೆರೆದ ನೆನಪು ಮೂಡಲಿಲ್ಲ.

"ಗಾಬರಿಯಾಗಬೇಡಿ. ನಿಮಗೆ ಇನ್ನೂ ನಿದ್ದೆ ಹರಿಯಲಿಲ್ಲ !"

"ಯಾವ ಸ್ಟೇಷನ್ನಿನಲ್ಲಿ ಹತ್ತಿದಿರಿ ?"

"ಸಿದ್ಧಾಪುರ."

ಆಗ ನನ್ನನ್ನು ನಾನೇ ಹತೋಟಿಗೆ ತೆಗೆದುಕೊಳ್ಳುತ್ತ ಸಮಾಧಾನಪೂರ್ವಕವಾಗಿ ನುಡಿದೆ,

"ನಿಮ್ಮದೊಂದು ಪುಸ್ತಕ ಇಲ್ಲಿತ್ತು."

"ಹೌದು. ಅದನ್ನೆ ನೋಡುತಿದ್ದೆ."

"ಓ.....ಹೋ ! ಇದೀಗಷ್ಟೆ....ಮಲಗುವ ಮುನ್ನ ಅದನ್ನು ನೋಡಿ ನಿಮ್ಮನ್ನು ಬಹಳವಾಗಿ ಜ್ಞಾಪಿಸಿಕೊಂಡೆ."

"ಕೆಲವೊಮ್ಮೆ ಪರಸ್ಪರ ನೆನಹು ಹೇಗೆ ನಮ್ಮನ್ನು ಭೇಟಿ ಮಾಡಿಸುತ್ತದೆ ನೋಡಿ !"

"ಈಗ ನೋಡಿದರೆ ಹಾಗೇ ಅನಿಸುತ್ತೆ!"

"ನಿಮ್ಮನ್ನು ಬಹಳ ದಿನಗಳಿಂದ ನೋಡಿರಲಿಲ್ಲ."

"ನಾನು ನಾಲ್ಕು ವರ್ಷ ಇಂಗ್ಲೆಂಡಿನಲ್ಲಿದ್ದು ಮೂರು ತಿಂಗಳು ರಜೆಯ ಮೇಲೆ ಕಳೆದವಾರ ಬೆಂಗಳೂರಿಗೆ ಬಂದೆ. ಈಗ ನೀವು ಎಲ್ಲಿದ್ದೀರಿ ? ಏನು ಮಾಡುತಿದ್ದೀರಿ ?"

"ನಾನು ಬೆಂಗೂರಿನಲ್ಲಿರುವೆ. ಮಹಾರಾಣಿ ಕಾಲೇಜಿನಲ್ಲಿ ಲೆಕ್ಚರರ್ ! ತಂಗಿಯ ಮನೆಗೆ ಬಂದಿದ್ದೆ. ಇಲ್ಲಿಂದ ಬೊಂಬಾಯಿಗೆ ಹೊರಟಿರುವೆ."

"ಬೊಂಬಾಯಿಗೆ.....?

"ಹೌದು. ನನಗೆ ಆರೋಗ್ಯ ಅಷ್ಟು ಸರಿಯಾಗಿಲ್ಲ. ಈ ಮೊದಲು ನನಗೆ ಚಿಕಿತ್ಸೆ ನಡೆಸಿದ್ದ ಡಾ|| ದೇಶಾಯಿ ಅಲ್ಲಿದ್ದಾರೆ. ಅವರನ್ನೊಮ್ಮೆ ನೋಡಿ ಬರಬೇಕು."

"ನಿಮ್ಮನ್ನು ನೋಡಿದರೆ ರೋಗಿಯಂತೆ ಕಾಣಿಸುತ್ತಿಲ್ಲ !"

"ಅಂತಹ ಸೀರಿಯಸ್ಸೇನಲ್ಲ."

"ಸದ್ಯ.....ಚೆನ್ನಾಗಿರಿ. ಆರೋಗ್ಯ ಭಾಗ್ಯವೇ ಭಾಗ್ಯ !"

"ತುಂಬ ವಂದನೆಗಳು !"

ಅವಳ ಮುಡಿಯಲ್ಲಿ ಅಲಂಕೃತವಾಗಿದ್ದ ಬಿಳಿಯ ಗುಲಾಬಿ ಹೂವು ಜಾರಿ ತೊಡೆಯಮೇಲೆ ಬಿತ್ತು. ಅವಳು ಅದನ್ನು ಮುದ್ದಿಸುವಂತೆ ಮೃದುವಾಗಿ ಹಿಡಿದುಕೊಂಡು ಅಂದಳು "ನನಗೂ ನಿಮ್ಮ ನೆನಪು ಆಗಾಗ ಮೂಡುತಿತ್ತು. ಅದರಲ್ಲೂ, ಈ ಬಿಳಿಯ ಗುಲಾಬಿಯನ್ನು ಕಂಡಾಗಲೆಲ್ಲ ನೀವು ಕಣ್ಮುಂದೆ ಮೂರ್ತಿವಂತ್ತಾಗಿ ಬಿಡುತ್ತೀರಿ !"

ಒಡನೆ ನನ್ನ ಚಿತ್ತ ಗತಕಾಲಕ್ಕೆ ಚಿಮ್ಮಿತು. ಕಾಲೇಜಿನ ವಾರ್ಷಿಕೋತ್ಸವದಲ್ಲಿ ನಡೆದ ನಾಟಕದ ಚಿತ್ರಕಲ್ಪನೆಯಿಂದ ಎದೆಯಾಳದಲ್ಲಿ ನೆತ್ತರು ಹೆಪ್ಪುಗಟ್ಟುತ್ತಿರುವಂತೆ ಭಾಸವಾಗಿ ಸ್ವಲ್ಪಹೊತ್ತು ಮೌನ ಆವರಿಸಿತು. ಅನಂತರ ಅವಳೇ ಮಾತು ತೆಗೆದಳು,

"ನೀವು ನನ್ನನ್ನು ಮರೆತುಬಿಟ್ಟದ್ದೀರಿ ; ನಾನು ಮರೆಯಲಿಲ್ಲ. ನೀವಿಂದು ಇಲ್ಲಿ ಪಯಣಿಸುವ ವಿಷಯ ನನ್ನ ಅಂತಃಪ್ರಜ್ಞೆಗೆ ಮೊದಲೇ ತಿಳಿದಿತ್ತು !"

"ನಿಜವಾಗಿ ?"

ಅವಳು ಕಿಲಕಿಲ ನಕ್ಕಳು.

ಹಾ ! ಅದೆಂತಹ ನಾದ ಮಾಧುರ್ಯ ! ಮನಃಪ್ರಾಣಗಳೆಲ್ಲ ಒಮ್ಮೆಲೇ ಕಲಕಲಮಯವಾಗಿ ನರನರಗಳೂ ಸುಖದುಃಖಗಳಲ್ಲಿ ಮಿಂದು ಉದ್ರೇಕಗೊಂಡುವು. ನಾನು ಬಿಸಿಯುಸಿರು ಬಿಟ್ಟೆ.

ಅದೇ ವೇಳೆಗೆ ಮುಂದಿನ ನಿಲ್ದಾಣವನ್ನು ಹೊಕ್ಕ ರೈಲು ನಿಂತಮೇಲೆ ಗಾರ್ಡ್ ಬಾಗಿಲು ಬಡಿದ. ನಾನು ಎದ್ದು ಕದ ತೆರೆದೆ. ಅವನು

ಳಬಂದು ಸುತ್ತಮುತ್ತ ದಿಟ್ಟಿ ಹೊರಳಿಸಿ ನೋಡಿ ಸಮಾಧಾನದಿಂದ ವಿತ್ತರಿಸಿದ,

“ಇದರಲ್ಲಿನ ಸೀಟು ಇನ್ನೊಬ್ಬರಿಗೆ ರಿಜರ್ವ್ ಆಗಿದೆ. ಅವರೀಗ ಬರುತ್ತಾರೆ. ಒಳಗಿನಿಂದ ಅಗುಣಿ ಹಾಕಬೇಡಿ.”

“ಆಗಬಹುದು.”

“ಥ್ಯಾಂಕ್ಯೂ !” ಎನ್ನುತ್ತ ಅವನು ಇಳಿದು ಹೋದ.

ನಾನು ಹಿಂದಿರುಗಿ ನೋಡಿದೆ. ವಿನೋದಿನಿ ಇರಲಿಲ್ಲ. ಬಹುಶಃ ಶೌಚದ ಕೊಠಡಿಗೆ ಹೋಗಿರಬಹುದು ಎಂದುಕೊಂಡು ಸ್ವಲ್ಪ ಹೊತ್ತು ಕಾದುನಿಂತೆ. ಆಗ ಮೂಡಣದಲ್ಲಿ ನಸು ಬೆಳಕು ಮೂಡುತಿತ್ತು. ನಿಲ್ದಾಣದಲ್ಲಿ ಅಲ್ಲಲ್ಲಿ ಮೈಮುದುಡಿ ಮಲಗಿದವರು ಎದ್ದಿರಲಿಲ್ಲ. ಕಾಫಿ ತಿಂಡಿ ಮಾರುವವರು ಕರ್ಕಶ ದನಿಯಲ್ಲಿ ಕೂಗುತ್ತ ಅತ್ತಿಂದಿತ್ತ ಓಡಾಡುತಿದ್ದರು. ನಾನು ಇನ್ನೆರಡು ದೀಪಗಳ ಸ್ವಿಚ್ಚನ್ನು ಟಕಟಕನೆ ಒತ್ತಿದೆ. ಅವಳ ಬಿಳಿಯ ಗುಲಾಬಿ, ತೆರೆದ ಪುಸ್ತಕ ಸೀಟಿನ ಮೇಲೆ ದಿಕ್ಕಿಲ್ಲದ ಅನಾಥರಂತೆ ಉಳಿದಿದ್ದುವು. ರಾತ್ರಿ ಮಲಗುವ ಮುನ್ನ ಪುಸ್ತಕವನ್ನು ಕನ್ನಡಿಯ ಕೆಳಗಣ ಶೆಲ್ಫ್ ಮೇಲಿಟ್ಟದ್ದು ನೆನಪಿಗೆ ಬಂತು. ಅವಳು ಆ ಮಸುಕು ಬೆಳಕಿನಲ್ಲಿ ಉಳಿದ ಮೂರು ಪುಸ್ತಕಗಳನ್ನು ಅಲ್ಲಿಯೇ ಬಿಟ್ಟು, ತನ್ನ ಪುಸ್ತಕವನ್ನು ಆರಿಸಿಕೊಂಡದ್ದು ವಿಶೇಷವೇ ಎನಿಸಿದರೂ, ಅವಳ ಬುದ್ಧಿವಂತಿಕೆ ಹೊಸದೇನಲ್ಲ ಎಂಬ ಸಿದ್ಧಾಂತಕ್ಕೆ ತಲೆಬಾಗಿದೆ. ಶೌಚದ ಮನೆಯ ಬಾಗಿಲಿನ ಕಡೆ ಹರಿದ ದೃಷ್ಟಿ ಅದು ಒಳಗಡೆಯಿಂದ ಅಗಣಿ ಹಾಕದಿರುವುದನ್ನು ಕಂಡು ಏಕಕಾಲದಲ್ಲಿ ಆಶ್ಚರ್ಯ-ಅನುಮಾನಗಳನ್ನು ಮೂಡಿಸಿತು. ಆದರೂ ಗೌರವಭಾವನೆಯಿಂದ ಬಾಗಿಲನ್ನು ಕಟಕಟನೆ ಮಿಡಿದು ಮೂಕಕರೆಯನ್ನು ಸೌಜನ್ಯ ಪೂರ್ವಕವಾಗಿ ನೀಡಿದೆ.

ಒಳಗಡೆಯಿಂದ ಯಾವ ಉತ್ತರವೂ ಬರಲಿಲ್ಲ.

ನಾನು ಪುನಃ ಸ್ವಲ್ಪ ಹೊತ್ತು ಕಾದು ನಿಂತೆ. ಒಳಗಡೆ ಯಾವ ಸದ್ದೂ ಕೇಳಿಬರುತ್ತಿರಲಿಲ್ಲವಾದುದರಿಂದ ನನ್ನ ಸಹನೆ ಮೀರಿತು.

ಕಟ. ಕಟ. ಕಟ. ಕಟ.

ಆದರೂ ಉತ್ತರವೇ ಇಲ್ಲ.

ಅರೆ ! ಇದೆಂತಹ ಆಶ್ಚರ್ಯ ?

ಈ ಸಲ ನಾನೇ ಕದವನ್ನು ತೆರೆದು ಮೈಯೆಲ್ಲಾ ಮನಸ್ಸಾಗಿ ಒಳಗಡೆ ಹಣಿಕಿದೆ. ಅಲ್ಲಿ ಯಾರೂ ಇರಲಿಲ್ಲ. ನಾನು ರಾತ್ರಿ ಹೇಗೆ ಬಾಗಿಲು ಮುಚ್ಚಿದ್ದೆನೋ ಹಾಗೆಯೇ ಇತ್ತು. ನಾನು ಒಮ್ಮೆಲೇ ಭಾವೋದ್ವೇಗ ದಿಂದ ಬೆಪ್ಪಾಗಿ ನಿಃಸಂಜ್ಞನಂತೆ ನಿಂತು ಬಿಟ್ಟೆ. ದೈಹಿಕ ನಿಯಂತ್ರಣ ಹದ ಗೆಟ್ಟು ಸ್ಥಿತಿಗತಿ ಅಲ್ಲೋಲಕಲ್ಲೋಲವಾಯಿತು. ಹಿಂದು ಹಿಂದಕ್ಕೆ ಸರಿ ಯುತ್ತ ಪಲ್ಲಂಕದಮೇಲೆ ಕುಸಿದು ಕುಳಿತೆ. ಬಿಸಿಯುಸಿರು ಅಲ್ಲಲ್ಲಿ ಸಿಕ್ಕಿ ಕೊಂಡಂತೆ ತಡೆ ತಡೆದು ಹರಿದಾಡಿತು.

ಬಹುಶಃ ಎಡಬಾಗಿಲಿಂದ ಇಳಿದು ಹೋಗಿರಬಹುದೇ ? ಎಂಬ ಪ್ರಶ್ನೆ ಮನೋರಾಜ್ಯದಲ್ಲಿ. ಆದರೆ, ಅದಕ್ಕೂ ಬಿಡವಿಲ್ಲ. ಒಂದು ವೇಳೆ, ಹಾಗೆ ಹೋಗಿದ್ದರೆ ನನ್ನ ಪಕ್ಕದಲ್ಲೇ ನಡೆದು ನನ್ನ ಮುಂದೆಯೇ ಕದ ತೆರೆಯಬೇಕು. ಅತಂಹ ಕಾರ್ಯವಿಧಾನವೊಂದು ಆಗ ನಡೆಯಲೇ ಇಲ್ಲ. ಗಾರ್ಡನೊಂದಿಗೆ ಮಾತಾಡುತ್ತಿರುವಾಗ ಅವಳು ಅಲ್ಲೇ ಕುಳಿತಿದ್ದು ಇದ್ದ ಕ್ಕಿದ್ದಂತೆಯೇ ಅಂತರ್ಧಾನಳಾಗಲು ಕಾರಣವಾದರೂ ಏನು ? ಇದೇನು ಮಾಂತ್ರಿಕಳೇ ? ಮೋಸಗಾರಳೇ ? ಏನಿರಬಹುದು ? ಯೋಚಿಸಿ ದಷ್ಟೂ ಕಗ್ಗಂಟಾಗುವ ಅದ್ಭುತ ಸಮಸ್ಯೆ. ಅವಳು ನನ್ನೊಡನೆ ಯಥಾ ಪ್ರಕಾರ ಧೈರ್ಯವಾಗಿ, ನಿಶ್ಶೇಷ ಭಾವನೆಯಿಂದ ಅಷ್ಟೆಲ್ಲಾ ಬಣ್ಣಿಸಿ, ಹೇಳದೆ-ಕೇಳದೆ ಹೋಗುವಂತಹ ಕಾರಣವಾದರೂ ಏನು ? ಆಗೆಲ್ಲಾ ವಾಗ್ವೀರರಂತೆ ಅರ್ಥವತ್ತಾಗಿ ವಾದಹೂಡುತಿದ್ದ ಅವಳು ಇಂದೇಕೆ ಹೀಗೆ ? ಎಷ್ಟೇ ಯೋಚಿಸಿದರೂ ವಿಷಯ ನಿಚ್ಚಳವಾಗಿ ಹೊಳೆಯಲಿಲ್ಲ. ದೇಹದಾ ದ್ಯಂತ ನವಿರು ನಿಮಿರಿ ನಸು ಕಂಪನದ ಅಲೆ ಹರಿದಾಡಿ ಹೋಯಿತು. ನಾನೇ ಎದ್ದು ಕದ ತೆರೆದೆ ಎಂದು ಅವಳು ಆಗ ಹೇಳಿದ್ದರಿಂದ ಅದೊಂದು ಅದ್ಭುತವೂ, ಅತ್ಯಂತ ಗಹನವೂ ಆದ ವಿಷಯವಾಗಿ ಪರಿಣಮಿಸಿತು. ಅದೇ ವಿಚಾರತನ್ಮಯನಾಗಿ ಅದೆಷ್ಟು ಹೊತ್ತು ಕುಳಿತಿದ್ದೆನೋ ನಾನರಿಯೆ. ಹೊರಜಗತ್ತಿನಲ್ಲಿ ಬೆಳ್ಳಂಬೆಳಕು ಪಸರಿಸಿ ಜನ ಜಂಗುಳಿಯೆಲ್ಲಾ ದಿನಚರಿ ಯಲ್ಲಿ ನಿಮಗ್ನರಾಗಿದ್ದುದು ಗಮನಕ್ಕೆ ಬಂದ ಮೇಲೆ ದೀಪವನ್ನು ನಂದಿ ಸುವ ಯೋಚನೆ ಮೂಡಿತು. ಎದ್ದು ಸ್ವಿಚ್‌ತೆಗೆದು ಬಾಗಿಲ ಬಳಿನಿಂತು

ಪ್ಲಾಟ್‌ಫಾರ್ಮಿನ ಚಟುವಟಿಕೆಯಮೇಲೆ ದೃಷ್ಟಿ ಹಾಯಿಸಿದೆ. ಎಲ್ಲಿಯೂ ವಿನೋದಿನಿಯ ಸುಳಿವಿಲ್ಲ. ಅವಳು ಎಷ್ಟು ಸೂಕ್ಷ್ಮವಾಗಿ ಒಳಬಂದಳೋ ಅಷ್ಟೇ ಸೂಕ್ಷ್ಮವಾಗಿ ಹೊರಹೋಗಿದ್ದಾಳೆ. ನಾನು ಶುದ್ಧ ಬೆಪ್ಪ! ಅಷ್ಟು ಮಾತ್ರ ಅರಿತುಕೊಳ್ಳಲಿಲ್ಲ!

ಸೀಟಿನ ಮೇಲಿದ್ದ ಆ ಬಿಳಿಯ ಗುಲಾಬಿಯನ್ನು ಕೈಗೆ ತೆಗೆದುಕೊಂಡೆ. ಸುಂದರವಾದ ಸೃಷ್ಟಿಯಲ್ಲಿ ಯಾವ ಕೃತಕತೆಯೂ ಇರಲಿಲ್ಲ. ಸುವಾಸನಾಯುಕ್ತ ಹೂವು ಅಂತಃಸ್ಥಲವನ್ನು ಅರಳಿಸುವಂತಹ ಸೌಮ್ಯತೆಯನ್ನು ಹೊಂದಿತ್ತು. ಅದನ್ನು ಹಿಂದೆ-ಮುಂದೆ ತಿರುಗಿಸಿನೋಡಿ ಮತ್ತೆ ಮತ್ತೆ ವಾಸನಿಸಿದೆ. ಮನದಲ್ಲಿದ್ದ ಕಿಂಚಿತ್ ಸಂಶಯ ಬಿಸಿಲಟ್ಟಿದ ಮಂಜಿನಂತೆ ಕರಗಿ ಲುಪ್ತಬುದ್ಧಿ-ಲುಪ್ತಚಿಂತನೆ-ಲುಪ್ತಭಾವನೆ ನನ್ನನ್ನು ಹೆಡೆಮುರಿ ಕಟ್ಟಿದುವು. ಬಾಗಿಲ ಬಳಿ ಮರವಟ್ಟಂತೆ ನಿಂತೆ. ರೈಲು ಬೇಗನೆ ಹೊರಡುವ ಸೂಚನೆ ತೋರಲಿಲ್ಲ. ಪಕ್ಕದ ಬೋಗಿಯ ಬಳಿ ಯಾರೋ ನಿಂತುಕೊಂಡು ಒಳಗಿದ್ದವರನ್ನು ಉದ್ದೇಶಿಸಿ ಕರೆದರು,

"ಶಿವರಾಂ..........ಶಿವರಾಂ!"

ಆ ಕರೆಗೆ ಓಗೊಟ್ಟ ವ್ಯಕ್ತಿ ಬೋಗಿಯಿಂದ ಹೊರಬಂದ.

ನೋಡಿದರೆ ಅವನೇ! ಹಿಂದಿನರಾತ್ರಿ ನನ್ನನ್ನು ದುರುಗುಟ್ಟಿ ನೋಡಿದ ವಿಚಿತ್ರ ವ್ಯಕ್ತಿ!

"ಬಾಪ್ಪಾ, ನಾವು ಕ್ಯಾಂಟೀನಿನ ಕಡೆ ಹೋಗಿ ಬರೋಣ" ಎಂದ ಮೊದಲ ವ್ಯಕ್ತಿ.

"ಆಗಲಿ."

ಶಿವರಾಂ ಅವನನ್ನು ಹಿಂಬಾಲಿಸಿದ.

ಆ ಹೆಸರು ಅವರಿಬ್ಬರ ಗೆಳತನ ನನಗೆ ಮರೆತುಹೋಗಿದ್ದ ಹಳೆಯ ವಿಚಾರವನ್ನು ನೆನಪು ಮಾಡಿಕೊಟ್ಟುವು. ಅದೇ ಶಿವರಾಂ ನಾಲ್ಕೈದು ವರುಷಗಳ ಹಿಂದೆ ಮೈದುಂಬಿಕೊಂಡು ಚೆನ್ನಾಗಿಯೇ ಇದ್ದ. ಅವನನ್ನೆ ಮದುವೆಯಾಗುವ ಉದ್ದೇಶ ಹೊಂದಿದ್ದಳು ವಿನೋದಿನಿ. ಆದರೆ, ಏನಾಯಿತೋ ತಿಳಿಯಲಿಲ್ಲ. ಬಹುಶಃ ಅವನೊಂದಿಗೆ ಬಂದಿದ್ದು, ಅವ ಕಣ್ಣು ತಪ್ಪಿಸಿ ಇಲ್ಲಿಗೆ ಬಂದು ಹೋದಳೇ ಹೇಗೆ? ಅದೇನೇ ಇರಲಿ, ಅವನೇಕೆ

ಹೀಗಾಗಿದ್ದಾನೆ ? ಅಕಾಲವೃದ್ಧ, ಇನ್ನು ಅಕಾಲ ಮೃತ್ಯು ಬರುವುದೊಂದು ಬಾಕಿ.

ತಲೆಯೆಲ್ಲಾ ಸಮಸ್ಯೆಯ ಜಾಲದಿಂದ ತುಂಬಿಹೋಯಿತು.

ಬಾಗಿಲು ಮುಚ್ಚಿ ಒಳಬಂದು ಪಲ್ಲಂಕದಮೇಲೆ ಕುಳಿತುಕೊಂಡು ಅವಳ ಪುಸ್ತಕವನ್ನು ತೆರೆದು ನೋಡಿದೆ. ಅದರಲ್ಲಿದ್ದ ಭಾವಚಿತ್ರ ಮತ್ತು ಕಾಗದ ಸ್ಥಳಾಂತರವಾಗಿರಲಿಲ್ಲ. ಒಂದು ವೇಳೆ ಕನಸು ಎನ್ನೋಣವೇ ? ಆ ಘಟನೆಗೆ ಸರ್ವಸಾಕ್ಷಿಯಾದ ಧವಳ ಕಾಂತಿಯ ಗುಲಾಬಿ ? ತೆರೆದಿಟ್ಟ ಪುಸ್ತಕ ? ಇದಕ್ಕೆಲ್ಲಾ ಏನೆಂದು ಅರ್ಥೈಸಲಿ ? ಅವಳು ಕಾಗದವನ್ನು ನೋಡಿಯೂ ಬಿಟ್ಟು ಹೋದಳೇಕೆ ?

ಯೋಚಿಸಿದಷ್ಟೂ ಮಾನಸಿಕ ಭ್ರಮೆ ಹೆಚ್ಚುತಿತ್ತು ; ಸಮಸ್ಯೆಯ ಕಗ್ಗಂಟು ಇನ್ನಷ್ಟು ಬಿಗಿಯುತಿತ್ತು.

ಹೂವನ್ನು ಆಚೆಗೆಸೆಯದೆ ನನ್ನ ಪಯಣದಾದ್ಯಂತ ಕಾಪಿಟ್ಟುಕೊಂಡೆ ಪಯಣಕಾಲದಲ್ಲಿ ನನ್ನ ಕಣ್ಣುಗಳು ಪರಿತಪಿಸುತಿದ್ದರೂ ಅವಳ ದರ್ಶನ ಮತ್ತೆ ಆಗಲಿಲ್ಲ ಮುಂದಿನ ನಿಲ್ದಾಣದಲ್ಲಿ ಶಿವರಾಂ ಒಂದೆರಡು ಬಾರಿ ದೂರದಿಂದ ಕಂಡಿದ್ದ. ಅನಂತರ ಅವನೂ ಇಲ್ಲ.

ನಾನು ಮುಂಬೈ ಯಾತ್ರೆಯನ್ನು ಮುಗಿಸಿ ಮನೆಯನ್ನು ಸೇರಿದಾಗ ಬೆಳಗಿನ ಹತ್ತರ ಸಮಯ. ಪ್ರಾತರ್ವಿಧಿಯ ಗಡಿಬಿಡಿಯೆಲ್ಲಾ ಮುಗಿದಿತ್ತು. ಪೆಟ್ಟಿಗೆಯನ್ನು ಒಳಗಿಟ್ಟು ಮುಖಮಾರ್ಜನ ಮಾಡಿದ ನಂತರ ಅಂದಿನ ಘಟನೆಯನ್ನು ನೆನಪಿಸಿಕೊಂಡು ಆಶ್ಚರ್ಯಯುಕ್ತವಾಣಿಯಲ್ಲಿ ನನ್ನ ತಾಯಿಯನ್ನು ಕೇಳಿದೆ,

"ವಿನೋದಿನಿ ಈಗ ಎಲ್ಲಿದ್ದಾಳಮ್ಮಾ ?"

"ಯಾವ ವಿನೋದಿನಿ ?"

"ಅದೇ ನನ್ನ ಕ್ಲಾಸ್ ಮೇಟ್, ಅಚ್ಯುತರಾಯರ ಮಗಳು ?"

"ಪಾಪ, ಈಗ ಅವಳಿಲ್ಲ. ಅದೊಂದು ದೊಡ್ಡ ದುರಂತ."

"ಇಲ್ಲ.....? ನಿಜವಾಗಿ ?"

"ಹೌದಪ್ಪಾ."

"ಅರೆರೆ !"

"ಅದೇಕೆ ಅಷ್ಟು ಆಶ್ಚರ್ಯ ?"

ಪ್ರಶ್ನೆ ಎದೆಯಾಳದಿಂದ ಹೊರಬಿತ್ತು. ಮೈಯೆಲ್ಲಾ ಮನಸ್ಸಾಗಿ ಆಶ್ಚರ್ಯಭಂಗಿಯಲ್ಲಿ ನಿಂತರು–ಅಮ್ಮ.

"ನಾನವಳನ್ನು ರೈಲಿನಲ್ಲಿ ಕಂಡಿದ್ದೆನಲ್ಲಾ ?"

"ಛೆಃ ! ಛೆಃ ! ಹೇಗೆ ಸಾಧ್ಯ ?"

"ಖಂಡಿತ ಹೌದಮ್ಮಾ !"

"ಇದೇನೋ ವಿಪರೀತವೇ ಇರಬೇಕು !"

ಆವೇಳೆಗೆ ಚಂದ್ರಮುಖಿ ಅಲ್ಲಿಗೆ ಬಂದಳು. ಅನಂತರ ನಡೆದ ವಿದ್ಯಮಾನವನ್ನೆಲ್ಲಾ ಆದ್ಯಂತವಾಗಿ ನಾನು ವಿವರಿಸಿದೆ. ಮೈಯಲ್ಲಿ ರೋಮರಾಜಿ ಕೇಸರಿಯ ಕೇಸರದಂತೆ ಉತ್ಕರ್ಣವಾಗಿತ್ತು. ನಾಡಿನಾಡಿಗಳಲ್ಲಿ ಪ್ರವಹಿತ ಉಷ್ಣರಕ್ತದ ಆ ವೇಗದಿಂದ ಹೃದಯ ವ್ಯಾಪ್ತಿಗೆ ತುಸು ಮೀರಿ ಮಿಡಿಯಿತು. ನಾನು ನನ್ನನ್ನು ಸರ್ವಸಹಸಾ ನಿಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತ ಮತ್ತೆ ಅದೇ ಸಮಸ್ಯಾತ್ಮಕವಾದ ಪ್ರಶ್ನೆಯನ್ನು ಮುಂದಿಟ್ಟೆ,

"ಹಾಗಾದರೆ ಇದಕ್ಕೇನರ್ಥ ?"

"ಅರ್ಥೈಸುವುದು ಅಷ್ಟು ಸುಲಭವಲ್ಲ-ಬಹುಶಃ...."

ಚಂದ್ರಮುಖಿ ನಡುವೆ ಬಾಯಿ ಹಾಕಿದಳು,

"ಬಿಡಿ, ಬಿಡಿ. ಆ ಪುಸ್ತಕ ನೋಡಿ ಅವಳ ವಿಚಾರ ಯೋಚಿಸಿದ್ದೀರಿ ಬಹುಶಃ ಕನಸು ಬಿದ್ದಿದೆ ಅಷ್ಟೆ."

"ಅಲ್ಲವೇ ಅಲ್ಲ !" ನಾನು ದೃಢವಾಗಿ ನಿರಾಕರಿಸುತ್ತ ನಿರುದ್ವಿಗ್ನತೆಯಿಂದ ಮುಂದುವರಿದೆ "ಡೆಸ್ಕಿನಮೇಲೆ ಇಟ್ಟಿದ್ದ ಪುಸ್ತಕ ಸೀಟಿನಮೇಲೆ ಹೇಗೆ ಬಂತು ? ಆ ಬಿಳಿಯ ಗುಲಾಬಿ....?"

ಎಲ್ಲರ ಮುಖಮಂಡಲದ ಮೇಲೂ ಆಶ್ಚರ್ಯದ ಅಲೆ ಹರಿದಾಡಿ ಹೋಯಿತು.

ಅನಂತರ ಸ್ಥಿರ ಗಾಂಭೀರ್ಯದಿಂದ ಪ್ರಶ್ನಿಸಿದೆ "ಅವಳ ಸಾವಿಗೆ ಕಾರಣವೇನು ?"

"ಪಾಪ, ಅವಳ ಬಾಳು ದುಃಖಾಂತವಾಯಿತು. ಅವಳೂ-ಶಿವರಾಂ ಪರಸ್ಪರ ಪ್ರೇಮಿಸಿದ್ದರು. ಅವಳು ಕಾಲೇಜಿನ ಸಂಘಟಿತ ಚಟುವಟಿಕೆ

ಗಳಲ್ಲಿ ಭಾಗವಹಿಸಿದ್ದಕ್ಕಾಗಿ ಅವನು ವ್ಯಗ್ರನಾಗಿ ಅವಳನ್ನು ಮದುವೆಯಾಗಲು ನಿರಾಕರಿಸಿದ. ವಿನಾಕಾರಣ ಆತನ ದೋಷಾರೋಪಣೆ ಅವಳ ಮನವನ್ನು ನೋಯಿಸಿತು. ಆ ನಿರಾಸೆಯ ವ್ಯಾಘಾತದಿಂದ ಚೇತರಿಸಿಕೊಳ್ಳಲು ಅವಳಿಂದ ಆಗಲಿಲ್ಲ. ಪರೀಕ್ಷೆಗೆ ಕುಳಿತುಕೊಳ್ಳದೆ ತಲೆ ಕೆಡಿಸಿಕೊಂಡು ಅಕ್ಕನ ಮನೆಗೆ ಹೋದಳು. ಅಲ್ಲಿ ಅಕ್ಕನೂ ಅವಳನ್ನು ಅಷ್ಟಾಗಿ ಪುರಸ್ಕರಿಸಲಿಲ್ಲವೆಂದು ತೋರುತ್ತೆ. ಅವಳು ಹಿಂದಿರುಗಿ ಬಂದು ಬಹಳ ಕಷ್ಟದಿಂದ ಬಿ. ಎ., ಮುಗಿಸಿದಳು. ಅನಂತರ ಕೆಲಸಮಾಡುತ್ತಲೇ ಎಂ.ಎ., ಓದಿ ಲೆಕ್ಚರರ್ ಆದಳು. ಆದರೆ, ಆ ವೃತ್ತಿಯಲ್ಲಿ ಆರು ತಿಂಗಳು ಮಾತ್ರ ಇದ್ದಳೇನೋ ಅಷ್ಟೆ. ಕೆಲಸ ಮಾಡುತ್ತಿದ್ದರೂ ಅವಳು ಮಾನಸಿಕ ಸ್ವಾಸ್ಥ್ಯ ಹೊಂದಿರಲಿಲ್ಲ. ಆ ಕೊನೆಗಾಣದ ಬಯಕೆ ಅವಳನ್ನು ಬಹುವಾಗಿ ಕಾಡಿರಬೇಕು. ಅವಳು ತಾನೇ ತಾನಾಗಿ ತನ್ನ ಜೀವವನ್ನು ಕೊನೆಗಾಣಿಸಿಕೊಂಡಳು."

"ಆ ಪೆಟ್ಟಿನಿಂದ ಚೇತರಿಸಿಕೊಂಡು ಎಂ ಎ. ಮಾಡಿ ಹೀಗಾದದ್ದು ತುಂಬ ಅನ್ಯಾಯ." ಎಂದಳು ಚಂದ್ರಮುಖಿ. ಅವಳ ಮುಖಮಂಡಲದ ಮೇಲೆ ಗಾಂಭೀರ್ಯ ಕಾಣಿಸಿದರೂ ಮಿನುಮಿನುಗುವ ಕಣ್ಣುಗಳಲ್ಲಿ ಶೋಕ ಛಾಯೆ ಇಣುಕುತಿತ್ತು. ಮುಂದಿನ ವಿಚಾರ ಶ್ರವಣಪ್ರಜ್ಞೆಯನ್ನು ನಿಮಿರಿಸಿತ್ತು. ಅವಳು ಅಲ್ಲೇ ನಿಂತಳು.

ಅಮ್ಮ ಅತ್ಯಂತ ವಿಶಾದವಾಣಿಯಲ್ಲಿ ಮುಂದುವರಿದರು, "ಅವಳನ್ನು ನಿರಾಕರಿಸಿ ಶಿವರಾಂ ಯಾರನ್ನೋ ಕಟ್ಟಿಕೊಂಡ. ಹಣದ ಪ್ರಲೋಭನೆ ಅವನನ್ನು ಪಾತಾಳಕ್ಕೆ ತಳ್ಳಿತು ತಾನೂ ಕೆಟ್ಟ, ಅವಳನ್ನೂ ಕೆಡಿಸಿದ."

ಆ ಮುಹೂರ್ತದಲ್ಲಿ ಶಿವರಾಂ ನನ್ನ ಸ್ಮೃತಿಪಥದಲ್ಲಿ ಸುಳಿದು ಹೋದ. ಬಹುಶಃ ಅವನ ತೀಕ್ಷ್ಣ ದೃಷ್ಟಿ ನನ್ನೆಡೆಗೆ ಹರಿಯಲು ಕಾರಣ ನಾನು ವಿನೋದಿನಿಯೊಂದಿಗೆ ನಾಟಕದಲ್ಲಿ ನಾಯಕ ಪಾತ್ರ ವಹಿಸಿದುದೇ ಇರಬಹುದೇನೋ, ಎಂಬ ಯೋಚನೆ ಮನದಲೆಯಲ್ಲಿ ತೇಲಿ ಬಂದಾಗ ನಿದ್ದೆಯಲ್ಲಿರುವವನ ಮೇಲೆ ತಣ್ಣೀರೆರಚಿದಂತಾಯಿತು ನನಗೆ. ಸ್ವಲ್ಪ ಹೊತ್ತು ಸುಮ್ಮನಿದ್ದು ಮೊದಲಿನ ಧಾಟಿಯಲ್ಲಿಯೇ ನಾನು ಪ್ರಶ್ನಿಸಿದೆ,

"ಸರಿ ; ಆ ಪುಸ್ತಕ ನಮ್ಮ ಮನೆಗೆ ಹೇಗೆ ಬಂತು ?"

"ಅವಳು ಲೆಕ್ಚರರ್ ಆದಮೇಲೆ ಈ ಬೀದಿಗೆ ಬಂದಿದ್ದಳು. ನಾನು ಆಗಾಗ ಅವಳಿಂದ ಪುಸ್ತಕ ತರುತ್ತಿದ್ದೆ. ಇದನ್ನು ತಂದಮೇಲೆ ಹಿಂದಿರುಗಿಸುವ ಮುನ್ನ ಅವಳು ಮೃತಪಟ್ಟುದುದರಿಂದ ಇಲ್ಲೇ ಉಳಿಯಿತು. ಅದರಲ್ಲಿ ಅವಳ ಚಿತ್ರ ಹಚ್ಚಿದ್ದಾಳೆ. ಅದರಿಂದಾಗಿಯೇ ಉಳಿಸಿಕೊಂಡೆ."

"ಪಾಪ !"

"ದೈವ ಸಂಕಲ್ಪ."

ನಾನು ಹಾಗೇ ಮನವನ್ನು ಹಿಂದಕ್ಕೆ ಹರಿಯಬಿಟ್ಟೆ. ಅವಳಿಂದ ಮಾತು ಕರ್ಣಪಟಲಗಳಮೇಲೆ ಮರು ಪ್ರಸಾರ ಹೊಂದಿತು "ನನಗೂ ನಿಮ್ಮ ನೆನಪು ಆಗಾಗ ಮೂಡುತಿತ್ತು. ಆದರಲ್ಲೂ, ಈ ಬಿಳಿಯ ಗುಲಾಬಿಯನ್ನು ಕಂಡಾಗಲೆಲ್ಲ ನೀವು ಕಣ್ಮುಂದೆ ಮೂರ್ತಿಮತ್ತಾಗಿ ಬಿಡುತ್ತೀರಿ !"

ನನ್ನ ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಫ್ಲಾರೆನ್ಸ್ ನೈಟಿಂಗೇಲ್

....ಸರ್ ಸಾವಿರದೆಂಟುನೂರಿಪ್ಪತ್ತರ ಮೇ ತಿಂಗಳ ಹನ್ನೆರಡನೆ ತೇದಿ !

....ಅದೊಂದು ಸುಂದರವೂ, ಅಪೂರ್ವವೂ ಆದ ಪವಿತ್ರದಿನಾದಿ !

ಪ್ರಾತಃಪ್ರಜ್ಞೆಯ ಉಲ್ಲಾಸವನ್ನೂ ಉಲ್ಲಸಿತಗೊಳಿಸುವಂತೆ ಒಯ್ಯೊಯ್ಯನೆ ತೀಡಿ ಬರುವ ಮಂದಾನಿಲನ ಚಾಮರ ಸೇವೆಗೆ ಮೈಯೊಡ್ಡಿ ನೇಸರು ಮೂಡುತಿತ್ತು ಮೂಡಣ ಭಿತ್ತಿಯಮೇಲೆ.

ವಿಶ್ವಜಗತ್ತಿನಲ್ಲಿ,

ದಿಗ್ದಿಗಂತ ವ್ಯಾಪಿಯಾದ ಜೀವನಾನಂಧಕಾರದಲ್ಲಿ, ಅಪ್ರಕಾಶಿತ ಮಾನವ ಪ್ರವೃತ್ತಿಯಲ್ಲಿ ತೊಳಲಿ ಬಳಲುವ ಜೀವಕಣಗಳ ಉದ್ಧಾರಕ್ಕಾಗಿ ಆ ಮುಹೂರ್ತದಲ್ಲಿ ಸಂಜನಿಸಿದ ಪವಿತ್ರಾತ್ಮ ಸಮಯಸ್ಫೂರ್ತಿಯಿಂದ ಅಭಿರೂಪುಗೊಂಡಿತ್ತು–ಸಿರಿವಂತಿಕೆಯ ಆಲಯದಲ್ಲಿ ಮಹತ್ಪೂರಿತ ಕೋಲಾಹಲ ಮೂಡಿಸುವಂತೆ. ಸೂಲಗಿತ್ತಿತನವನ್ನು ನಿರ್ವಹಿಸಿದ ಪ್ರೌಢೆ ಮಗುವಿನ ಸುಖಾಗಮನವನ್ನು ಸಾರಿ ಹೇಳಲು ಮೇಜಿನಮೇಲಿದ್ದ ಗಂಟೆಯನ್ನೆತ್ತಿ ಸಡಗರದಿಂದ ಬಾರಿಸಿದಳು.

ಠಣ್, ಠಣ್, ಠಣ್, ಠಣ್, ಠಣ್, ಠಣ್.....!

ಠಣ್, ಠಣ್, ಠಣ್, ಠಣ್, ಠಣ್, ಠಣ್.....!

ಹೊರಹೋಗಿದ್ದ ಒಡೆಯನಿಗೆ ಸುದ್ದಿ ಮಿಂಚಿನಂತೆ ಹೋಯಿತು. ಆಳು ಕಾಳುಗಳೆಲ್ಲಾ ಮಗುವನ್ನು ನೋಡುವ ಆಸೆಯಿಂದ ಬಾಗಿಲಲ್ಲಿ ಹಣಿಕಿದರು. ಸೂಲಗಿತ್ತಿ ಇನ್ನೂ ಒಳಗಡೆಯೇ ಸೇರಿಕೊಂಡಿದ್ದುದರಿಂದ ಕಾತರ ದುಂಬಿದ ಕಂಠಗಳು ಅಲ್ಲಿಂದಲೇ ಮೊಳಗಿದುವು,

"ಮಗು ಹೆಣ್ಣೋ ? ಗಂಡೋ ?"

ಸೂಲಗಿತ್ತಿ ಒಳಗಿಂದಲೇ ಉತ್ತರಿಸುವಷ್ಟು ಉದಾರತೆ ತೋರಿದಳು,

"ಹೆಣ್ಣು ಮಗು !"

"ನಾವು ನೋಡಬಹುದೇ ?"

"ದಯವಿಟ್ಟು ಎರಡು ನಿಮಿಷ ತಾಳಿರಿ."

ಅವಳು ಅದೇ ಪ್ರಕಾರವಾಗಿ ಎರಡು ನಿಮಿಷಗಳಲ್ಲಿ ಮುದ್ದು ಮುದ್ದಾದ ಮಗುವನ್ನು ಕರೆತಂದು ಎಲ್ಲರಿಗೂ ತೋರಿದಳು—ಆನಂದವನ್ನೂ ಆನಂದಿತ ಗೊಳಿಸುವಂತೆ !

ಉನ್ನತ ಕುಟುಂಬದಲ್ಲಿ, ಅತ್ಯಂತ ಬಲುಮೆಯ ಆಗರದಲ್ಲಿ ಜನ್ಮತಳೆದ ಶಿಶುವನ್ನು ತಾಯ್ತನದ ಹುಮ್ಮಿನಿಂದ ಮುದ್ದಿಟ್ಟುಕೊಂಡಳು ಶ್ರೀಮಂತಿನಿ. ಬೆಣ್ಣೆಯ ಮೃದುವನ್ನೂ, ಮಲ್ಲಿಗೆಯ ಕಾಂತಿಯನ್ನೂ ಬದಿಗೊತ್ತುವಂತಿದ್ದ ಮಗುವಿನ ರೂಪು ನಿಜಕ್ಕೂ ರಮಣೀಯ. ಇಂಗ್ಲೆಂಡಿನ ಆಗರ್ಭ ಶ್ರೀಮಂತ ಸಮಾಜದ ಕಟ್ಟಾಳು ವಿಲಿಯಂ ಎಡ್ವರ್ಡ್ ನೈಟಿಂಗೇಲ್ ಮಗುವಿನ ತಂದೆ. ಆಗಿನ ವಾತಾವರಣದಲ್ಲಿ ಆಗಿನ ವಂಶ ಪರಂಪರೆಯಲ್ಲಿ ಪಡೆದುಕೊಂಡ ಸ್ಥಾನಗೌರವ ವಿದ್ಯಾವೈಭವಗಳ ಅನುಮೋದಕತೆಯಿಂದ ಸಾರ್ವಭೌಮಿಕ ತುಲನೆಯಲ್ಲಿ ಶ್ರೀಮತಿ ನೈಟಿಂಗೇಲ್ ವಿಜೃಂಭಿಸುತಿದ್ದಳು. ಮಗು ದಾಸದಾಸಿಯರ ಪಾಲನೆಯಲ್ಲಿ ಹೂವಿನಂತೆ ಬೆಳೆಯುತಿತ್ತು. ಮಗಳ ಭವ್ಯ ಭವಿತ್ಯವ್ಯದ ಬಗ್ಗೆ ನಾನಾ ಹೊಂಗನಸುಗಳನ್ನು ನೇಯುತಿದ್ದರು ದಂಪತಿಗಳು. ಅದಕ್ಕನುಗುಣವಾಗಿ ಸಾರವತ್ತಾದ ವಿದ್ಯಾಬುದ್ಧಿಗಳನ್ನು ಕೊಡ ಬಯಸಿದರು ಕಾಲೋಚಿತವಾಗಿ.

'ಫ್ಲಾರೆನ್ಸ್'ನಲ್ಲಿ ಜನ್ಮವೆತ್ತಿದ ಮಗು 'ಫ್ಲಾರೆನ್ಸ್ ನೈಟಿಂಗೇಲ್' ಆದುದು ಒಂದು ಮೋಹಕ ಸನ್ನಿವೇಶ ಅಥವಾ ದೇಶಕಾಲೋಚಿತ ಸ್ಫೂರ್ತಿ.

* * * * *

ಕಾಲಮಾನ ಉರುಳಿ ವರ್ಷಮಾನಗಳು ನಿರಾತಂಕವಾಗಿ ಸಂದು ಹೋದುವು.

ಬಾಲ್ಯದಿನಗಳ ಹೊಸ್ತಿಲನ್ನು ದಾಟಿದ ಫ್ಲಾರೆನ್ಸ್ ನೈಟಿಂಗೇಲ್ ಕೌಮಾರ್ಯದಲ್ಲಿ ನೆಲೆಗೊಂಡಳು. ಶಾಲಾ ಜೀವನ ಅನುಕ್ರಮವಾಗಿ ನಡೆಯುವಾಗ ಬಾಲಸಹಜವಾದ ಆಸೆ-ಅಭಿಲಾಷೆಗಳು ಎಳೆಯುಮನವನ್ನು ಆವರಿ

ಸುವುದು ಸಹಜ. ಆದರೆ, ಅವಳು ಶೇಖರಿಸಿದ್ದು ಬಹುಮೂಲ್ಯವಾದ ಕಾರುಣ್ಯದ್ರವ್ಯ. ನೊಂದ ಜೀವಿಗಳಲ್ಲಿ ಅವಳು ತೋರುತ್ತಿದ್ದ ದಯೆ-ಅನು ಕಂಪ-ಅಪಾರ. ಶಾಲಾಮಕ್ಕಳ ಮೇಲಿನ ಸಾಂಕ್ರಾಮಿಕ ರೋಗಗಳ ಧಾಳಿ, ವ್ರಣಗಳ ಹಿಂಸೆ ಹೃದಯವನ್ನು ಗಾಣಕ್ಕೆ ಕೊಟ್ಟಂತೆ ಹಿಂಡಿ, ಅವಳಿಗರಿ ಯದಂತೆಯೇ ಮನಃಪ್ರಾಣಗಳನ್ನು ಯಾವುದೋ ಅಚಿಂತನೀಯವಾದ ಪರಿಸ್ಥಾನಕ್ಕೆ ಎಳೆದೊಯ್ಯುತ್ತಿತ್ತು ಅಗೋಚರ ಶಕ್ತಿಗೆ ಹೊಯ್‌ಕೈಯಾಗಿ. ಅವಳು ಅನುದಿನವೂ ಓರಗೆಯವರೊಡನೆ ಕೂಡಿ ಸರ್ವೇಸಾಮಾನ್ಯವಾಗಿ ಸಂಭ್ರಮದಿಂದ ಕಾಲಯಾಪನೆ ಮಾಡಿದರೂ ಆತ್ಮಗತವಾದ ಕಾರುಣ್ಯ ಅಖಂಡ ಕೀರ್ತಿಯ ಮೊಳಕೆಯಂತೆ ಹೃದಯ ಕ್ಷೇತ್ರವನ್ನು ವ್ಯಾಪಿಸಿತು. ದಿನಗಳೆದಂತೆಲ್ಲಾ ಚಟುವಟಿಕೆಯ ಬೀಡಾಗಿ ಸರ್ವಾಂಗ ಪುಳಕಿತಳಾದಳು ಅವಳು.

ವಿಲಿಯಂ ಎಡ್ವರ್ಡ್ ನೈಟಿಂಗೇಲ್ ಸ್ವಂತ ಕಾರ್ಯಾರ್ಥವಾಗಿ ಶಹ ರಕ್ಕೆ ಹೊರಡಲು ಪೂರ್ವಭಾವೀ ಸಿದ್ಧತೆ ನಡೆಸಿದ್ದ. ಪರಿಚಾರಕ–ಮೈ ಕೇಲ್ ಎರಡು ಕುದುರೆಗಳ ಮೈಯ್ಯುಜ್ಜಿ, ಜೀನು–ಮುಖವಾಡ ಬಿಗಿದು ಅಂಗಳದಲ್ಲಿ ತಂದುಕಟ್ಟಿದ. ಅದೇ ವೇಳೆಗೆ ಹಟ್ಟಿಯಿಂದ ಹೋಮ್ಮುತ್ತಿದ್ದ ಬೆಂದ ಹುರುಳಿಯ ಕಮನೀಯ ಕಂಪಿಗೆ ಮನಸೋತ ಅವು ನಿಂತೆಡೆ ನಿಲ್ಲದೆ ಒಂದೇಸಮನೆ ಅತ್ತಿತ್ತ ಜಿಗಿದಾಡುತಿದ್ದುವು ಎಳೆಯ ಚಪಲಾಶ್ವಗಳಂತೆ. ಹೊಂಬಿಸಿಲ ಹೊನ್ನರಾಜಿಗೆ ಅಪ್ಪಟ ರೇಶಿಮೆಯಂತೆ ಮಿಂಚುತಿತ್ತು ಅವು ಗಳ ಮೈಬಣ್ಣ. ಕಮನೀಯ ಕಾತರತೆ ತುಂಬಿದ ನೋಟ, ಬಾಯಿಯಲ್ಲಿ ಒಸರುವ ಜೊಲ್ಲು, ತೀವ್ರಾತುರತೆಯ ಕೆನೆತ ವರಾಂಡದಲ್ಲಿದ್ದ ಫ್ಲಾರೆನ್ಸ್ ನೈಟಿಂಗೇಲಳಿಗೆ ಕರೆ ನೀಡಿತು. ಅವಳು ಸ್ವಲ್ಪಹೊತ್ತು ಹಾಗೇ ನೋಡು ತಿದ್ದು ಹೊರಬಂದಳು. ಅವುಗಳ ಚಲನವಲನ ಅವಳ ಹುರುಪನ್ನು ಒಮ್ಮೆಗೇ ಬಂಡೇಳಿಸಿತು. ನೀಲನಯನಗಳಲ್ಲಿ ಉಜ್ವಲಕಾಂತಿಯನ್ನು ಸೂಸಿ, ಆವಸರಯುಕ್ತವಾಣಿಯಲ್ಲಿ ಕೇಳಿದಳು,

"ಮೈಕೇಲ್..... ಅವು ಹುರುಳಿಗಾಗಿ ಕಾತರಿಸುತ್ತಿವೆ ಹುರುಳಿ ಇನ್ನೂ ಬೇಯಲಿಲ್ಲವೇ ?"

"ಬೆಂದಿದೆ ಮಿಸ್, ಆರಲಿಲ್ಲ ಅಷ್ಟೆ. ಅವು ಯಾವಾಗಲೂ ಹೀಗೆ, ಬಹಳ ಅವಸರ."

"ಎಷ್ಟೆಂದರೂ ಪ್ರಾಣಿಗಳು. ಪಾಪ, ಹಸಿವಾಗಿರಲೂ ಬಹುದು!"

"ಸರಿ ; ಇದೇನು ಹೊಸದೇ ? ಅವು ಹಸಿದರೂ ಅಷ್ಟೆ ; ಹಸಿಯದಿದ್ದರೂ ಅಷ್ಟೆ."

ಅವಳು ಆ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ ಅವುಗಳ ಮೇಲೆ ಪ್ರೀತಿಯಿಂದ ಕೈಯಾಡಿಸಿದಳು; ಆ ಮಿಂಚು ಮೈಯಿನ ನುಣ್ಪು, ಚುರುಕು ಬುದ್ಧಿಯ ಸಂಭ್ರಮ, ಅತುಲ ಮೂಕಪ್ರೇಮ ಇವುಗಳಿಂದ ಆಕರ್ಷಿತಳಾಗಿ ಅವುಗಳೊಂದಿಗೆ ಲಲ್ಲೆಗೈಯ್ಯುತ್ತ ಹಸುರು ಹುಲ್ಲನ್ನು ಕೊಡವಿ ಬಾಯಿಗಿಟ್ಟಳು. ಅವು ತಿನ್ನುವ ಆತುರ ತೋರಿದರೂ ಮನದಾಸೆ ಹುರುಳಿಯ ಕಡೆಗೆ ; ಅಸಹನೆಯಿಂದ ಪರದಾಡುತ್ತ ಹಟ್ಟಿಯತ್ತ ನೋಡುತ್ತಲೇ ಇದ್ದುವು,

"ಹೊತ್ತಾಯ್ತು ಮೈಕೇಲ್, ಅಪ್ಪ ಹೊರಡಲು ಇನ್ನು ಅರ್ಧಗಂಟೆ ಮಾತ್ರ ಇದೆ."

"ಅವಕ್ಕೇನು ಐದು ನಿಮಿಷ ಸಾಕಲ್ಲ ?"

ಅವನೆಂದುದು ಸರಿ ಎನಿಸಿದರೂ ಕುದುರೆಗಳ ಆತುರ ಮನವನ್ನು ಕ್ಷಣಕ್ಷಣಕ್ಕೂ ಕಲಕುತಿತ್ತು ; ಅವಳು ಆತುರವಾಗಿ ಕೇಳಿದಳು,

"ನಾನೇ ಹೋಗಿ ತರಲೇ ?"

"ಬೇಡ ಮಗೂ, ನಿನಗೇಕೆ ತೊಂದರೆ ? ಈ ಕೆಲಸ ಮುಗಿಸಿ ನಾನೇ ತರುವೆ."

"ನಿನ್ನದಿನ್ನೂ ಮುಗಿಯಲಿಲ್ಲವಲ್ಲಾ ?"

"ಮೂರು ನಿಮಿಷ ಅಷ್ಟೆ."

ಆ ಮೂರು ನಿಮಿಷಗಳ ಅವಧಿ ಕಳೆದರೂ ಕೆಲಸ ಮುಗಿಯಲಿಲ್ಲ. ಅವನ ಮನಸ್ಸೆಲ್ಲಾ ಶಹರದಲ್ಲಿ ಮಾಡಬೇಕಾದ ಕೆಲಸದಮೇಲೆ ಹೊರತು ಹುರುಳಿಯ ಕಡೆ ಅಷ್ಟಾಗಿ ಹರಿಯದು. ಫ್ಲಾರೆನ್ಸ್ ನೈಟಿಂಗೇಲ್ ಸ್ವಲ್ಪ ಹೊತ್ತು ಅವನನ್ನು ಗಮನಿಸುತಿದ್ದು ಅನಂತರ ಅಸಮಾಧಾನಯುಕ್ತವಾಣಿಯಲ್ಲಿ ನುಡಿದಳು,

"ನೀನು ಯಾವಾಗಲೂ ಹೀಗೆ, ತುಂಬ ಅಸಡ್ಡೆ !"

ಅವನು ಮಾಡುತಿದ್ದ ಕೆಲಸವನ್ನು ಅಷ್ಟಕ್ಕೆ ಬಿಟ್ಟು ಅವಳನ್ನು ಆಶ್ಚರ್ಯಚಕಿತ ದೃಷ್ಟಿಯಿಂದ ನೋಡುತ್ತ ಕೇಳಿದ,

"ಅಂದರೆ.....?"

ಅದನ್ನೇ ಒತ್ತಿ ಹೇಳಿದಳು ಫ್ಲಾರೆನ್ಸ್ ನೈಟಿಂಗೇಲ್ "ನೀನು ಯಾವಾಗಲೂ 'ಅಸಡ್ಡೆ' ಎಂದೆ !"

ಅವನು ಉತ್ತರಿಸದೆ ಕಿಲಕಿಲನೆ ನಕ್ಕುಬಿಟ್ಟ.

ಆತನ ನಿರ್ಲಕ್ಷ್ಯ-ಅಶ್ರದ್ಧೆ ಮೃದು ಮನವನ್ನು ಈಟಿಯಂತೆ ಇರಿಯಿತು. ಅವಳು ಅಸಮಾಧಾನದಿಂದ ಹುರುಳಿಯ ಬಾನಿಗಳನ್ನು ತರಲು ತಾನೇ ಹೊರಟಳು. ಮೈಕೇಲ್ ಆಗಲೇ ತನ್ನ ಕೆಲಸದಲ್ಲಿ ಪುನಃ ನಿಮಗ್ನನಾದುದರಿಂದ ಅವಳು ಹಟ್ಟಿಯ ಕಡೆ ಹೋದುದನ್ನು ಗಮನಿಸಲಿಲ್ಲ. ಅವಳು ಕೆಲವು ನಿಮಿಷಗಳೊಳಗಾಗಿ ಹಟ್ಟಿಯಿಂದ ಹುರುಳಿಯ ಭಾರವಾದ ಬಾನಿಗಳನ್ನು ಹೊರಲಾರದೇ ಹೊತ್ತು ತಂದು ದಡ್ಡನೆ ಇಟ್ಟಾಗ ಮೈಕೇಲ್ ಅಚ್ಚರಿಯಿಂದ ಹಿಂದಿರುಗಿ ನೋಡಿದ. ಮಿತಿಮೀರಿದ ಭಾರವೆತ್ತಿ ಕೆಂಪು ಕೆಂಪಾದ ಎಳೆ ಬೆರಳನ್ನು ಉಜ್ಜಿಕೊಳ್ಳುತ್ತಿದ್ದ ಅವಳನ್ನು ನೋಡಿದೊಡನೆ ಅವನಿಗೆ ಎಲ್ಲಿಲ್ಲದ ಅಸಮಾಧಾನ ಮೂಡಿತು. ತಟ್ಟನೆ ರೂಕ್ಷ ದನಿಯಲ್ಲಿ ಅಂದ,

"ನೀನೇಕೆ ತರಬೇಕು ? ಅಷ್ಟೇನವಸರ ?"

"ಪರವಾಯಿಲ್ಲ, ಬಿಡು."

"ನೀನು ಬಹಳ ತುಂಟೆ ! ಒಂದು ನಿಮಿಷವೂ ಸುಮ್ಮನೆ ಒಂದೆಡೆ ಕೂಡುವುದಿಲ್ಲ."

"ಹಾಗಿರುವುದೇ ವಿಶೇಷ ಮೈಕೇಲ್ !"

"ಸರಿ....ಸರಿ. ಅನಾವಶ್ಯಕ ಶ್ರಮ. ಮೈ ಕೈ ಎಲ್ಲಾ ಹುರುಳಿ. ದೊರೆಸಾನಿ ನೋಡಿದರೆ ಖಂಡಿತ ಕೋಪಿಸಿಕೊಳ್ಳುತ್ತಾಳೆ."

"ಅದೇನೂ ದೊಡ್ಡದಲ್ಲ."

"ನೀನು ಚಿಕ್ಕವಳು. ನಿನಗೆ ಮಾನಾಪಮಾನಗಳ ಗೋಜಿಲ್ಲ."

"ಹಚ್ಚಿಕೊಂಡರೆ ಎಲ್ಲವೂ ಉಂಟು. ಇಲ್ಲದಿದ್ದರೆ ಯಾವುದೂ ಇಲ್ಲ. ಮೈಕೇಲ್, ಬರೀ ಮಾತಿನಲ್ಲೇ ಹೊತ್ತು ಕಳೆಯಬೇಡ. ಹುರುಳಿಯನ್ನು ಮಗುಚಿ ಹಾಕು. ಕುದುರೆಗಳ ಆಕರ ಕಾಣುವುದಿಲ್ಲವೇ ?"

ಅವನು ಹುರುಳಿಯನ್ನು ಮಗುಚಿ ಹಾಕುತ್ತ ಅಂದ,

"ನಿನ್ನ ಉಡುಪು ಮಾಸಿತು. ದೊರೆಸಾನಿ ಕೇಳಿದರೆ ಏನು ಹೇಳುವೆ?"

"ಆ ಚಿಂತೆ ಬೇಡ. ನಾನು ಸಮಾಧಾನಿಸುವೆ....." ಮುಂದೆ ಏನು ಹೇಳುವುದಿತ್ತೋ ಕಾರ್ಯಾತುರ ಅದಕ್ಕೂ ಅಡ್ಡಿ ಬಂತು. ಅವನು ಹದಗೊಳಿಸಿದ ಬಾನಿಯನ್ನು ಎತ್ತಿ ಕುದುರೆಯ ಮುಂದಿಡಲು ಮುಂದಾದಳು. ಅವನು ಬೇಡವೆನ್ನುವುದರೊಳಗಾಗಿ ಅವಳು ಆ ಕೆಲಸವನ್ನು ಮುಗಿಸಿಯಾಗಿತ್ತು. ಅವನು ಇನ್ನೊಂದು ಬಾನಿಯಲ್ಲಿ ಕೈಯಾಡಿಸಿ ಎರಡನೆಯ ಕುದುರೆಯ ಮುಂದಿಟ್ಟು ಅಂದ,

"ಮಿಸ್, ಕೇವಲ ಐದು ನಿಮಿಷಕ್ಕಾಗಿ ಎಷ್ಟು ಗಲಾಟೆ ಎಬ್ಬಿಸಿದೆ."

"ಅದೇ ಚೆಂದ !" ಕಿಲಕಿಲ ನಕ್ಕಳು ಅವಳು.

"ನಿನಗೆ ಹುಡುಗಾಟ ಅಷ್ಟೆ, ಇನ್ನೇನಿಲ್ಲ. ಆದರೆ, ಒಂದು ವಿಷಯ ನಿನ್ನ ಗಮನಕ್ಕೆ ತರಲೇಬೇಕು ಎನಿಸಿದೆ."

"ಏನು ಹೇಳು ಮೈಕೇಲ್ ?"

"ಮಿಸ್, ನೀನು ಯಾವಾಗಲೂ ಹೀಗೆ ಅನ್ಯಥಾ ಶ್ರಮ ತೆಗೆದುಕೊಳ್ಳುತ್ತಿ. ಅದರಿಂದ ನಿನಗೇ ತೊಂದರೆ."

"ಪರವಾಯಿಲ್ಲ."

ಕುದುರೆಯು ತಿನ್ನುವಾತುರದಲ್ಲಿ ಬಾನಿಯನ್ನು ಮಗುಚಿದುದನ್ನು ನೋಡಿ ಮೈಕೇಲ್ ಎತ್ತಲು ಅತ್ತ ತಿರುಗಿದ. ಕೆಳಗೆ ಚೆಲ್ಲಿ ಹರಡಿದ ಹುರುಳಿಯನ್ನು ಎತ್ತಿ ಹಾಕಿ ತಳದಲ್ಲಿ ಮೆತ್ತಿದ್ದ ಹುರುಳಿಯನ್ನು ಬಳಿದು ಅದರ ಬಾಯಿಗಿಟ್ಟು ಇನ್ನೊಂದು ಕುದುರೆಗೂ ಅಷ್ಟು ಸಹಾಯ ಮಾಡಿ ಬಾನಿಗಳನ್ನು ಎತ್ತಿ ಬದಿಗಿಟ್ಟು ನುಡಿದ,

"ನೋಡು, ಇನ್ನೂ ಇಪ್ಪತ್ತು ನಿಮಿಷ ಸಮಯವಿದೆ." ಮಾತು ಮುಗಿದಾಗ ಮುಖದಲ್ಲಿ ಕರ್ತವ್ಯಶೀಲತೆಯ ಹುರುಪು ಹೂವಿನಂತೆ ಅರಳಿತು.

"ಇರಲಿ, ಅವಕ್ಕೂ ವಿಶ್ರಾಂತಿ ಬೇಕಲ್ಲ ?"

"ನಿನ್ನದು ಕೇವಲ ವ್ಯರ್ಥ ಸಾಹಸ !"

"ಅದಕ್ಕೇ ಅವು....."

ಆ ಮಾತನ್ನು ಮುಂದುವರಿಸಗೊಡದಂತೆ ಮೈಕೇಲ್ ನಡುವೆ ಬಾಯಿ ಹಾಕಿದ,

"ನೀನು ತುಂಬ ಅವಸರಗಾತಿ ; ಅಷ್ಟೆ, ಇನ್ನೇನಿಲ್ಲ."

"ಆದಿರಲಿ, ಅವು ನಿರ್ಬಂಧಿತ ಪ್ರಾಣಿ ಎಂಬುದನ್ನು ನೀನು ಸಲ ಸಲಕ್ಕೂ ಮರೆಯುವಂತಿದೆ !"

ಆ ಮಾತು ಎದೆಯಾಳಕ್ಕೆ ಇಳಿಯಿತು. ಮೈಕೇಲ್ ಆಶ್ಚರ್ಯ ಭಾವವನ್ನು ಸೂಸಿ ಅಂದ,

"ಇಷ್ಟಕ್ಕೂ ನೀನು ಮನೆಯಲ್ಲಿ ಇರುವುದೇ ಇಲ್ಲ. ಕೆಲವು ದಿನ ಇದ್ದು ನೋಡು."

ಅವಳು ಸೋಲದೆ ಉತ್ತರಿಸಿದಳು "ರಜೆ ದಿನಗಳಲ್ಲಿ ನಾನು ಇದೆಲ್ಲಾ ನೋಡಿಲ್ಲವೇ ?"

ಕುದುರೆಗಳ ಬಾಯಿಯಲ್ಲಿ ಜೊಲ್ಲು ಒಸರುತಿತ್ತು. ಅತ್ತಲೇ ನೋಡುತ್ತ ಮತ್ತೆ ಮುಂದುವರಿದಳು,

"ನೀನು ಇನ್ನಿಷ್ಟು ನಿಷ್ಠೆಯನ್ನು ಬೆಳೆಸಿಕೊಂಡರೆ ಬಹಳ ಒಳ್ಳೆಯದು ಮೈಕೇಲ್." ಹೃದಯದಾಳದಿಂದ ಹರಿದ ವಾಕ್ಸರಣಿಯ ಅಕ್ಷರ ಅಕ್ಷರಗಳೂ ಸ್ಫೂರ್ತಿಯ ಆಗರವಾಗಿದ್ದುವು.

ಅವನು ತಿಳಿಹಾಸ್ಯ ಪ್ರಧಾನವಾಗಿ ಬಿತ್ತರಿಸಿದ,

"ಓ ! ನನ್ನಷ್ಟು ನಿಷ್ಠಾವಂತನಾಗಿ ಯಾರಾದರೂ ಇದ್ದರೆ ಸಾಕಲ್ಲ ?"

"ಹೌದು, ಹೌದು ! ಗೊತ್ತು.....ನಿನ್ನ ನಿಷ್ಠೆ ಇರುವುದೆಲ್ಲಾ ನಿನ್ನ ಕಡೆಗೆ !"

"ಅಂದರೆ....?"

"ಕಾಣುವುದಿಲ್ಲವೇ ? ಕುದುರೆಗಳಿಗಿಂತ ಚೆನ್ನಾಗಿ ನೀನೇ ಮಿಂಚುತಿದ್ದಿ !"

ಒಡನೆ ಇಬ್ಬರೂ ಕಿಲಕಿಲ ನಕ್ಕರು.

ಅವಳು ಸುಂದರವಾದ ಅರಳುಗಣ್ಣಿಂದ ನೋಡುತ್ತ ವಿನೋದ ಲೀಲಾ ಲೋಲುಪ್ತಿಯಲ್ಲಿ ನುಡಿದಳು "ಒಂದು ವೇಳೆ ಹುರುಳಿಯ ರುಚಿ ನಿನಗೆ ಹಿಡಿಸಿದ್ದರೆ....?"

ಆ ಮಾತು ಮುಗಿಯುವುದರೊಳಗಾಗಿ ನಾಲಿಗೆ ತುಟಿಗಳು ಪರಸ್ಪರ ನೋಣೆದು ರುಚಿಯನ್ನು ನೆನಪು ಮಾಡಿಕೊಟ್ಟುವು. ಹಾಸ್ಯಪೂರ್ಣ ಪ್ರವಾಹ ಮತ್ತೆ ಹರಿದಾಗ ಪುನಃ ಇಬ್ಬರೂ ನಗೆಯಲ್ಲಿ ಪಾಲ್ಗೊಂಡರು.

"ನಾನು ಹೀಗೆಂದೆ ಎಂದು ನಿನಗೆ ಕೋಪವಿಲ್ಲವಷ್ಟೆ ?"

"ಮಿಸ್, ನಾನು ಕೋಪಿಸಿಕೊಂಡರೆ ರೊಟ್ಟಿಗೇ ಸೊನ್ನೆ !"

"ನೀನು ಉಪವಾಸ ಮಾಡಿದರೂ ಕರಗುವುದಿಲ್ಲ ಬಿಡು !"

ಅನಂತರ ವಿಚಾರಮಗ್ನೆಯಾಗಿ ಏನೋ ಒಂದು ರೀತಿಯ ಗಂಭೀರ ಭಾವನೆಯಿಂದ ಪುನಃ ಮುಂದುವರಿದಳು "ದೂರ ಪಯಣ. ಹಿಂದಿರುಗಿ ಬರುವವರೆಗೆ ಹುಲ್ಲು ಮೇಯಲು ಅವಕಾಶ ದೊರೆಯುವುದಿಲ್ಲ. ಕುದುರೆ ಆಯಾಸಗೊಳ್ಳುತ್ತವೆ. ಅದರಿಂದಲೇ...."

ಮುಂದೆ ಮಾತಾಡಗೊಡದಂತೆ ಮೈಕೇಲ್ ನಡುವೆ ಬಾಯಿ ಹಾಕಿದ,

"ಅವು ಅಷ್ಟೂ ಶ್ರಮ ವಹಿಸದಿದ್ದರೆ ಸಾಕಿ ಏನು ಪ್ರಯೋಜನ ಮಿಸ್ ?"

"ಇರಲಿ, ಪ್ರಾಣಿದಯೆ ಮಹತ್ತರವಾದುದು."

* * * *

ಭಾವ ಸಮುದ್ರದ ಬೆಳ್ನೊರೆಯ ಲೇಪವನ್ನು ಹೊಂದಿದಂತೆ ಉಲ್ಲಸಿತ ವಾಗಿತ್ತು ವಿಶ್ವಕಾಂಡ.

ಮೈಕೇಲ್ ಎರಡು ಕುದುರೆಗಳಿಗೂ ಕಡಿವಾಣ ಬಿಗಿದ. ಪಯಣದ ಪ್ರತೀಕ್ಷೆಯಲ್ಲಿ ಅವು ಹುರುಪುಗೊಂಡಿದ್ದುವು.

ವಿಲಿಯಂ ಎಡ್ವರ್ಡ್ ನೈಟಿಂಗೇಲ್ ಕಾರ್ಯಾತುರತೆಯಿಂದ ಒಳಗಡೆ ಇನ್ನೂ ಏನೇನೋ ನಡೆಸಿದ್ದಾನೆ. ಶಹರಕ್ಕೆ ಹೊರಡುವ ಸಿದ್ಧತೆ ಸಾಮಾನ್ಯವೇ ಆದರೂ ಕಾರ್ಯಕಾರಣಗಳ ಹೊಯ್ಕುಯ್ ತಿಕ್ಕಾಟದಲ್ಲಿ ಹೊತ್ತು ನಿರಾಳವಾಗಿ ಕರಗುತಿತ್ತು. ಹಿಂದಿನ ದಿನ ಬೇಗನೆ ಹೊರಡಲು ನಿರ್ಧರಿ

ಸಿದ್ದರೂ ಅವನು ಒಳಗಿನಿಂದ ಹೊರ ಬರಲೇ ಇಲ್ಲ. ಹೊರಗಡೆ ಕುದುರೆಯ ಲಾಯದ ಬಳಿ ತಂದೆಯನ್ನು ನಿರೀಕ್ಷಿಸುತ್ತಿದ್ದ ಮಗಳು ಒಮ್ಮೆ ಜ್ಞಾಪಿಸಿ ಬರಲು ಒಳ ಹೋದಳು.

"ಅಪ್ಪಾ! ಹೊತ್ತು ಮೀರುತ್ತಿದೆ. ಆಗಲೇ ಹತ್ತೂವರೆಯಾಯಿತು."

"ಇದೋ ಈಗ ಬಂದೇ ಮಗಳೇ !"

ಅವನ ಚಲನವಲನಗಳಲ್ಲಿ ಅತ್ಯಂತ ಆತುರತೆ ಕಾಣಿಸುತಿತ್ತು. ಆದರೂ, ಸಿದ್ಧತೆ ಮುಗಿದಿರಲಿಲ್ಲ. ಅವಳು ಸ್ವಲ್ಪಹೊತ್ತು ನಿಂತು "ಹೊತ್ತು ಮೀರಿದರೆ ಪಯಣ ಕಷ್ಟ ಅಪ್ಪಾ !" ಎಂದಳು.

"ಇನ್ನೇನು ಆಯಿತಲ್ಲ, ಈಗಲೇ ಬಂದೆ !"

ಫ್ಲಾರೆನ್ಸ್ ನೈಟಿಂಗೇಲ್ ಹಾಗೇ ಹೊರ ಬಂದಳು. ಬೆನ್ನ ಹಿಂದೆ ಜೋಲಾಡುವ ಉದ್ದನೆಯ ಹೊಂಗೂದಲು ಸೂರ್ಯಕಾಂತಿಯ ಪ್ರತಿಫಲನದಿಂದ ಫಳ ಫಳ ಮಿಂಚುತಿತ್ತು. ಸುಂದರ ಮುಖಬಿಂಬದಲ್ಲಿ ಮಿಂಚುವ ನಯನಗಳ ಜೀವಕಳೆ ಆಕರ್ಷಣೀಯವಾಗಿತ್ತು. ಹುಡುಗಿ ಜೆಣ್ಣೆಯ ಜೀವಂತ ಬೊಂಬೆಯಂತೆ ಮನೋಹರವಾಗಿ ಕಂಡಳು.

ಮೈಕೇಲ್ ಸಿದ್ಧನಾಗಿ ಪ್ರಶ್ನಿಸಿದ,

"ಮಿಸ್ ! ದೊರೆ ಹೊರಟಿದ್ದಾನೆಯೇ ?"

"ಇನ್ನೂ ಸಿದ್ಧತೆ ಮುಗಿಯಲಿಲ್ಲ."

"ನಿನ್ನೆ ಹೊತ್ತಿಗೆ ಮುಂಚೆಯೇ ಹೊರಡಲು ಹೇಳಿದ್ದ. ನಾನು ಅಣಿಯಾಗಿ ಎಷ್ಟೊತ್ತಾಯಿತು ? ಅವನು ಇನ್ನೂ ಹೊರ ಬರಲಿಲ್ಲವಲ್ಲಾ ?"

"ಇನ್ನೇನು ಇಷ್ಟರಲ್ಲೇ ಹೊರಟಾನು....ಅವಸರದಲ್ಲಿದ್ದಾನೆ."

ವಾಕ್ಯ ಸರಣಿ ಪೂರ್ಣಗೊಂಡಾಗ ಮುಖಭಾವ ಗಂಭೀರವಾಗಿತ್ತು.

ಮೈಕೇಲನ ದೃಷ್ಟಿ ತಲೆಬಾಗಿಲ ಕಡೆ ಮತ್ತೆ ಹರಿಯಿತು. ವಿಲಿಯಂ ಎಡ್ವರ್ ಕಾಣಿಸದಿದ್ದುದರಿಂದ ಆರಾಮವಾಗಿ ನುಡಿದ,

"ಮಿಸ್, ನೀನು ಈವತ್ತೆಲ್ಲಾ ಕುದುರೆಯ ಚಿಂತೆಯಲ್ಲಿಯೇ ಇರುತ್ತಿ ಎಂದು ತೋರುತ್ತೆ !"

"ಏಕೆ ?" ನಗು ಮುಖದಿಂದ ಪ್ರಶ್ನಿಸಿದಳು ನೈಟಿಂಗೇಲ್.

"ಇನ್ನೇನು ? ಅಪ್ಪ ಹೊರಡುವುದು ಹೊತ್ತಾಯ್ತು. ಬಿಸಿಲಿನಲ್ಲಿ ಕುದುರೆಗಳು ದಣಿಯುತ್ತವೆ !" ಎನ್ನುತ್ತ ಮೈಕೇಲ್ ಮುಸಿ ಮುಸಿ ನಕ್ಕ.

"ಹೌದು ಮತ್ತೆ, ಅವು ಜೀವಿಗಳಲ್ಲವೇ ?"

"ಅವಷ್ಟೇ ಅಲ್ಲ. ನಾವೂ ಜೀವಿಗಳಲ್ಲವೇ ?"

"ಬಿಡು, ಬಿಡು. ನೀನು ಅವುಗಳಂತೆ ಹೊರೆ ಹೊರಬೇಕೇ ? ನಿನ್ನದು ಪೂರಾ ಕೂಪಕೂರ್ಮನ್ಯಾಯ !"

"ನೀನು ಮಾತು ಮಾತಿಗೂ ಚಬುಕಿನೇಟು ಕೊಡುವುದರಲ್ಲಿ ಜಾಣಳಿದ್ದಿ. ನನ್ನ ಕೆಲಸವನ್ನು ದೊರೆ–ದೊರೆಸಾನಿ ಇಬ್ಬರೂ ಮೆಚ್ಚಿ ಕೊಂಡಿದ್ದಾರೆ !"

"ಅದಕ್ಕೇ ನಿನಗಷ್ಟು ಹೆಮ್ಮೆ ?" ಗೋಣು ಆಡಿಸುತ್ತ ತುಂಟನಗೆ ಬೀರಿದಳು ಫ್ಲಾರೆನ್ಸ್ ನೈಂಗೇಲ್.

"ಹೌದಮ್ಮಾ ! ಇನ್ನಾರು ಮೆಚ್ಚಬೇಕು ?"

"ನಾನು.....? ?"

"ನೀನಿನ್ನೂ ಸಣ್ಣವಳಷ್ಟೆ ?"

"ಓ....! ಪರವಾಯಿಲ್ಲ !" ಹುಬ್ಬೇರಿಸಿದಳು ಹುಡುಗಿ.

ಅವನು ಕಿಲಕಿಲನೆ ನಕ್ಕ.

ಫ್ಲಾರೆನ್ಸ್ ನೈಟಿಂಗೇಲ್ ಜಾನಿ (ತಂದೆಯ ಕುದರೆ)ಯನ್ನು ಮುದ್ದು ಗೈಯ್ಯುತ್ತ ಬಿತ್ತರಿಸಿದಳು,

"ಈಚೀಚೆಗೆ ಜಾನಿ ಸ್ವಲ್ಪ ಬಡವಾಗಿದೆ. ಇದು ತುಂಬ ಸೂಕ್ಷ್ಮ ವಾದ ಕುದುರೆ. ಹೆಚ್ಚು ನಿಗಾ ಇಡದಿದ್ದಲ್ಲಿ ಬೇಗನೆ ಬಡವಾಗುತ್ತೆ. ನಾನು ಶಾಲೆಗೆ ಹೋದ ಮೇಲೆ ಗಮನಿಸುವವರೇ ಇಲ್ಲ. ತಾಯಿಗೆ ಸದಾ ಸ್ನೇಹಿತರು–ಅತಿಥಿಗಳು ಮುತ್ತಿರುತ್ತಾರೆ. ಅವಳಿಗೆ ಹಟ್ಟಿಗೆ ಬರಲು ಸಮಯವಾದರೂ ಎಲ್ಲಿರುತ್ತೆ ? ನೀನು ಚೆನ್ನಾಗಿ ಕುಡಿದುಬಿಟ್ರೆ ಎಂದರೆ ಮುಗಿದೇ ಹೋಯ್ತು !"

"ಇಲ್ಲ ಮಗೂ, ನೀನು ತಪ್ಪು ತಿಳಿದುಕೊಂಡಿದ್ದಿ. ಅದು ಇರು ವುದೇ ಹಾಗೆ. ಆ ಕರ್ಕಿ ನೋಡು ; ಹೇಗೆ ಮಿಂಚುತ್ತೆ ?"

ಮೈಕೇಲ್ ಇನ್ನೊಂದು ಕದುರೆಯ ಕಡೆ ಬೆರಳು ಮಾಡಿ ನುಡಿದ,

"ಅದು ಬಿಡು, ನಿನ್ನಂತೆಯೇ ಡೊಳ್ಳು ವೈ !"

ಇಬ್ಬರ ಮುಖದಲ್ಲೂ ಮುಗುಳ್ನಗು ಮೂಡಿತು.

"ಓ ! ಅಲ್ನೋಡು ; ನಿನ್ನ ಕುದುರೆಯ ಕಾಲ್ಗಂಟಿನಲ್ಲಿ ಗಾಯ ವಾಗಿದೆ. ನೀನದನ್ನು ಗಮನಿಸಿಯೇ ಇಲ್ಲ !" ಎನ್ನುತ್ತಾ ಫ್ಲಾರೆನ್ಸ್ ನೈಟಿಂಗೇಲ್ ಕರ್ಕಿಯ ಕಾಲ್ಗಂಟಿನೆಡೆಗೆ ಬೆರಳು ತೋರಿದಳು–ಅದು ಅಕ ಸ್ಮಾತ್ತಾಗಿ ದೃಷ್ಟಿಗೆ ಬಿದ್ದಾಗ.

"ಎಲ್ಲಿ ?" ಎಂದ ಮೈಕೇಲ್ ವೈಬಾಗಿ ಅತ್ತ ದೃಷ್ಟಿ ಹಾಯಿಸಿದ. ಆ ಚಿಕ್ಕ ಗಾಯ ದೃಷ್ಟಿಗೆ ಬಿದ್ದರೂ ಲಕ್ಷಿಸುವಂತಾದ್ದಲ್ಲ. ನೋಡಿದೊಡನೆ ಅತ್ಯಂತ ಉದಾಸೀನದಿಂದ 'ಹೌದು' ಎಂಬಂತೆ ತಲೆದೂಗಿದರೂ "ಅದೇನು ಪರವಾಯಿಲ್ಲ. ಬಹಳ ಸಣ್ಣಗಾಯ. ಔಷಧಿ ಬಳಿದರೆ ಹೋಗುತ್ತೆ." ಎಂದ.

"ಇರು....ನಾನೇ ಔಷಧ ತರುವೆ."

"ನಾನು....."

ಮಾತು ಮುಗಿಯುವುದರೊಳಗಾಗಿ ಚಿಗರಿಯಂತೆ ಓಡಿದಳು ಅವಳು. ಮೈಕೇಲ್ ಲುಪ್ತಬುದ್ಧಿಯಿಂದ ನೋಡುತ್ತ "ಈಕೆ ಅಬೋಧ ಬಾಲಿಕೆ ಯಲ್ಲ" ಎಂದುಕೊಂಡ. ಮರುಗಳಿಗೆಯಲ್ಲೇ ಅವಳು ಅಪ್ಸರೆಯಂತೆ ಓಡಿ ಬಂದು ಔಷಧಿಯ ಪೆಟ್ಟಿಗೆಯನ್ನು ನೆಲದ ಮೇಲಿಡುತ್ತ "ಬರೀ ಔಷಧ ಬಳಿದರೆ ಪ್ರಯೋಜನವಿಲ್ಲ. ಬ್ಯಾಂಡೇಜನ್ನೂ ಬಿಗಿಯಬೇಕು !" ಎಂದಳು ಕಣ್ಣುಗಳಲ್ಲಿ ಉತ್ಸುಕತೆಯನ್ನು ಸೂಸಿ.

"ಅಷ್ಟು ಸಣ್ಣ ಗಾಯಕ್ಕೆ.....?" ಅತ್ಯಂತ ಆಶ್ಚರ್ಯಭಾವದಿಂದ ಕೇಳಿದ ಮೈಕೇಲ್.

"ಹೌದಪ್ಪಾ, ಅದರ ನೋವು ನಿನಗೆ ಹೇಗೆ ತಿಳಿಯಬೇಕು ?" ದೃಢವಾದ ಸ್ವರ ಹೊರಬಿದ್ದಾಗ ನಯನಕೋರಕಗಳಲ್ಲಿ ಮಿನುಗಿದ ದೃಷ್ಟಿ ಮಿಂಚುತಿತ್ತು.

ಮೈಕೇಲ್ ನಕ್ಕು ನುಡಿದ,

"ನಿನಗದರಲ್ಲಿ ಆಸಕ್ತಿ ಉಂಟಷ್ಟೇ ? ಕಟ್ಟೋಣ ; ನೀನು ಹೇಗೆಂದರೆ ಹಾಗೆ."

"ನನ್ನ ಆಸಕ್ತಿಗಲ್ಲಪ್ಪಾ, ಅದರ ಹಿತಕ್ಕಾಗಿ."

"ಹಾಗೆನ್ನುವುದಾದರೆ ಅದು ಅಂತಹ ಗಾಯವೇನಲ್ಲ ಅದಕ್ಕೇಕೆ ಬ್ಯಾಂಡೇಜ್ ?"

"ಛಿಃ ! ನಿನ್ನ ಎದೆಯ ಬೊಕ್ಕಸದಲ್ಲಿ ಕರುಣೆ ಎಂಬುದು ಇಲ್ಲವೇ ಇಲ್ಲ. ನಿನ್ನನ್ನು ಸ್ವಲ್ಪ ಕಾಲವಾದರೂ ತರಬೇತಿ ಶಾಲೆಗೆ ಕಳುಹಿಸುವುದು ಲೇಸು !"

"ಪರವಾಯಿಲ್ಲ ಹುಡುಗಿ !" ಮೈಕೇಲ್ ತುಂಟನಗೆ ಬೀರಿದ.

ಅದೇ ವೇಳೆಗೆ ವಿಲಿಯಂ ಎಡ್ವರ್ಡ್ ನೈಟಿಂಗೇಲ್ ಪಯಣಕ್ಕೆ ಸಿದ್ಧನಾಗಿ ಹೊರಬಂದ. ಅಡಿಯಿಂದ ಮುಡಿಯವರೆಗೆ ಶ್ರೀಮಂತ ಗಾಂಭೀರ್ಯ ತುಂಬಿ ತುಳುಕುತಿತ್ತು. ಪ್ರಶಸ್ತ ಹೆಜ್ಜೆಗಳ ಪಟತ್ಕಾರ ಕೇಳಿಸುತ್ತಲೂ ಹಿಂದಿರುಗಿ ನೋಡಿದ ಫ್ಲಾರೆನ್ಸ್ ಕರುಣ ಕಾತರದಿಂದ ಹೇಳಿದಳು, "ದಯವಿಟ್ಟು ಐದು ನಿಮಿಷ ತಾಳಿ."

"ಏಕೆ ?....ಈಗಾಗಲೇ ನನಗೆ ಹೊತ್ತು ಮೀರಿದೆ."

ಆ ಮಾತನ್ನು ನಿರ್ಲಕ್ಷಿಸಿ ಉತ್ತರಿಸಿದಳು ಫ್ಲಾರೆನ್ಸ್ ನೈಟಿಂಗೇಲ್,

"ಕುದುರೆಗೆ ಗಾಯವಾಗಿದೆ. ಅದಕ್ಕೆ ಬ್ಯಾಂಡೇಜ್ ಕಟ್ಟಬೇಕು."

"ಹೂ.....ಬೇಗ."

ಮೈಕೇಲ್ ಮದ್ದು ಬಳಿಯಲು ಮುಂದಾಗುತ್ತಲೂ ವಿಲಿಯಂ ಎಡ್ವರ್ಡನ ದೃಷ್ಟಿ ಅತ್ತ ಸಹಜವಾಗಿ ಹರಿಯಿತು. ತೀರ ನಿರ್ಲಕ್ಷಿಸಬಹುದಾದ ಆ ಸಣ್ಣ ಗಾಯವನ್ನು ಕಂಡು "ಪರವಾಯಿಲ್ಲ ಮಗಳೇ, ಅದೇನೂ ತೊಂದರೆಮಾಡುವುದಿಲ್ಲ. ಅದಕ್ಕೇಕೆ ಬ್ಯಾಂಡೇಜ್ ?"

ಆದರೆ, ಅವಳು ಕೇಳಬೇಕಲ್ಲ ? ಬ್ಯಾಂಡೇಜ್ ಅಣಿಗೊಳಿಸುತ್ತಿದ್ದಾಳೆ, ಮೈಯೆಲ್ಲಾ ಮನಸ್ಸಾಗಿ ಕರ್ತವ್ಯ ಸಾಗುತ್ತಿದೆ.....ಶ್ರದ್ಧಾಸಕ್ತಿಗಳು ಏಕೀಭವಿಸಿವೆ....ಇನ್ನು ಕಟ್ಟುವುದೊಂದೇ ಬಾಕಿ.

ವಿಲಿಯಂ ಮುಗುಳು ನಗುತ್ತ ಕೇಳಿದ "ಅನ್ಯಥಾಶ್ರಮ ತೆಗೆದು ಕೊಳ್ಳುವುದೇಕೆ ? ಅದರಿಂದೇನೂ ಭಾದಕವಿಲ್ಲ."

"ರಸ್ತೆಯ ಧೂಳು ಮೆತ್ತಿದರೆ ಗಾಯ ವರ್ಧಿಸುತ್ತೆ."

"ಹೊತ್ತಾಯ್ತು, ಶಹರಕ್ಕೆ ಹೋಗಿ ಹಿಂದಿರುಗಬೇಕಲ್ಲ ?"

ಆದರೂ ಬಾಲೆ ಮಣಿಯಲಿಲ್ಲ. ಬ್ಯಾಂಡೇಜ್ ಚೊಕ್ಕವಾಗಿ ಬಿಗಿದ ನಂತರವೇ ಹೋಗಗೊಟ್ಟದ್ದು.

ವಿಲಿಯಂ ಎಡ್ವರ್ಡ್ಸ್ ಜಾನಿಯ ಮೇಲೇರಿದ. ಮೈಕೇಲ್ ಕರ್ಕಿಯ ನ್ನೇರಿದ.

"ಗುಡ್ ಮಾರ್ನಿಂಗ್ ಪಾಪಾ! ಗುಡ್ ಮಾರ್ನಿಂಗ್ ಮೈಕೇಲ್!"

"ಗುಡ್ ಮಾರ್ನಿಂಗ್ ಡಾರ್ಲಿಂಗ್!"

"ಗುಡ್ ಮಾರ್ನಿಂಗ್ ಮಿಸ್!"

* * * *

ಬೆಳಗಿನ ಒಂಭತ್ತರ ಸಮಯ.

.....ಸೀಮಾಂತರವೆಲ್ಲಾ, ಇನ್ನೂ ಮಂಜುಭರಿತವಾಗಿದ್ದುದರಿಂದ ಮೈ ಕೊರೆಯುವಂತಹ ತಂಡಿ ಹವೆಯಿಂದ ಕೂಡಿದ ವಾತಾವರಣ.

ರಾಜವೈಭವಯುತವಾದ ಮಹಲು. ಅಲ್ಲಲ್ಲಿ ಕಾರ್ಯನಿರತರಾದ ಆಳು ಕಾಳುಗಳು, ಸಾಕು ಪ್ರಾಣಿಗಳ ವಿವಿಧ ಕಂಠಸ್ವನ, ಪ್ರಾಂಗಣದಲ್ಲಿ ಸುಂದರ ಉದ್ಯಾನ ಒಂದೊಂದೂ ಶ್ರೀಮಂತ ಗಾಂಭೀರ್ಯವನ್ನು ಪ್ರತಿ ಪಾದಿಸುತ್ತವೆ. ಫ್ಲಾರೆನ್ಸ್ ನೈಟಿಂಗೇಲ್ ತನ್ನ ಅಧ್ಯಯನ ಕೊಠಡಿಯಲ್ಲಿ ಕುಳಿತು ಪತ್ರಿಕಾವಲೋಕನದಲ್ಲಿ ತನ್ಮಯಳಾಗಿದ್ದಾಳೆ. ಓದುತ್ತ ಓದುತ್ತ ಹೃದಯವಿದ್ರಾಯಕ ವಿಷಯವೊಂದು ಮನವನ್ನು ಮುತ್ತಿ ಪತ್ರಿಕೆಯನ್ನು ಹಾಗೇ ಮುಚ್ಚಿದಳು. ಆದರೇನು? ಆ ಪ್ರಸಂಗದಿಂದ ಮನವನ್ನು ಹಿಂತೆಗೆದು ಕೊಳ್ಳಲು ಸಾಧ್ಯವಾಗಲೇ ಇಲ್ಲ. ಅಷ್ಟು ಅಸಹನೀಯವಾದ ಕಿನಿಸಿಗೆ–ಬೇಸರ. ಹಾಗೇ ನೋಟವನ್ನು ಗಡಿಯಾರದ ಕಡೆ ಹರಿಸಿದಳು. ದಿನವೂ ಹೊತ್ತಿಗೆ ಮುಂಚಿತವಾಗಿ ಬರುತಿದ್ದ ಮೇರಿ ಇನ್ನೂ ಬಂದಿರಲಿಲ್ಲ. ಸರಿ; ಕೊಠಡಿಯ ಸ್ವಚ್ಛತೆಯನ್ನಾದರೂ ಪೂರೈಸಿದರೆ ಮನಸ್ಸಿನ ಚಿಂತೆ ಸ್ವಲ್ಪ ಅರುಗಾಗಬಹುದು ಎಂಬ ಭಾವನೆ ಮೂಡಿತು. ಕೂಡಲೇ ಎದ್ದು ಕೆಲಸಕ್ಕೆ ಕೈ ಹಚ್ಚಿದಳು. ಸ್ವಲ್ಪ ಹೊತ್ತಿನೊಳಗಾಗಿ ಮೈಕೊಡವಿ ಮಡಿಯುಟ್ಟಿತು ಕೊಠಡಿ.

ಮೇರಿ ಎಂದಿನ ಚಟುವಟಿಕೆಯಿಂದ ಒಳ ಹೆಜ್ಜೆಯಿಟ್ಟಾಗ ತಟ್ಟನೆ ಮೈಗೆ ತಣ್ಣೀರೆರೆಚಿದಂತಾಯಿತು. ಅಲ್ಲಿಂದ ಹೆಜ್ಜೆ ಮುಂದಿಡದೆ ಆಶ್ಚರ್ಯ

ನರಿತ ನೋಟವನ್ನು ಕೊಠಡಿಯ ವ್ಯಾಪ್ತಿಯಲ್ಲಿ ಪುನಃ ಹರಿಯಬಿಟ್ಟಳು. ಆಗಲೇ ಸಮಗ್ರ ಕೊಠಡಿಯ ಸ್ವಚ್ಛತೆ ಮಿಂಚಿನಂತೆ ನಡೆದು ಹೋಗಿದೆ. ಮೇಜಿನ ಪುಷ್ಪಕುಂಡದಲ್ಲಿ ಹೊಸ ಹೂಗಳು ನಳನಳಿಸುತ್ತಿವೆ. ತಾನು ಬರುವುದು ತಡವಾದುದಕ್ಕೆ ಕ್ಷಮಾಪಣೆಯನ್ನು ಕೇಳಿಕೊಳ್ಳುವ ಉದ್ದೇ ಹೊಂದಿದ್ದಳು ಅವಳು. ಆದರೆ, ಆ ಅವಶ್ಯಕತೆಯನ್ನು ಮೀರುವಂತೆ, ತುದಿ ಬೆರಳಿಂದ ಕಣ್ಣಿಗೆ ಚುಚ್ಚಿ ತಪ್ಪನ್ನು ತೋರುವಂತೆ ಎಲ್ಲವನ್ನೂ ತಾನೇ ನಿರ್ವಹಿಸಿದ್ದಾಳೆ. ನೋಡಿದರೆ ರಾಜವೈಭವದಲ್ಲಿ ಪ್ರತಿಷ್ಠಿತಳಾದ ಕನ್ಯೆ !

ಕಿಟಕಿಯ ಆಚೆ ನಳಿನಳಿಸುವ ಗುಲಾಬಿಯ ಉದ್ಯಾನದ ಮೇಲೆ ದೃಷ್ಟಿ ಹರಿಸಿದ ಅವಳ ಗಮನವೆಲ್ಲಾ ಅಲ್ಲೇ ನೆಲೆಸಿತ್ತು. ಮೇರಿ ಸ್ವಲ್ಪ ಹೊತ್ತು ಹಾಗೇ ನಿಂತಿದ್ದು ಅವಳ ಏಕಾಗ್ರತೆಗೆ ಭಂಗ ತಾರದೆ ಏನೆಂದು ಹೇಳಲಿ ? ಎಂಬಂತೆ ತನ್ನಲ್ಲೇ ನಿಶ್ಶಬ್ದವಾಗಿ ಆಲೋಚಿಸಿದಳು. ಹಾಗೆ ಒಂದೆರಡು ಘಳಿಗೆ ಉರುಳಿದುವೇನೋ, ಅನಂತರ ಅವಳ ಬಳಿಸಾರಿ ಸ್ವಲ್ಪ ಸಂಕೋಚಯುಂತ ವಾಣಿಯಲ್ಲಿ ವಂದಿಸಿದಳು ಮೇರಿ,

"ಗುಡ್ ಮಾರ್ನಿಂಗ್ ಮಿಸ್ !"

"ಗುಡ್ ಮಾರ್ನಿಂಗ್ ಮೇರಿ !"

"ಇಂದು ಬರುವುದು ಅರ್ಧ ಗಂಟೆ ತಡವಾಯಿತು. ದಯ ಮಾಡಿ....."

ಫ್ಲಾರೆನ್ಸ್ ನೈಟಿಂಗೇಲ್ ಅವಳ ಮಾತನ್ನು ಮುಂದುವರಿಯಗೊಡ ದಂತೆ ಅಷ್ಟಕ್ಕೆ ಬಾಯ್ದೆರೆದಳು,

"ಪರವಾಯಿಲ್ಲ ; ಎಲ್ಲಾ ನಾನೇ ಮಾಡಿಕೊಂಡೆ, ಅದಕ್ಕೇಕೆ ಚಿಂತೆ ?"

"ನಾನು ಇಷ್ಟರೊಳಗಾಗಿ ರುತ್ತಿದ್ದೆ. ನೀನು ವೃಥಾ....."

"ಇರಲಿ, ನೋಡು ; ನಾನು ಮಾಡಿದ್ದೆಲ್ಲಾ ಸರಿಯಾಗಿದೆಯೆ ? ನಾನು ನಿನ್ನಂತೆ ತರಬೇತಿ ಹೊಂದಿದವಳಲ್ಲ !"

ಎಂತಹ ಪ್ರಶ್ನೆ ? ಅದರಲ್ಲೂ ಎಷ್ಟು ಸಸಾರ ?

"ನೀನಷ್ಟು ಶ್ರಮ ತೆಗೆದುಕೊಳ್ಳುವ ಪ್ರಮೇಯವೇ ಇರಲಿಲ್ಲ. ಅದ

ರಲ್ಲೂ ಎಂತಹ ಪ್ರಶ್ನೆ ಕೇಳುತಿದ್ದಿ ? ನನ್ನಿಂದ ಆಗಿದ್ದು ಸಣ್ಣ ಅಪರಾಧ. ನೀನದಕ್ಕೆ ಬಹಳ ದೊಡ್ಡ ಶಿಕ್ಷೆ ಕೊಟ್ಟಿದ್ದಿ !"

"O my Lord !"

ಮೋಹಕ ದನಿಯಲ್ಲಿ ಉದ್ಗಾರ ತೆಗೆದ ಫ್ಲಾರೆನ್ಸ್ ನೈಟಿಂಗೇಲ್ ಪ್ರಸನ್ನ ಮುಖದಿಂದ ಮುಂದುವರಿದಳು "ನನಗೆ ಹೀಗೆ ಒಮ್ಮೊಮ್ಮೆ ಯಾದರೂ ಸ್ವತಃ ಕೆಲಸ ಮಾಡಿಕೊಳ್ಳುವ ಅಭ್ಯಾಸ ಒಳ್ಳೆಯದಲ್ಲವೇ ?"

"ನಿನಗೆ ಎಂದೂ ಆ ಅವಶ್ಯಕತೆ ಬಾರದು. ಬಂಗಾರದ ತಟ್ಟೆಯಲ್ಲಿ ಉಣ್ಣಬೇಕಾದ ಹುಡುಗಿ. ಅದನ್ನೆಲ್ಲಾ ಏಕೆ ಯೋಚಿಸಬೇಕು ? ನಿನ್ನ ಸೂಕ್ಷ್ಮವಾದ ಕೈಗಳು ಅಷ್ಟು ನೋಯಬಾರದು. ಸ್ವಾಮಿನಿ ನೋಡಿದರೆ ಏನೆನ್ನುವಳೋ ! ದಯಮಾಡಿ ಇಂದಿನ ನನ್ನ ಅವಿನಯವನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ."

"ಪರವಾಯಿಲ್ಲ ಮೇರಿ, ಅಷ್ಟೇಕೆ ವಿಷಾದ ಕಲ್ಪನೆ....? ಎಲ್ಲರಿಗೂ ಅವರವರದ್ದೇ ಆದ ಕೆಲಸಗಳು–ತೊಂದರೆಗಳು ಇದ್ದೇ ಇರುತ್ತವೆ. ಅದ ರಿಂದ ಹೊತ್ತು ಏರುಪೇರಾಗುವುದು ಸಹಜ."

ಮೇರಿ ಮಾತಾಡಲಿಲ್ಲ. ಮನಸ್ಸು ಕರುಣರಸದಿಂದ ತುಂಬಿತ್ತು. ಸ್ವಲ್ಪ ಹೊತ್ತು ಕಳೆದನಂತರ ಸಾವರಿಸಿಕೊಂಡು ನುಡಿದಳು,

"ನೀನೆಂದೂ ತರಬೇತಿ ಹೊಂದಿಲ್ಲ. ಆದರೂ ಸಹ ಬಹಳ ಚೊಕ್ಕಟ ವಾಗಿ ಕೆಲಸ ನಿರ್ವಹಿಸಿದ್ದಿ !"

"ತುಂಬ ಥ್ಯಾಂಕ್ಸ್."

ಎಂದಾಗ ಮುಖಬಿಂಬ ಅರಳಿ ಮಂಗಳಮಯವಾಯಿತು.

"ಇನ್ನೆಂದೂ ಇಷ್ಟು ಅವಸರಿಸಬಾರದು ; ಒಂದು ಕ್ಷಣ ಮೀರಿದರೂ ನಾನು ನನ್ನ ಕೆಲಸವನ್ನು ಚೊಕ್ಕಟವಾಗಿ ನಿರ್ವಹಿಸುವೆ."

"ಅದೇನು, ನಾನು ಕಲಿತುಕೊಳ್ಳಬಾರದೆಂದೇ ?"

ಒಡನೆ ಇಬ್ಬರ ಮುಖದಲ್ಲೂ ಮುಗುಳು ನಗು ಮೂಡಿತು.

ಮೇರಿ ಒಂದೆರಡು ನಿಮಿಷ ಸುಮ್ಮನಿದ್ದು ಅನಂತರ–"ನಾನೊಂದು ಮಾತು ಹೇಳಲೇ ?"

"ಏನು ಹೇಳು ?" ಅಮಾಯಕ ಪ್ರಶ್ನೆ ಭಾವಗಾಂಭೀರ್ಯದಿಂದ ಹೊರಬಿತ್ತು.

"ನೀನು ಕಾರ್ಯಕಾರಣಗಳನ್ನು ಅತಿಯಾಗಿ ಲಕ್ಷ್ಯಕ್ಕೆ ತೆಗೆದು ಕೊಳ್ಳುವುದರಿಂದ ಶರೀರಪ್ರಕೃತಿಯನ್ನು ನಿರ್ಲಕ್ಷಿಸಿ ಬಿಡುತ್ತಿ ; ಅದು ಸರಿಯಲ್ಲ. ಇನ್ನೂ ತಲೆಗೂದಲು ಬಾಚಲಿಲ್ಲ, ಬಟ್ಟೆಗಳನ್ನೂ ಬದಲಿಸಿಲ್ಲ..... ಯಾವ ಸೌಂದರ್ಯ ಸಾಧನವನ್ನೂ ಬಳಸಲಿಲ್ಲ. ಯಾವಾಗಲೂ ತೀರಾ ಸಾಧಾರಣ ಹುಡುಗಿಯರಂತೆ ಇರುತ್ತಿ."

"ಅಷ್ಟೆ ತಾನೇ ?.....ಅದೇನೂ ವಿಶೇಷವಲ್ಲ. ಅದು ಹೇಗಿದ್ದರೂ ನಡೆಯುತ್ತೆ."

"ಇಂದು ಭಾನುವಾರ.........ಇನ್ನು ಸ್ವಲ್ಪಹೊತ್ತಿನೊಳಗಾಗಿ ನಿನ್ನ ಗೆಳೆಯರು ಒಂದು ನೆರೆಯುತ್ತಾರೆ."

"ನಾನು ಯಾರಿಗೂ ಆಹ್ವಾನ ನೀಡಿಲ್ಲ."

"ನಿಜವಾಗಿ.....?"

"ಹೌದು.....ಖಂಡಿತ."

"ನೀನೇ ಎಲ್ಲಾದರೂ ಹೋಗುವುದುಂಟೇ ?"

"ಇಲ್ಲ....ದಿನವೂ ಬರೆಯುವುದು ಹೇಗಿದ್ದರೂ ಇದ್ದೇ ಇದೆ. ವಾರಕ್ಕೊಂದು ದಿನವಾದರೂ ತಣ್ಣಗಿರಕೂಡದೇ ?"

"ಅದು ಒಳ್ಳೆಯದೆ. ಸ್ವಂತ ವಿಚಾರಗಳಿಗೆ ಗಮನ ಕೊಡಲು ಸ್ವಲ್ಪ ಕಾಲಾವಕಾಶ ಸಿಗುತ್ತೆ."

ಆ ಮಾತಿಗೆ ಫ್ಲಾರೆನ್ಸ್ ಉತ್ತರಿಸಲಿಲ್ಲ. ಮುಖಮಂಡಲ ಕರ್ಪೂರ ಗುಟಿಕೆಯಂತೆ ಜ್ವಲಂತವಾಯಿತು.

"ಈವತ್ತು ಹೇಗೆ ಹೊತ್ತು ಕಳೆಯುತ್ತಿ ?"

"ಇನ್ನೂ ನಿರ್ಧರಿಸಲಿಲ್ಲ.......... ಏನೋ ಒಂದು ಬಗೆಯ ಬೇಸರ."

"ಅಂದರೆ.....ಮನೆಯಲ್ಲಿಯೇ ಇರುತ್ತೀಯಷ್ಟೆ ? ಎಲ್ಲಿಗೂ ಹೋಗುವುದಿಲ್ಲವಲ್ಲ ?"

"ಹೊರಹೋಗುವ ಯೋಚನೆಯಿಲ್ಲ."

"ಹಾಗಾದರೆ ಬೆಟ್ಟಿಗೆ ಹೇಳಿ ಕಳುಹಿಸುವೆ. ಚೆನ್ನಾಗಿ ಮೈ ಮಾಲೀಸ್

ಮಾಡಿಸಿಕೋ.....ನೀನು ಈಚೀಚೆಗೆ ಸೌಂದರ್ಯ ಸಾಧನದ ಕಡೆ ಅಷ್ಟಾಗಿ ಗಮನ ಹೊರಳಿಸುತ್ತಲೇ ಇಲ್ಲ."

"ತಾಯಿಯೂ ಹಾಗೇ ಅನ್ನುತ್ತಾರೆ.........ಸಿಂಗರದಲ್ಲಿ ಆಸಕ್ತಿಯೇ ಇಲ್ಲ."

"ಹಾಗೆಂದರೆ ಹೇಗೆ ? ಈ ಜೀವನಕ್ಕೆ ಎಲ್ಲಾ ಬಗೆಯ ವಿಧಿ ವಿಧಾನಗಳೂ ಬೇಕು ಮಗೂ !"

"ಈಗದರ ಚಿಂತೆಯೇ ಬೇಡ. ಅದಕ್ಕಿಂತಲೂ ತುರ್ತಾಗಿ ನಡೆಯಬೇಕಾದ ಕೆಲಸ–ಕಾರ್ಯಗಳನ್ನು ನೋಡಿಕೊಳ್ಳುವ."

ಅತ್ಯಂತ ಆಶ್ಚರ್ಯ ವಿಶೇಷದಿಂದ ಅವಳನ್ನೆ ಸಿಟ್ಟಿಸತೊಡಗಿದಳು ಮೇರಿ.

"ಏಕೆ ಮೇರಿ ? ಅಂತಹ ವಿಶೇಷವೇನು ?"

"ನಿನ್ನಲ್ಲಿರಬೇಕಾದ ಬಾಲಸಹಜವಾದ ಹಾಸ್ಯಭರಿತ ಮುಖಭಾವ ಈಗೀಗ ಸಂಪೂರ್ಣ ಬದಲಿಸಿ ಹೋಗುತ್ತಿದೆ. ಈಗಲೇ ಹೀಗಾದರೆ ಮುಂದೇನು ಗತಿ ? ನಿನ್ನ ಮನಃಪ್ರಾಣಗಳು ಏತರಿಂದ ನಿರ್ಮಿತವಾಗಿವೆ ಎಂಬುದೇ ಅರ್ಥವಾಗುತ್ತಿಲ್ಲ."

"ಇದನ್ನು ನೋಡಿದರೆ ನಿನಗೆ ಎಲ್ಲವೂ ಅರ್ಥವಾಗುತ್ತೆ." ಎನ್ನುತ್ತ ಪತ್ರಿಕೆಯೊಂದನ್ನು ಅವಳ ಕಡೆಗೆ ನೀಡಿದಳು.

"ಇದೇನಿದ್ದರೂ ಪ್ರಾಪಂಚಿಕವಾಯಿತು, ನಾನು ಹೇಳುತ್ತಿರುವುದು ನಿನ್ನ ಸ್ವಂತ ವಿಚಾರ."

"ಬಿಡು ; ನಿನಗಿನ್ನೂ ಅರ್ಥವಾಗಲಿಲ್ಲ."

ಫ್ಲಾರೆನ್ಸ್ ನೈಟಿಂಗೇಲ್ ಎದ್ದು ನಿಂತಳು. ವಿಶಾಲವಾದ ಗವಾಕ್ಷಿಯಲ್ಲಿ ಮೈದೋರುತ್ತಿದ್ದ ಸುಂದರ ಉದ್ಯಾನ ಬಾಬಾರೆಂದು ಕರೆಯುವಂತೆ ತಲೆ ದೂಗುತಿತ್ತು. ಒಂದೆರಡು ಘಳಿಗೆ ಹಾಗೇ ನಿಂತು ನೋಡಿ ಹಿತ್ತಿಲ ಬಾಗಿಲಿಂದಲೇ ಹೊರಹೋದಳು. ಬೆಳಗಿನ ಬೆಚ್ಚಗಿನ ಬಿಸಿಲಿಗೆ ಮೈಗೊಟ್ಟು ಅಲ್ಲಿ ಅಡ್ಡಾಡುತ್ತಿರುವಾಗ ಜಗತ್ತನ್ನೇ ಮರೆಯುವಷ್ಟು ಉಲ್ಲಾಸ ಉತ್ಸಾಹಗಳು ಮೈದುಂಬಿಕೊಂಡುವು. ಹೊತ್ತು ಉರುಳಿದುದರ ಪರಿವೆ ಇರಲಿಲ್ಲ ಮನೋರಾಜ್ಯಕ್ಕೆ.

ಟಕ. ಟಕ. ಟಕ. ಟಕ. ಟಕ. ಟಕ.

ಹೆಜ್ಜೆಗಳ ಸಪ್ಪಳ ಸನಿಹದಲ್ಲಿ ಕೇಳಿ ಬರುತ್ತಲೂ ಗಮನ ಅತ್ತ ಹರಿಯಿತು. ಬಂದವನು ಡ್ರೆಸ್ಸಿಂಗ್ ಬಾಯ್ ಟೆಡ್ಡಿ, ಕೈಗಳಲ್ಲಿ ಸುಂದರವಾದ ಬೆಳ್ಳಿಯ ಹರಿವಾಣವನ್ನು ವಿನಯವಂತಿಕೆಯಿಂದ ಹಿಡಿದಿದ್ದ. ಅದರಲ್ಲಿ ಒಂದು ಹಸುರು ಬಣ್ಣದ ಸಣ್ಣ ಚೀಟಿ ; ಅದರ ಅಂಚನ್ನು ಉಂಗುರುಂಗುರವಾಗಿ ಕೊರೆದಿದ್ದು ಮೂಲೆಯಲ್ಲಿ ಕೆಂಪು ಹೂಗೊಂಚಲಿನ ಅಚ್ಚು ಮೂಡಿತ್ತು. ಅಲ್ಲಿಯ ದಿನನಿತ್ಯದ ವ್ಯವಹಾರಗಳಿಗಾಗಿ ಮುದ್ರಿತ ವಿಶೇಷ ಅದು. ಒಂದು ಕಡೆಯಿಂದ ಒಂದು ಕಡೆಗೆ ಕಳುಹಿಸುವ ಸುದ್ದಿ ಅದರಲ್ಲಿ ಮೂಡುತ್ತದೆ. ಟೆಡ್ಡಿ ಮುಂದೆ ಹಿಡಿದಾಗ ವ್ಯೈಬಾಗಿ ಅದರ ಕಡೆಗೆ ದೃಷ್ಟಿ ಹಾಯಿಸಿದಳು. ಹಸುರು ಚೀಟಿಯಮೇಲೆ ಹರಿದ ನೀಲಿಯ ಒರತೆ ತಾಯಿಯ ಹಸ್ತಾಕ್ಷರ. ತನ್ನ ಕಡೆಗೆ ಬರಲು ನಿರೂಪ ಕಳುಹಿಸಿದ್ದಾಳೆ. ಕೆಳಗಡೆ 'Blue Room' ಎಂಬ ಸೂಚನೆಯೂ ಇತ್ತು.

"ಈಗಲೇ ಬರುವೆ, ಹೋಗು." ಎಂದ ಅವಳು ಅದರ ಮೇಲೆ ಸಹಿ ಹಾಕಿದಳು.

ಅವನು ಬಂದ ಹಾದಿಯಲ್ಲಿಯೇ ಹಿಂದಿರುಗಿ ಹೋದ.

ಫ್ಲಾರೆನ್ಸ್ ನೈಟಿಂಗೇಲ್ ಅಭಿರಾಮಭಂಗಿಯಲ್ಲಿ ಹೊರಟಳು. ಉದ್ದನೆಯ ಹೊಂಗೂದಲು ಎದೆಯಮೇಲೆ ಎರಡೂ ಕಡೆ ಸ್ವತಂತ್ರವಾಗಿ ಹರಿದಾಡುತಿತ್ತು. ಹೆಜ್ಜೆಗಳ ತಾಡನದಿಂದ ಲಂಗದ ನಿರಿಗಳು ಸುತ್ತ ವರ್ತುಲಾಕಾರವಾಗಿ ಚಿಮ್ಮುತಿದ್ದುವು. ಕಿರುಬೆರಳ ತುದಿಗೆ ಕೂದಲೆಳೆಯನು ಬಾಲಿಷವಾಗಿ ಸುತ್ತುತ್ತ ಉದ್ಯಾನ ದಾಟಿದಳು. ಆ ಬೃಹತ್ ಮಹಲಿನ ವಿನ್ಯಾಸ ಮತ್ತು ವೈಭವ ಜೀವನಸಾರ್ಥಕತೆಗಾಗಿ ಒಡೆದು ಮೂಡಿವೆ. ಸ್ವರ್ಗತುಲ್ಯ ಆಮೋದ ಪ್ರಮೋದಗಳು ಅಲ್ಲಿ ನಡೆಯುತ್ತವೆ-ಹೃತ್ಸಾಗರ ಉಕ್ಕೇರುವಂತೆ.

ಬ್ಲೂರೂಂ ಇರುವುದು ಮಹಲಿನ ಉತ್ತಮಾಂಗದ ಹೃದಯದಲ್ಲಿ. ಅದರ ನೇರಕ್ಕೆ ಹೊರಟರೂ ಹೊರಾಂಗಣವನ್ನು ದಾಟುವುದರೊಳಗಾಗಿ ಎಲಿಜ ಪಾರಿವಾಳಗಳಿಗೆ ಗೋದಿಕಾಳನ್ನು ಎರಚುತಿದ್ದುದನ್ನು ಕಂಡು ಅಲ್ಲಿಗೆ ಹೋದರೆ ಪಕ್ಷಿಗಳ ಸಂಘಸೌಂದರ್ಯ ಮನವನ್ನು ಸೂಜಿಗಲ್ಲಿನಂತೆ ಸೆಳೆದು

ಕೊಂಡಿತು. ತಾಯಿಯ ಕರೆಯನ್ನು ಸ್ವಲ್ಪಹೊತ್ತು ಬದಿಗೊತ್ತಿ ಬೊಗಸೆ ಯಲ್ಲಿ ಕಾಳನ್ನು ತುಂಬಿಕೊಂಡು ಅತ್ಯಾನಂದದಿಂದ ಕರೆದಳು.

"come pali ! come, come !"

ಓ ! ಒಂದೇ ? ಹತ್ತೇ ?

ಒಮ್ಮೆಗೇ ನೂರಾರು ಪಾರಿವಾಳಗಳು ಬಂದು ಮುಖ ಮೈಯೆನ್ನದೆ ಸುತ್ತಮುತ್ತಲೂ ಮುತ್ತಿದುವು. ಅವುಗಳ ಕೂಜನ ರೆಕ್ಕೆಗಳ ಬಡಿತ ಕಿವಿ ಗಿಂಪಾಗಿತ್ತು. ಆನಂದಾತಿರೇಕದಿಂದ ಸ್ವಲ್ಪಹೊತ್ತು ಕಳೆದು ಬ್ಲೂ ರೂಮಿಗೆ ಹೋಗಿ ನೋಡಿದರೆ ತಾಯಿ ಇರಲಿಲ್ಲ. ಅಲ್ಲಿಂದ ದಿವಾನಖಾನೆ ಚಿತ್ರಶಾಲೆ ಹೀಗೆ ಒಂದೊಂದು ಕೊಠಡಿಯಲ್ಲಿ ಹಣಿಕಿದರೂ ಅವಳ ಸುಳಿವಿಲ್ಲ ಅನಂತರ ಟೆಡ್ಡಿಯನ್ನು ಕರೆದು ಕೇಳಿದಳು.

"ಎಲ್ಲಪ್ಪಾ, ಅಮ್ಮ ಕಾಣಿಸುತ್ತಲೇ ಇಲ್ಲ ?"

"ಬಹುಶಃ ಈಗ ವರಾಂಡಕ್ಕೆ ಹೋಗಿರಬಹುದೇನೋ ನೋಡುವೆ." ಎನ್ನುತ್ತ ಅಲ್ಲಿಂದ ಓಡಿದ ಟೆಡ್ಡಿ.

ಅವಳು ಮೇಜಿನಮೇಲಿದ್ದ ಪುಸ್ತಕವೊಂದನ್ನು ತೆಗೆದುಕೊಂಡು ಅಲ್ಲಿಗೇ ಹೋದಳು. ಅಷ್ಟರೊಳಗಾಗಿ ಟೆಡ್ಡಿಯು ಸುದ್ದಿಯನ್ನು ದೊರೆ ಸಾನಿಗೆ ತುರ್ತು ವರದಿ ಮಾಡಿದ್ದ. ಅಲ್ಲಿ-ಆ ಉದ್ದನೆಯ ವರಾಂಡದಲ್ಲಿ ಅಲ್ಲಿಂದಿಲ್ಲಿಗೆ ವಿಚರಿಸುತಿದ್ದ ಶ್ರೀಮತಿ ನೈಟಿಂಗೇಲ್ ತಲೆಬಾಗಿಲಿನಲ್ಲಿ ಮಗಳು ಹಣಿಕಿದಾಗಲೇ 'ಓಹ್ !' ಎಂದು ಉದ್ಗಾರ ತೆಗೆದಳು. ತುಟಿಗಳಲ್ಲಿ ಮಂದ ಹಾಸವನ್ನು ಸೂಸಿ.

ಹುಡುಗಿ ನಸು ನಗುತ್ತ ಕೇಳಿದಳು "ಏನಮ್ಮಾ, ವಿಶೇಷ ?"

"ಅದನ್ನು ನಾನೇ ಕೇಳಬೇಕೆಂದಿದ್ದೆ. ನೀನು ಕಣ್ಣಿಗೆ ಬೀಳುತ್ತಲೇ ಇಲ್ಲ ?"

"ಒಳಗಡೆ ಇದ್ದೆ. ಓ ಹೊತ್ತಿಗೇನು, ಹೇಗಾದರೂಕಳೆದ ು ಹೋಗುತ್ತೆ."

"ಈ ಸಾಲಿನಲ್ಲಿ ನೀನು ಸ್ಟಾಫರ್ಡ್ ವೈನರ್ ಸ್ಕೂಲಿಗೆ ಸೇರುವುದು ಒಳ್ಳಿತು. ಅದು ಸ್ವಲ್ಪ ದೂರವಾದರೂ ತುಂಬ ಒಳ್ಳೆಯ ಗುಣ ಮಟ್ಟ ವನ್ನು ಹೊಂದಿದೆ."

"ಅದೇಕೆ, ಈಗ ಬದಲಾವಣೆ ? ನನಗಿಲ್ಲಿ ಅಭ್ಯಾಸವಾಗಿದೆ. ಇನ್ನು ಬದಲಿಸುವ ತೊಂದರೆ ತೆಗೆದುಕೊಳ್ಳುವುದು ಬೇಡ."

"ಕೇಳು ಮಗೂ, ಇಲ್ಲಿ ಬರೀ ಆಳುಕಾಳುಗಳ ಮಕ್ಕಳು. ಅಂದ ಮೇಲೆ ಬಡಶಾಲೆ, ಮಟ್ಟವೂ ಕಡಿಮೆ."

"ಆದರೂ ಪರವಾಗಿಲ್ಲ. ಮಟ್ಟ ಕಡಿಮೆಯೆಂದರೆ ನಾನು ಪ್ಪಲಾರೆ. ಎಲ್ಲಾ ಒಳ್ಳೊಳ್ಳೆ ಉಪಾಧ್ಯಾಯರುಗಳು.... ನನಗೆ ಇದುವರೆಗೆ ಯಾವ ಕೊರತೆಯೂ ಇಲ್ಲಿ ಉಂಟಾಗಿಲ್ಲ."

"ಖಂಡಿತ ಆ ಶಾಲೆ ಇದಕ್ಕಿಂತ ತುಂಬ ಚೆನ್ನಾಗಿದೆ. ಕೆಲವೇ ದಿನಗಳಲ್ಲಿ ನೀನು ಹೊಂದಿಕೊಳ್ಳುತ್ತಿ. ಉತ್ತಮ ಗೆಳೆತನವನ್ನೂ ಬೆಳೆಸಿಕೊಳ್ಳಬಹುದು; ಆ ಬಗ್ಗೆ ಶಂಕೆಯೇ ಬೇಡ."

"ಅದೇನೇ ಇದ್ದರೂ, ಈಗ ಬದಲಿಸುವ ಯೋಚನೆಯೇ ಬೇಡ. ಈ ಶಾಲೆಯ ಸಂಬಂಧವನ್ನು ನಾನು ಕಡಿದುಕೊಳ್ಳಲಾರೆ."

ಯಜಮಾನಿ ಮಗಳ ದೃಢವಾದ ನಿಲುವನ್ನು ನೋಡಿ ನಸು ಚಿಂತಿತಳಾದಳು. ಶ್ರೀಮಂತ ವೈಭವದಲ್ಲಿ ಸ್ಥಾಪಿತವಾದ ಸ್ಟಾಫರ್ಡ್ ವೈನರ್ ಸ್ಕೂಲಿಗೆ ಮಗಳನ್ನು ಸೇರಿಸಲು ಅತುಲನೀಯ ಆಸ್ಥೆ. ಆಗಲೇ ಅದಕ್ಕಾಗಿ ಆ ಶಾಲೆಯನ್ನು ಸಂದರ್ಶಿಸಿ ವ್ಯವಸ್ಥಾಪಕರೊಂದಿಗೆ ವ್ಯವಹರಿಸಿಯೂ ಬಂದಿದ್ದಾಳೆ. ಮಗಳ ಪ್ರವೃದ್ಧಮಾನಕ್ಕೆ ಅದು ತುಂಬ ಸಹಾಯಕ ಎಂಬ ಮಹದಾಸೆ ಮನದಲ್ಲಿ. ಮೇಲಾಗಿ, ಶ್ರೀಮಂತ ಸಮಾಜದ ಹೊಂದಿಕೆಯೊಂದಿಗೆ ಈ ಬಡಸಮಾಜದ ಸಂಬಂಧ ಕಡಿಯಲೂ ಬಹುದು ಎಂಬಂತಹ ಭಾವಾನುಭಾವಗಳ ಸಂಗೋಪನೆ.

"ಫ್ಲಾರೆನ್ಸ್ ನೈಟಿಂಗೇಲ್ ತಾಯಿಯಕಡೆ ಹುಬ್ಬೆತ್ತಿ ನೋಡಿ ಅವಳ ಆಳವಾದ ಚಿಂತೆಯನ್ನು ಗ್ರಹಿಸಿ ನುಡಿದಳು,

"ನಮ್ಮ ಸ್ಕೂಲು ಸಾರ್ವಜನಿಕವಾದುದರಿಂದ ನಾವು ಎಲ್ಲರ ಕಷ್ಟ ಸುಖಗಳನ್ನು ಅರಿತುಕೊಳ್ಳಬಹುದು. ಬಡಮಕ್ಕಳೊಂದಿಗೆ ಬೆರೆತು ಅವರ ಸ್ಥಿತಿಗತಿಯನ್ನು ತಿಳಿಯಬಹುದು. ಪ್ರೈವೇಟ್ ಸ್ಕೂಲಿನಲ್ಲಿದ್ದರೆ ಏನು ಕಲಿತಹಾಗಾಯಿತು ?"

"ನೀನು ಗರೀಬರನ್ನು ನೋಡಿ ಕಲಿಯುವುದಾದರೂ ಏನು ? ಅವ

ರನ್ನು ನೋಡಿ ಮರುಗುವುದಷ್ಟೆ, ಅದಕ್ಕೆ ಈ ಶಾಲೆಗೆ ಹೋಗಬೇಕೆ? ಮುಖ್ಯವಾಗಿ ನೀನು ನಿನ್ನ ವಿದ್ಯೆ–ಉತ್ತಮ ಭವಿಷ್ಯ ಇವುಗಳನ್ನು ನೋಡಿ ಕೊಳ್ಳಬೇಕು. ”

“ನಿಮ್ಮ ಆಶೆ ಅಭಿಲಾಷೆಗಳೆಲ್ಲಾ ಏಕತ್ರವಾಗಿವೆ. ಅದನ್ನು ಪಡೆ ಯುವುದಕ್ಕೆ ವಿಶೇಷವಾಗಿ ಶ್ರಮಿಸಬೇಕಾಗಿಲ್ಲ. ಈ ಶಾಲೆಯಾದರೂ ಸರಿ; ಆ ಶಾಲೆಯಾದರೂ ಸರಿ ; ಎಲ್ಲಾದರೂ ಸುಲಭವಾಗಿ ಪಡೆದುಕೊಳ್ಳ ಬಹುದು.”

ಅಲ್ಲಿಗೆ ಆ ಸಂಭಾಷಣೆ ಕೊನೆಗೊಂಡಿತಾದರೂ ಶ್ರೀಮಂತಿನಿಗೆ ಸಮಾ ಧಾನ ಮೂಡಲಿಲ್ಲ.

ಬಲಭಾಗದ ವರಾಂಡದಲ್ಲಿ ಕಲೆತಿದ್ದ ನಾಲ್ಕುರು ನಾಯಿಗಳು ಕಿರಿಯ ಯಜಮಾನಿಯ ದನಿಯನ್ನು ಕೇಳಿ ಮೈಯೆಲ್ಲಾ ಸಂತಸದ ಬೀಡಾಗಿ ಓಡಿ ಬಂದು ಮೈಮೇಲೆ ಜಿಗಿದು ಅಲ್ಲಲ್ಲೆ ಉರಳಾಡಿ ಅತ್ಯಂತ ಆತ್ಮೀಯತೆಯನ್ನು ಪ್ರಕಟಿಸಿದುವು. ಅವಳು ಅಲ್ಲೇ ಮಂಡಿಯೂರಿ ಕುಳಿತು ಅವುಗಳನ್ನು ಸಾನಂದದಿಂದ ಮುದ್ದಿಸತೊಡಗಿದಳು.

* * * *

ಫ್ಲಾರೆನ್ಸ್ ನೈಟಿಂಗೇಲ್ ಗೆಳತಿಯರೊಂದಿಗೆ ಶಾಲೆಯಿಂದ ಮನೆಯ ಹಾದಿ ಹಿಡಿದಿದ್ದಾಳೆ. ಸುತ್ತಮುತ್ತಿನ ಸಾನುಪ್ರದೇಶವೆಲ್ಲಾ ಶ್ರೀಮಂತರ ಪ್ರತಿಷ್ಠಿತ ತಾಣ. ಜೊತೆಗಾತಿಯನೇಕರು ಅಲ್ಲಲ್ಲಿ ಕವಲು ಹಾದಿ ಹಿಡಿದು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಉಳಿದ ಕೆಲವರು ಇನ್ನೂ ಮುಂದೆ ನಡೆಯತಕ್ಕವರು. ಅವರಲ್ಲಿ ಅರ್ಧಭಾಗಕ್ಕಿಂತಲೂ ಹೆಚ್ಚಾಗಿ ಫಾರಂ ಕೆಲಸಗಾರರ ಮಕ್ಕಳು. ಆ ಅಸಮಾನದಿಂದಲೇ ತಾಯಿ ಶಾಲೆಯನ್ನು ಬದಲಿಸಲು ಬಯಸಿದ್ದು. ಫ್ಲಾರೆನ್ಸ್ ನೈಟಿಂಗೇಲ್ ಉಳಿದ ಕೆಲವರನ್ನು ಬೀಳ್ಕೊಟ್ಟು ತನ್ನ ಮನೆಯ ಪ್ರಾಕಾರಕ್ಕೆ ಪದಾರ್ಪಣೆ ಮಾಡಿದಾಗ ಬಾಗಿಲ ಬಳಿ ಅವಳ ನಿರೀಕ್ಷೆಯಲ್ಲಿದ್ದ ಟೆಡ್ಡಿ ಪುಸ್ತಕಗಳನ್ನು ಈಸಿಕೊಂಡ. ಆ ಬೃಹದ್ ಆವರಣದ ಮಧ್ಯೆ ಪ್ರತಿಷ್ಠಿತವಾದ ಮಹಲನ್ನು ಮುಟ್ಟಬೇಕಾ ದರೆ ಇನ್ನೂ ನೂರಾರು ಮಾರು ನಡೆಯಬೇಕು. ಮೈಕೇಲ್ ಈ ವೊದ ಲೆಲ್ಲಾ ಶಾಲೆಗೆ ಕುದುರೆಯನ್ನು ತರುತಿದ್ದ. ಈಚೆಗೆ ಅವಳೇ ಅದನ್ನು

ನಿವಾರಿಸಿದ್ದಳು. ಕಾರಣ, ಬೆಳಗಿನ ಹೊತ್ತು ಶಾಲೆಯ ಸಮಯಕ್ಕೆ ಸರಿಯಾಗಿ ಸೇರಲು ಕುದುರೆಯ ಪಯಣ ಅನಿವಾರ್ಯ. ಆದರೆ, ಮಧ್ಯಾಹ್ನ ಅಂತಹ ಅವಸರದ ಪ್ರಸಂಗ ಇರುವುದಿಲ್ಲ. ಗೆಳತಿಯರೊಡನೆ ಮಾತುಕತೆಯಾಡುತ್ತ ಕಾಲ್ನಡಿಗೆಯಲ್ಲಿ ಹಾದಿಯನ್ನು ಕ್ರಮಿಸುವುದರಲ್ಲಿ ಎಲ್ಲಿಲ್ಲದ ಹಿತ; ವಿಶೇಷ ರೀತಿಯ ಆಸ್ಥೆ.

ಪ್ರಾಕಾರದ ಬಾಗಿಲನ್ನು ದಾಟಿ ಒಳಾಂಗಣಕ್ಕೆ ಹೆಜ್ಜೆಯಿಟ್ಟಾಗ ದಿಟ್ಟಿಗೆ ಬಿದ್ದ ಅಪೂರ್ವ ದೃಶ್ಯದಿಂದ ತುಸು ಅಚ್ಚರಿ ಮೂಡಿತು. ತಮ್ಮ ವಲಯದಲ್ಲಿ ನೂರಾರು ಅಪರಿಚಿತ ಕುರಿಗಳು ಮೇಯುತ್ತಿವೆ. ಯಜಮಾನಿಯ ಅಪ್ಪಣೆಯಿಲ್ಲದೆ ಅಲ್ಲಿ ಯಾವ ಪ್ರಾಣಿಯೂ ತಲೆ ಹಾಕುವಂತಿಲ್ಲ. ಅವಳು ಅಷ್ಟಕ್ಕೆ ಅವಕಾಶ ಕೊಡುವುದೂ ಇಲ್ಲ. ಆದ್ದರಿಂದ, ಅವು ಯಾರವೆಂಬುದನ್ನು ಅರಿಯುವ ಕುತೂಹಲದಿಂದ ಟೆಡ್ಡಿಗಾಗಿ ಅಲ್ಲೆಲ್ಲಾ ದೃಷ್ಟಿ ಹೊರಳಿಸಿದರೆ ಅವನು ಪತ್ತೆಯೇ ಇಲ್ಲ. ಆಗಲೇ ಪುಸ್ತಕಗಳ ಸಹಿತ ಓಡಿಬಿಟ್ಟಿದ್ದಾನೆ. ಹಾಗೇ ಸ್ವಲ್ಪ ಹೊತ್ತು ಸಖೇದಾಶ್ಚರ್ಯದಿಂದ ಅವುಗಳನ್ನೇ ನೋಡುತ್ತಿರುವಾಗ ಗಿಡಗಳ ಮರೆಯಿಂದ ಇತ್ತಲೇ ಬರುತಿದ್ದ ಅಪರಿಚಿತ ವ್ಯಕ್ತಿ ದೃಷ್ಟಿಗೆ ಬಿದ್ದ. ಅವನು ಸಮೀಪಿಸುತ್ತಲೂ ಅಭಿವಾದನೆ ಸಲ್ಲಿಸಿದ,

"ಗುಡ್ ಈವಿನಿಂಗ್ ಮಿಸ್!"

ಅವನಿಗೆ ಪ್ರತಿವಂದನೆ ಸಲ್ಲಿಸಿದನಂತರ ಪ್ರಶ್ನಿಸಿದಳು ಅವಳು,

"ಈ ಕುರಿಗಳು ಯಾರವು?"

"ನನ್ನವೇ!"

"ನೀನು ಯಾರು? ನಿನ್ನವೇಕೆ ಇಲ್ಲಿ ಮೇಯುತ್ತಿವೆ?"

"ನಾನು ಜಾರ್ಜ ರಿಚರ್ಡ್. ನಾನೊಬ್ಬ ಗರೀಬ. ನನಗೆ ಕುರಿಗಳನ್ನು ಮೇಯಿಸಿಕೊಳ್ಳುವಂತಹ ಸ್ವಂತ ಭೂಮಿ ಇಲ್ಲ. ಇದುವರೆಗೂ ಗುಡ್ಡಗಾಡುಗಳ ಕಡೆ ಹೊಡೆಯುತಿದ್ದೆ. ನನ್ನ ನಾಯಿ ಅಕಸ್ಮಾತ್ತಾಗಿ ಕಾಲು ಮುರಿದುಕೊಂಡಿರುವುದರಿಂದ ದೂರ ಹೋಗುವಂತಿಲ್ಲ ಅದಕ್ಕಾಗಿ........" ಮಾತನ್ನು ಅಷ್ಟಕ್ಕೇ ತುಂಡುಗಡಿದು ಸುಮ್ಮನಾದ.

ಹುಡುಗಿ ದೃಷ್ಟಿಯನ್ನು ಕುರಿಗಳ ಮೇಲೆ ಹೊರಳಿಸಿದಳು. ತುಟಿಗಳು ಬಿರಿಯಲಿಲ್ಲ.

"ಸುತ್ತಮುತ್ತ ಕಿರುಬಗಳ ಕಾಟ ತುಂಬ ಇದೆ. ನಾಯಿ ಇಲ್ಲದೆ. ಗುಡ್ಡಗಾಡುಗಳಲ್ಲಿ ಮೇಯಿಸುವಂತಿಲ್ಲ."

ಆಗ ಫ್ಲಾರೆನ್ಸ್ ನೈಟಿಂಗೇಲ್ ಆಶ್ಚರ್ಯತೃಷಿತ ಲೋಚನಗಳಿಂದ ನೋಡುತ್ತ ಕೇಳಿದಳು,

"ನೀನು ಸ್ವಾಮಿನಿಯ ಅಪ್ಪಣೆಯನ್ನು ಪಡೆದು ಕೊಂಡಿರುವೆಯಷ್ಟೆ ?"

"ಹೌದು. ಬಹಳವಾಗಿ ಕೇಳಿಕೊಂಡಮೇಲೆ ಅಪ್ಪಣೆ ದೊರೆಯಿತು. ಯಜಮಾನಿ ದಯಾವಂತಳು !"

ಫ್ಲಾರೆನ್ಸ್ ನೈಟಿಂಗೇಲ್ ಮಾತಾಡದೆ ಮುಗುಳು ನಕ್ಕಳು.

ಅವನು ದೈನ್ಯಯುಕ್ತವಾಣಿಯಲ್ಲಿ ಮುಂದುವರಿದ "ನಾನು ಹೊಸ ನಾಯಿ ತರುವವರೆಗೆ ಇಲ್ಲಿ ಮೇಯಿಸಿಕೊಳ್ಳಲು ಅಪ್ಪಣೆ ಕೊಡಬೇಕೆಂದು ಬೇಡಿಕೊಂಡೆ. ಅಷ್ಟು ಮಾತ್ರ ದಯಪಾಲಿಸಿದ್ದಾಳೆ ತುಂಬ ಉಪಕಾರವಾಯ್ತು."

"ಆಗಲಿ, ಮೇಯಿಸಿಕೊ."

ಅಷ್ಟರಲ್ಲಿ ಅವನ ನಾಯಿ ಕುಂಟುತ್ತ ಒಡೆಯನ ಸಮೀಪಕ್ಕೆ ಬಂತು. ಆಗ ಅವನು ತನ್ನ ನಾಯಿಯ ಕಡೆಗೆ ಬೊಟ್ಟು ಮಾಡಿ ವಿಷಾದಯುಕ್ತ ವಾಣಿಯಲ್ಲಿ ನುಡಿದ "ನನ್ನ ನಾಯಿ ಕುರಿಮಂದೆಯ ಕಾವಲನ್ನು ತುಂಬ ಶ್ರದ್ಧೆಯಿಂದ ಕಾಯುತಿತ್ತು. ಈಗ ನನಗೆ ಬಹಳ ತೊಂದರೆಯಾಗಿದೆ."

ಅವಳ ದೃಷ್ಟಿ ಅತ್ತ ಹರಿಯಿತು. ಅದು ನಾಲಿಗೆಯನ್ನು ಉದ್ದಕ್ಕೆ ಚಾಚಿ, ಮುರಿದ ಕಾಲನ್ನು ಎತ್ತಿ ಹಿಡಿದುಕೊಂಡು ಮೂಗಾಲಲ್ಲಿ ನಿಂತಿತ್ತು. ಸಮಯೋಚಿತ ಚಿಕಿತ್ಸೆಯನ್ನು ಕಾಣದ ಆ ನಾಯಿಯ ಕರುಣಾಜನಕ ದೃಶ್ಯ ಮನವನ್ನು ಮಂಜಿನಂತೆ ಕರಗಿಸಿತು. ಒಡನೆ ಕೊರಳೆತ್ತಿ ನೋಡುತ್ತ ಕಾತರ ಕಂಠದಿಂದ ಪ್ರಶ್ನಿಸಿದಳು,

"ಅದಕ್ಕೇಕೆ ಮದ್ದು ಕಟ್ಟಲಿಲ್ಲ.....?"

"ಎರಡು ಬಾರಿ ಕಟ್ಟಿದ್ದಾಯ್ತು ; ಅದು ಇಟ್ಟುಕೊಳ್ಳುವುದೇ ಇಲ್ಲ. ಸಲಸಲಕ್ಕೂ ಕಿತ್ತು ಹಾಕುತ್ತೆ."

"ಅದನ್ನಷ್ಟು ಬಿಚ್ಚಿಕೊಳ್ಳದಂತೆ ನೋಡಿಕೊಳ್ಳಬಾರದೇ"

"ಬಹಳ ಕಷ್ಟ ಮಿಸ್! ನಾನು ಕುರಿಗಳೊಂದಿಗೆ ಹೊರ ಹೋಗುವವ."

"ಇದ್ದ ನಾಯಿಗೆ ಸರಿಯಾದ ಶುಶ್ರೂಷೆ ಮಾಡದೆ ಹೊಸನಾಯಿ ತರುವ ಉದ್ದೇಶ ಬಹಳ ಕ್ರೂರವಾದುದು!"

"ಏನು ಮಾಡಲಿ? ನನಗೆ ಬಿಡುವಿಲ್ಲ. ಅದು ಮನೆಯಲ್ಲಿರದೆ ಹೀಗೆ ಹಿಂದೆಯೇ ಓಡಿ ಬಂದು ಬಿಡುತ್ತೆ."

ಸ್ವಲ್ಪಹೊತ್ತು ಹಾಗೇ ಯೋಚಿಸಿದಳು ಫ್ಲಾರೆನ್ಸ್ ನೈಟಿಂಗೇಲ್. ಹೇಗಾದರೂ ಅದನ್ನು ಗುಣಪಡಿಸಬೇಕೆಂಬ ಅದಮನೀಯ ಆಸೆ ಮನದಾಳದಲ್ಲಿ ಉದಿಸಿತು.

"ಹೋಗಲಿ, ಆಸ್ಪತ್ರೆಗೇಕೆ ಒಯ್ಯಬಾರದು?"

"ಶಹರಕ್ಕೆ ಹೋಗುವುದೆಂದರೆ ಗಾಡಿ ಬಾಡಿಗೆಗೆ ಹಿಡಿಯಬೇಕು. ಒಂದಿನ ಕುರಿಗಳ ವ್ಯವಸ್ಥೆಗೆ ತೊಂದರೆಯಾಗುತ್ತೆ."

ಆ ಮಾತು ಎದೆಯಾಳದಲ್ಲಿ ಕೈಯಾಡಿಸಿ ಕರುಣೆಯ ತಂತಿಗಳನ್ನು ವಿಧಿವತ್ತಾಗಿ ಮಿಡಿಸಿತು. ಫ್ಲಾರೆನ್ಸ್ ನೈಟಿಂಗೇಲ್ ನಾಯಿಯೆಡೆಗೆ ದೃಷ್ಟಿಯನ್ನು ಹೊರಳಿಸಿ ಕೇಳಿದಳು,

"ಕಾಲು ಮುರಿದು ಎಷ್ಟು ದಿನಗಳಾದುವು?"

"ನಾಲ್ಕು ದಿನ ಆಯಿತು. ನಿನ್ನೆ ಮೊನ್ನೆ ಗುಡ್ಡಗಾಡಿಗೆ ಕುರಿಗಳನ್ನು ಬಿಟ್ಟಿದ್ದೆ. ಈ ನಾಯಿಯೂ ಬಂದಿತ್ತು. ಆದರಿಂದ ರಕ್ಷಣೆ ಸಾಧ್ಯವಾಗಲಿಲ್ಲ."

"ಅದರ ಹೆಸರೇನು?"

"ಸ್ಪಾಟ."

"ಓ.....! ಅದಕ್ಕೆ ಹೊಂದುವಂತಹ ಹೆಸರೇ" ಎಂದಳು ಮುಗುಳು ನಗೆಯೊಡನೆ.

"ಹೌದು....." ಕುರುಬ ತಲೆಯಾಡಿಸಿದ.

"ವಯಸ್ಸೆಷ್ಟು?"

ಒಂದೆರಡು ಕ್ಷಣ ಯೋಚಿಸಿ ಉತ್ತರಿಸಿದ ಕುರುಬ,

"ಇನ್ನೂ ಎರಡು ವರ್ಷ ತುಂಬಲಿಲ್ಲ."

"ನೀನು ಹೋಗುವಾಗ ಅದನ್ನು ನಮ್ಮ ಮನೆಯಲ್ಲಿ ಬಿಟ್ಟುಹೋಗು. ನಾನು ಗುಣಪಡಿಸಲು ಪ್ರಯತ್ನಿಸುವೆ."

"ನಿಮ್ಮಲ್ಲಿ ಇತರೆ ನಾಯಿಗಳಿವೆ.....ಅವು ಗದ್ದಲವೆಬ್ಬಿಸಬಹುದು."

"ಪರವಾಯಿಲ್ಲ, ಚಿಂತೆಬೇಡ. ನಮ್ಮಲ್ಲಿ ಒಂದು 'ಸಿಕ್ ರೂಮ್' ಇದೆ. ಅದರಲ್ಲಿಟ್ಟು ನೋಡಿಕೊಳ್ಳುವೆ."

ಕಂಠದಲ್ಲಿ ಸಮಾಧಾನ–ಅನುಕಂಪಗಳಿಂದ ಕೂಡಿದ ಪ್ರೇಮಸ್ವನ ಹರಿದು ಬಂತು.

"ಆಗಲಿ ಮಿಸ್, ಕುರಿಗಳನ್ನೆಲ್ಲ ರೊಪ್ಪಕ್ಕೆ ಅಟ್ಟಿದಮೇಲೆ ನಾಯಿಯನ್ನು ತಂದು ಬಿಡುವೆ. ನೀನು ಅಷ್ಟು ಕರುಣೆದೋರಿದ್ದು ನನ್ನ ಪುಣ್ಯ. ತುಂಬ ವಂದನೆಗಳು !"

"ಬಾ ಸ್ಪಾಟ! ನಾನೂ ನೀನೂ ಸ್ನೇಹಿತರಾಗಿರೋಣ; ಆಯಿತೇ ?" ಎಂದು ಅದರೆಡೆಗೆ ಸ್ನೇಹಪೂರ್ಣ ಸ್ವರವನ್ನು ಹರಿಯಬಿಟ್ಟಳು.

ಅದು ಅವಳ ಮಾತಿಗೆ ಮಣಿಯದೆ ಹಾಗೇ ನೋಡುತ್ತ ನಿಂತಿತ್ತು.

"ಏಕೆ, ಸಂಬುಗೆ ಮೂಡಲಿಲ್ಲವೇ ಸ್ಪಾಟ ? ಬಾ, ಬಾ !"

ಅವನು ಅದರ ತಲೆಯನ್ನು ತಟ್ಟಿ ಮುದ್ದುಗೈದು ಅಂದ "ಹೋಗು, ಒಡತಿ ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಅವಳೊಂದಿಗೆ ಸ್ನೇಹ ಮಾಡಿಕೋ-"

ಅದು ಹಂದದೆ ಇತ್ತಲೇ ನೋಡುತಿತ್ತು. ಅವನು ಅದರ ಕತ್ತಿನ ಪಟ್ಟಿಯನ್ನು ಹಿಡಿದೆಳೆದು ತಂದು ಅವಳಿಂದ ಮುಟ್ಟಿಸಿ ಪರಿಚಯ ಮಾಡಿಸಿದ, ಆದರೂ, ಅದು ದೊಡ್ಡಬಾಯಿ ತೆಗೆದು ಬೊಗಳಿತು.

ಅವಳು ಅಲ್ಲಿಂದ ಮನೆಯ ಕಡೆ ಹೊರಟಳು. ಹಿಂದಿನಿಂದ ಕೃತಜ್ಞತಾ ಪೂರ್ವಕವಾದ ನೋಟ ಅನುಸಯದಿಂದ ಬೀಳ್ಕೊಟ್ಟಿತು. ಆ ಬೃಹದ್ ಪ್ರಾಂಗಣದ ನಿಶ್ಶಬ್ದ ವಲಯವನ್ನು ದಾಟಿ ಮನೆಯ ಮೆಟ್ಟಿಲನ್ನು ಹತ್ತಿದಾಗ ಮನೆಯೆಲ್ಲಾ ಬಣಬಣ ಎನ್ನುತಿತ್ತು. ಮೇರಿ–ಎಲಿಜ ಇಬ್ಬರೂ ಅವಳಿಗಾಗಿ ತಲೆ ಬಾಗಿಲಲ್ಲಿ ಕಾದಿದ್ದರು.

"ಇಂದು ಯಾರೂ ಕಾಣಿಸುತ್ತಲೇ ಇಲ್ಲವಲ್ಲಾ, ಮೇರಿ.....? ಅಪ್ಪ ಅಮ್ಮ ಎಲ್ಲಿ ?"

"ಇಬ್ಬರೂ ಪಾರ್ಟಿಗೆ ಹೋಗಿದ್ದಾರೆ."

"ಯಾವ ಪಾರ್ಟಿ ?"

"ಮಿಸೆಸ್ ಜಾಲಿವಾಕರ್ ಮನೆಯಿಂದ ಆಹ್ವಾನ ಪತ್ರಿಕೆ ಬಂದಿತ್ತಲ್ಲ, ನಿನಗದು ತಿಳಿಯದೇ ?"

"ಓ ...! ಹೌದು, ಮರೆತೇ ಬಿಟ್ಟಿದ್ದೆ."

ಮೇರಿ ಓವರ್ ಕೋಟನ್ನು ಈಸಿಕೊಂಡಾಗ ಎಲಿಜ ಮನೆಯುಡುಪುಗಳನ್ನು ತಂದು ಮುಂದಿಟ್ಟಳು. ಮುಖಮಜ್ಜನ ಮಾಡಿ ಮನೆಯುಡುಪು ತೊಟ್ಟು ಹೊರ ಬರುವಷ್ಟರಲ್ಲಿ ಉಜ್ವಲ ದೀಪಗಳಿಂದ ಮನೆ ಬೆಳಗುತಿತ್ತು. ರಾಜ ವೈಭೋಗ ಎಲ್ಲಿ ಹೆಜ್ಜೆ ಇಟ್ಟರೆ ಅಲ್ಲಿ ತೊಡಕಾಗುತ್ತದೆ. ಹಿಂದೆ ಮುಂದೆ ಓಡಾಡುವ ಭೃತ್ಯ ಸಮೂಹ ಎಲ್ಲಾ ಕೆಲಸಕ್ಕೂ ಮುಂದಾಗುತ್ತದೆ. ಅವರಂತೆಯೇ ತಾನೂ ಇತರರಿಗೆ ಸೇವೆ ಮಾಡಬಹುದು ಎಂಬ ಆಲೋಚನೆ ಮನೋಮಂದಿರದಲ್ಲಿ; ಈ ಜನ್ಮ ಸಾರ್ಥಕ್ಯ ಯಾವ ರೀತಿ ಪಡೆಯಬಹುದು ಎಂಬ ಮಹತ್ತಾದ ಪ್ರಶ್ನೆಯೂ ಸಹ.....ತಲೆಯಲ್ಲಿ ನಾನಾ ವಿಚಾರಗಳನ್ನು ತುಂಬಿಕೊಂಡೇ ಹಿಂಭಾಗದ ಉದ್ಯಾನದ ಕಡೆ ಹೋದಳು. ಹೂಗಿಡಗಳ ಹಣ್ಣೆಲೆಗಳನ್ನು ಹೆಕ್ಕಿ ತೆಗೆಯುತಿದ್ದ ಜಾಕ್ ತಲೆಯೆತ್ತಿ ನೋಡಿ "ಗುಡ್ ಈವಿನಿಂಗ್ ಮಿಸ್ !" ಎಂದ ; ನಯ ವಿನಯಗಳ ವಶೀಭೂತನಾಗಿ.

ಅವನಿಗೆ ಪ್ರತಿವಂದಿಸಿ ನುಡಿದಳು "ಎಲ್ಲಿ, ಡಾಗ್ ಸಿಕ್ ರೂಮಿನ ಬಾಗಿಲು ತೆಗೆ."

ಒಡನೆ ಅವನು ಬಾಗಿಲು ತೆರೆಯಲು ಹೋದ, ಅವಳು ಹಿಂಬಾಲಿಸಿದಳು. ಉದ್ಯಾನದ ಆಚೆಕಡೆ ಇದ್ದ ಆ ಕೊಠಡಿಯಲ್ಲಿ ಈಚೆಗೆ ಯಾವ ನಾಯಿಯನ್ನೂ ಇಟ್ಟಿರಲಿಲ್ಲವಾದುದರಿಂದ ಧೂಳು ವ್ಯಾಪಕವಾಗಿ ಹರಡಿದ್ದು ಜೇಡನ ಜಾಲ ಅಲ್ಲಲ್ಲಿ ಜೋಲಾಡುತಿತ್ತು.

"ಪೊರಕೆ ತಾ. ಈಗಲೇ ಸ್ವಚ್ಛಗೊಳಿಸಬೇಕು."

"ಏಕೆ ? ಯಾವ ನಾಯಿಗಾದರೂ.....?"

"ನಮ್ಮದಕ್ಕೇನೂ ಆಗಿಲ್ಲ. ಆ ಕುರುಬನ ನಾಯಿಗೆ ಚಿಕಿತ್ಸೆ ನಡೆಸುವುದುಂಟು. ಅದಕ್ಕಾಗಿ ಸ್ವಚ್ಛಗೊಳಿಸಬೇಕು."

"ನಾಯಿ ಇಲ್ಲಿ ತಂದಿಟ್ಟುಕೊಂಡರೆ ದೊರೆಸಾನಿ ಕೋಪಿಸಿಕೊಳ್ಳುವು

ದಿಲ್ಲವೇ ?....ಮೇಲಾಗಿ, ಅದರ ರೋಗ ನಮ್ಮ ನಾಯಿಗೆ ತಗಲಿದರೂ ತಗಲಬಹುದು."

"ಛಿ ! ಛಿ ! ಅದು ರೋಗದ ನಾಯಲ್ಲ.....ಕಾಲು ಮುರಿದು ಕೊಂಡಿದೆ ಅಷ್ಟೆ."

ಅನಂತರ ಅವಳು ಕೊಠಡಿಯ ಸ್ವಚ್ಛತೆಗಿಳಿದಳು. ಅವನು ಬೇಡ ಬೇಡ ಎನ್ನುವುದರೊಳಗಾಗಿ ಅವಳು ಪೊರಕೆ ಹಿಡಿದಾಗಿತ್ತು. ಇಬ್ಬರೂ ಕೂಡಿಯೇ ಸರ್ವಾಂಗ ಶುಚಿತ್ವ ನಡೆಸಿದರು.

"ಹಾಸಿಗೆಯನ್ನು ಬಿಸಿಲಿಗೆ ಹಾಕಿದ್ದರೆ ಒಳ್ಳೆಯದಿತ್ತು. ಈಗ ಅದನ್ನು ಚೆನ್ನಾಗಿ ಕೊಡವಿ ಬಿಡು ; ನಾಳೆ ಬಿಸಿಲೇರಿದ ಮೇಲೆ ಹಾಕ ಬಹುದು.

"ಆಗಲಿ" ಎಂದ ಜಾಕ್ ಒಂದು ಘಳಿಗೆ ತಡೆದು ಮುಂದುವರಿದ, "ನಿನ್ನ ಮೈಕೈ ಧೂಳಿಂದ ಮುಚ್ಚಿಹೋಯಿತು ಮಿಸ್ ! ದೊರೆಸಾನಿ ನೋಡಿದರೆ ಎಷ್ಟು ಬೇಸರಿಸುವಳೋ. 'ಬೇಡ' ಎಂದರೂ ನೀನು ಕೇಳು ವುದಿಲ್ಲ. ಆಗನಿಂದಲೂ ಕೊಳೆಯಲ್ಲೇ ಇದ್ದಿ !" ಜಾಕ್ ಕಳಕಳಿಯಿಂದ ನುಡಿದಿದ್ದ.

"ಪರವಾಗಿಲ್ಲ ..... ಪುನಃ ಸ್ನಾನ ಮಾಡಿದರಾಯಿತು," ಎಂದಳು ಅವಳು. ದನಿಯಲ್ಲಿ ಅಷ್ಟೇ ಉದಾಸೀನದ ಝರಿ ಹರಿದು ಬಂತು.

ಜಾಕ್ ಪ್ರತಿಯಾಗಿ ಏನೂ ಹೇಳದೆ ಸುಮ್ಮನಾದ.

ಆ ವೇಳೆಗೆ ಕುರುಬ ತನ್ನ ನಾಯಿಯೊಂದಿಗೆ ಅಲ್ಲಿಗೆ ಬಂದಿದ್ದ. ಹೊಸ ನಾಯಿಯ ವಾಸನೆ ಹಿಡಿದು ಮನೆಯ ನಾಯಿಗಳು ದೊಡ್ಡ ದನಿಯಲ್ಲಿ ಕಿವಿ ಕಿವುಡಾಗುವಂತೆ ಗದ್ದಲ ಹೂಡಿದುವು. ಆ ಎಣೆಯಿಲ್ಲದ ಬೊಗಳುವಿಕೆ ಕಿವಿಗೆ ಕರ್ಕಶವಾಗುತ್ತಲೂ ಅವುಗಳನ್ನು ಕಟ್ಟಿದೆಡೆಗೆ ಧಾವಿಸಿದ ಫ್ಲಾರೆನ್ಸ್ ನೈಟಿಂಗೇಲ್ ಅಲ್ಲೇ ಮುದ್ದುಗೈದು ಸಮಾಧಾನ ಪಡಿಸಲು ಪ್ರಯತ್ನಿಸಿ ದಳು. ಆದರೆ ಅವು ಕೇಳಬೇಕೆ? ಗಂಟಲು ಹರಿಯುವಂತೆ ಬೊಗಳಿ ಮಾನಸಿಕ ಕ್ಷೋಭೆಯನ್ನು ಮತ್ತಷ್ಟು ಪ್ರದರ್ಶಿಸಿದುವು. ಅವಳು ಅಲ್ಲಿಂದ ಹಿಂತಿರುಗುವುದನ್ನೇ ಕಾಯುತ್ತ ನಿಂತಿದ್ದ ಕುರುಬ ದೀನಾದೀನನಂತೆ ನುಡಿದ,

"ಇದರಿಂದ ನಿನಗೆ ಬಹಳ ತೊಂದರೆಯಾಗಬಹುದು ಮಿಸ್ !"

"ಪರವಾಯಿಲ್ಲ ; ಪ್ರಯತ್ನ ನನ್ನದು. ಅದೃಷ್ಟಾದೃಷ್ಟಗಳು ನಿನ್ನವು."

"ಹೇಗಾದರೂ ಸರಿಯೆ, ಅದೇನಿದ್ದರೂ ಭಗವಂತನ ಕೊಡುಗೆ."

ಕೊಠಡಿಯ ಸ್ವಚ್ಛತೆ ಮುಗಿದಿದ್ದರೂ ಅದರ ಮಂಚ–ಹಾಸಿಗೆ ಅಣಿಯಾಗಿರಲಿಲ್ಲ. ಜಾಕ್ ಅದನ್ನು ಕೊಡವಿ ಶುಚಿಗೊಳಿಸುವುದರಲ್ಲಿ ನಿಮಗ್ನನಾಗಿದ್ದ. ಫ್ಲಾರೆನ್ಸ್ ನೈಟಿಂಗೇಲ್ ಅದರ ಬಸಿ ಬಟ್ಟಲನ್ನು ಬ್ರಷ್ಷಿನಿಂದ ಉಜ್ಜಿ ತೊಳೆದು ಶುಭ್ರ ನೀರನ್ನು ತಂದಳು. ಕುರುಬ ಆಶ್ಚರ್ಯದಿಂದ ನಿಟ್ಟಿಸಿದ. ಅದರಲ್ಲೂ ತನ್ನಂತಹ ಬಡಪಾಯಿಗಾಗಿ ಅವಳು ನಿರ್ವಹಿಸಿದ ಶ್ರಮ ಸಾಮಾನ್ಯವಲ್ಲ ಎನಿಸಿ ಒಡಲ ತಡಿಯೆಲ್ಲಾ ಆನಂದಾಶ್ಚರ್ಯದಿಂದ ತುಂಬಿ ಹೋಯಿತು.

ಫ್ಲಾರೆನ್ಸ್ ನೈಟಿಂಗೇಲ್ ಒಳ ಹೋಗಿ ಔಷಧಿಯ ಪೆಟ್ಟಿಗೆಯನ್ನು ತಂದಳು. ಜಾರ್ಜ್ ರಿಚರ್ಡ್ಡ ನಾಯಿಯ ಬಾಯಿಗೆ ಬುಟ್ಟಿಯಂತಿದ್ದ ಚಿಕ್ಕ ಬಲೆಯನ್ನು ಕಟ್ಟಿದ. ಆತನ ಸಹಾಯದೊಡನೆ ಅದರ ಕಾಲಿಗೆ ಮದ್ದು ಬಳಿದು ಬಿದಿರಿನ ಪಟ್ಟಿಗಳನ್ನು ಇಟ್ಟು ಭದ್ರವಾಗಿ ಕಟ್ಟಿದಮೇಲೆ, ಅದು ಬಿಚ್ಚಿಕೊಳ್ಳದಂತೆ ತಲೆಯನ್ನು ಒಂದು ಜಾಲರಿಯಲ್ಲಿ ಅಳವಡಿಸಿ ಅಲ್ಲಿಯೇ ಊಟ ತಿಂಡಿಯ ಏರ್ಪಾಡು ಮಾಡಿದಳು.

"ನೀನು ಅಂದೇ ಹೀಗೆ ಕಟ್ಟಿದ್ದರೆ ಒಳ್ಳೆಯದಿತ್ತು."

"ನನಗೆ ಈ ಸೌಕರ್ಯ ಇರಲಿಲ್ಲ."

"ನೋಡೋಣ ; ಇನ್ನಾದರೂ ಏನಾಗುತ್ತೊ, ಗುಣವಾದರೆ ಅದೃಷ್ಟ."

"ಅಷ್ಟಾದರೆ ನನಗೆ ದೊಡ್ಡ ನಿಕ್ಷೇಪ ದೊರೆದಂತಾಗುತ್ತದೆ."

"ದೇವರು ದಯಾಮಯ !"

ಬ್ರೆಡ್ಡು ಬಿಸ್ಕತ್ತುಗಳನ್ನು ಅದರ ಮುಂದೆ ಹಾಕಿ ತಲೆಯನ್ನು ತಟ್ಟಿ ಮುದ್ದಿಸಿ ಅದರ ಸ್ನೇಹವನ್ನು ಗಳಿಸಿಕೊಳ್ಳುತ್ತ ಪುನಃ ಮುಂದುವರಿದಳು, "ನೀನು ಹೇಗೂ ಇಲ್ಲಿಯೇ ಕುರಿಗಳನ್ನು ಮೇಯಿಸುತ್ತೀಯಷ್ಟೆ ? ಆಗಾಗ

ಬಂದು ನೋಡುತ್ತಿರು. ಅದರ ಕಾಲು ಕೂಡಿದನಂತರ ತೆಗೆದುಕೊಂಡು ಹೋಗಬಹುದು. ಅಲ್ಲಿಯ ತನಕ ಅದು ಇಲ್ಲಿಯೇ ಇರಲಿ."

"ಥ್ಯಾಂಕ್ಯೂ ಮಿಸ್ !"

ಅವನು ಅತ್ಯಂತ ಕೃತಜ್ಞತೆಯಿಂದ ವಂದನೆಯನ್ನರ್ಪಿಸಿ ಹೊರಟ.

ಅವಳು ಇನ್ನೂ ಅದರ ಉಪಚಾರದಲ್ಲಿಯೇ ನಿಮಗ್ನಳಾಗಿದ್ದುದನ್ನು ನೋಡಿ ಎಲಿಜ ಬಳಿಗೆ ಬಂದು ಹೇಳಿದಳು,

"ದೊರೆ-ದೊರೆಸಾನಿಯರು ಬರುವ ಹೊತ್ತಾಯಿತು; ನೀನು ಈ ಬಟ್ಟೆಗಳಚುವುದು ಲೇಸು. ತುಂಬ ಕೊಳಕು ಕವಿದಿದೆ."

"ಆಯಿತು. ಬಟ್ಟೆಗಳಚಿ ಮತ್ತೊಮ್ಮೆ ಸ್ನಾನಮಾಡಿ ಬಿಡುವೆ."

"ಬಾ ಮತ್ತೆ. ಹೊತ್ತಾಯಿತಲ್ಲ."

"ನಿನಗೇಕಷ್ಟು ಆತುರ ? ಏನಿದ್ದರೂ ನಾನೇ ಉತ್ತರಿಸುವೆ."

"ಆ ಪ್ರಸಂಗವಾದರೂ ಏಕೆ ಬರಬೇಕು ?"

ಅವಳ ಮನಸ್ಸಮಾಧಾನಕ್ಕಾಗಿಯಾದರೂ ತಾನು ಒಳ ಹೋಗಲೇ ಬೇಕಾಯಿತು. ನಾಯಿಯ ಕೊಠಡಿಯ ಬಾಗಿಲನ್ನು ಮುಚ್ಚಿ ಒಳ ಬಂದಾಗ ಹೊತ್ತು ಆರರ ಸಂಖ್ಯೆಯ ಅಂಚಿನಲ್ಲಿತ್ತು. ಸುಖಮಜ್ಜನ ಮಾಡಿ ಉಡುಪು ಬದಲಿಸಿ ಹೊರ ಬರುವ ಹೊತ್ತಿಗೆ ತಂದೆ-ತಾಯಿಯರು ದಿವಾನ ಖಾನೆಯಲ್ಲಿ ಮಂಡಿಸಿದ್ದರು.

"ಇಂದೇಕೆ, ನಮ್ಮ ನಾಯಿಗಳು ಇಷ್ಟು ಗಲಾಟೆ ಮಾಡುತ್ತಿವೆ ?"

ದೊರೆಸಾನಿ ಕೇಳಿದ ಮೊದಲ ಪ್ರಶ್ನೆ ಅದು.

ಅನಂತರ ಫ್ಲಾರೆನ್ಸ್ ನೈಟಿಂಗೇಲ್ ವಿಷಯವನ್ನು ಸವಿಸ್ತಾರವಾಗಿ ಹೇಳಿ,

"ಬನ್ನಿ, ಅಮ್ಮಾ. ಆ ನಾಯಿಯನ್ನು ನೋಡಬಹುದು."

ಆ ಮಾತು ಕೇಳಿದ ಶ್ರೀಮಂತಿನಿಯು ಮಗಳ ಶ್ರದ್ಧೆ ಅತೀ ಬಾಲಿಶ ವೆಂದು ಭಾವಿಸಿ ಕಿಲಕಿಲ ನಕ್ಕುಬಿಟ್ಟಳು. ತಂದೆಯೂ ಸಹ ಅತ್ಯಂತ ಉದಾ ಸೀನದಿಂದ ಅಂದ "ವೃಥಾ ಶ್ರಮ."

"ಅದರ ಕಾಲು ಗುಣವಾದರೆ ಪರಿಶ್ರಮ ಸಾರ್ಥಕವಾಗುತ್ತೆ !"

ಆನಂದೋತ್ಸಾಹದಿಂದ ಉತ್ತರಿಸಿದಳು ಫ್ಲಾರೆನ್ಸ್ ನೈಟಿಂಗೇಲ್. ಹೊಳೆ ಹೊಳೆಯುವ ಕಣ್ಣುಗಳಲ್ಲಿ ವಿನೂತನ ಶ್ರದ್ಧಾದೀಪ್ತಿ ತಾಂಡವವಾಡುತಿತ್ತು.

"ಸರಿ ; ಅವನ ನಾಯಿಗೆ ನೀನೇಕೆ ಕಷ್ಟಪಡಬೇಕು !" ತಾಯಿಯ ಪ್ರಶ್ನೆ.

"ನಾಯಿ ಯಾರದ್ದಾದರೇನು ? ಅದೊಂದು ನೊಂದ ಜೀವಿ. ಅದರ ನೋವು ಹೋಗಲಾಡಿಸುವುದು ಮಾನವಗುಣ."

ವಿಲಿಯಂ ಎಡ್ವರ್ಡ್ ನೈಟಿಂಗೇಲ್ ಮಗಳ ಅತೀವ ಅನುಕಂಪವನ್ನರಿತು ಮುಗುಳುನಕ್ಕು ಸುಮ್ಮನಾದ. ತಾಯಿ ಒಂದೆರಡು ಕ್ಷಣ ಯೋಚಿಸಿ ನುಡಿದಳು "ನಮ್ಮ ನಾಯಿಗಳು ಸುಮ್ಮನಿರುವುದಿಲ್ಲ. ವೃಥಾ ಗಲಾಟೆ ....ಕಿನಿಸಿಗೆ."

"ಒಂದೆರಡು ದಿನಗಳಷ್ಟೆ ?"

"ನೀನಿನ್ನೂ ಚಿಕ್ಕವಳು. ನಿನಗೆ ಇದೆಲ್ಲಾ ಅರ್ಥವಾಗುವುದಿಲ್ಲ."

ತಾಯಿಯ ಮುಖವನ್ನು ನಿಟ್ಟಿಸುತ್ತ ಸಣ್ಣ ಸಮಾಧಾನಪೂರ್ವಕವಾಗಿ ಉತ್ತರಿಸಿದಳು ಹುಡುಗಿ,

"ನಾಳೆ ಅವುಗಳಿಗೆ ಪರಸ್ಪರ ಪರಿಚಯ ಮಾಡಿಸುವೆ. ಅನಂತರ ಗದ್ದಲ ಮಾಡಲಾರವು"

ಸ್ವಾಮಿನಿ ಸುಮ್ಮನಾದಳು. ಮಗಳ ಕಾರುಣ್ಯಭಾವ ಮನಸ್ಸಿಗೆ ಹಿತವನ್ನುಂಡಿಸಿದರೂ ಅನ್ಯಥಾ ಹೊತ್ತುಕೊಳ್ಳುವ ಶ್ರಮ ಹಿತವೆನಿಸಲಿಲ್ಲ. ಪರಿಸ್ಥಿತಿಗೆ ಹೊಂದಿಕೊಳ್ಳುವ ಅಭಿಲಾಷೆಯನ್ನು ಸ್ವಲ್ಪಕಾಲ ಬದಿಗಿಟ್ಟು ಮುಂದುವರಿದಳು "ನೋಡು, ಮಗೂ. ಇದರಿಂದ ಇನ್ನೊಂದು ತೊಂದರೆ ಉದ್ಭವಿಸುತ್ತದೆ. ಅವನು ಹೊಸನಾಯಿ ತರುವವರೆಗೆ ಕುರಿಗಳನ್ನು ನಮ್ಮಲ್ಲಿ ಮೇಯಿಸುವುದಾಗಿ ಜೇಡಿಕೊಂಡಿದ್ದ. ಹೊರಗಡೆ ಗುಡ್ಡಗಾಡುಗಳಲ್ಲಿ ಕಿರುಬಗಳಿರುವುದು ಸಹಜ. ತುಂಬ ಬಡವ ಎಂದು ನಾನು ಒಪ್ಪಿಗೆ ಕೊಟ್ಟೆ. ಹೊಸನಾಯಿ ತರುವುದೆಂದರೆ ಒಂದೆರಡು ದಿನಗಳ ವ್ಯವಹಾರ. ಇದನ್ನೇ ಗುಣಪಡಿಸುವುದೆಂದರೆ ತುಂಬ ದಿನಗಳು ಹಿಡಿಯುತ್ತವೆ."

"ಹೋಗಲಿ ಬಿಡಿ, ಎಲ್ಲಾ ಒಬ್ಬ ಬಡವನಿಗಾಗಿ ; ಒಂದು ಮೂಕ ಪ್ರಾಣಿಗಾಗಿ."

ಆ ಮಾತಿನಿಂದ ಅಂತಹ ಸಮಾಧಾನವೇನೂ ಮೂಡಲಿಲ್ಲ. ಆದರೂ, ಆ ವಿಷಯವನ್ನು ಬದಿಗಿಟ್ಟು ಪುನಃ ಪ್ರಶ್ನಿಸಿದಳು,

"ಅದೇಕೆ ಮಗೂ, ಶಾಲೆಗೆ ಕುದುರೆ ತರುವುದನ್ನು ನಿಲ್ಲಿಸಿದ್ದಿ ?"

"ಆ ಕಡೆಯಿಂದ ಬರುವಾಗ ಗೆಳತಿಯರೊಂದಿಗೆ ನಡೆಯುವುದೇ ಸುಖ. ಆಗ ಎಲ್ಲರೂ ವಿರಾಮವಾಗಿರುತ್ತಾರೆ."

"ಒಂದೊಂದಿನವಾದರೆ ಸರಿ. ದಿನವೂ ಮಳೆ ಬಿಸಿಲುಗಳಲ್ಲಿ ನಡೆಯುವ ಭಂಗವೇಕೆ ?"

"ಈಗ ಅವರೆಲ್ಲ ನಡೆಯುತ್ತಾರಲ್ಲವೇ ? ನನ್ನದೇನು ವಿಶೇಷ ?"

"ಆ ದರಿದ್ರ ಮಕ್ಕಳು ನಡೆದರೆ ನೀನೂ ನಡೆಯಬೇಕೆ ?"

"ನಡಿಗೆ ಸಂತಸದಾಯಕ. ಮಾನಸಿಕ ಪರಿಶ್ರಮವೆಲ್ಲಾ ಕೆಲವು ನಿಮಿಷಗಳಲ್ಲಿ ಕಳೆದು ಹೋಗುತ್ತೆ."

"ವೃಥಾ ಅತಿಶ್ರಮ, ಸಲ್ಲದವರೊಡನೆ ಕೂಟ, ಸಮಯ ಹಾಳು ಇಂತಿಂಥ ವಿಚಾರಗಳನ್ನೆಲ್ಲಾ ಯೋಚನೆ ಮಾಡಬೇಕು ಮಗೂ !"

ಆ ಮಾತಿಗೆ ಉತ್ತರಿಸಲು ಫ್ಲಾರೆನ್ಸ್ ಸಿದ್ಧಳಿರಲಿಲ್ಲ. ಚಿತ್ತಭಿತ್ತಿಯಲ್ಲಿ ಯಾವಯಾವ ವಿಚಾರಗಳೋ ತೇಲಿ ನಲಿಯುತಿದ್ದುವು. ಹಾಗೇ ಮೂರ್ತಿಮತ್ತಾಗಿ ನಿಂತುಕೊಂಡಳು.

"ನಾಳೆಯಿಂದ ಕುದುರೆ ಕಳುಹಿಸಲೇ ?"

"ಬೇಡ....ಬೇಡ." ದನಿಯಲ್ಲಿ ಉದಾಸೀನದ ತೊರೆಯೇ ಹರಿದು ಬಂತು ; ಫ್ಲಾರೆನ್ಸ್ ನೀರಸ ನಗೆ ಬೀರಿದಳು.

ತಾಯಿ ಅಲ್ಲಿಗೆ ಸುಮ್ಮನಾದರೂ ರೋಮರೋಮಗಳಲ್ಲೂ ಆತ್ಮ ವಿರೋಧ ವ್ಯಕ್ತವಾಗುತಿತ್ತು.

ಅದನ್ನು ಗ್ರಹಿಸಿದ ವಿಲಿಯಂ ಎಡ್ವರ್ಡ್ ಅಂದ "ಹೋಗಲಿ, ಸುಮ್ಮನಿರು ; ನಡೆಯುವ ಅನುಭವವೂ ಕೆಲವು ದಿನ ಆಗಲಿ, ಅದರ ಪರಿಣಾಮಗಳು ಪಾಠ ಕಲಿಸುತ್ತವೆ."

ಶ್ರೀಮಂತಿನಿ ಮುಗುಳು ನಕ್ಕು ತಲೆಯಾಡಿಸಿದಳು.

* * * *

ಅಂದು ಶಾಲೆಗೆ ರಜೆಯಿದ್ದುದರಿಂದ ದಿನಚರಿಯಲ್ಲಿ ಆತುರವೇನೂ

ಇರಲಿಲ್ಲ. ಫ್ಲಾರೆನ್ಸ್ ನೈಟಿಂಗೇಲ್ ಎಲ್ಲಾ ಸಾಕು ಪ್ರಾಣಿಗಳಿಗೆ ಆಹಾರ ವನ್ನು ನೀಡಿ ಒಳ ಬಂದಳು. ಮೈಕೈಯೆಲ್ಲಾ ಮುಸುರೆ; ಇನ್ನೂ ಮುಖ ಮಜ್ಜನ ಮಾಡಲಿಲ್ಲ. ಅಷ್ಟರೊಳಗಾಗಿ ಜಾಕ್ ಬೆಳ್ಳಿಯ ಹರಿವಾಣವನ್ನು ತಂದು ಮುಂದೆ ಹಿಡಿದ. ಬಹುಶಃ ತಾಯಿಯ ಕರೆ ಇರಬಹುದೆಂದು ನೈಬಾಗಿ ಅದರಲ್ಲಿದ್ದ ಚೀಟಿಯ ಕಡೆ ದೃಷ್ಟಿ ಹಾಯಿಸಿದರೆ ಕಂಡು ಬಂದದ್ದು ಫ್ಯಾಟಿಯ ಹಸ್ತಾಕ್ಷರ. ಅವಳು ಕೈ ಉಳುಕಿದ ಮೇಲೆ ಈ ಕಡೆ ಬಂದೇ ಇರಲಿಲ್ಲ. ಅನಿರೀಕ್ಷಿತ ಆಗಮನ ಮನವನ್ನು ಸೆಳೆದುಕೊಂಡಿತು. ಕೆಲವೇ ನಿಮಿಷಗಳಲ್ಲಿ ಮೈ ಕೈ ಸ್ವಚ್ಛತೆ ಮುಗಿಸಿ ಮಡಿಯುಟ್ಟು ಹೊರ ಬಂದಳು.

"ಬಾ ಪ್ಯಾಟ! ಎಷ್ಟು ದಿನಗಳ ಮೇಲೆ ನಿನ್ನ ಭೇಟಿ ?"

"ಅದಕ್ಕಾಗಿಯೇ ಬಂದದ್ದು !"

ಕೈ ನೋವು ಗುಣವಾಯಿತೇ ?"

"ಅದೇ ತುಂಬ ಕಷ್ಟಕ್ಕೆ ಬಂದಿದೆ. ಗುಣವಾಗಲೇ ಇಲ್ಲ." ಮುಖ ಭಾವದಲ್ಲಿ ನೋವಿನ ಮುದ್ರೆಯೊತ್ತಿತು. ಕಳಕಳಿಯಿಂದ ಹೇಳಿಕೊಂಡಳು ಅವಳು.

"ಡಾಕ್ಟರ ಬಳಿಗೆ ಹೋಗಲಿಲ್ಲವೇ ?"

"ಈಗಾಗಲೇ ಎಷ್ಟು ಬಾರಿ ತೋರಿಸಲಿಲ್ಲ ? ಅದರಿಂದೇನಾದರೂ ಪ್ರಯೋಜನವಾಗಿದೆಯೇ ? ಆಡುವಂತಿಲ್ಲ; ಬರೆಯುವಂತಿಲ್ಲ. ಬೇಸರ ವಾಗಿ ಸುಮ್ಮನೆ ಈ ಕಡೆ ಬಂದೆ."

"ಎರಡು ವಾರ ಕಳೆಯಿತು. ಇನ್ನೂ ಗುಣವಾಗದಿರುವುದು ಒಳ್ಳೆ ಯದಲ್ಲ. ಇಂದು ಡಾ|| ಜಾರ್ಜರ ಕಡೆಗೆ ಹೋಗೋಣ. ನಾನೂ ಬರುವೆ. ಅವರು ಕೊಡುವ ಮದ್ದು ಪ್ರಭಾವಯುತವಾಗಿರುತ್ತೆ."

"ಆಯಿತು. ಹೇಗಾದರೂ ಗುಣವಾದರೆ ಒಳ್ಳೆಯದಷ್ಟೆ."

ಅವಳು ಜಾರಿಬಿದ್ದು ಅಪಘಾತಕ್ಕೀಡಾದಾಗಲೇ ಡಾಕ್ಟರ ಬಳಿಗೆ ಧಾವಿ ಸಿದ್ದಾಳೆ. ಮೂಳೆ ಮುರಿದಿಲ್ಲವಾದುದರಿಂದ ಡಾಕ್ಟರು ಪ್ರಥಮ ಚಿಕಿತ್ಸೆ ನಡೆಸಿ ಕಳುಹಿಸಿದ್ದರು ಮನೆಗೆ. ನಿತ್ಯ ಚಿಕಿತ್ಸಾಕ್ರಮ ಸರಿಯಾಗಿ ನಡೆ ಯದೆ ಇದ್ದುದರಿಂದ ಅದು ಗುಣವಾಗದಿರಲು ಕಾರಣ. ಅವಳ ಕೈಯನ್ನು

ನೋಡಿದೊಡನೆಯೇ ಡಾ|| ಜಾರ್ಜ್ "ದಿನಕ್ಕೆರಡು ಬಾರಿ ಮದ್ದನ್ನು ಹಚ್ಚಿ ಮೃದುವಾಗಿ ಸೀವಬೇಕು; ಬಹುಶಃ ಅವಳು ನಿರ್ಲಕ್ಷಿಸಿರುವುದರಿಂದಲೇ ಗುಣವಾಗಲಿಲ್ಲವೆಂದು ತೋರುತ್ತೆ. ಇನ್ನಾದರೂ ಸರಿಯಾಗಿ ಉಜ್ಜುವುದು ಒಳ್ಳೆಯದು. ನೀನೇ ಅದನ್ನು ತಪ್ಪದೆ ಎರಡು ಹೊತ್ತೂ ಮಾಡು ಫ್ಲಾರೆನ್ಸ್!" ಎಂದರು.

ಆ ಮಾತು ಎಳೆಯ ಮನದಮೇಲೆ ಸ್ವರ್ಣಮುದ್ರೆಯೊತ್ತಿತು. ಫ್ಲಾರೆನ್ಸ್ ನೈಟಿಂಗೇಲ್ ಸ್ನೇಹ ಶ್ರದ್ಧೆಗಳ ಆಗರವಾಗಿ ಉತ್ತರಿಸಿದಳು. "ಆಗಲಿ ಡಾಕ್ಟರ್, ಇನ್ನು ಮೇಲೆ ಎರಡು ಹೊತ್ತೂ ನಾನೇ ತೈಲ ಉಜ್ಜುವೆ. ಅವಳು ಯಾವಾಗಲೂ ಅಸಡ್ಡೆಯೇ!"

"ಹಾ.....! ಅದು ಕೂಡದು. ಯಾರಾದರೂ ನಿಗ ತೆಗೆದುಕೊಳ್ಳ ಬೇಕು."

ಇಬ್ಬರೂ ಡಾಕ್ಟರಿಗೆ ಅಭಿವಾದನೆ ಸಲ್ಲಿಸಿ ಮನೆಯಕಡೆ ಹೊರಟರು.

"ಇದುವರೆಗೆ ಉದಾಸೀನ ಮಾಡಿದ್ದೇ ಸಾಕು. ಇನ್ನು ಮುಂದೆ ಎರಡು ಹೊತ್ತೂ ಇಲ್ಲಿಗೆ ಬಂದುಬಿಡು, ನಾನೇ ಚಿಕಿತ್ಸೆ ಕೈಗೊಳ್ಳುವೆ."

ಆ ವಾಕ್ಸರಣಿಯ ಮಧುರಧಾರೆ ಮನಃಪ್ರಾಣಗಳನ್ನು ಮಂತ್ರಮುಗ್ಧ ಗೊಳಿಸಿತು. ಪ್ಯಾಟಿ ಪ್ರತಿ ಹೇಳಲಾರದೆ 'ಹೂ' ಎಂದಳು. ಆದರೂ, ಆಶ್ಚರ್ಯ-ಸಂತಸ-ದೈನ್ಯತೆಗಳ ನೆರೆ ಒಂದೇ ಬಾರಿಗೆ ಒಡಲಲ್ಲಿ ಉಕ್ಕಿ ಹರಿಯಿತು. ಸ್ವಲ್ಪಹೊತ್ತು ಯೋಚಿಸಿದನಂತರ ಹೇಳಿದಳು "ಎರಡು ಹೊತ್ತೂ ಉಜ್ಜುವುದೆಂದರೆ ನಿನಗೆಷ್ಟು ಶ್ರಮ? ಅದೆಲ್ಲಾ ಏಕೆ? ಇನ್ನುಮೇಲೆ ಮನೆಯಲ್ಲಿ ನಾನೇ ಕ್ರಮವಾಗಿ ಉಜ್ಜಿಕೊಳ್ಳುವೆ. ಆ ಚಿಂತೆಯೇ ಬೇಡ."

"ಅದರಿಂದ ತೊಂದರೆಯೇನೂ ಇಲ್ಲ. ಬೆಳಗ್ಗೆ ಶಾಲೆಗೆ ಹೋಗುವ ಮುನ್ನ ಬಾ. ಸಂಜೆ ಹೇಗೂ ನನ್ನೊಂದಿಗೆ ಬರುತ್ತಿ. ಉಜ್ಜುವುದೆಲ್ಲಾ ಕೆಲವು ನಿಮಿಷ. ನಿನಗೆ ಬೇಗನೆ ಗುಣವಾಗುವುದು ಮುಖ್ಯ."

"ನನಗೆ ತುಂಬ ಸಂಕೋಚ."

"ಸಂಕೋಚ ಬೇಡವೇಬೇಡ."

ಆದರೆ ತಂದೆ ತಾಯಿಯರ ಹಿತವಚನವೇ ಬೇರೆ.

"ಅವಳೇನು ಅಂತಹ ಅಸಹಾಯಕಳಲ್ಲ, ನೀನೇಕೆ ಆ ಶ್ರಮ ಹೊತ್ತು ಕೊಳ್ಳಬೇಕು ?"

ಅದಕ್ಕೆ ಮಗಳ ಹಗುರವಾದ ಉತ್ತರ "ಜೀ-ವ-ದ-ಯೆ"

ಆದರೂ ಆ ಪ್ರಕರಣ ಅಷ್ಟಕ್ಕೆ ಮುಗಿಯಬೇಕೆ ?

ಆಗಾಗ ಒಂದಲ್ಲ ಒಂದು ರೀತಿಯಲ್ಲಿ ಭುಗಿಲೇಳುವುದು ಸರ್ವೇ ಸಾಮಾನ್ಯ ವಿಷಯ. ಅವನ್ನು ಅಲ್ಲಿಂದಲ್ಲೇ ಒಗೆಹರಿಸಬೇಕಾದರೆ ಅದೆಷ್ಟು ಕಂಠ ಶೋಷಣೆ ಮಾಡಬೇಕೋ, ಅಷ್ಟಕ್ಕೂ ಕುಲಪುತ್ರಿ ತೆರೆದ ಮನದಿಂದ ಸಿದ್ಧಳಾಗುವಳು. ಸಲಸಲಕ್ಕೂ ಸೋಲುವ ವಿಲಿಯಂ ದಂಪತಿಗಳು ಹಾದಿ ಯಿಂದ ಅನುರಾಗ ಪೂರ್ಣ ಪ್ರವೃತ್ತಿಯಲ್ಲಿ ಹಿಂಜರಿಯುವುದು ಅನಿವಾರ್ಯ ಎಂದರೂ, ಕಾಲದೇಶಗಳ ಅಧೀನತೆ, ಮಾನಸಿಕ ಸಿಥಿಲತೆ ಜೀವನಶಾಂತಿ ಯನ್ನು ಧೂಳೀಪಟಗೊಳಿಸಿ ಸಹಕಾರ-ಸಂವಿಧಾನಗಳು ಮುರಿದು ಬೀಳುತಿ ದ್ದುದೂ ಉಂಟು-ಎಲ್ಲಾ ಸಂಸಾರಗಳಲ್ಲಿ ಕಂಡುಬರುವ ನ್ಯೂನತೆಗಳನ್ನೂ ಮಿಾರಿ.

ಎರಡು ವಾರಗಳನಂತರ ಇಚ್ಛಿತ ದಿನದಂದು ಸ್ವಾಟಿಯ ಕಾಲನ್ನು ಬಿಚ್ಚಿದಳು ಫ್ಲಾರೆನ್ಸ್ ನೈಟಿಂಗೇಲ್.

ನೋಡಿದರೆ ಎಂತಹ ಆಶ್ಚರ್ಯ ?

ವೈದ್ಯಕೀಯ ಚಿಗುರಿಗಿಂತಲೂ ಚಿಗುರಾಗಿದ್ದ ಕಾಲಮಾನ ; ಯಾರ ಸಹಾಯವನ್ನೂ ತೆಗೆದುಕೊಳ್ಳದ ಸಾಮಾನ್ಯ ಕ್ರಮ. ಆದರೂ ಒದಗಿ ಬಂದ ವಿಜಯಶ್ರೀ ಎಳೆಯ ಮನಃಪ್ರಾಣಗಳನ್ನು ಒಮ್ಮೆಗೇ ಪುಳಕಿತಗೊಳಿ ಸಿತು-ಆನಂದಾತಿರೇಕದಿಂದ ಜಿಗಿದಾಡುವಂತೆ. ಕುರುಬ ಪ್ಯಾಟಿ ಮತ್ತು ಸೇವಕವರ್ಗ ಆ ಅಚ್ಚರಿಯನ್ನು ಬೆರಗುಗಣ್ಣುಗಳಿಂದ ನಿಟ್ಟಿಸುತ್ತ ಹರ್ಷೋ ದ್ಗಾರ ಮಾಡಿದರು. ಸ್ವಾಟಿ ಕಾಲಿನ ಕಟ್ಟು ಕಳೆದಮೇಲೆ, ಕಾಲನ್ನು ಸುಖವಾಗಿ ಊರಿ, ಓಡಾಡುತ್ತ ಹರ್ಷಿತರನ್ನು ಇನ್ನೂ ಹರ್ಷಗೊಳಿಸುವಂತೆ ಬೊಗಳಿ ಆನಂದವನ್ನು ಸೂಸಿತು.

ಸುದ್ದಿ ಮಿಂಚಿನಂತೆ ವಿಲಿಯಂ ದಂಪತಿಗಳಿಗೆ ಮುಟ್ಟಿತು. ಅವರೂ ಇನ್ನಷ್ಟು ಹೊತ್ತಿನೊಳಗಾಗಿ ಅಲ್ಲಿಗೆ ಆಗಮಿಸಿ, ಉತ್ಸುಕತೆಯಿಂದ ನಾಯಿಯ ಕಡೆ ದೃಷ್ಟಿ ಹೊರಳಿಸಿದರು.

"ಆಶ್ಚರ್ಯ! ಕಾಲು ಊನವಾಗಿಲ್ಲ ಕೂಡ." ವಿಲಿಯಂ ಎಡ್ವರ್ಡ್ ಆಶ್ಚರ್ಯ-ಆನಂದಗಳ ವಶೀಭೂತನಾಗಿ ಅಭಿನಂದಿಸಿದ "ಕಾಂಗ್ರಾಟ್ಸ್..... ಫ್ಲಾರೆನ್ಸ್!"

"ಥ್ಯಾಂಕ್ಯೂ ಪಾಪಾ!"

ಅದೇ ನೇರಕ್ಕೆ ತಾಯಿಯೂ ಹೃತ್ಪೂರ್ವಕವಾಗಿ ಅಭಿನಂದಿಸಿ ಪ್ರತಿ ವಂದನೆಯನ್ನು ಸ್ವೀಕರಿಸಿದಳು. ಎಲ್ಲರ ಮುಖಮಂಡಲದಲ್ಲೂ ಆನಂದದ ಪ್ರಭೆ ಹರಿದಾಡಿತು.

"ನಿಮಗೆ ಹೇಗೆ ಗೊತ್ತಾಯಿತು?" ಪ್ರಶ್ನಿಸಿದಳು ಫ್ಲಾರೆನ್ಸ್.

"ಜಾಕಿ ಓಡಿ ಬಂದು ಹೇಳಿದ."

"ನಿನ್ನ ಉತ್ಸಾಹಕ್ಕೆ ದೇವರು ನೀಡಿದ ಬಹುಮಾನ!"

"ನಾನು ಪೂರ್ಣ ಭರವಸೆ ಹೊಂದಿರಲಿಲ್ಲ ಕೂಡ. ಪ್ರಯತ್ನ ಮಾಡಿದೆ ಅಷ್ಟೆ." ಉತ್ತರಿಸಿದಳು ಫ್ಲಾರೆನ್ಸ್ ನೈಟಿಂಗೇಲ್ ಆನಂದಮಯಿ ಯಾಗಿ. ಅರಳುತ್ತಿರುವ ಚಿತ್ತಕಲ್ಪಕ್ಕೆ ನುಗ್ಗಿದ ಆ ಉತ್ಸಾಹದ ಸ್ರೋತ ಮುಂದಿನ ಮಹಾ ಯಶಸ್ಸಿಗೆ ನಾಂದಿಯಾಯಿತು.

* * * * *

ಪೂರ್ವೀ ತಟದಂಚಿನಲ್ಲಿ ದಿನಮಣಿ ಮೈದೋರಿದಾಗಲೇ ಆನಂದ ಪೂರಿತ ಹೃದಯದಿಂದ ಜಗತ್ತು ದಿನಚರಿ ಆರಂಭಿಸಿತು.

ಆದರೆ.....!

ಆ ಆನಂದ ಸಾಮ್ರಾಜ್ಯದ ಮೇರೆಯಲ್ಲಿ ಅದೆಂತಹ ದುಃಖದ ಪ್ರವಾಹ ಹರಿಯುತ್ತಿದೆ ಎಂಬುದನ್ನು ಬಲ್ಲವರೇ ಬಲ್ಲರು. ಎಲ್ಲಿ, ಯಾರು ಸರ್ವೋಚ್ಚ ಸಾಧನೆಗಾಗಿ ಪರಿಶ್ರಮಿಸಿದರೂ ಅಲ್ಲಿಯೇ ಲಕ್ಷ್ಯವಿಲ್ಲದೆ ದಿನ ನಿತ್ಯ ಘುತ್ತೆಂದು ಸಂಭವಿಸುವ ಸಾವು-ನೋವು-ದುಃಖಗಳನ್ನು ಸ್ವಂತ ಕಣ್ಣು ಗಳಿಂದ ನೋಡುತ್ತಿರುವಾಗ ಸುಮ್ಮನೆ ಕೂಡುವುದು ಸಾಧ್ಯವಾಗುತ್ತಲೇ ಇಲ್ಲ. ಎಳೆಯ ಮನದ ಕರಂಡದಲ್ಲಿ ಕಿಕ್ಕಿರಿ ತುಂಬುವ ಕಿರಿಕಿರಿಯಿಂದ ದಿನ ದಿನಕ್ಕೂ ಕದಡಿ ಬಗ್ಗಡವಾಗುವ ಚಿತ್ತ ಪ್ರವೃತ್ತಿಗೆ ಯಾವ ರೀತಿ ಯಲ್ಲಿ ಅತ್ಯಗತ್ಯವಾದ ಶಾಂತಿಯನ್ನು ಒದಗಿಸಬೇಕೋ ಅರ್ಥವಾಗದು. ಅದರಲ್ಲೂ ಅಖಿಲ ಸ್ತ್ರೀ ಜಾತಿಗೆ ಮದುವೆ– ಸಂಸಾರಗಳು ಸೀಮಿತವಾಗಿದ್ದ

ಕಾಲದಲ್ಲಿ, ಗಾಂಭೀರ್ಯ ಲಜ್ಜೆಗಳೇ ಭೂಷಣ ಪ್ರಧಾನವಾಗಿದ್ದ ಶ್ರೀಮಂತ ಸಮಾಜದಲ್ಲಿ ಯಾವ ಬಗೆಯ ಉತ್ತೇಜನವೂ ದೊರೆಯುವುದು ಕಷ್ಟವೇ. ಅಂದಮೇಲೆ, ಸರ್ವತ್ರ ಅಂಧಕಾರದಿಂದ ಕೂಡಿದ ವಾತಾವರಣದಲ್ಲಿ ಚಿಂತಾ ಮಗ್ನಳಾದ ಫ್ಲಾರೆನ್ಸ್ ನೈಟಿಂಗೇಲ್ ಜೀವನ ಸಾರ್ಥಕ್ಯವನ್ನು ಕುರಿತು ಹಗಲಿರುಳೂ ಚಿಂತಿಸುವಳು. ಆದರೂ, ಅಸಹನೀಯ ಪರಿತಾಪದಲ್ಲಿ ತನು ಮನಗಳು ಬೇಯುತಿದ್ದುವೇ ವಿನಾ ಪರಿಹಾರಮಾರ್ಗ ಕಾಣಿಸುತ್ತಿರಲಿಲ್ಲ.

ಒಮ್ಮೆ ತದೇಕ ಚಿಂತನೆಯ ವಿಹಾರದಲ್ಲಿ ವಿಚರಿಸುಲ್ಲಿ ತಾಯಿಯನ್ನು ಕುರಿತು ಪ್ರಶ್ನಿಸಿದಳು ಫ್ಲಾರೆನ್ಸ್ ನೈಟಿಂಗೇಲ್ "ಅಮ್ಮಾ, ಜೀವನ ಸಾರ್ಥಕ್ಯವನ್ನು ಪಡೆದುಕೊಳ್ಳಬೇಕೆಂಬುದು ನನ್ನ ತೀವ್ರಾಕಾಂಕ್ಷೆ. ಆದರೆ, ಹೇಗೆ ಯಾವರೀತಿ ಎಂಬುದು ಮಾತ್ರ ಹೊಳೆಯುಲೇ ಇಲ್ಲ. ಇದಕ್ಕೆ ನೀವೇನಾದರೂ ಅಮೂಲ್ಯವಾದ ಸಲಹೆ ಕೊಡಬಲ್ಲಿರಾ ?"

ಮುಗ್ಧದುಗ್ಧ ಪ್ರಶ್ನೆ ಎದೆಯಾಳದಿಂದ ಹರಿದು ಬಂತು. ಅಕ್ಷರ ಅಕ್ಷರವೂ ಆಸೆ ನಿರಾಸೆಗಳ ಒಕ್ಕೂಟವಾಗಿದ್ದುವು.

ತಾಯಿ ಪ್ರೇಮಾಂತರಿತ ಮಿಂಚುಗಣ್ಣಿಂದ ನೋಡುತ್ತ ಉತ್ತರಿಸಿದಳು,

"ಮಗೂ, ವಿದ್ಯಾಬುದ್ಧಿಗಳನ್ನು ಸಮಂಜಸವಾಗಿ ಜೀರ್ಣಿಸಿಕೊಂಡು ಉನ್ನತ ಶ್ರೇಣಿಯಲ್ಲಿ ರಾರಾಜಿಸಿದರೆ ಅದೇ ಜೀವನ ಸಾರ್ಥಕ್ಯ !"

ಮಗಳು ಆಶಿಸಿದ ವಿಚಾರ ವಿಧಾನವೇ ಬೇರೆ. ತಾಯಿ ಬಿತ್ತರಿಸಿದ ಭಾವಧಾರೆಯೇ ಬೇರೆ. ಒಂದೆರಡು ಘಳಿಗೆ ಯೋಚಿಸುತ್ತ ಮೂರ್ತಿಮತ್ತಾಗಿ ನಿಂತ ಫ್ಲಾರೆನ್ಸ್ ನೈಟಿಂಗೇಲ್ ವಿವರ್ಣಮುಖಿಯಾಗಿ ನುಡಿದಳು "ನನ್ನ ಬಯಕೆ ಅದು ಅಲ್ಲವೇ ಅಲ್ಲ !"

"ಅಂದರೆ.....?"

"ಈ ವೈಭವಯುತ ಜೀವನ ಎಷ್ಟು ಮಂದಿ ನಡೆಸುತ್ತಿಲ್ಲ ? ಇದರಿಂದ ಎಂದಾದರೂ 'ಜನ್ಮ ಸಾರ್ಥಕ್ಯ' ಲಭಿಸುವುದುಂಟೇ ? ಅದಕ್ಕಾಗಿ.........."

ಆ ಮಾತು ಮುಂದುವರಿಸಗೊಡದಂತೆ ನಡುವೆ ಬಾಯ್ಹಾಕಿದಳು ತಾಯಿ,

"ಈಗಲೇ ಏಕೆ ತಲೆ ಕೆಡಿಸಿಕೊಳ್ಳಬೇಕು? ಜೀವನದಲ್ಲಿ ಏನೇನಾಗಬೇಕೋ ಅದು ಆಗಿಯೇ ತೀರುತ್ತೆ."

ಅವಳು ಅಲ್ಲಿಂದ ಮುಂದೆ ಮಾತು ಬೆಳೆಸಲು ಇಷ್ಟಪಡದಿದ್ದರೂ ಹೃತ್ ಕುಕ್ಷಿಯ ಹಂಬಲದ ಕುಡಿ ಮುರುಟಲಿಲ್ಲ; ಅದಕ್ಕೆ ಪ್ರತಿಯಾಗಿ ಜೀವನದ ನಾನಾ ಮುಖಗಳ ಸಾರಾಸಾರಗಳನ್ನಳೆಯುತ್ತ ನೀಲ ಪ್ರಾವರಣದವರೆಗೂ ಏರುತಿತ್ತು ಹಸಿರುಹಸಿರಾಗಿ ಕವಲೊಡೆದು.

ಆದರೇನು?

ಬದುಕಿನ ಭಾಗ್ಯಕ್ಕೆ ಯಾವರೀತಿಯಲ್ಲಿ ಹಿರಿದಾದ ಎಲ್ಲೆಕಟ್ಟನ್ನು ನಿರ್ಮಿಸಬೇಕೆಂದರೂ ಕಾಲ್ತೊಡಕಾಗುವಂತಹ ಅನನ್ಯ ಐಶ್ವರ್ಯ ಪ್ರಾಕಾರ. ಉನ್ನತ ಕುಟುಂಬಸ್ಥೆ ಬಡಸೇವೆಗೆ–ಪರಸೇವೆಗೆ ತನುಮನಗಳನ್ನರ್ಪಿಸುವುದು ಅಸಹ್ಯ. ಅದರಲ್ಲೂ, ಪ್ರವರ್ಧಮಾನಕ್ಕೆ ಬರುತ್ತಿರುವ ಹೆಣ್ಣು ಅಂದಮೇಲೆ ಅನ್ಯಥಾ ಟೀಕೆ ಟಿಪ್ಪಣಿಗಳಿಗೆ ದಾಂ. ಆ ದಿಶೆಯಲ್ಲಿ ಎಷ್ಟೇ ಯೋಚಿಸಿದರೂ, ಇನ್ನೆಷ್ಟೇ ಪ್ರಯತ್ನಿಸಿದರೂ ಅವಳಿಗೆ ಯಾರಿಂದಲೂ ನಿಜವಾದ ಮಾರ್ಗದರ್ಶನವಾಗಲಿಲ್ಲ. ದಿನಗಳು ರುದ್ರಗಂಭೀರವಾಗಿ ಉರುಳಿ ತಾಪ–ಪರಿತಾಪಗಳು ಪ್ರವ್ಯಾಪ್ತವಾಗುತಿದ್ದುವು. ಇನ್ನೇನು ಶಾಲಾ ಜೀವನ ಮುಗಿಯಲಿದೆ, ಮುಂದೇನು??

ಕಾಲೇಜಿನ ಹೆಬ್ಬಾಗಿಲು ತೆರೆದಿರುವಾಗ ಸೇರುವುದು ಅನಿವಾರ್ಯ. ಮುಂದಿನ ಅಭ್ಯಾಸ ಕಡ್ಡಾಯವಾಗಿ ಬೇಕು–ಬೇಡ ಎನ್ನುವುದರೊಳಗಾಗಿ ಒದಗಿ ಬಂತು. ಅವಳು ಎಂದಿನಂತೆ ಉತ್ಸಾಹಶೀಲಳಾದಳು.

* * * * *

ಅದೊಂದು ಅಪೂರ್ವವೂ ಸುಂದರವೂ ಆದ ಸಾಯಂಸಮಯ.

ಪಶ್ಚಿಮ ದಿಗ್ದೇಶದಲ್ಲಿ ಹೊನ್ನಿನ ಹೊಳೆಯಂತೆ ಸಂಧ್ಯಾರಾಗ ತುಂಬಿ ಹರಡಿತ್ತು. ಶೀತಲ ವಾತಾವರಣದಲ್ಲಿ ಅನುಭೂತ ಅದ್ಭುತ ಶಾಂತಿಯಲ್ಲಿ ಏಕಾಂತ ಚಿಂತೆಯನ್ನು ಬಯಸಿ ಗೃಹವಲಯದ ನಸುದೂರದ ಆವರಣದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಒಬ್ಬಳೇ ಅಡ್ಡಾಡತೊಡಗಿದ್ದಾಳೆ. ಚಿತ್ತಪ್ರವೃತ್ತಿ ಭವ್ಯ ಭವಿತವ್ಯದ ಮೇರೆಯಲ್ಲಿ ಅಂಡಲೆಯುತಿತ್ತು-ಆಂತರಂಗಿಕ ಅನುಭಾವ ಸಂಪತ್ತಿಗೆ ಇಂಬು ಕೊಡುವಂತೆ. ಆದರೇನು? ಎಷ್ಟೇ ಯೋಚಿಸಿದರೂ

ಮಾನಸಿಕ ಮಂಥನೆಗೆ ಕಾಣಿಸಿಗುವುದು ಅನುರೋಧ ತರಂಗಗಳೇ. ಏನು ಮಾಡುವುದೋ ಬಗೆ ಹರಿಯುತ್ತಿಲ್ಲ; ಯಾವ ಕ್ರಮ ಕೈಗೊಳ್ಳಲಿ? ಯಾರು ನನಗೆ ಮಾರ್ಗದರ್ಶಕರು?

ಆ ಪ್ರಶ್ನೆ ಎದ್ದಾಗಲೇ ದೂರವಾಣಿಯೊಂದು ಮೊಳಗಿತು.

"ಮಗೂ........."

ಅರೆ! ಯಾರಿರಬಹುದು? ಇದೆಲ್ಲಿಯ ಕರೆ? ಭ್ರಾಂತಿಯೋ? ಭ್ರಮಣೆಯೋ?

"ಮಗೂ ಯೋಚಿಸಬೇಡ; ಶಾಂತಚಿತ್ತಳಾಗು. ನಿನ್ನ ಜೀವನ 'ಸೇವೆ'ಗೆ ಮುಡಿಪು."

ಇದೇನಾಶ್ಚರ್ಯ! ಯಾರ ಧ್ವನಿ ಹೀಗೆ ಮೊಳಗುತ್ತಿದೆ? ಇಷ್ಟು ಸ್ಪಷ್ಟವಾಗಿ ನನಗೆ ಕರ್ತವ್ಯಜ್ಞಾನವನ್ನು ಬೋಧಿಸಿದವರಾರು? ಬಹುಶಃ ನನ್ನ ಭಾಗದ ದೇವರೇ ನನಗೆ ತಿಳಿವಳಿಕೆ ನೀಡಿರಬೇಕು!

ಆ ಯೋಚನೆಗೆ ಶರಣಾದಾಗ ಮನಸ್ಸು ಸ್ಥಿಮಿತಗೊಂಡರೂ ಭ್ರಮಿತ ದೃಷ್ಟಿ ಸುತ್ತಮುತ್ತ ಹರಿದಾಡಿತು. ಎಲ್ಲಿಂದ ಎಲ್ಲಿಯವರೆಗೂ ನಿರ್ಜನ ವಾಗಿದೆ ಪ್ರದೇಶ. ಅಂದಮೇಲೆ ಅದು ದೇವವಾಣಿಯೇ ಹೌದು. ಆದರೆ, ಸೇವೆ ಎಂಬುದರ ಅಂತರಾರ್ಥವೇನು? ಯಾವ ಬಗೆಯ ಸೇವೆ ಕೈಗೊಳ್ಳಬೇಕು? ಎಂಬ ಬಹುದೊಡ್ಡ ಪ್ರಶ್ನೆ ಮನದಲ್ಲಿ. ಸ್ವಲ್ಪ ಹೊತ್ತು ಆ ಯೋಚನೆಯ ಸುಳಿಯಲ್ಲಿ ಸಿಕ್ಕಿ ಸುಮ್ಮನೆ ನಿಂತು ಬಿಟ್ಟಳು.

ಇಳೆಯ ಮೇಲೆಲ್ಲಾ ಕತ್ತಲೆಯ ತೆರೆ ಇಳಿಯುತಿತ್ತು.

ಅವಳು ಅಲ್ಲಿಂದ ಮನೆಯಕಡೆ ಹೊರಟಳು. ಹೃದಯ ಹಗುರ ವಾಗಿದ್ದರೂ ಮನಸ್ಸು ಹಗುರವಾಗಿರಲಿಲ್ಲ. ಮಹಲಿನ ಮೆಟ್ಟಿಲನ್ನು ಹತ್ತಿ ದಾಗ ನಾಯಿಗಳು ಬೊಗಳುತ್ತ ಸರಪಳಿ ಸಹಿತ ಅತ್ತಿತ್ತ ಜಿಗಿದಾಡಿ ತಮ್ಮ ಪ್ರೀತ್ಯಾದರವನ್ನು ವ್ಯಕ್ತಪಡಿಸಿದುವು. ಅವುಗಳನ್ನು ಅಲ್ಲಲ್ಲೇ ಮುದ್ದಿಟ್ಟು ಬಂಧನದಿಂದ ಮುಕ್ತಗೊಳಿಸಿ ಒಳಹೋದಳು.

ಆಳುಗಳು ಇನ್ನೂ ದೀಪವನ್ನು ಹಚ್ಚಿರಲಿಲ್ಲ. ಅವಳು ಲಾಂದ್ರದ ಬತ್ತಿಯನ್ನು ಏರಿಸಿ ಚಿಮಣಿಯನ್ನು ಸ್ವಚ್ಛಗೊಳಿಸಿ ಅಗ್ನಿಸ್ಪರ್ಶಮಾಡಿ ವರಾಂಡಕ್ಕೆ ತರುವುದಕ್ಕೂ ತಂದೆತಾಯಿಯರು ಆಗಮಿಸುವುದಕ್ಕೂ ಸರಿ

ಹೋಯಿತು. ಅವರ ಪ್ರಥಮ ನೋಟಕ್ಕೆ ಜ್ಯೋತಿರ್ಧಾರಿಣೀ ಫ್ಲಾರೆನ್ಸ್ ದೇವನಗರಿಯ ದೇವಿಯಂತೆ ಕಣ್ಣೆಸೆದಳು. ಒಡನೆ ಏನೋ ಒಂದು ಬಗೆಯ ಆನಂದ ವಿಶೇಷದಿಂದ ಪುಳಕಿತರಾದಂತೆ–ಹಾಸ್ಯೋದ್ಗಾರ ಹೊರಬಿತ್ತು.

"ಓ.........ಎಂತಹ ಶೋಭೆ ! ಇದೀಗ ನಿನ್ನನ್ನು ನೋಡಲು ತುಂಬ ಆನಂದ !"

"ಹೌದಮ್ಮ.....ಖಂಡಿತವಾಗಿಯೂ !"

"ಅಂದರೆ.....?"

ಜ್ವಲಿಸುವ ಲಾಂದ್ರವನ್ನು ಎತ್ತಿ ಹಿಡಿದು ಪ್ರಶ್ನಿಸಿದಳು ಫ್ಲಾರೆನ್ಸ್, ಕಣ್ಣುಗಳಲ್ಲಿ ಭಾವಶಾಂತಿಯ ಖಳೆ ಮಿಂಚುತಿತ್ತು.

"ಅರ್ಥವಾಗಲಿಲ್ಲವೇ ? Lady with a lamp !"

ವಿಲಿಯಂ ಹಸನಾದ ನಗೆ ಬೀರಿದ, ಬಿರಿದ ಕೆನ್ನೆಗಳಲ್ಲಿ ಗುಳಿಗಳು ಮೂಡಿದ್ದುವು.

ತಾಯಿ ಹೃತ್ಪೂರ್ವಕವಾಗಿ ಹರಿಸಿದಳು "ಈ ಜ್ಯೋತಿಯಂತೆಯೇ ಬೆಳಗುತ್ತಿರಲಿ ನಿನ್ನ ಜೀವನ !"

"ಹಾಗಾದರೆ ಅದೆಷ್ಟು ಚೆಂದ ? ಖಂಡಿತವಾಗಿಯೂ ಆ ಕಾಲ ಬೇಗನೆ ಬರಲಿ !" ಉತ್ಸಾಹದಿಂದ ಉತ್ತರಿಸಿದಳು ಫ್ಲಾರೆನ್ಸ್ ನೈಟಿಂಗೇಲ್.

"ಬರೀ ಅಂದರೆ ಸಾಕೆ ? ಮದುವೆಯಾಗಿ ಜೀವನೋತ್ಸವ ನಡೆಸು ! ಅಂದರೆ ಜ್ಯೋತಿ ಬೆಳಗುತ್ತೆ."

ಫ್ಲಾರೆನ್ಸ್ ನೈಟಿಂಗೇಲ್ ಅರಳುಗಂಗಳಿಂದ ನೋಡುತ್ತ "ಮದುವೆ..!" ಎಂದಳು.

"ಅಲ್ಲದೆ ಮತ್ತೇನು ?"

ನುಡಿ ಹಾಸ್ಯಪ್ರಧಾನವಾಗಿ ಹೊಮ್ಮಿ, ಹಿಂದೆಯೇ ಎಳೆನಗುವಿನ ಲಹರಿ ಉಕ್ಕಿ ಹರಿಯಿತು. ನಿಂತ ನಿಶ್ಚಲ ನಿಲುವಿನಲ್ಲಿ ತಲೆಯಾಡಿಸುತ್ತ ನುಡಿದಳು ಫ್ಲಾರೆನ್ಸ್ ನೈಟಿಂಗೇಲ್–"ಈ ಸಂಸಾರ ಬಂಧನಕ್ಕೆ ನಾನು ಒಳಗಾಗುವವಳೇ ಅಲ್ಲ !"

"ಮತ್ತೆ ?"

"ನನ್ನ ಜೀವನ ಸೇವೆಗೆ ಮುಡಿಪು; ಭಗವಂತ ಹಾಗೆಂದು ನನಗೆ ಅಪ್ಪಣೆ ನೀಡಿದ್ದಾನೆ!"

"ಹೆಣ್ಣಿಗೆ ಮನೆಯೇ ಭೂಷಣ. ಈಗ ನೋಡು! ನಮ್ಮ ಜೀವನ ಎಷ್ಟೊಂದು ಸರ್ವಾಂಗ ಸುಂದರವಾಗಿದೆ....?"

ನಿಧಾನಗತಿಯಲ್ಲಿ ತಲೆಯಾಡಿಸುತ್ತ ಬಿತ್ತರಿಸಿದಳು ಫ್ಲಾರೆನ್ಸ್ ನೈಟಿಂಗೇಲ್,

"ನಾನು ಅದಕ್ಕಾಗಿ ಜನ್ಮ ಎತ್ತಿ ಬಂದಿಲ್ಲ ಅಮ್ಮಾ!"

"ಹಾಗೆಂದರೆ ಹೇಗೆ? ಇರಲಿ, ನೀನಿನ್ನೂ ಚಿಕ್ಕವಳು....ಅಷ್ಟು ದೂರ ಕುರಿತು ಈಗಲೇ ಯೋಚಿಸಲಾರೆ. ಕಾಲ ಪಕ್ವವಾದಾಗ ನಮ್ಮ ಬಯಕೆ ಏನೆಂಬುದು ನಿನಗೇ ಅರ್ಥವಾಗುತ್ತದೆ."

"ನೀವು ಏನೇ ಅನ್ನಿ, ಅದು ನನ್ನಿಂದ ಸಾಧ್ಯವೇ ಇಲ್ಲ." ದೃಢ ಕಂಠ ದಿಂದ ನುಡಿದಳು ಫ್ಲಾರೆನ್ಸ್ ನೈಟಿಂಗೇಲ್.

"ಈಗಲೇ ಅಷ್ಟು ದೂರ ಹೋಗಬಾರದು." ವಿಲಿಯಂ ಎಡ್ವರ್ಡ್ ಹಿತವಾದ ಹೇಳಿದ.

ಫ್ಲಾರೆನ್ಸ್ ನೈಟಿಂಗೇಲ್ ಮಾತಾಡದೆ ನಗುಮುಖದಿಂದ ನೋಡಿದಳು.

"ಯಾರಿಗೂ ಸಂಸಾರರಹಿತ ಜೀವನ ಇರುವುದೇ ಇಲ್ಲ. ನೀನು ಎಲ್ಲೇ ಇರು; ಅಲ್ಲಿ ಸಂಸಾರ ಬೆಳೆಯುತ್ತೆ. ಯಾರೇ ಇರಲಿ, ಏಕಾಂಗಿಯಾಗಿರಲು ಸಾಧ್ಯವೇ ಇಲ್ಲ."

"ನೋಡೋಣ.....ಏನೇನಾಗುತ್ತೋ."

ದೀಪ ಉರಿಸಲು ಬಂದ ಆಳುಗಳು ಫ್ಲಾರೆನ್ಸ್ ನೈಟಿಂಗೇಲ್ ದೀಪ ಧಾರಿಣಿಯಾಗಿ ನಿಂತುದನ್ನು ಕಂಡರು. ಸುಂದರ ಮುಖಮಂಡಲದ ಮೇಲೆ ಹರಿದ ದೀಪ ಪ್ರಭೆಯಲ್ಲಿ-ಕೆಂದುಟಿಗಳ ಮೇಲೆ ಹರಿದ ಚಿನ್ನದ ರೇಖೆಯಂತಹ ಮುಗುಳ್ನಗು! ಸಂಧ್ಯಾಸ್ಫೂರ್ತಿಯ ಮಾನಸ ಶೋಭೆ ಕಣ್ಮನಗಳನ್ನು ಸೆಳೆದುವು. ಆ ಮುಹೂರ್ತದಲ್ಲಿ ಏನೋ ಒಂದು ಬಗೆಯ ಅಸಾದೃಶ್ಯ ಶ್ರದ್ಧಾಗೌರವ ಒಡೆದು ಮೂಡಿತು-ಆತ್ಮೀಯ ಅಂತಃಸ್ಥಳಗಳಲ್ಲಿ.

* * * * *

ಟಕ, ಟಕ, ಟಕ, ಟಕ, ಟಕ, ಟಕ, ಟಕ.....!

ಲರಕ್, ಲರಕ್, ಲರಕ್, ಲರಕ್, ಲರಕ್, ಲರಕ್....!

ಅಂಕುಡೊಂಕಿನ ಹಾದಿ ಹಿಡಿದವರು ಸೇವಾ ಪರಾಯಣೆಯರಾದ ಧವಳಾಂಬರ ಧಾರಿಣಿಯರು. ಮಾತೃವೈಭವದಲ್ಲಿ ಹಿಡಿದ ಹಾದಿ ವನವಲಯದ ಮೋಹನ ಸಾಮ್ರಾಜ್ಯದಲ್ಲಿ ಅದೆಷ್ಟು ದೂರ ಸಾಗಿತೋ ಹೇಳುವಂತಿಲ್ಲ. ಆಚೆಯ ಅಂಚನ್ನು ಮುಟ್ಟಿದಾಗ ಬೃಹದ್ ಆಲಯ ಕಣ್ಣಿಗೆ ಬಿತ್ತು. ಎಲ್ಲರೂ ಒಳ ಹೋದರು. ಮಧ್ಯೆ ಉದ್ದನೆಯ ಊದಾವರ್ಣದ ಕಾರಿಡಾರ್. ಎಡಬಲಗಳಲ್ಲಿ ಸಾಲುಕೊಠಡಿಗಳು ಒಳಗಡೆ ಸಾಲಾಗಿನ ಹಾಸಿಗೆಗಳಲ್ಲಿ ರೋಗಿಗಳು ಮಲಗಿದ್ದಾರೆ. ಬಿಳಿಯ ದುಪ್ಪಟೆ-ಬಿಳಿಯ ಟವಲ್ಲು.....ಎಲ್ಲವೂ ಧವಳಾಮೃತವನ್ನು ಒಸರುತ್ತಿವೆ. ನಿದ್ರಿಸುವವರು ನಿದ್ರಿಸುತಿದ್ದಾರೆ ; ನರಳುವವರು ನರಳುತಿದ್ದಾರೆ; ಚೀರುವವರು ಚೀರುತ್ತಿದ್ದಾರೆ. ರೋಗರುಜಿನಗಳ ಹಾವಳಿ ದರ್ಪಯುತ ಅಧಿಕಾರ ನಡೆಸುತ್ತಿದೆ.

ಶ್ವೇತವಸನಧಾರಿಣಿಯರು ಕೆಲಸಕ್ಕೆ ಕೈ ಹಚ್ಚುವ ಮುನ್ನ ಸಭಾಂಗಣದಲ್ಲಿ ಕೂಡಿ ಪ್ರಾರ್ಥನೆ ಸಲ್ಲಿಸಿದರು. ಆ ಅಖಂಡ ಪ್ರಾರ್ಥನೆಯ ನಂತರ ಅವರು ಕೈಕೊಂಡದ್ದು ಆ ರೋಗಿಗಳ ಅಖಂಡ ಸೇವೆ. ಫ್ಲಾರೆನ್ಸ್ ನೈಟಿಂಗೇಲಳ ನೇತೃತ್ವದಲ್ಲಿ ನಿಯಮಿತರಾದ ಕೇವಲ ಇಪ್ಪತ್ತು–ಮೂವತ್ತು ಮಂದಿ ದಾದಿಯರು ಅಸಂಖ್ಯ ರೋಗಿಗಳ ಸೇವೆಯನ್ನು ಕೈಕೊಂಡಾಗ ಎದೆ 'ಧಸ್' ಎಂದಿತು. ಅಷ್ಟೊಂದು ಮಂದಿಯ ಸೇವೆ ಎಂದರೆ ಸಾಮಾನ್ಯವೇ ? ಎಣೆಯಿಲ್ಲದ ಕಾಯಕ.....ಎಣೆಯಿಲ್ಲದ ಮಾನವೀಯತೆ ಒಂದನ್ನುಳಿದು ಇನ್ನೊಂದಿಲ್ಲವಾದರೂ ಒಂದನ್ನೊಂದು ಮೀರುವಂತಹ ಸನ್ನಿವೇಶ.

ಅಕಲ್ಪಿತ ವ್ಯವಸ್ಥೆ, ಅಪ್ರಬುದ್ಧ ವೈದ್ಯಕೀಯ ಸಾವು-ನೋವುಗಳ ಪರಂಪರೆಗೆ ನಾಂದಿ ಹಾಡುವುದರಿಂದ ಭೀತಭಾವ ಹೆಜ್ಜೆ ಹೆಜ್ಜೆಗೂ ತೊಡಕಾಗುವುದು. ಮಾನಸಿಕ ಔತ್ಸುಕ್ಯ ಹದಗೆಟ್ಟು ಚಿಂತಾಮುದ್ರೆ ಮುಖದಲ್ಲಿ ಮೂಡುವುದು. ಕೈಕಾಲು ಮುರಿದವರು, ಬೆನ್ನೆಲುಬು ಮುರಿದವರು, ಕೀಲು ಜಾರಿದವರು ಚೀರಿಡುವ ಚೀತ್ಕಾರ ಕರುಳುಕೊಯ್ಯುವಂತಿದ್ದರೆ

ವ್ರಣಗಳಿಗಂಟಿದ ಹಳೆಯ ಬ್ಯಾಂಡೇಜು ಬಿಚ್ಚಿ ಹೊಸ ಬ್ಯಾಂಡೇಜು ಕಟ್ಟು ವಾಗಿನ ಗೋಳು ಪರಮಾತ್ಮನಿಗೇ ಸಂವೇದ್ಯ.

ಫ್ಲಾರೆನ್ಸ್ ನೈಟಿಂಗೇಲ್ ರೋಗಿಯೊಬ್ಬನ ಕಟ್ಟನ್ನು ಬಿಚ್ಚುತ್ತ ಹೇಳಿದಳು,

"ದಯವಿಟ್ಟು ಕಾಲನ್ನು ನೇರವಾಗಿ ನೀಡು."

ವ್ರಣಮಯವಾಗಿದ್ದ ಕಾಲು ಯಾವ ಕಡೆಯೂ ಮುಟ್ಟುವಂತಿರ ಲಿಲ್ಲ; ಅಲುಗಿಸುವಂತೆಯೂ ಇರಲಿಲ್ಲ. ಆತ ನೇರವಾಗಿ ನೀಡಲು ಪ್ರಯ ತ್ನಿಸಿದಾಗ ಅತ್ಯಂತ ನೋವಿನಿಂದ ನರಳಿದ. ಕಣ್ಣುಗಳಂಚಿನಲ್ಲಿ ಬೆಳ್ಳಿಯ ಗೆರೆಯಂತೆ ನೀರಾಡಿತು. ಹೊಂಬಣ್ಣದ ಮುಖಮಂಡಲ ನಸುರಂಗು ತಳೆ ಯಿತು.

"ನಾನು ಸ್ವಲ್ಪ ಸಹಾಯ ಮಾಡಲೇ ?"

"ಬೇಡ.....ನಾನೇ ಪ್ರಯತ್ನಿಸುವೆ....ಎಲ್ಲಿ ಮುಟ್ಟಿದರೂ ನೋವು."

"ಪಾದವನ್ನು ಮೆಲ್ಲಗೆ ಹಿಡಿದೆತ್ತುವೆ."

"ನೋಡೋಣ.....ಎತ್ತು."

"ಅದರಿಂದ ನೋವಾದಲ್ಲಿ ನನ್ನ ಅವಿನಯವನ್ನು ಗಣನೆಗೆ ತೆಗೆದು ಕೊಳ್ಳಬಾರದು."

"ಖಂಡಿತ ಇಲ್ಲ. ಮೆಲ್ಲಗೆ ಹಿಡಿದೆತ್ತು."

ಅವಳು ಮೆಲ್ಲನೆ ಪಾದಗಳನ್ನು ಹಿಡಿದೆತ್ತಿ ಕಾಲನ್ನು ನೇರವಾಗಿ ನೀಡಲು ಸಹಾಯ ಮಾಡಿದಳು. ಆದರೆ, ನೋವಿನ ಅಂಕ ಅಲ್ಲಿಗೆ ಮುಗಿ ಯಿತೇ ? ಗಾಯಗಳಿಗೆ ಕ್ಷಾರವುಳ್ಳ ಮದ್ದನ್ನು ಬಳಿಯುವಾಗಿನ ನೋವು ಜೀವಕಣವನ್ನು ಕಬ್ಬಿನ ಯಂತ್ರದಂತೆ ಹಿಂಡಿದಾಗ ಕರುಳು ಕತ್ತರಿಸುವಂತೆ ಆರ್ತದನಿ ಮೊಳಗಿತು.

"ನಾನು ಎಳೆಂಟು ವರ್ಷಗಳಿಂದ ಇದೇ ರೀತಿ ನರಳುತ್ತಿರುವೆ. ಈ ನೋವು, ಈ ದುರ್ಗಂಧ ಸಾಮಾನ್ಯರಿಂದ ಸಹಿಸುವುದಸಾಧ್ಯ. ನಾನು ಎಷ್ಟೋ ವೇಳೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆ. ಆದರೆ, ಯಾವುದೋ ಒಂದು ಕಂಡರಿಯದ ಆಶಾಕಿರಣ ಅಥವಾ ದೈವೀಶಕ್ತಿ

ನನ್ನನ್ನು ಉಳಿಸಿಕೊಂಡು ಬಂದಿದೆ. ಬಹುಶಃ ಆ ಶಕ್ತಿಯು ಒಂದು ಕಣ ನಿನ್ನ ರೂಪದಲ್ಲಿ ನನಗಿಂದು ಸಹಾಯ ಮಾಡುತ್ತಿರಬಹುದು !"

ಆ ಅತೀವ ನೋವಿನಲ್ಲೂ ಅವನ ಮುಖದಿಂದ ಸವಿನುಡಿ ಹೊರ ಬಿತ್ತು.

ಅವನಿಗೆ ಸಲ್ಲಬೇಕಾದ ಸೇವೆಯನ್ನು ಸಲ್ಲಿಸಿ ಎರಡನೆಯ ಹಾಸಿಗೆಯ ಬಳಿಗೆ ಹೋದಾಗ ರೋಗವುಲ್ಬಣಿಸಿ ಅಸ್ವಾಸ್ಥ್ಯದಲ್ಲಿದ್ದ ರೋಗಿ ಕನವರಿಸುತಿದ್ದ. "ಸ್ವಲ್ಪ ತಾಳು.....! ಸ್ವರ್ಗದ ಬಾಗಿಲು ಇನ್ನೂ ತೆರೆಯಲಿಲ್ಲ !"

ದೃಷ್ಟಿಯು ಬೆಳಕು ನಶಿಸುತ್ತ ಬಂದು, ಆಯತಪ್ಪಿ ಮಿಡಿಯುತಿತ್ತು ಹೃದಯ. ಪರಲೋಕಕ್ಕೆ ಪಯಣಿಸಲು ಸಿದ್ಧಗೊಂಡ ಪ್ರಾಣಪಕ್ಷಿ ಗೂಡು ಬಿಡುವುದೊಂದು ಬಾಕಿ.

ಆ ನತದೃಷ್ಟ ವ್ಯಕ್ತಿಯ ಸ್ಥಿತಿಗತಿ ಹೃದಯವನ್ನು ಮಂಜಿನಂತೆ ಕರಗಿಸಿತು. ಕಣ್ಣುಗಳಲ್ಲಿ ಧಾರಾಕಾರವಾಗಿ ಹರಿದ ಕಂಬನಿಯಿಂದ ತಣ್ಣಗೆ ತೊಯ್ದ ದಿಂಬು ಕಪೋಲಕ್ಕೆ ಒತ್ತಿದಾಗ ಗಾಢವಾದ ನಿದ್ದೆಯಿಂದ ಎಚ್ಚರಗೊಂಡಳು ಫ್ಲಾರೆನ್ಸ್ ನೈಟಿಂಗೇಲ್. ರಾತ್ರಿಯ ದೀಪ ಕ್ಷೀಣಕಿರಣಗಳನ್ನೆರಚಿ ಒಳಪ್ರಪಂಚವನ್ನು ಪ್ರದರ್ಶಿಸಿತ್ತು. ಬ್ರಾಹ್ಮೀಮುಹೂರ್ತದ ಕುಳಿಗಾಳಿ ಮೈ ಕೊರೆಯುವಂತೆ ಘುದ್ದಿಟ್ಟೊಡನೆ ಹಾಸಿಗೆಯಿಂದ ಎದ್ದು ಕುಳಿತು ಸುತ್ತಮುತ್ತ ಆಶ್ಚರ್ಯಚಕಿತ ದೃಷ್ಟಿಯನ್ನು ಬೀರಿದರೆ ಚಿತ್ತಭಿತ್ತಿಯ ಮೇಲೆ ಅದೇ ವಾಸಗೃಹ, ಅದೇ ಕೊಠಡಿ, ಅದೇ ಸುಪ್ಪತ್ತಿಗೆ, ಅದೇ ಗವಾಕ್ಷಿ !

ಆದರೆ, ಅದು ಕನಸೋ ನನಸೋ ಅರ್ಥವಾಗದಷ್ಟು ಕಿಂಕುರ್ವಾಣತೆ ಮನದಲ್ಲಿ. ಆ ದಾದಿಯರು, ಆ ಆಸ್ಪತ್ರೆ; ಆ ರೋಗಿಗಳು, ಎಲ್ಲಾ ಎಲ್ಲಿಯ ಚಿತ್ರಕಲ್ಪನೆ ? ಮನಸ್ಸಿನಲ್ಲಿ ಎಂದೂ ನೆನೆಯದಿದ್ದ ವಿಚಾರ ಕನಸಿನಲ್ಲಿ ಮೂಡಿ ಬಂದುದಾದರೂ ಹೇಗೆ ? ದೇವವಾಣಿ ಮೊಳಗಿದರೂ ಜೀವನ ಧ್ಯೇಯವನ್ನು ಕಂಡುಕೊಳ್ಳಲಾಗದೆ ಎಷ್ಟು ಪರಿತಪಿಸುತ್ತಿದ್ದೆ ? ಬಹುಶಃ ಅದರಿಂದಲೇ ಭಗವಂತ ಇಂದು ಕನಸಿನಲ್ಲಿ ಸ್ಪಷ್ಟವಾದ ಚಿತ್ರ ಮೂಡಿಸಿದ್ದಾನೆ ! ಇದಕ್ಕಿಂತಲೂ ಮಿಗಿಲಾದ ಯಾವ ಆದೇಶ ಬೇಕು ?

ಏನೇ ಬರಲಿ, ಇನ್ನು ಮುಂದೆ ಎಲ್ಲಿ ನೋವಿರುವುದೋ ಅಲ್ಲಿ ನಾನಿರುವೆ. ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಸೇವೆ ಸಲ್ಲಿಸುವೆ. ಅದೇ ನನ್ನ ಜೀವನ ಧ್ಯೇಯ ! ಅದೇ ನನ್ನ ಜನ್ಮ ಸಾರ್ಥಕತೆ !

ಪರಮ ಉದ್ಗಾರ ಅತ್ಯಂತ ಭಾವೋದ್ವೇಗದಿಂದ ಹೊರಬಿತ್ತು. ಫ್ಲಾರೆನ್ಸ್ ನೈಟಿಂಗೇಲ್ ಅದೇ ಚಿಂತನೆಯಲ್ಲಿ ಮನನೆಟ್ಟು ಪುನಃ ಹಾಸಿಗೆಯ ಮೇಲೆ ಅಡ್ಡಾದಳು. ಮನಸ್ಸಾಗರ ತರಂಗತರಂಗವಾಗಿ ಉಕ್ಕೇರಿ ಬಂತು. ಶಾಂತಿ ಸಂಭ್ರಮಗಳೆರಡನ್ನೂ ಒಂದೇ ಬಾರಿಗೆ ಪಡೆದುಕೊಂಡಷ್ಟು ಉತ್ಸಾಹ ಮನದಲ್ಲಿ. ಎಷ್ಟೊತ್ತಾದರೂ ಮತ್ತೆ ನಿದ್ದೆ ಬಾರದಿದ್ದುದರಿಂದ ಎದ್ದು ದೀಪದ ಕುಡಿಯನ್ನು ಎತ್ತರಿಸಿದಳು. ಜಾಜ್ವಲ್ಯಮಾನವಾದ ಕಿರಣಗಳು ಕೊಠಡಿಯನ್ನು ಬೆಳಗಿದುವು. ನೆಲದ ಮೇಲೆ ಮಂಡಿಯೂರಿ ಕುಳಿತು ತಿಳಿವಳಿಕೆ ನೀಡಿದ ಭಗವಂತನಿಗೆ ಮನಮುಟ್ಟಿ ಪ್ರಾರ್ಥನೆ ಸಲ್ಲಿಸಿದಳು.

ಬೆಳಗ್ಗೆ ಎಷ್ಟೊತ್ತಾದರೂ ಮಗಳ ಕೊಠಡಿಯ ಕದ ತೆರೆಯದಿದ್ದುದರಿಂದ ಆಶ್ಚರ್ಯಭರಿತಳಾದ ತಾಯಿ ಬಾಗಿಲ ಬಳಿ ನಿಂತು ಮೂಕ ಕರೆ ನೀಡಿದಳು,

ಕಟ, ಕಟ, ಕಟ, ಕಟ.

"Yes please !"

ಬಾಗಿಲನ್ನು ತಳ್ಳಿ ಒಳಹೆಜ್ಜೆ ಇಟ್ಟು ಕೇಳಿದಳು ತಾಯಿ,

"ಇಂದೇನಮ್ಮಾ, ಇನ್ನೂ ಮಲಗಿದ್ದೀ ?"

"ಸುಮ್ಮನೆ."

ಹಾಸಿಗೆಯಿಂದೆದ್ದು ಉಟ್ಟ ಬಟ್ಟೆಯನ್ನು ಕೊಡವಿ ಸರಿಪಡಿಸಿಕೊಂಡು ಬಿಚ್ಚಿ ಸಿಕ್ಕು ಸಿಕ್ಕಾಗಿದ್ದ ಕೂದಲನ್ನು ಹಾಗಿಂದ್ಹಾಗೇ ಜಡೆ ಹೆಣೆದುಕೊಳ್ಳುತ್ತ ಮುಖಬಿಂಬದಲ್ಲಿ ಅತೀವ ಆನಂದಭಾವವನ್ನು ಪ್ರದರ್ಶಿಸಿದಳು ಫ್ಲಾರೆನ್ಸ್ ನೈಟಿಂಗೇಲ್.

"ಸುಮ್ಮನೆ....? ಎಂದು ಕಿಂಚಿತ್ ಆಶ್ಚರ್ಯ ವ್ಯಕ್ತಪಡಿಸಿದ ತಾಯಿ ಪುನಃ ಮೃದುಮಂದ ಸ್ವರದಲ್ಲಿ ಮುಂದುವರಿದಳು "ನಿನಗೆ

ಆರೋಗ್ಯ ಸರಿಯಾಗಿಲ್ಲ ಎಂದುಕೊಂಡಿದ್ದೆ. ನನಗೆ ಚಿಂತೆ; ನೀನು ಆರಾಮವಾಗಿದ್ದಿ !"

ಅವಳು ಎದ್ದು ಕುಳಿತು ಉಲ್ಲಸಿತ ಮನದಿಂದ ಕನಸಿನ ಚಿತ್ರಾತ್ರವನ್ನು ಮುಂದಿಟ್ಟು ಹೇಳಿದಳು,

"ನನಗೆ ಇದುವರೆಗೆ ಯಾವುದು ಅರ್ಥವಾಗಿರಲಿಲ್ಲವೋ, ಅದನ್ನು ಭಗವಂತ ಸ್ಪಷ್ಟವಾಗಿ ಇಂದು ತಿಳಿಯಪಡಿಸಿದ್ದಾನೆ !"

ಧ್ವನಿ ತಂತಿವಾದ್ಯದ ಝುಂಕಾರದಂತೆ ಮೊಳಗಿದಾಗ ಮಾತೃಹೃದಯ ಯಾವ ರೀತಿ ಅರ್ಥೈಸಿತೋ ಊಹಿಸುವುದು ಕಷ್ಟ.

* * * * *

ಕಿಟಕಿಯಲ್ಲಿ ಅರುಣಕಿರಣಗಳು ಕೋಲುಕೋಲಾಗಿ ವ್ಯೆಚಾಚಿದ್ದುವು. ತಂಗಾಳಿ ತಣ್ಣಗೆ ನುಗ್ಗಿ ಬರುವಾಗ ಕಿಟಕಿಯ ಪರದೆಗಳು ಅತ್ತಿತ್ತ ಹಾರಾಡುತಿದ್ದರೆ ಸ್ವಾಗತಿಸುವ ಬಾವುಟಗಳಂತೆ ಕಾಣಿಸುತಿತ್ತು.

"ನೀವು ಏಕೆ ಇಷ್ಟೆಲ್ಲಾ ವಿರೋಧಿಸುವಿರೋ ನನಗಂತೂ ಅರ್ಥವಾಗುವುದಿಲ್ಲ."

"ನೋಡು ಮಗೂ.....! ಇದು ಪ್ರತಿಷ್ಠೆಯ ಪರಾಕಾಷ್ಠೆ."

"ಸ್ವಾಭಿಮಾನ ಅಷ್ಟೊಂದು ದೂರ ಹೋಗಬಾರದು."

"ಸ್ವಾಭಿಮಾನ ಮಾನ ಮರ್ಯಾದೆಗೆ ಪೂರಕ."

"ಮಾನ-ಮರ್ಯಾದೆಗೆ ಮೀರಿ ವರ್ತಿಸಿದಾಗ ಆ ಪ್ರಶ್ನೆ."

"ನಿನಗೆ ನಿನ್ನದೇ ಹಠ. ನಮ್ಮ ಮಾತು ಲಕ್ಷ್ಯಕ್ಕೆ ಬರುತ್ತಿಲ್ಲ."

"ಈಗ...."

ಆ ಮಾತನ್ನು ಮುಂದುವರಿಸಗೊಡದಂತೆ ತಾಯಿ ನಡುವೆ ಬಾಯಿ ಹಾಕಿದಳು,

"ನೀನು 'ದಾದಿವೃತ್ತಿ'ಯಂತಹ ಕೀಳು ವೃತ್ತಿಯನ್ನು ಏಕೆ ಕೈಕೊಳ್ಳಬೇಕು ? ಈ ಜೀವನ ವೈಭವ-ಈ ಸರ್ವೋಚ್ಚ ಪ್ರಕೃತಿಯ ಪರಿಸರ ಮಾನಪತೆಯ ಪುಷ್ಟೀಕರಣಕ್ಕಾಗಿಯೇ ಇವೆ. ಈ ಸೌಭಾಗ್ಯವನ್ನು ನೀನೇಕೆ ಬಿಟ್ಟುಕೊಡಬೇಕು ? ಯಾವ ಜನ್ಮದ ಪುಣ್ಯಫಲದಿಂದಲೊ ನಿನಗೆ ಲಭಿಸಿದ ಇದನ್ನು ಯಾವ ಕಾರಣಕ್ಕೂ ಸ್ವಂತ ಕೈಗಳಿಂದ ತಳ್ಳಬೇಡ."

ಮನಃಕ್ಷೋಭೆಯಿಂದ ಹರಿದ ನುಡಿಯ ಹಿಂದೆಯೇ ನಿಡಿಯುಸಿರು ಹೊಮ್ಮಿತ್ತು. ಅರ್ಥಭರಿತವಾದ ಉಷ್ಣೋಧಿಕ ಜ್ವಾಲೆಯಲ್ಲಿ ಬೆಂದು ಬಾಡಿದಂತೆ ಮುಖಬಿಂಬ ಪರಿವರ್ಲ್ಲಾನವಾಗಿತ್ತು,

ಫ್ಲಾರೆನ್ಸ್ ನೈಟಿಂಗೇಲ್ ಅಷ್ಟೇ ನಿರಾಳವಾಗಿ ಉತ್ತರಿಸಿದಳು.

"ನನಗೆ ಯಾವ ವೈಭವವೂ ಬೇಡ. ಇಂದು ನನ್ನ ಮನಸ್ಸು-ಹೃದಯ ಅವನ್ನು ಗುರುತಿಸುವ ಸ್ಥಿತಿಯಲ್ಲಿ ಖಂಡಿತ ಇಲ್ಲ."

ಅನಂತರ ಆ ತಾಯಿ ಅದೆಷ್ಟು ಕಂಠಶೋಷಣೆ ಮಾಡಿದಳೋ ಅದೆಲ್ಲಾ ತಂಗಾಳಿಯಲ್ಲಿ ತೂರಿ ಹೋಯಿತು ಎನ್ನಬಹುದು.

ಆದರೆ,

ಪ್ಯಾಟಿ ಅನ್ನುವುದೇನು ?

"ಏನೇ ಇರಲಿ, ಫ್ಲಾರೆನ್ಸ್. ನಾನು ನಿನ್ನನ್ನು ಸದಾ ಬೆಂಬಲಿಸುವೆ. ಯಾವ ಹಾದಿಯೇ ಆಗಲಿ, ನೀನು ಮುಂದೆ, ನಾನು ಹಿಂದೆ !"

ಹೋಗಲಿ, ಒಬ್ಬಳಾದರೂ ನನ್ನನ್ನು ಬೆಂಬಲಿಸುತಾ್ತಳಲ್ಲ ಎಂಬ ಸಮಾಧಾನ ಮನಸ್ಸಿಗೆ. ಆಗ ಅವಳಿಗೆ ಸಲ್ಲಿಸಿದ ಸೇವೆ ಅಲ್ಪ ; ಆದರೆ ಅದರಿಂದಾದ ಲಾಭ ಅಪಾರ. ಆ ವಿಚಾರಶ್ರದ್ಧೆ ನೂರಕ್ಕೆ ನೂರರಷ್ಟು ಉತ್ತೇಜನ ನೀಡುತ್ತದೆ.

ಆದರೇನು ?

ಶ್ರೀಮಂತ ಸಮಾಜದ ಸಂಘಟನಾಶಕ್ತಿ ಅವಳ ಮೇಲೆ ಬಂಡೆದ್ದು ನಿಂತಿತ್ತು, ನಿಂದೆ, ಆರೋಪಗಳು ಅವ್ಯಾಹತವಾಗಿ ದಾಳಿಯಿಟ್ಟುವು. ಆದರೂ ಅದಕ್ಕೆ ಯಾವ ಪ್ರಾಧಾನ್ಯತೆಯನ್ನೂ ನೀಡದೆ, ಹಿಡಿದ ಹಠವನ್ನೂ ಬಿಡದೆ ಅದೇ ಚಿಂತನೆಯಲ್ಲಿ ಮುಳುಗಿದ ಫ್ಲಾರೆನ್ಸ್ ನೈಟಿಂಗೇಲ್ ಮನಶ್ಶಾಂತಿಯನ್ನು ಕಳೆದುಕೊಂಡುದರಿಂದ ಗತ್ಯಂತರವಿಲ್ಲದೆ ತಂದೆ ತಾಯಿಯರು ಅಪ್ಪಣೆ ನೀಡಿದರು. ಅವಳು ಅತ್ಯಂತ ಸಡಗರದಿಂದ ತನ್ನ ಅನೇಕ ಗೆಳತಿಯರೊಡನೆ ದಾದಿಯರ ಶಿಕ್ಷಣಾರ್ಥಿಯಾಗಿ ಜರ್ಮನಿಯ 'ಕೈಸರ್‌ವರ್ತ್' ಶಾಲೆಯನ್ನು ಸೇರಿಕೊಂಡಳು. ಹೃದಯ ಹಂಬಲ ಆನಂದದ ಸ್ರೋತವಾಗಿ ಹರಿಯತೊಡಗಿತು. ಶಿಕ್ಷಣಾವಧಿಯ ದಿನಗಳು ಲೀಲಾಜಾಲವಾಗಿ ಕಳೆದು ಹೋದವು. ೧೮೫೨ ರಲ್ಲಿ ಮುಕ್ತಮನದಿಂದ ಅವಳು ಉದ್ಯೋಗವನ್ನು ಕೈಗೊಂಡು ಹೊತ್ತಿಸಿದ

ದೀಪದ ಕುಡಿ ಇಂದಿಗೂ ಅಚ್ಚಳಿಯದಂತೆ ಉರಿಯುತ್ತಿರುವುದು ಮಾನವೀಯತೆಯ ಒಂದು ವಿಶೇಷ ಕುರುಹು.

ಪ್ರಾಯಶಃ ಮರುದಿನವೇ ಕ್ರಿಮಿಯದಲ್ಲಿ ಇಂಗ್ಲೆಂಡ್ ರಷ್ಯಗಳಿಗೆ ಸಂಭವಿಸಿದ ಭೀಕರ ಯುದ್ಧರಂಗದಲ್ಲಿ ಮಡಿದ ಯೋಧರ ವಿಚಾರ ಒತ್ತಟ್ಟಿಗಿರಲಿ, ಗಾಯಾಳುಗಳಿಗೆ ಅಗತ್ಯವಾದ ಶುಶ್ರೂಷೆಯಿಲ್ಲದೆ ಅಸುನೀಗಿದವರ ಸಂಖ್ಯೆಯೇನೂ ಕಡಿಮೆಯದಲ್ಲ. ಆ ಅಧಿಕ ಸಂಖ್ಯೆಯ ಶವಗಳನ್ನು ಸಂಸ್ಕರಿಸಲು ಸಾಧ್ಯವಾಗದೇ ಸಮುದ್ರಕ್ಕೆ ಎಸೆಯುವ ಪ್ರಸಂಗವೇ ಬಹಳ. ಅಂತಹ ಸಂಕಟ ಪರಿಸ್ಥಿತಿಯಲ್ಲಿ ನರುಳುತ್ತ ಜೀವ ಹಿಡಿದಿರುವ ಗಾಯಾಳುಗಳು ಜೀವತೆತ್ತ ತಮ್ಮ ಅನುಯಾಯಿಗಳ ಬಗ್ಗೆ ಕರುಣಕಾತುರತೆಯಿಂದ ಅನುಕಂಪ ತೋರುತ್ತ "ಹೀಗೆ ನರುಳುತ್ತ ಬದುಕಿರುವುದಕ್ಕಿಂತ ಸತ್ತವರು ಖಂಡಿತ ಪುಣ್ಯವಂತರು !" ಎನ್ನುವರು_ಎದೆಯಾಳದಿಂದ ನಿಟ್ಟುಸಿರನ್ನು ಹೊರಹಾಕಿ.

ರೋಗಿಗಳಿಗೆ ವಿವಿಧ ನಂಜುಜಾಡ್ಯಗಳು ವ್ಯಾಪಕವಾಗಿ ಹರಡಿ ಚಿಕಿತ್ಸಾಕ್ರಮ ಫಲವತ್ತಾಗದೆ ಸ್ಥಿತಿಗತಿ ದಿನದಿನಕ್ಕೂ ವಿಷಮಗೊಳ್ಳುತಿತ್ತು. ಕ್ರಮವರಿತು ಶುಶ್ರೂಷೆ ಮಾಡುವವರ ಕೊರತೆ ಬೇರೆ. ಆಗಿನ ಅನಿವಾರ್ಯ ಪರಿಸ್ಥಿತಿಯಲ್ಲಿ ಬ್ರಿಟೀಷ್ ಸರ್ಕಾರ ಫ್ಲಾರೆನ್ಸ್ ನೈಟಿಂಗೇಲಳಿಗೆ ಕಾತರಯುತ ಕರೆ ನೀಡಿತು. ಆ ವೇಳೆಗಾಗಲೇ ಅವಳ ಧವಳಕೀರ್ತಿ ಕಸ್ತೂರಿ ಪರಿಮಳದಂತೆ ಪರಿಸರದಲ್ಲಿ ತುಂಬಿ ಹರಡಿದ್ದುದೇ ಅದಕ್ಕೆ ಕಾರಣ. ಸೈನಿಕರ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಬೇಕೆಂಬ ಪ್ರಾರ್ಥನೆ ಕಾರುಣ್ಯ ಪೂರ್ಣ ಅಂತಸ್ಥಲವನ್ನು ಮುಟ್ಟಿದಾಗ ಅವಳು ಸ್ವಲ್ಪವೂ ಹಿಂಜರಿಯದೆ ಕ್ರಿಮಿಯಕ್ಕೆ ಹೊರಡಲು ಸಿದ್ಧಳಾದಳು.

ಗಲಿಬಿಲಿರ ಅಕ್ಟೋಬರ್ ತಿಂಗಳ ಸುಂದರ ವಾತಾವರಣದಲ್ಲಿ ಮೂವತ್ತೆಂಟು ಮಂದಿ ಸಹ ದಾದಿಯರೊಡನೆ ಫ್ಲಾರೆನ್ಸ್ ನೈಟಿಂಗೇಲ್ ಕ್ರಿಮಿಯಕ್ಕೆ ಹೊರಟಳು. ಅಂದು ಅವಳು ಕಂಡ ಕನಸಿನ ಚಿತ್ರ ಸ್ಪಷ್ಟವಾಗಿ, ಪರಮಾರ್ಥದ ಪ್ರತೀಕವಾಗಿ ಪ್ರತ್ಯಕ್ಷ ಪ್ರಮಾಣವಾಯಿತು. ಅದೇ ಅಂಕುಡೊಂಕಿನ ಹಾದಿ, ಅದೇ ಧವಳಾಂಬರಧಾರಿಣಿಯರು, ಅದೇ ಸೇವಾಕಾಂಕ್ಷೆ, ಅದೇ ಅನುಕಂಪ, ಅದೇ ನಡಿಗೆ, ಅದೇ ಲರಕ್ ಲರಕ್ ಪದಾಘಾತ !

ಆದರೆ.........!

ಆಗಲೂ ಶ್ರೀಮಂತ ಸಮಾಜದಿಂದ ಹೊಮ್ಮಿದ ಪ್ರತಿಕ್ರಿಯೆಯಾದರೂ ಎಂತಾದ್ದು ?

"ಛೆ:! ಛೆ: ! ಅಸಹ್ಯ ನಾಚಿಕೆಗೇಡು!"

"ಅಲ್ಲ, ಅಲ್ಲ. ಅರೆ ಮರುಳು !"

ಫ್ಲಾರೆನ್ಸ್ ನೈಟಿಂಗೇಲ್ ಆ ಯಾವುದಕ್ಕೂ ಕಿವಿಗೊಡದೆ ದೃಢಭಾವ ತಳೆದಳು—ಕಲ್ಲಿಗಿಂತ ಕಲ್ಲಾಗಿ. ಮಣ್ಣಿಗಿಂತ ಮಣ್ಣಾಗಿ.

ಆಸ್ಪತ್ರೆಯ ಒಳಾಂತರವೆಲ್ಲಾ ರೋಗಿಗಳು ತುಂಬಿ ಹೋಗಿದ್ದುದರಿಂದ ಹೊರ ಅಂಗಳದಲ್ಲಿ ನಾಯಿಕೊಡೆಗಳಂತೆ ಟೆಂಟುಗಳು ಎದ್ದಿದ್ದುವು. ಅನೇಕರಿಗೆ ಜಗಲಿ ಮತ್ತು ಓಡಾಡುವ ದಾರಿಗಳಲ್ಲಿ ಸ್ಥಳಾವಕಾಶ ಕಲ್ಪಿಸಲಾಗಿತ್ತು. ಆದರೂ ಸಹ, ಸ್ಥಳ ಸಂಕೋಚವೇ. ಮಾಗದ ಗಾಯಗಳ ದುರ್ಗಂಧ, ಕರುಳು ಕೊರೆಯಿಸುವಂತಹ ನರಳು ಧ್ವನಿ ಕಿವಿಮೂಗುಗಳನ್ನು ಅವ್ಯಾಹತವಾಗಿ ಮುತ್ತುತ್ತಿತ್ತು. ವೈದ್ಯಕೀಯ ಸಿಬ್ಬಂದಿ, ದಾದಿಯರ ತಂಡ ತೀರ ಕಡಿಮೆಯಾದುದರಿಂದ ಸಕಾಲದಲ್ಲಿ ಚಿಕಿತ್ಸೆ ಪೂರೈಸುವುದು ಕಷ್ಟ.

ಅತ್ಯಂತ ಆಶ್ಚರ್ಯಕರ ರೀತಿಯಲ್ಲಿ ನನಸಾದ ಕನಸು ಒಮ್ಮೆಗೇ ಧೈರ್ಯದ ಕಟ್ಟೆಯನ್ನು ಒಡೆಸುವಂತಿದ್ದರೂ ಸಹ, ಸೊಂಪಾಗಿ ಕವಲೊಡೆದು ಚಿಗುರುತ್ತಿತ್ತು ಸೇವಾಕಾಂಕ್ಷೆಯ ಕುಡಿ.

ಅವುದೋ ಪುರಾತನ ಕಟ್ಟಡದಲ್ಲಿ ವೈದ್ಯಕೀಯ ಚೇತನ ಠಾಣ್ಯ ಹೂಡಿತ್ತು. ಗಾಳಿ ಬೆಳಕುಗಳ ತೀವ್ರ ಅಭಾವ. ನೀರುನಿಡಿಗಳ ಅನಾನುಕೂಲ. ಒಳಾಂತರವಂತೂ, ಮುಸುಗತ್ತಲೆಯ ದಟ್ಟನಿವಾಸ. ಅಲ್ಲಿ ಒಬ್ಬರ ಮುಖವನ್ನೊಬ್ಬರು ಸ್ಪಷ್ಟವಾಗಿ ನೋಡಬೇಕೆಂದರೆ ಹಗಲೂ ಸಹ ಲಾಂದ್ರವನ್ನು ಉರಿಸಲೇ ಬೇಕು.

ಫ್ಲಾರೆನ್ಸ್ ನೈಟಿಂಗೇಲ್—ದೀಪಧಾರಣಿಯಾಗಿ ಹಾಸಿಗೆಯಿಂದ ಹಾಸಿಗೆಗೆ ಚಲಿಸುವಾಗ ದೇವಮಾನಿನಿಯಂತೆ, ಅಭಿನವ ಮಾತೃಕೆಯಂತೆ ಕಂಗೊಳಿಸುವಳು !

ಅದರೇನು ? ಅಲ್ಲಿಯೂ ಸಣ್ಣ ಮನಸ್ಸಿನ ಪ್ರಚ್ಛನ್ನ ಸಮರ ಕಾದಿರಬೇಕೇ ?

ಆವಳ ಎಣೆಯಿಲ್ಲದ ಸೇವಾ ಮನೋಧರ್ಮ ಅಪಾರವಾದ ಗೌರವಾದರಗಳನ್ನು ಗಳಿಸಿ ವೈದ್ಯವೃಂದದ ಎತ್ತರವನ್ನೂ ಮೀರಿ ನಿಂತಾಗ ಅವರಿಗೆ

ಸಂತಸ ಮೂಡುವ ಬದಲು ಈರ್ಷ್ಯೆ ಗುಡ್ಡದಷ್ಟು ಬೆಳೆಯಿತು. ಅಂತರ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಕಿಚ್ಚಿನ ಕಿಡಿ ಹೊಗೆಯಾಡತೊಡಗಿ ಸಹಾಯ ಸಹಕಾರಗಳು ದೂರ ದೂರವಾಗುತ್ತ ಹೋದುವು. ಸೈನ್ಯಾಧಿಕಾರಿಗಳು ವೈದ್ಯರ ಬೆನ್ನು ಚಪ್ಪರಿಸಿ ಮೆಚ್ಚಿಗೆ ಪಡೆಯಲು ಪ್ರಗತಿಯ ಹಾದಿಗೆ ವೃಥಾ ಕಿರುಕುಳದ ಇಕ್ಕಳವನ್ನೊಡ್ಡಿದರು. ವಿನಾ ಕಾರಣ ತಂಟೆ ತಗಾದೆಗಳು ಹೆಡೆಯೆತ್ತಿದುವು. ಪರಿಸ್ಥಿತಿಯ ವೈಪರೀತ್ಯದಲ್ಲಿ ಹೆಜ್ಜೆ ಮುಂದಿಡುವುದೂ ಕಷ್ಟ ; ಹಿಂದಿಡುವುದೂ ಕಷ್ಟ, ಮೊದಲೇ ಆ ಆಸ್ಪತ್ರೆ ಅವ್ಯವಸ್ಥೆಯ ಆಗರ. ಅನಂತರವಂತೂ ಅಲ್ಲಿ ಕೆಲಸ ನಿರ್ವಹಿಸುವುದೇ ಕಠಿಣ ಎಂಬಷ್ಟು ಹೀನಸ್ಥಿತಿಗಿಳಿದು ಅಸಹನೀಯ ವಾತಾವರಣ ಕಲ್ಪಿಸಿತು.

ಅಂದು,

ರಾತ್ರಿ ಪಲ್ಲಂಕವನ್ನು ಸೇರುವ ಮುನ್ನ ದುರ್ವಹ ಚಿಂತಾಭಾರದಿಂದ ಪರಿತಪಿಸುತ್ತ ಆರ್ತಹೃದಯಳಾಗಿ ನೆಲದ ಮೇಲೆ ಮಂಡಿಯೂರಿ ಕುಳಿತು ಪ್ರಾರ್ಥನೆ ಸಲ್ಲಿಸಿದಳು ಫ್ಲಾರೆನ್ಸ್ ನೈಟಿಂಗೇಲ್. ಒಡಲಬಳ್ಳಿ ಸಂಕಟದಿಂದ ತುಂಬಿ ನರತಂತುಗಳು ಸೀಳಿಹೋಗುವಂತಹ ಪರಿತಾಪ; ಬಿಸಿಯುಸಿರು ಎದೆಯಾಳದಲ್ಲಿ ಸಿಕ್ಕಿಕೊಂಡಂತೆ ಅತೀವ ತ್ರಾಸ ; ಆದರೂ ಏಕಾಂತ ಪ್ರಾರ್ಥನೆ ನಿರಾಳವಾಗಿ ಸಾಗಿತು.

ನಿದ್ರಾಹೀನ ಗಾಯಾಳುಗಳ ಚೀತ್ಕಾರ ನೀರವತೆಯ ಎದೆಯನ್ನು ಇರಿಯುವಂತೆ ಮೊಳಗುತ್ತಿದ್ದುದು ಹೊಸದಲ್ಲವಾದರೂ ಮನಸ್ಸಿಗೆ ಕಿನಿಸಿಗೆ-ಸಂಕಟ. ಹಾಸಿಗೆಯನ್ನು ಸೇರಿ ಕಣ್ಣು ಮುಚ್ಚಿದರೂ ನಿದ್ದೆ ಆ ಬಳಿಯಲ್ಲಿ ಸುಳಿಯದು ಎಷ್ಟೇ ಪ್ರಯತ್ನಿಸಿದರೂ ಮನದ ಬೇಗೆ ಅಡಗದು ; ಹೃದಯದ ತಾಪ ಹರಿಯದು.

ಹೊತ್ತು ಉರುಳಿತು. ವಾಯುಮಂಡಲದಲ್ಲಿ ಶೈತ್ಯಸಂಚಾರ ತೀವ್ರಗೊಂಡಿದೆ. ಇನ್ನು ಕೋಳಿ ಕೂಗುವುದೊಂದು ಬಾಕಿ.

ಆದರೂ, ಒಡಲ ಸಂಕಟ ಅಳಿಯಲಿಲ್ಲ. ಕಣ್ಣಿಗೆ ನಿದ್ದೆಯೂ ಬರಲಿಲ್ಲ.

ಅಂತರ್ವಾಣಿ ಪರಿತಪಿಸುವ ಮನಕ್ಕೆ ಸಾಂತ್ವನ ನೀಡುವಂತೆ ಸಮಾಧಾನ ಪೂರ್ವಕವಾಗಿ ನುಡಿಯಿತು,

"ಮುನ್ನಡೆಸುವವ ಬೇರೆಯೇ ಇರುವಾಗ ಚಿಂತೆಯೇಕೆ ಮಗೂ !"

"ಆದರೆ........"

"ಆದರೆ–ಗೀದರೆಯನ್ನು ಬದಿಗಿಟ್ಟು ಕೆಲಸ ಮುಂದುವರಿಸು."

"ಈ ಎಲ್ಲಾ ಅಡಚಣೆಗಳಲ್ಲಿ ನನ್ನ ಕೆಲಸವೇನು ನಡೆದೀತು ದೇವಾ!"

"ನಡೆದಷ್ಟು ನಡೆಯಲಿ; ಎಷ್ಟು ಸೇವೆ ಸಲ್ಲಿಸಿದರೆ ಅಷ್ಟು ಸಾಕು."

"........"

"ಮುಂದಿಟ್ಟ ಹೆಜ್ಜೆ ಹಿಂತೆಗೆಯಬೇಡ."

"ದಯಮಾಡಿ ಆಶೀರ್ವದಿಸು."

"ಆಮೆನ್!"

* * * *

ತೀರ ನಸುಕಿನಲ್ಲೇ ಎದ್ದಿದ್ದ ಫ್ಲಾರೆನ್ಸ್ ನೈಟಿಂಗೇಲ್ ಸಹದಾದಿಯರೊಡನೆ ಆಸ್ಪತ್ರೆಗೆ ಹೊರಡಲು ಆಗಲೇ ಅಣಿಯಾಗಿದ್ದಾಳೆ. ಕೈಕಾಲುಗಳ ಶ್ರಮವರಿಯದ ಶ್ರದ್ಧೆ ಕಾಲಯಾನವನ್ನು ಸರಿಗಟ್ಟುತಿದ್ದುದರಿಂದ ಮನಸ್ಸಿಗೆ ಎಷ್ಟೋ ಸಮಾಧಾನ. ಬೆಳಗಿನ ಪ್ರಾರ್ಥನೆಯನ್ನು ಸಲ್ಲಿಸಿ ಹೊರಬಿದ್ದಾಗ ದುಗ್ಧ ಸಮುದ್ರದ ಅಲೆಗಳಂತೆ ಸಾಗುತಿತ್ತು ಸೇವಾದಳ.

ಸಹದಾದಿಯರೆಲ್ಲರೂ ಒಮ್ಮೆಗೇ ತಮ್ಮ ನಿಲ್ಮನೆಯ ಮೆಟ್ಟಲನ್ನು ಇಳಿದರು. ಶಾಂತ ಸಮುದ್ರದ ಅಲೆಗಳಂತೆ ಸಾಗುತಿತ್ತು ಸೇವಾದಳ.

ರಾತ್ರಿ ಗೆಳತಿಯರಿಗೆ ಬರೆದಿದ್ದ ಕೆಲವು ಕಾಗದಗಳನ್ನು ಸಹದಾದಿ-ಪ್ಯಾಟಿಗೆ ತೋರುತ್ತ ನುಡಿದಳು ಫ್ಲಾರೆನ್ಸ್ ನೈಟಿಂಗೇಲ್,

"ನೋಡು ನನ್ನ ಎಲ್ಲಾ ಸ್ನೇಹಿತರಿಗೂ ಹಣ ಸಹಾಯವನ್ನು ಕೋರಿ ಕಾಗದ ಬರೆದಿರುವೆ. ಅವರು ಉದಾರ ಮನಸ್ಸು ಮಾಡಿದರೆ ನಾನು ಧನ್ಯಳಾಗುವೆ. ಈಗ, ಈ ಆಸ್ಪತ್ರೆಗೆ ಅಗತ್ಯವಾದ ಕೆಲವು ಸೌಕರ್ಯಗಳನ್ನು ಒದಗಿಸಿಕೊಳ್ಳದಿದ್ದಲ್ಲಿ ಕೆಲಸ ನಿರ್ವಹಿಸುವುದು ತುಂಬ ಕಷ್ಟ. ಎಲ್ಲಾ ಬಗೆಯ ಅನಾನುಕೂಲಗಳಿಂದ ರೋಗಿಗಳು ಲೆಕ್ಕವಿಲ್ಲದಂತೆ ಸಾಯುತಿದ್ದಾರೆ. ಆದರೂ, ಅಧಿಕಾರವರ್ಗ ಲಕ್ಷಿಸುತ್ತಲೇ ಇಲ್ಲ."

"ದೇವರು ಉಪಕರಿಸಿಯಾನು."

"ಅವನು ಉಪಕರಿಸಲೇಬೇಕು. ನಾನು ನನಗಾಗಿ ಬೇಡುತ್ತಿಲ್ಲವಷ್ಟೆ?"

ಆ ಮಾತು ಎದೆಯಾಳದಿಂದ ಹೊಮ್ಮಿತು. ಏನೋ ಒಂದು ಬಗೆಯ ಅನಿರೀಕ್ಷಿತ ಸಮಾಧಾನದಿಂದ ಕಾಗದಗಳನ್ನು ಅಂಚೆ ಪೆಟ್ಟಿಗೆಗೆ ಹಾಕಿ

ಯಥಾ ಪ್ರಕಾರ ಹೆಬ್ಬಂಡೆಯಂತೆ ಸ್ಥಿರ ಗಾಂಭೀರ್ಯದಿಂದ ಎಲ್ಲಾ ಸಂಕಷ್ಟ ಗಳನ್ನು ಎದುರಿಸಲು ಸಿದ್ಧಳಾದಳು.

ಕೆಲವು ದಿನಗಳಲ್ಲಿ ನಿರೀಕ್ಷೆಗೂ ಮಿಗಿಲಾಗಿ ಗೆಳತಿಯರಿಂದ ಒದಗಿಬಂದ ಆರ್ಥಿಕ ಸೌಲಭ್ಯ ಅವಳ ಸ್ಥಿರ ಪ್ರಜ್ಞೆಗೆ ಚಿನ್ನದ ಮೆರುಗನ್ನು ಬಳಿಯಿತು. ಒಡನೆ ಅವಳು ಅತ್ಯಂತ ಸಂತುಷ್ಟಳಾಗಿ ಆಸ್ಪತ್ರೆಗೆ ಬೇಕುಬೇಕಾದ ಸಲಕರಣೆ ಗಳನ್ನು ಕೊಂಡು ಸೂಕ್ತ ಸೌಕರ್ಯದೊಡನೆ ವೃತ್ತಿಯನ್ನು ಸ್ವಸಾಮರ್ಥ್ಯ ದಿಂದ ಮುಂದುವರಿಸಿದಾಗ ಹಿಂದೆ ಅವಳಿಗೆ ಅಸಹಕಾರ ತೋರಿದ್ದ ವೈದ್ಯರು ಎಷ್ಟು ಲಜ್ಜಿತರಾದರೋ, ಬೆನ್ನು ತೋರಿದ್ದ ಸೈನ್ಯಾಧಿಕಾರಿಗಳು ಅಷ್ಟೇ ಬೆವರನ್ನು ಬಸಿದರು.

ಕ್ರಮಕ್ರಮೇಣ ಅವಳ ಧವಳ ಕೀರ್ತಿ ಆಸ್ಪತ್ರೆಯನ್ನು ಆವರಿಸಿ ಕಲ್ಲು ಕಂಬಗಳನ್ನೂ ಸಹ ಮಂತ್ರಮುಗ್ಧಗೊಳಿಸಿತು. ರೋಗಿಗಳು ಅತ್ಯಂತ ಸಂಪ್ರೀತರಾಗಿ ಒಮ್ಮನದಿಂದ ಅವಳನ್ನು 'ಆರಾಧ್ಯದೇವತೆ' ಎಂದು ಕೊಂಡಾ ಡುತ್ತ ಆನಂದ ಬಾಷ್ಪಗಳನ್ನು ಸುರಿಸಿದರು.

ಫ್ಲಾರೆನ್ಸ್ ನೈಟಿಂಗೇಲ್ ಅಪಾರವಾದ ಸಹಾನುಭೂತಿ–ದಯೆ–ಅನು ಕಂಪಗಳನ್ನು ಸೂಸಿ 'ದಾದಿ ವೃತ್ತಿ'ಗೆ ಘನತೆ-ಗೌರವಗಳನ್ನು ತಂದು ಕೊಟ್ಟದ್ದು ಮಾತ್ರವಲ್ಲ; ಶ್ರೀಮಂತ ಗಾಂಭೀರ್ಯಕ್ಕೆ ಜೀವನ ಸಾರ್ಥಕ್ಯದ ಹುರುಳನ್ನು ತೋರಿಕೊಟ್ಟು ಮಹೋಪಕಾರವೆಸಗಿ ವಿಶ್ವಮಾನ್ಯತೆ ಪಡೆ ದಳು.

ಅವಳು ಜೀವನ ಪರ್ಯಂತ ನಡೆಸಿದ ಅಸಾದೃಶ್ಯ ಸೇವೆಯು "ಆರ್ಡರ್ ಆಫ್ ಮೆರಿಟ್" ಪ್ರಶಸ್ತಿಯನ್ನು ಗಳಿಸಿಕೊಟ್ಟಾಗ ಅಭಿಮಾನಿ ಗಳು ಗೌರವ ಧನದ ಥೈಲಿಯನ್ನರ್ಪಿಸಿ ಗೌರವ ಸಲ್ಲಿಸಿದರು. ಆಡ ಅವಳು ಅದನ್ನು ದಾದಿಯರ ಸಲುವಾಗಿ "ನೈಟಿಂಗೇಲ್ ಸಂಸ್ಥೆ"ಯನ್ನು ಸ್ಥಾಪಿಸಲು ಸಂತಸದಿಂದ ನೀಡಿ ಉಪಕರಿಸಿದಳು. ಆಗ ಒಮ್ಮೆಗೇ ಹಿಂದೆಲ್ಲಾ ತನ ಗುಂಟಾಗಿದ್ದ ಅಡೆತಡೆಗಳು ಸ್ಮರಣೆಯ ಹಾದಿಯಲ್ಲಿ ಸಾಗಿಹೋದುವು. ಭಾವೋದ್ವೇಗದಿಂದ ಕಂಠವು ಬಿಗಿದುಬಂತು. ಕಣ್ಣು ಕೆನ್ನೆಗಳು ಕೆಂಪಗೆ ರಂಗು ತಳೆದುವು.

ಅನಂತರ,

ಆ ಸೇವಾ ಪರಾಯಣೆ ೧೦-೮-೧೯೧೦ ನೇ ದಿನದಂದು ನಿರಾಳವಾಗಿ ಕೊನೆಯುಸಿರೆಳೆದಾಗ ಅದೆಷ್ಟು ಕಂಬನಿಯ ಕೋಡಿ ಹರಿಯಿತೋ. ಹಿಂದೊಮ್ಮೆ ದ್ವೇಷದ ಕಿಡಿಕಾರುತ್ತಿದ್ದ ಸೈನ್ಯಾಧಿಕಾರಿಗಳು ಮೌನ ಶೋಕದಿಂದ ಅವಳ ಶವದಾನಿಯನ್ನು ರುದ್ರಭೂಮಿಗೆ ಹೊತ್ತು ಅಂತಿಮ ಸೇವೆಯನ್ನು ಸಲ್ಲಿಸಿದರು ಕೃತಜ್ಞನಾಪೂರ್ವಕವಾಗಿ.

ಗ್ಯಾರಿ ಲಾತಮ್

ಮಧ್ಯಾಹ್ನ ಕಾಲೀನ ಬಿಸಿಲರಝುಳ ಹೊರ ಜಗತ್ತಿನಲ್ಲಿ.

ಒಳಗಡೆ ಅಷ್ಟೊಂದು ಶಾಖ ತಟ್ಟದಿದ್ದರೂ ತಾಪಕಾರಕವಾಗಿತ್ತು ಎನ್ನಬಹುದು.

ಆಫೀಸಿನ ಒಳಾಂತರದಲ್ಲಿ ಕಾರ್ಯಮಗ್ನನಾದ ಅವನಿಗೆ ಇದ್ದಕ್ಕಿದ್ದಂತೆಯೇ ಭಯಂಕರ ತಲೆಶೂಲೆ ಮೂಡಿತು. ಅವನ ಜೀವಮಾನದಲ್ಲಿ ಅದೇ ಮೊದಲಸಲ ಅನುಭವ. ಅಸಹನೀಯ ಬಾಧೆ; ಅಸಹನೀಯ ಹಿಂಸೆ. ತಾಳಲಾರ; ಅನುಭವಿಸಲಾರ; ಏನಾಗಿರಬಹುದು; ಏತರ ಪರಿಣಾಮ? ಎಂಬುದಂತೂ ಅರ್ಥವಾಗದ ವಿಷಯ. ತಲೆ ಒಮ್ಮೆಗೇ ಸಿಡಿದೊಡೆದು ಸಹಸ್ರ ಹೋಳಾಗುವಂತಹ ಕಟು ಅನುಭವ. ಸ್ವಲ್ಪ ವಿಶ್ರಾಂತಿಗಾಗಿ ಮೇಜಿನ ಮೇಲೆ ಎರಡೂ ಕೈಗಳನ್ನು ಊರಿ ಮಸ್ತಕದ ಭಾರವನ್ನು ಹಸ್ತಗಳ ಮೇಲೆ ಇಳುಹಿದ.

ಸ್ವಲ್ಪ ಹೊತ್ತು ಉರುಳಿತು. ನೋವು ಹಿಮ್ಮೆಟ್ಟುವಂತೆ ತೋರಲಿಲ್ಲ.

'ಈ ಪರಿಸ್ಥಿತಿಯಲ್ಲಿ ಕೆಲಸ ಮಾಡಲಾರೆ.' ಎಂದು ಘೋಷಿಡುವ ಆಂತರಂಗಿಕ ಶಕ್ತಿಗೆ ಅನುಗುಣವಾಗಿ 'ಮನೆಗೆ ಹೋಗುವುದು ಲೇಸು' ಎಂದು ಒತ್ತಾಯಿಸುವ ಚಿತ್ತಕಲ್ಪ.

ಆಫೀಸು ಮುಚ್ಚಲು ಇನ್ನೂ ಮೂರೂವರೆ ತಾಸುಗಳಿತ್ತು. ಅಲ್ಲಿಯತನಕ ಕಾಯುವುದಾಗಲೀ, ಕೆಲಸ ಮಾಡುವುದಾಗಲೀ ಸಾಧ್ಯವಾಗದು 'Leave letter' ಬರೆದುಕೊಟ್ಟು ಹೋಗುವುದು ಲೇಸು ಎಂಬ ತೀರ್ಮಾನಕ್ಕೆ ಶರಣಾಗಿ ಲೇಖನಿಯನ್ನು ತೆಗೆದುಕೊಂಡ. ಆದರೆ, ನಾಳೆಯವರೆಗೆ ರಜೆ

ತೆಗೆದುಕೊಂಡರೆ ಸಾಕು ಎಂಬ ಯೋಚನೆಯೊಂದಾದರೆ, ನಾಳೆ ನಾಡಿದ್ದೂ ಸಹ ಕೆಲಸ ಮಾಡಲಾರೆ ಎಂಬಷ್ಟು ಅಶಕ್ತಸ್ಥಿತಿ. ಒಂದೆರಡುಗಳಿಗೆ ಮನಸ್ಸು ಭಾವವಿಭಾವಗಳಲ್ಲಿ ಸಿಲ್ಕಿತು ; ಲೇಖನಿಯ ಒರತೆ ಹರಿಯಲಿಲ್ಲ.

ಅವನ ಸ್ಥಿತಿಗತಿಯನ್ನು ಗಮನಿಸಿದ ಲೀನಾ ಹರ್ಬರ್ಟ್ ಕೇಳಿದಳು,

"ಏನಪ್ಪಾ ಏನೋ ಒಂದು ಬಗೆಯಾಗಿದ್ದಿ ?"

"ವಿಚಿತ್ರವಾದ ತಲೆಶೂಲೆ; ನನಗೆ ಎಂದೂ ಹೀಗಾಗಿರಲಿಲ್ಲ ; ತಡೆಯಲಾರೆ."

"ಈಗೇನು ಮಾಡುತ್ತಿ ?"

"ನನಗೂ ಅದೇ ಯೋಚನೆ."

"ಅಷ್ಟು ಜಾಸ್ತಿ ಇದ್ದರೆ ರಜೆ ತೆಗೆದುಕೊ. ಮತ್ತೇಕೆ ಪರಿಶ್ರಮ ?"

"ತೆಗೆದುಕೊಳ್ಳದಿದ್ದರೆ ವಿಧಿಯಿಲ್ಲ."

"ಸರಿ ಮತ್ತೆ ; Go ahead."

ಮನಸ್ಸು ಇನ್ನೂ ಸಮಸ್ಯೆಯ ಘಟ್ಟದಲ್ಲೇ ಅಂಡಲೆಯುತಿದ್ದುದರಿಂದ ಕೆಲವು ಕ್ಷಣ ಸುಮ್ಮನಾದ. ಕೊನೆಗೂ ಮೂರು ದಿನಗಳ ರಜೆ ಸೂಕ್ತ ಎನಿಸಿತು. ಹಾಗೇ ಬರೆದುಕೊಂಡು ಮೇಲಧಿಕಾರಿಯ ಮುಂದೆ ಪತ್ರವನ್ನಿಟ್ಟ.

"ನೀನೀಚೆಗೆ ಪದೇ ಪದೇ ರಜೆ ತೆಗೆದುಕೊಳ್ಳುತಿದ್ದಿ."

"ಏನು ಮಾಡಲಿ, ಆರೋಗ್ಯ ಸ್ಥಿತಿ ಪೂರಾ ಕೆಡುತ್ತಲಿದೆ."

"ನಿನ್ನಂತಹ ಕಟ್ಟಾಳು ಈ ಮಾತು ಹೇಳಿದರೆ ?"

"ಕಟ್ಟಾಳಿಗೆ ಮಾತ್ರವೇನು ? ಆನೆಗೂ ಕಾಹಿಲೆ ಬರುತ್ತೆ."

ಮೇಲಧಿಕಾರಿಯು ಪ್ರತಿ ಹೇಳದೆ 'ಹೌದು' ಎಂಬಂತೆ ತಲೆದೂಗಿ ಅನುಮತಿ ನೀಡಿದ.

ಗ್ಯಾರಿ ಲಾತಮ್ ಅಲ್ಲಿಂದ ಹೊರಟ. ಆಫೀಸಿನಿಂದ ಬಹಳ ದೂರವೇನೂ ಇರಲಿಲ್ಲ ಬಸ್ಸಿನ ನಿಲ್ದಾಣ. ಸುಡು ಬಿಸಿಲು ಉರಿಯುತಿದ್ದುದರಿಂದ ತಲೆಯೊಡ್ಡುವುದೇ ಕಷ್ಟ. ಟೋಪಿ ಧರಿಸದೆ ಬಂದ ತಪ್ಪಿಗೆ ತಾಳ್ಮೆಯೇ ಮದ್ದು.....ಬಿಸಿಲ ಝಳಕ್ಕೆ ತಲೆ ಇನ್ನಷ್ಟು ತಳಮಳಗೊಳ್ಳುತಿತ್ತು. ಬಹಳ ಕಷ್ಟದಿಂದ ನಿಲ್ದಾಣ ತಲ್ಪಿದ. ಇಪ್ಪತ್ತು ನಿಮಿಷಗಳ ಬಸ್ಸಿನ ಪಯಣದ ನಂತರ ಪುನಃ ಮುಂದಿನ ಐದಾರು ನಿಮಿಷಗಳ ಕಾಲ್ನಡಿಗೆ ಅನಿವಾರ್ಯ. ಅದಷ್ಟನ್ನು ಕಳೆದು ಮನೆಯ ಕಡೆ ಸಾಗಿದ.

ಅಂದು, ರಾತ್ರಿಯ ರೈಲಿಗೆ ಮಡದಿಯು ಒಂದು ತಿಂಗಳ ಪ್ರವಾಸಕ್ಕೆ ಹೊರಡಲಿದ್ದುದರಿಂದ ಗಮನ ಆಗಲೇ ಅವಳ ಬಳಿಗೆ ಚಿಮ್ಮಿತು. ಮನೆ ಸಮೀಪಿಸಿದಷ್ಟೂ ಕಾತರದುಂಬುವ ನೋಟಕ್ಕೆ ಹೊರ ಬಾಗಿಲಿನ ಬೀಗ ಕಾಣಿಸದಿದ್ದಾಗ "ಓ.....! ಅವಳಿನ್ನೂ ಹೋಗಿಲ್ಲ. ಮನೆಯಲ್ಲೇ ಇದ್ದಾಳೆ" ಎಂದು ಆನಂದಭಾವವನ್ನು ಸ್ಫುರಿಸಿತು ಆಶಾಪ್ರವೃತ್ತಿ.

ಆದರೆ, ಇದಾಳೋ ಇಲ್ಲವೋ ಎಂಬ ಅನುಮಾನಕ್ಕೆ ಬೆಳಗಿನ 'ಘಟನೆ' ಪೂರಕ. ಅದೇ ಯೋಚನೆಯಲ್ಲಿ ಮನೆಗೆ ಸಮೀಪಿಸಿದ ಮೇಲೆ ಬೀಗ ಮುದ್ರಿತವಾದ ಬಾಗಿಲನ್ನು ಕಂಡು ಮನಸ್ಸು ಒಮ್ಮೆಗೇ ಕುಸಿಯಿತು. ಅವಳು ಕೋಪದ ಕಾವಿನಲ್ಲಿ ಬೇಕೆಂದೇ ಬೆಳಗ್ಗೆ ಹೊರಟಿದ್ದಾಳೆ ಎಂಬ ತೀರ್ಮಾನಕ್ಕೆ ಬರಲು ಹೆಚ್ಚು ಸಮಯ ಹಿಡಿಸಲಿಲ್ಲ. ಮೆಲ್ಲಮೆಲ್ಲನೆ ನಖಶಿಖಾಂತ ನಸು ಕಳವಳದ ಅಲೆ ಜುಂಮನೆ ಹರಿದ ಅನುಭವ.ಮೊದಲೇ ಬಾಡಿದ್ದ ಮುಖ ಇನ್ನಷ್ಟು ಬಾಡಿ ಹೋಯಿತು. ಬೆಳಗಿನ ಕಹಿ ಪ್ರಸಂಗ ಚಿತ್ರವತ್ತಾಗಿ ಚಿತ್ತಭಿತ್ತಿಯ ಮೇಲೆ ಮೂಡಿ "ಅದಷ್ಟಕ್ಕಾಗಿ ಕೋಪಿಸಿಕೊಂಡಳೇ ? ಇದು ತೀರ ಸಣ್ಣತನ....!" ಎಂದುಕೊಂಡ.

ಇನ್ನೂ ಏನೇನು ಉಲಿಯಿತ್ತೋ ಕುಪಿತ ಕಂಠ. ಆಶಂಕೆ-ಕಾತುರತೆಗಳ ತಂತು ಕೃತಿಯಲ್ಲೇ ಹರಿದಾಡಿತು ಚಿತ್ತ. ಈ ಪ್ರಕರಣ ಇನ್ನಾವ ರಾದ್ಧಾಂತಕ್ಕೂ ನಾಂದಿಯಾಗದಿದ್ದರೆ ಸಾಕು, ಎಂಬ ಚಿಂತನೆಯಲ್ಲೇ ಬೀಗ ತೆಗೆದು ಒಳಹೋದರೆ ತನ್ನ ಕಣ್ಣುಗಳನ್ನೇ ನಂಬಲಾಗದಂತಹ ಅವ್ಯವಸ್ಥೆ. ಬೆಳಗ್ಗೆ ಮೇಜಿನ ಮೇಲೆ, ಅಡಿಗೆ ಮನೆಯಲ್ಲಿ ಬಳಸಿದ ಪಾತ್ರೆಗಳು, ತೆರೆದ ಸಾಮಗ್ರಿಗಳು, ಬಸಿ-ಬಟ್ಟಲುಗಳು ಅಲ್ಲಲ್ಲೇ ಉಳಿದಿದ್ದುವು. ಒಂದೆರಡು ಘಳಿಗೆ ದಿಗ್ಭ್ರಮೆ ಹಿಡಿದಂತೆ ಸುಮ್ಮನೆ ನಿಂತು ಬಿಟ್ಟ.

ಅವಳು ಹೋಗುವಾಗ ವಾಡಿಕೆಯಂತೆ ಒಂದು ಮಾತಾಗಲೀ, ಜರ್ಮನಿಯ ತನ್ನ ವಿಳಾಸವನ್ನಾಗಲೀ ತಿಳಿಸಲಿಲ್ಲ. ಮನೆಯ ವ್ಯವಸ್ಥೆ ನೋಡಿದರೆ ಹೀಗೆ. ಅಂತೂ, ಇದು ಶುಭಲಕ್ಷಣವಲ್ಲ. ಪ್ರಸಂಗವಶಾತ್ ನನ್ನ ಕಷ್ಟವನ್ನು ನಾನು ತೋಡಿಕೊಂಡೆ. ಅದರಲ್ಲಿ ಅಸಮಾಧಾನ ನಿರಾಸೆಗಳು ಉಕ್ಕಿ ಹರಿದುದು ನಿಜ.

ಆದರೆ, ಸ್ತ್ರೀಯಾದವಳಿಗೆ ಅಷ್ಟೂ ಸಹನೆ ಇಲ್ಲದೆ ಹೋದರೆ ಜೀವನ ನಡೆಯುವುದಾದರೂ ಹೇಗೆ ?

ಯಾವ ಗಂಡಸು ಅಷ್ಟನ್ನದೆ ಇರಬಲ್ಲ ? ನಾನು ಜೀವರಹಿತನಲ್ಲ. ಎಲ್ಲಾ ರೋಗಿಗಳಿಗೂ ಇರುವ ನೋವು ನನಗೂ ಇದೆ. ನಾನೂ ಮನುಷ್ಯ, ಕೋಪ ತಾಪಗಳಿಂದಲೇ ಮಾಡಲ್ಪಟ್ಟವನು. ಅದನ್ನಷ್ಟು ಅರಿತುಕೊಳ್ಳ ಬೇಡವೇ ?

ಮಾನಸಿಕ ವಿಕ್ಷೋಭೆ ನುಡಿಗಳಲ್ಲಿ ಹೊಮ್ಮಿದುದು ಮಾತ್ರವಲ್ಲ ; ತಲೆಶೂಲೆಯನ್ನೂ ವೃದ್ಧಿಸುವಂತೆ ತೋರಿತು. ಅಲ್ಲಿ ಹೆಚ್ಚು ಹೊತ್ತು ನಿಲ್ಲ ಲಾಗದೆ ಒಳ ಕೋಣೆಗೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡ. ತಾಪ–ಪರಿತಾಪಗಳಲ್ಲಿ ಮನಶ್ಶಾಂತಿಯಾದರೂ ಬರಬೇಕಲ್ಲ, ನಿದ್ದೆಯಂತೂ ಈ ಬಳಿ ಯಲ್ಲಿ ಸುಳಿಯಲಿಲ್ಲ. ಮಲಗಿ ಬೇಸತ್ತ ಮೇಲೆ ಎದ್ದು ಬೀರುವಿನಿಂದ ಒಂದೆ ರಡು ಮಾತ್ರೆಗಳನ್ನು ತೆಗೆದು ನುಂಗಿ ನೀರು ಕುಡಿದು ಪುನಃ ಪಲ್ಲಂಕವನ್ನು ಸೇರಿದ. ತಾಸೊಂದು ಉರುಳಿದರೂ ಅದರಿಂದ ಪ್ರಯೋಜನವೇನೂ ತೋರ ಲಿಲ್ಲ. ಅಗಾಧವಾದ ತಲೆ ಶೂಲೆಯಿಂದ ದಿಂಬಿನ ಮೇಲೆ ತಲೆಯೂರುವುದೂ ಕಷ್ಟವೇ. ಸ್ವಲ್ಪ ಹೊತ್ತು ಎದ್ದು ಕುಳಿತು ಹಾಗೇ ವಿಶ್ರಾಂತಿ ತೆಗೆದುಕೊಂಡ. ಮುಂಬಾಗಿಲ ಬಳಿ ಒಂದು ಅತೀ ಸಣ್ಣ ಸದ್ದಾದರೂ ಸಹ ಮಡದಿ ಹಿಂದಿರು ಗಿದಳೇ ಎಂಬ ಆಶಾಭಾವ ಮೂಡುವುದರಿಂದ ಚಿತ್ತ ಕಲ್ಪವು ಕುತೂಹಲ ತೃಷಿತ ದೃಷ್ಟಿಯ ಸಹಿತ ಅತ್ತಲೇ ಸುಳಿದಾಡುವುದು.

ಮರುಕ್ಷಣದಲ್ಲಿ ನಿರಾಸೆಯ ಬೆಟ್ಟ ಕಲ್ಪನೆಗೂ ಮೀರಿ ಬೆಳೆದು ಆಶೆಯ ಕುಡಿಯನ್ನು ಕಬಳಿಸಿ "ಅವಳು ಎಂದಿನ ಮಡದಿಯಾಗಿದ್ದರೆ ಪರಿಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲ" ಎಂದು ಉಪದೇಶಿಸುವುದರಲ್ಲಿ ಇನಿತೂ ಹಿಂದೆಗೆ ಯುವುದಿಲ್ಲ.

ಗ್ಯಾರಿಲಾತವ್ ಹೆಚ್ಚು ಹೊತ್ತು ಕುಳಿತಿರಲಾಗದೇ ಎದ್ದ. ಅಡಿಗೆ ಮನೆಯ ಅವ್ಯವಸ್ಥೆ ಬಾಬಾರೆಂದು ಕೈಬೀಸಿ ಕರೆಯುತಿತ್ತು. ತಲೆಶೂಲೆಯೇ ಇರಲಿ, ಇನ್ನೇನೇ ಇರಲಿ ಕೆಲಸ ಮಾಡಿಕೊಳ್ಳದೆ ವಿಧಿ ಇರಲಿಲ್ಲ. ಏಳಲಾರದೇ ಎದ್ದು ಹೋದರೆ ಆ ಪ್ರಪಂಚವನ್ನೆಲ್ಲಾ ವ್ಯವಸ್ಥಿತಗೊಳಿಸುವುದು ಒಂದು ತಾಸಾದರೂ ತಗೆದುಕೊಂಡಿತೇನೋ, ಅದಾದನಂತರ ಕಿಟಕಿಯ ಬಳಿಗೆ

ಕುರ್ಚಿಯನ್ನೆಳೆದುಕೊಂಡು ಕುಳಿತು ತಂಗಾಳಿಗೆ ತಲೆಯೊಡ್ಡಿದ ಮಾನಸಿಕ ವಿಕ್ಷೋಭೆ ತಲೆಶೂಲೆಗೆ ಪುಷ್ಟಿ, ಅದನ್ನು ಕಿತ್ತೊಗೆಯದಿದ್ದರೆ ಕಷ್ಟ ಎಂಬ ವಿವೇಚನೆ ಮೊಳೆಯಿತು. ಮರುಗಳಿಗೆಯಲ್ಲಿ ಯೋಚನೆಯನ್ನು ಬದಿಗಿಟ್ಟು ಕಣ್ಮುಚ್ಚಿದ.

ಹಾಗೆ ಅದೆಷ್ಟು ಹೊತ್ತು ಉರುಳಿಹೋಯಿತೋ, ಕಣ್ತೆರೆದಾಗ ದೃಷ್ಟಿ ಹೊರಳಿದುದು ತರು ನಿಕರದಮೇಲೆ. ಪಕ್ಷಿಗಳೂ, ಪ್ರಾಣಿಗಳೂ ಸ್ವತಂತ್ರ ವಾಗಿ ವಿಹರಿಸುವಾಗ ಮಡದಿಯ ಸ್ವಾತಂತ್ರ್ಯವನ್ನು ಪ್ರಶ್ನಿಸಿದ್ದು ನನ್ನ ತಪ್ಪು. "ಸ್ವಾತಂತ್ರ್ಯ" ಎಂಬುದು ಎಲ್ಲರ ಹಕ್ಕು, ಅದನ್ನು ಪ್ರಶ್ನಿಸಲು ನಾನಾರು ? ಎಂಬ ಪ್ರಶ್ನೆ ತಾನೇ ತಾನಾಗಿ ತಲೆಯೆತ್ತಿ ಯೋಚಿಸಿದಷ್ಟೂ ದಟ್ಟೈಸುವ ಆಲೋಚನಾ ತರಂಗಗಳು ಸಮುದ್ರದ ಅಲೆಗಳಂತೆ ತುಯ್ಯ ಲಾಡತೊಡಗಿದುವು.

* * * * *

ಢನ್, ಢನ್, ಢನ್, ಢನ್, ಢನ್....

ಮನಮೋಹಕವಾದ ಗಂಟಾರವ.....ವಾಯುಲೀಲಾಲೋಲುಪ್ತಿಯಲ್ಲಿ ಅಲೆಅಲೆಯಾಗಿ ತೇಲಿ ಬಂದು ಮನಃಪ್ರಾಣಗಳನ್ನು ಮೃದುಮಂದವಾಗಿ ಹೆಡೆ ಮುರಿಗಟ್ಟುತಿತ್ತು. ಡಾ|| ಕಿಟ್ಟೀಜಾನ್ ಆ ಸ್ವರ ಸಂವಿಧಾನದ ಚೌಕಟ್ಟಿ ನಲ್ಲೇ ಒಳಗಡೆ ಪದಾರ್ಪಣೆ ಮಾಡಿದಳು. ಆಕೆಯ ನೀಳವಾದ ನಿಲುವು, ಆಕರ್ಷಕ ಅಂಗಕಾಂತಿ ಪ್ರೌಢ ಮನೋಹರ ಶೋಭೆಗೆ ಸುಂದರವಾದ ಸೇತು ವನ್ನು ಕಲ್ಪಿಸಿದ್ದುವು. ಚಿಗರಿಯ ಚಟುವಟಿಕೆ ಅಂಗಾಂಗಗಳಲ್ಲಿ ವ್ಯಾಪಿಸಿತ್ತು. ತೊಟ್ಟಿದ್ದ ಓವರ್ ಕೋಟನ್ನು ಕಳಚಿ ಬಿಳಿಯ ಕೋಟನ್ನು ತೊಟ್ಟು ದಿನ ಚರಿಗೆ ಕೈ ಹಚ್ಚಿದಳು. ಮೊದಲು ಮೇಜಿನ ಮೇಲಿದ್ದ ದಸ್ಕತ್ತುಗಳನ್ನು ಪರಿಶೀಲಿಸಿ ಸಹಿ ಹಾಕಿದ ನಂತರ ಕಾಗದ ಪತ್ರಗಳನ್ನು ನೋಡುತ್ತಿರುವಾ ಗಲೇ ಬಾಗಿಲ ಬಳಿ ಪಾದರಕ್ಷೆಗಳ ಸದ್ದು ಕೇಳಿ ಬಂತು. ಅತ್ತ ಗಮನ ಹೊರಳುವುದರೊಳಗಾಗಿ ಯಾರೋ ಸಣ್ಣಗೆ ಬಾಗಿಲನ್ನು ಮಿಡಿದರು.

ಕಟ, ಕಟ, ಕಟ, ಕಟ.

"Yes please !"

ಆ ಮಾತಿಗೆ ಉತ್ತರವಾಗಿ ಇಪ್ಪತ್ತೆರಡರ ಗುಂಗುರು ಗುಂಗುರು ಕೂದಲಿನ ತರುಣ ಒಳಹೆಜ್ಜೆ ಇಡುತ್ತ ವಂದನೆಯನ್ನು ಸಲ್ಲಿಸಿದ.

"Good morning Doctor !"

ಅವಳು ಪ್ರತಿಯಾಗಿ ವಂದಿಸಿ ಸನಿಹದಲ್ಲಿದ್ದ ಕುರ್ಚಿಯನ್ನು ಸೌಜನ್ಯಪೂರ್ವಕವಾಗಿ ತೋರಿ ನುಡಿದಳು,

"ದಯವಿಟ್ಟು ಕುಳಿತುಕೊಳ್ಳಿ."

ಬಳಿಕ ಅವಳು ಮೇಜಿನ ಮೇಲೆ ಉಳಿದಿದ್ದ ಕೊನೆಯ ಕಾಗದದ ಪರಿಶೀಲನೆಗೆ ಗಮನ ಕೊಟ್ಟಳು. ಆಗ ಅವನು ಹುಬ್ಬೆತ್ತಿ ಒಂದೆರಡು ಕ್ಷಣ ಅವಳನ್ನು ನಿಟ್ಟಿಸಿ ನೋಡಿ ನೋಟ ತಗ್ಗಿಸಿದ. ಮಡದಿ ಮರ್ಲಿನ್ನಳಿಗೂ ಅವಳಿಗೂ ಇರಬಹುದಾದ ಸಾಮ್ಯ ಸ್ವಲ್ಪ ಅಚ್ಚರಿ ಮೂಡಿಸಿತು. ಕುತೂಹಲ ತೃಷಿತ ಲೋಚನ ಮತ್ತೆಮತ್ತೆ ಅವಳನ್ನು ನಿಟ್ಟಿಸಿ, ಆಶ್ಚರ್ಯದ ವೀಣೆಯನ್ನು ಮಿಡಿಸಿದಾಗ "ಏನೀ ಸೋಜಿಗ ?" ಎಂದು ತನ್ನಲ್ಲಿ ತಾನೇ ತರ್ಕಿಸತೊಡಗಿದ.

ಡಾ|| ಕಿಟ್ಟೀಜಾನ್ ಕಾಗದವನ್ನು ನೋಡಿ ಬದಿಗಿಟ್ಟು ಕೇಳಿದಳು,

"ನನ್ನಿಂದೇನಾಗಬೇಕಾಗಿದೆ ?"

"ಈಚೆಗೆ ನನ್ನ ಆರೋಗ್ಯ ತೀವ್ರತರವಾಗಿ ಕೆಡುತ್ತಿದೆ. ನಿಮಗೆ ತೋರಿಸೋಣವೆಂದು ಇಲ್ಲಿಗೆ ಬಂದೆ...."

ಮುಂದೆ ಹೇಳುವುದು ಏನೋ ಇತ್ತು. ಕಂಠಸ್ವರ ಅಲ್ಲಿಗೇ ತುಂಡು ಗಡಿದುದರಿಂದ ಅಷ್ಟಕ್ಕೆ ಸುಮ್ಮನಾದ. ಅಂತರ್ನಿಹಿತ ರೋಗಬಾಧೆಯಿಂದ ಮೇಲುಸಿರು ಬಿಡುತಿದ್ದ.

ಡಾ|| ಕಿಟ್ಟೀಜಾನ್ ಅವನ ಸ್ಥಿತಿಗತಿಯನ್ನು ಗಮನವಿಟ್ಟು ನೋಡಿದಳು. ಅವನು ಈ ಹಿಂದೆ ಎಂದೂ ತನ್ನಲ್ಲಿಗೆ ಬಂದವನಲ್ಲ. ಹೊಸ ಮುಖ, ಹೊಸ ಪರಿಚಯ.

"ನಿನ್ನ ಹೆಸರೇನು ?"

"ಗ್ಯಾರಿ ಲಾತಮ್"

"ನಿನ್ನ ತೊಂದರೆಯೇನು ?"

ಆ ಪ್ರಶ್ನೆಗೆ ವಿವರವನ್ನು ಸ್ವತಃ ನೀಡುವ ತೊಂದರೆ ತೆಗೆದುಕೊಳ್ಳದೆ ಹಿಂದಿನ ಚಿಕಿತ್ಸೆಯಲ್ಲಿ ಸ್ಥಿರ ಋಜುವಾದ 'ಕೇಸ್‌ಹಿಸ್ಟರಿ'ಯನ್ನು ಮುಂದಿಟ್ಟ.

ಅವಳು ಅದರ ಮೇಲೆ ಆದ್ಯಂತವಾಗಿ ಕಣ್ಣಾಡಿಸಿದ ನಂತರ ಅವನ ದೈಹಿಕ ಪರೀಕ್ಷೆ ನಡೆಸಿ ಆರನೇ ನಂಬರಿನ ವಾರ್ಡಿಗೆ ದಾಖಲಾಗಲು ಫಾರಂ ಭರ್ತಿ ಮಾಡಿ ಕರೆಗಂಟೆಯನ್ನು ಒತ್ತಿದಳು. ಹೊರಗಿದ್ದ ವಾರ್ಡ್ ಬಾಯ್ ಒಳಗಡೆ ಬಂದ. ಆ ಚೀಟಿಯನ್ನು ಅವನ ಕೈಗಿಟ್ಟು,

"ಇವನನ್ನು ಹೆಡ್ ನರ್ಸ್ ಬಳಿಗೆ ಕರೆದುಕೊಂಡು ಹೋಗು" ಎಂದಳು.

"ಆಗಲಿ, ಡಾಕ್ಟರ್ !"

"ಇಂದೇ ನೀನು ಅಡ್ಮಿಟ್ ಆಗಬೇಕು, ಗ್ಯಾರಿ."

"ಆಗಬಹುದು ಡಾಕ್ಟರ್ !"

ಗ್ಯಾರಿ ಲಾತವ್ ಡಾಕ್ಟರಿಗೆ ವಂದನೆಯನ್ನು ಸಲ್ಲಿಸಿ ವಾರ್ಡ್ ಬಾಯನ್ನು ಹಿಂಬಾಲಿಸಿದ.

ವಾರ್ಡ್‌ಬಾಯ್ ಅವನನ್ನು ಆಸ್ಪತ್ರೆಯ ಒಳಾಂತರದ ಕೊಠಡಿಯೊಂದಕ್ಕೆ ಕರೆದೊಯ್ದು ಹೆಡ್ ನರ್ಸಳಿಗೆ ಚೀಟಿಯನ್ನು ಒಪ್ಪಿಸಿ ವಿಷಯವನ್ನು ವರದಿ ಮಾಡಿ ತನ್ನ ಹಾದಿ ಹಿಡಿದ. ಅವಳು ಅಲ್ಲಿಂದ ಅವನನ್ನು ಕರೆದುಕೊಂಡು ಆರನೆಯ ವಾರ್ಡ್ ಕಡೆ ಹೊರಟಳು. ಆಸ್ಪತ್ರೆ ಆ ತಾಣದ ಉದ್ದಗಲಕ್ಕೂ ಹರಗೈ ಚಾಚಿ ಆಧುನಿಕ ವಿಜ್ಞಾನದ ವಿಜಯ ಘೋಷಣೆ ಮಾಡುವಂತಿತ್ತು. ಎಲ್ಲ ಕೊಠಡಿಗಳಲ್ಲೂ ರೋಗಗ್ರಸ್ತರು ಚಿಕಿತ್ಸಾ ವಿಧಾನಕ್ಕೆ ಆಬದ್ಧರಾಗಿ ವಿಶ್ರಾಂತಿಯನ್ನು ಹೊಂದುತ್ತಲಿದ್ದುದನ್ನು ಗಮನಿಸುತ್ತಲೆ ಗ್ಯಾರಿ ಲಾತವ್ ಮುಂದುವರಿದ. ನೀಲವರ್ಣದ ಕಾರಿಡಾರನ್ನು ದಾಟಿದ ಮೇಲೆ ಬಲಗಡೆ ತಿರುಗಿ ಆಫೀಸಿನ ಒಳಗೆ ಹೆಜ್ಜೆ ಇಡುತ್ತ ನರ್ಸ್ ಹೇಳಿದಳು,

"ಒಳಗೆ ಬಾಪ್ಪಾ."

ಗ್ಯಾರಿ ಲಾತವ್ ಮರುಮಾತಿಲ್ಲದೆ ಅವಳನ್ನು ಹಿಂಬಾಲಿಸಿದ.

ಕಾರಿಡಾರಿನ ಪಕ್ಕದಲ್ಲಿದ್ದ ಆಫೀಸು ಅಂತಹ ದೊಡ್ಡದೇನೂ ಅಲ್ಲ; ಆದರೂ ಅತ್ಯಾಧುನಿಕ ವಿಶೇಷದಿಂದ ತುಂಬಿ ಸುವ್ಯವಸ್ಥೆಯಿಂದ ಸಜ್ಜುಗೊಂಡಿತ್ತು. ಹಿಂಬದಿಯಲ್ಲಿದ್ದ ಮೇಜಿನ ಮುಂದೆ ಕುಳಿತು ಏನನ್ನೋ ಬರೆ

ಯುತ್ತಿದ್ದ ಹರೆಯದ ಹೆಣ್ಣು ಜನಾಗಮನದಿಂದ ತಲೆಯೆತ್ತಿ ನೋಡಿ, ಲೇಖನಿಯನ್ನು ಮೇಜಿನ ಮೇಲಿಟ್ಟು ನರ್ಸ್‌ಳನ್ನು ಕೇಳಿದಳು,

"ಏನು ಸಮಾಚಾರ ? ಹೊಸ ಪೇಶಂಟೇ ?"

"ಹೌದು..... ಆರನೆಯ ವಾರ್ಡಿಗೆ ದಾಖಲಾಗಿದ್ದಾನೆ !"

ಆಕೆ ಕೆಂದುಟಗಳ ಮೇಲೆ ಸುಂದರ ಸ್ನಿಗ್ಧ ಮಂದಸ್ಮಿತವನ್ನು ಸೂಸಿ,

"ಓ! ಅದು ಖಾಲಿಯಾಗುವಂತೆಯೇ ಇಲ್ಲ. ಯಾರಾದರೂ ನನ್ನ ನೆರೆಯುವರಾಗಿ ಬರುತ್ತಲೇ ಇರುತ್ತಾರೆ !"

ಆ ಮಾತಿನ ಹುರುಳು ಸಂಪೂರ್ಣ ಅರ್ಥವಾಗದಿದ್ದರೂ ಅವಳ ಕಡೆ ನೋಡಿ ಪ್ರತಿನಗು ಸೂಸಿದ ಗ್ಯಾರಿ ಲಾತಮ್. ಅವಳು ಅವನಿಂದ ಪ್ರವೇಶ ಧನವನ್ನು ಪಡೆದು ಪ್ರವೇಶ ಪತ್ರಕ್ಕೆ ಕರಕರನೆ ಗೀಚಿ ಅಂಕಿತ ಹಾಕಿದಳು. ಅಲ್ಲಿ ಅವನ ಸೇರ್ಪಡೆ ಸಾಬೀತಾದ ನಂತರ ನರ್ಸ್ ಅವನೊಡನೆ ಹಿಂದಿರುಗಿ ಆ ಆಫೀಸಿನ ಪಕ್ಕದಲ್ಲೇ ಇದ್ದ ಆರನೆಯ ವಾರ್ಡಿಗೆ ಅವನನ್ನು ಸೇರಿಸಿದಳು. ಕೊಠಡಿ ಉತ್ತಮ ಸ್ಥಿತಿಯಲ್ಲಿತ್ತು. ಗಾಳಿ-ಬೆಳಕು ಒಳಗಡೆ ಸಮೃದ್ಧಿಯಾಗಿ ಬರುವಂತಹ ವಿಶಾಲವಾದ ಗವಾಕ್ಷಿ, ಮೆತ್ತೆ ಹಾಸಿದ ಮಂಚ, ಒಂದೆರಡು ಕುರ್ಚಿಗಳು, ಬೀರು ಕನ್ನಡಿ ಯಾವುದಕ್ಕೂ ಕೊರತೆಯಿರಲಿಲ್ಲ. ಒಂದೇ ಬಾರಿಗೆ ಒಳಗಿನ ವ್ಯವಸ್ಥೆಯನ್ನು ಅಳೆದು ನೋಡಿದ ನಂತರ ಮನಃಪ್ರಾಣ ಗಳಿಗೆ ಸಣ್ಣ ಸಮಾಧಾನ ಮೂಡಿತು. ಅಲ್ಲಿನ ಸ್ಥಿತಿಗತಿಯನ್ನು ವಿವರಿಸುತ್ತ ನುಡಿದಳು ನರ್ಸ್,

"ನೋಡು, ಇದರ ಪಕ್ಕದ್ದೇ ಆಫೀಸು. ನಿನಗೆ ಯಾವ ಸೌಕರ್ಯ ಬೇಕು ಎಂದರೂ ಆ ಮುಹೂರ್ತದಲ್ಲೇ ದೊರೆಯುತ್ತದೆ. ನಿನಗೆ ನಮ್ಮ ಅವಶ್ಯಕತೆ ಬಿದ್ದಾಗ ಈ ಗಂಟೆಯನ್ನು ಅಲುಗಿಸಿ ಬಿಡು. ಅಂದರೆ, ಆ ಕ್ಷಣವೇ ಯಾರಾದರೂ ಇಲ್ಲಿಗೆ ಬಂದು ನಿನ್ನ ಅಗತ್ಯವನ್ನು ಪೂರೈಸುವರು."

ಆಗ ಆಫೀಸಿನ ವ್ಯಸಸ್ಥಾಪಿಕೆ ಅಂದ ಮಾತು ಕರ್ಣಪಟಲಗಳ ಮೇಲೆ ಪುನರಪಿ ಮೊಳಗಿತು.

.....ಓ! ಅದು ಖಾಲಿಯಾಗುವಂತೆಯೇ ಇಲ್ಲ. ಯಾರಾದರೂ ನನ್ನ ನೆರೆಯುವರಾಗಿ ಬರುತ್ತಲೇ ಇರುತ್ತಾರೆ !.....

* * * * *

ಬೆಳಗಿನ ಹವೆಯ ತನಿಯನ್ನು ಸವಿದು ಮನದುಂಬಿಕೊಳ್ಳುತ್ತ ಗ್ಯಾರಿ ಲಾತವ್ ಆಸ್ಪತ್ರೆಯ ವರಾಂಡದಲ್ಲಿ ಅಡ್ಡಾಡುತ್ತಿದ್ದಾನೆ.

ಆಸ್ಪತ್ರೆಯ ಸುತ್ತಮುತ್ತಣ ವಿಶಾಲವಾದ ಸ್ಥಳದಲ್ಲಿ ಗಿಡಮರಗಳು ಸಮೃದ್ಧಿಯಾಗಿ ಬೆಳೆದಿದ್ದು ರಸ್ತೆಗಳಲ್ಲಿ ಸಂಚರಿಸುವ ವಾಹನಗಳ ಗಲಾಟೆ-ಗದ್ದಲ ಒಳಾಂತರಕ್ಕೆ ಮುಟ್ಟುವಂತಿರಲಿಲ್ಲ. ಶಾಂತ ಸ್ನಿಗ್ಧ ವಾತಾವರಣ ಸರ್ವತ್ರ ಹಿತಕರ. ಧವಳವಸನಧಾರೀ ದಾದಿಯರೂ, ವೈದ್ಯರುಗಳೂ ಅತ್ತಿತ್ತ ಸಂಚರಿಸುವಾಗ ಹಸುರು ವಲಯದಲ್ಲಿ ಹಂಸೆಗಳು ಓಡಾಡುವಂತೆ ಭಾಸವಾಗಬಹುದಾದ ಒಂದು ಸುಂದರ ಚಿತ್ರ.

ಗ್ಯಾರಿಯ ದೃಷ್ಟಿ ಸಾತ್ವಿಕ ಸಮ್ಮೋಹಕತೆಯನ್ನು ಸ್ವಚ್ಛಂದವಾಗಿ ಅಳೆಯುತ್ತಿರುವಾಗಲೇ ಕಾರಿಡಾರಿನ ತುತ್ತತುದಿಯಲ್ಲಿ ಅಲ್ಲಿನ ವ್ಯವಸ್ಥಾಪಿಕೆಯು ಕಾಣಿಸಿಕೊಂಡಳು. ಗ್ಯಾರಿ ಹಾಗೇ ಅವಳ ಪರಿಚಯ ಹೊಂದುವ ಸಲುವಾಗಿ ಅಲ್ಲೇ ನಿಂತ. ಎತ್ತರ ಹಿಮ್ಮಡಿಯ ಪಾದರಕ್ಷೆಗಳನ್ನು ತುಳಿದು ಅವಳು ಪಟ ಪಟ ಸದ್ದು ಮಾಡಿಸುತ್ತ ಕೆಲವೇ ಕ್ಷಣಗಳಲ್ಲಿ ಸನಿಹಕ್ಕೈತಂದಾಗ ಅನೇಕ ವಿಧದಲ್ಲಿ ಅವಳ ವ್ಯಕ್ತಿತ್ವ ಮರ್ಲಿನ್ನಳಿಗೆ ಸಮೀಪವಾಗಿದ್ದುದನ್ನು ಕಂಡು ತುಸು ಆಶ್ಚರ್ಯಚಕಿತನಾದ. ಹಿಂದಿನ ದಿನ ಅಷ್ಟೊಂದು ತಿಳಿಯಲಿಲ್ಲವೇನೋ. ಈ ಸಲ ನೋಡಿ ಇನ್ನಷ್ಟು ಕುತೂಹಲ ಬೆಳೆಯಿತು.

"ವಂದನೆಗಳು !"

"ವಂದನೆಗಳು !" ಪ್ರತಿವಂದಿಸಿದ ಗ್ಯಾರಿ ಲಾತವ್.

ಪರಸ್ಪರ ಭೇಟಿಯ ಕುರುಹಾಗಿ ಇಬ್ಬರ ತುಟಿಗಳಲ್ಲೂ ಅತೀ ಸರಳವಾದ ಹೂ ನಗೆ ಅರಳಿ ಮಾಯವಾಯಿತು.

"ನಿನ್ನ ಹೆಸರೇನೆಂದು ತಿಳಿಯಬಹುದೇ ?"

"ನನ್ನನ್ನು ಮೇರಿ ಎಂದು ಕರೆಯುತ್ತಾರೆ. ನಾನು ಮಿಸ್ ಮೇರಿ ಜಾನ್."

"ನಿನಗೂ ಡಾಕ್ಟರಿಗೂ ಏನಾದರೂ ಸಮೀಪ ಸಂಬಂಧವಿದೆಯೇ ?"

"ಹೌದು. ನಾನವರ ಮಗಳು."

"ಓ..... ಅದಕ್ಕೇ ನಿಮ್ಮಿಬ್ಬರಿಗೂ ತುಂಬ ಸಾದೃಶ್ಯವಿದೆ."

ಅವಳು 'ಹೌದು' ಎಂಬಂತೆ ತಲೆಯಾಡಿಸುತ್ತ ಮುಗುಳು ನಕ್ಕಳು.

"ನಿನ್ನ ಕೊಠಡಿ ನಿನಗೆ ಸೌಕರ್ಯವಾಗಿದೆಯೇ ?"

"ಹೌದು ಯಾವ ಕೊರತೆಯೂ ಇಲ್ಲ."

"ಬೆಳಗಿನ ಔಷದಿ-ಅನುಪಾನ ದೊರೆತುವೆ ?"

"ಹೌದು."

"ಸರಿ." ಎನ್ನುತ್ತ ಅವಳು ಆಫೀಸಿನ ಕಡೆ ಹೊರಟಳು. ಗ್ಯಾರಿ ಲಾತಮ್ ವಿಸ್ಮಯ ವಿಮೂಕನಂತೆ ನೋಡುತ್ತ ಅವಳನ್ನು ಬೀಳ್ಕೊಟ್ಟು ವಿಚಾರ ವಿಮರ್ಶೆಯಲ್ಲಿ ಮನವನ್ನು ಸಂಸ್ಥಾಪಿಸಿದ.

ಜರ್ಮನಿಗೆ ಪಯಣಿಸಿದ ಮರ್ಲಿನ್ನಳಿಂದ ಕಾಗದವೇ ಇಲ್ಲ. ಅವಳು ಈ ಹಿಂದೆ ಎಂದೂ ಇಷ್ಟು ಉದಾಸೀನ ತಳೆದವಳಲ್ಲ. ಏನೆಂಬುದು ಅರ್ಥವಾಗದೆ ಮನಸ್ಸಿಗೆ ಕಳವಳ-ಭೀತಿ. ತನ್ನ ವಿಳಾಸಕ್ಕೆ ಯಾವುದಾದರೂ ಪತ್ರ ವಿತರಣೆಯಾಗಬೇಕಿದ್ದರೆ ಅದನ್ನು ಆಸ್ಪತ್ರೆಯ ವಿಳಾಸಕ್ಕೆ ಕಳುಹಿಸಿ ಎಂದು ಪೋಸ್ಟ್ ಆಫೀಸಿನ ಸಿಬ್ಬಂದಿಗೆ ತಿಳಿಸಿಯೂ ಬಂದಿದ್ದ. ಆದರೆ, ಅಂದಿನ ಆ ಘಟನೆಯ ನೆನಪು ಸಮಸ್ತ ಅಸ್ತಿತ್ವವನ್ನೇ ವಿದ್ಯುದ್ವೇಗದಿಂದ ಅಲುಗಾಡಿಸುತ್ತದೆ. ಆ ಸ್ವಾರ್ಥದ ಕಿಡಿಯನ್ನು ಕುರಿತು ಯೋಚಿಸುವುದೂ ಬೇಡ, ಎಂಬಷ್ಟು ಮನಸ್ಸಿಗೆ ಕಿನಿಸಿಗೆ. ಆದರೂ ಅದು ಮೂಡಿಸುವುದು ಅದೇ ಚಿಂತೆಯನ್ನು.

ಒಳ ಹೋಗಿ ಕುರ್ಚಿಯ ಮೇಲೆ ಕಿಟಕಿಗೆದುರಾಗಿ ಕುಳಿತುಕೊಂಡ. ಏನನ್ನೂ ಓದಲು ಮನಸ್ಸೇ ಇಲ್ಲ. ಹೃದಯ ಕಲ್ಲು ಹೊತ್ತಂತೆ ಮಣಭಾರ. ನಿಶ್ಚಲ ಭಂಗಿಯಲ್ಲಿ ಮಂಕು ಬಡಿದವನಂತೆ ಸುಪ್ತ ಭಾವನೆಗಳನ್ನು ಅವಲೋಕಿಸುತ್ತ ಸ್ವಲ್ಪ ಹೊತ್ತು ಕಳೆದ. ಹೊತ್ತು ಒಂಭತ್ತರ ಗಡಿಯನ್ನು ಪ್ರವೇಶಿಸಿದಾಗ ಔಷಧಿಯ ಟ್ರೇಯೊಡನೆ ಒಳಬಂದ ನರ್ಸ್ ಕೆಲವು ಮಾತ್ರೆಗಳನ್ನೂ ನೀರನ್ನೂ ನೀಡಿದಳು. ಅವುಗಳನ್ನು ನುಂಗಿ ನೀರು ಕುಡಿದು ಕೇಳಿದ ಗ್ಯಾರಿ ಲಾತಮ್,

"ಈ ಆಸ್ಪತ್ರೆ ಹುಟ್ಟಿ ಎಷ್ಟು ವರ್ಷಗಳಾದುವು?"

ಅವಳು ಕೆಲವು ಕ್ಷಣ ಯೋಚಿಸಿ ಉತ್ತರಿಸಿದಳು,

"ಸುಮಾರು ಹದಿನಾರು ವರ್ಷಗಳಾಗಿವೆ. ಡಾ|| ಕಿಟ್ಟೀ ಜಾನ್ ಹಿರಿಯ ಮಗಳನ್ನು ಕಳೆದುಕೊಂಡಿದ್ದಾಳೆ. ಅವಳ ಹೆಸರಿನಲ್ಲಿ ಈ ಆಸ್ಪತ್ರೆ ಹುಟ್ಟಿಕೊಂಡಿತು."

"ಓಹೋ.....!"

ಅವಳು ವಿಷಯವನ್ನು ಸಮರ್ಥಿಸುವಂತೆ ತಲೆದೂಗಿ ಇನ್ನೇನೂ ಹೇಳದೆ ಅಲ್ಲಿಂದ ಹೊರಟು ಹೋದಳು.

ಗ್ಯಾರಿ ಲಾತವರ್ ಅಲ್ಲಿಗೆ ಆ ವಿಚಾರವನ್ನು ಬದಿಗಿಟ್ಟ.

ಒಡಲಲ್ಲಿ ಔಷಧಿಯ ಪ್ರಭಾವವೋ ಏನೋ, ಸಣ್ಣಗೆ ತಳಮಳವೆಬ್ಬಿಸಿತ್ತು. ದೈಹಿಕ ಕ್ರಿಯೆ ವ್ಯತ್ಯಸ್ತವಾದುದು ಅಲ್ಪಸ್ವಲ್ಪ ಸಹ ಗಮನಕ್ಕೆ ಬಂತು. ಇನ್ನೇನು ಡಾಕ್ಟರು ಬರುವ ಹೊತ್ತು ; ಬಂದ ಮೇಲೆ ತಿಳಿಸಿದರಾಯಿತು, ಎಂದುಕೊಂಡು ಡಾಕ್ಟರನ್ನು ಎದುರು ನೋಡತೊಡಗಿದ.

ಕಿಟಕಿಯ ಎರಡೂ ಬದಿಗೆ ನಿರಿನಿರಿಯಾಗಿ ಮುದುರಿ ನಿಂತ ನೀಲಿಯ ಪರದೆಗಳು ; ಹರವಾಗಿ ತೆರೆದಿದ್ದ ಗವಾಕ್ಷಿಯಿಂದಾಚೆಗೆ ಹೊರವಲಯದಲ್ಲಿ ತರುಲತಾ ಪ್ರಪಂಚ ; ವಿಶ್ವದೇಕನಾಥನ ಹೊಂಬಿಸಲ ಕಾಂತಿಯಲ್ಲಿ ಮಿಂದು ಮೈ ಮರೆತ ನಾನಾ ಜೀವನೀಶಕ್ತಿ ಎಳೆಮಂಜು ಭರಿತ ವಾತಾವರಣ ತೆಳು ರೇಶಿಮೆಯ ತೆರೆಹರಡಿದಂತೆ ಮನಮೋಹಕ. ಅಂತಹ ಸುಂದರ ವಾತಾವರಣವಿದ್ದಾಗಲೆಲ್ಲಾ ಮರ್ಲಿನ್ನಳಿಗೆ ಖುಷಿಯೋ ಖುಷಿ. ಕುದುರೆ ಸಾರೋಟಿನಲ್ಲಾಗಲೀ ಬಾಡಿಗೆ ಸೈಕಲ್ಲಿನಲ್ಲಾಗಲೀ ನಗರವನ್ನು ಒಂದು ಸುತ್ತು ಪ್ರದಕ್ಷಿಣೆ ಮಾಡಿ ಬರದಿದ್ದಲ್ಲಿ ಮನಸ್ಸು ಒಪ್ಪದು. ಅದಕ್ಕಾಗಿ ಅವನನ್ನೂ ಸಹ ಎಳೆದೊಯ್ಯುತಿದ್ದುದುಂಟು. ಎಷ್ಟೋ ವೇಳೆ ಅಂತಸ್ತಿನ ಬಸ್ಸನ್ನೇರಿ ಮೇಲಿನ ಸೀಟಿನಲ್ಲಿ ಕುಳಿತು ಒಂದು ಸುತ್ತು ಹೋಗಿ ಬಂದರೆ ತೀರಿತು. ಅವಳ ಉದ್ಯೋಗ ಅದಕ್ಕೆಲ್ಲಾ ಸುಲಭ ಸಾಧನ. ಅವಳ ಸ್ವಾತಂತ್ರ್ಯ ಕ್ರೀಡೆ ಗ್ಯಾರಿಗೆ ಎಷ್ಟೋ ಬಾರಿ ಹೊಟ್ಟೆಯುರಿಸಿದ್ದುಂಟು. ಅವನ ಆಫೀಸಾದರೋ ಒಮ್ಮೆ ಒಳಹೊಕ್ಕ ಮೇಲೆ ಹೊರಬರುವುದು ಸಂಜೆಯೇ. ಅವನು ಲೇಖನಿ ಹಿಡಿದು ಕುಳಿತಾಗ ಮಡದಿಯ ಸಂಚಾರ ಕ್ರೀಡೆ ಚಿತ್ರಭಿತ್ತಿಯ ಮೇಲೆ ಮೂಡುವುದು.....ಅಕೋ, ಈಗ ಅಂತಸ್ತಿನ ಬಸ್ಸು ಏರಿರಬಹುದು. ಮಧ್ಯಾಹ್ನ ಹಸುರು ಗೆರೆಯ ಬಸ್ಸಿನಲ್ಲಿ. ವಿಕ್ಟೋರಿಯಾ ಸ್ಟೇಷನ್ ಬಳಿ ಓಡಾಟ. ಅವಳಿಗೆ ಎಲ್ಲೆಂದರಲ್ಲಿ ಆನಂದವನ್ನು ತುಂಬಿಕೊಳ್ಳುವ ಚೈತನ್ಯವಿದೆ. ನನಗಾ ಶಕ್ತಿಯೂ ಇಲ್ಲ ; ಆ ಸೌಕರ್ಯವೂ ಇಲ್ಲ ಎಂಬ ಕೊರಗು ಮನಸ್ಸಿಗೆ. ಆದರೆ, ಅಷ್ಟು ಸೌಕರ್ಯ ತಾನಾಗಿ ಬರಲಿಲ್ಲ ಅವಳಿಗೆ. ಆದಕ್ಕೆ ಸರಿಯಾಗಿ ದುಡಿಯುತ್ತಾಳೆ

ಎಂಬುದು ಗೊತ್ತು. ಬಹುಶಃ ಅವಳ ಗೆಳೆತನವಾದ ಮೇಲೆಯೇ ಅವನಿಗೆ ಲಂಡನ್ ನಗರದ ಸೌಂದರ್ಯವನ್ನು ಸಾರವತ್ತಾಗಿ ಸವಿಯುವ ಹುಮ್ಮಸ್ಸು ಮೂಡಿತು. ಎನ್ನಬಹುದು. ಆದರೇನು ? ಅವನು ಹಿಡಿದ ಉದ್ಯೋಗ ಎಲ್ಲಕ್ಕೂ ವಿರುದ್ಧ.

ಒಮ್ಮೆ ಭಾನುವಾರದ ಬಿಡುವಿನಲ್ಲಿ ರೀಜೆಂಟ್ಸ್ ಪಾರ್ಕಿನ ಗುಲಾಬಿ ವನದ ಬೆಂಚಿನ ಮೇಲೆ ಕುಳಿತಾಗ ಗ್ಯಾರಿ ಲಾತಮ್ ಮಡದಿಯನ್ನು ಕುರಿತು ಅಂದಿದ್ದ,

"ನೋಡು, ಇಲ್ಲಿನ ಮೃಗಾಲಯದ ಮೃಗಗಳಂತೆ ನನ್ನ ಪಾಡು. ಎಷ್ಟೋ ಸಲ ಈ ಕೆಲಸ ಬಿಟ್ಟು ಬೇರೆ ಕೆಲಸ ಹಿಡಿಯುವ ಯೋಚನೆಯು ಮೂಡುತ್ತೆ."

ಅದಕ್ಕೆ ಅವಳು ನೀಡಿದ ಉತ್ತರವಾದರೂ ಎಂತಾದ್ದು ?

"ನಿನಗೆ ಸಾಯಂಕಾಲ ಬಿಡುವು ದೊರೆಯುತ್ತೆ. ವಾರದ ಕೊನೆಯಲ್ಲಿ ರಜೆ ಇದೆ. ಮೇಲಾಗಿ, ಸಿಕ್ ಲೀವ್. ಆ ಲೀವ್, ಈ ಲೀವ್ ಎಲ್ಲಾ ಉಂಟು. ಅವಕ್ಕೇನಿದೆ ಪಾಪ. ಅವುಗಳ ಜೊತೆಗೆ ನಿನ್ನನ್ನು ಹೋಲಿಸಿದರೆ ತುಂಬ ತಪ್ಪಾಗುತ್ತದೆ."

ಅಂದಿನ ಆ ಮಾತು ಕರ್ಣಪಟಲಗಳ ಮೇಲೆ ಮತ್ತೆ ಸ್ಪಷ್ಟವಾಗಿ ಪ್ರತಿಧ್ವನಿಸಿತು. ಗ್ಯಾರಿ ಲಾತಮ್ ನೀಳವಾದ ನಿಟ್ಟುಸಿರು ಬಿಟ್ಟ.

ಕಟ, ಕಟ, ಕಟ, ಕಟ,

ನೀರವತೆಯ ಮಸ್ತಕದ ಮೇಲೆ ಬಡಿಯುವಂತೆ ಮೊಳಗಿತು ಸದ್ದು.

"Yes please!"

ಪ್ರತ್ಯುತ್ತರಕ್ಕೆ ಪ್ರತಿಯಾಗಿ ಡಾ|| ಕಿಟ್ಟೀಜಾನ್ ಒಳಗಡೆ ಪದಾರ್ಪಣೆ ಮಾಡಿದಳು. ಜೊತೆಗೆ ಅಸಿಸ್ಟೆಂಟ್ ಡಾಕ್ಟರುಗಳಿದ್ದರು. ಗ್ಯಾರಿ ಲಾತಮ್ ಒಡಲ ತಳಮಳ ಮತ್ತು ದೈಹಿಕ ಬೇನೆಯನ್ನು ಕಳಕಳಿಯಿಂದ ಹೇಳಿಕೊಂಡ.

ಅವಳು ದೈಹಿಕ ಪರೀಕ್ಷೆ ನಡೆಸಿದ ನಂತರ ಅದಕ್ಕೆ ಪರಿಹಾರವನ್ನು ಸೂಚಿಸುತ್ತ "ಮೊದಲು ಪರೀಕ್ಷೆಯ ಘಟಕ ಮುಗಿಯಲಿ, ಅನಂತರ ಚಿಕಿತ್ಸೆ ಆರಂಭಿಸೋಣ." ಎಂದಳು.

ಗ್ಯಾರಿ ಲಾತಮ್ ಮರು ಮಾತಾಡದೆ ತಲೆದೂಗಿದ.

* * * *

ಪ್ರಶಾಂತ ವಲಯದಲ್ಲಿ ಸಂಸ್ಕೃತಿಯ ಮೋಹನೀಯ ಆಶ್ರಯದಲ್ಲಿ "Merlin Wilfurd Hospital" ಸಂಸ್ಥಾಪನೆಯಾದದ್ದು ಪುರಾತನ ವೈಶಿಷ್ಟ್ಯದ ಕಲ್ಲುಕಟ್ಟಡದಲ್ಲಿ. ಆಸ್ಪತ್ರೆಯು ಪಾರ್ಲಿಮೆಂಟ್ ಭವನಕ್ಕೆ ಸಮೀಪದಲ್ಲಿದ್ದುದರಿಂದ ಕಿಟಕಿಯ ಬಳಿ ನಿಂತು ನೋಡಿದರೆ ಪಾರ್ಲಿಮೆಂಟ್ ಭವನದ ಮಹಾಗೋಪುರದಲ್ಲಿದ್ದ ವಿಶ್ವವಿಖ್ಯಾತ ಬಿಗ್‌ಬೆನ್ ಗಡಿಯಾರವು ಚಿಕ್ಕದಾಗಿ, ಚೊಕ್ಕವಾಗಿ ಕಾಣಿಸುವುದು, ಮೂವತ್ತೆರಡು ಅಡಿ ಸುತ್ತಳತೆಯ ಬೃಹದ್ ಮುಖವಾಡ ಹೊಂದಿದ್ದದ್ದು. ಅದರ ನಿಮಿಷದ ಮುಳ್ಳು ಹದಿನಾಲ್ಕು ಅಡಿ ಉದ್ದ ಎಂಬುದಾಗಲೀ, ಗಂಟೆಯ ಮುಳ್ಳು ಒಂಬತ್ತು ಅಡಿ ಉದ್ದ ಎಂಬುದಾಗಲೀ ಊಹಿಸುವುದು ಅರಿಯದವರಿಗೆ ಕಷ್ಟವೇ. ಅವನಿಗೆ ಮಲಗಿ ಬೇಸರವಾದಾಗಲೆಲ್ಲಾ ಕಿಟಕಿಯ ಬಳಿ ನಿಂತೋ, ಕುರ್ಚಿಯ ಮೇಲೆ ಕುಳಿತೋ ಪಾರ್ಲಿಮೆಂಟ್ ಭವನದತ್ತ ಅಥವಾ ಹೊರಜಗತ್ತಿನತ್ತ ದೃಷ್ಟಿಯನ್ನು ನೆಟ್ಟು ಕಾಲಹರಣ ಮಾಡುವ. ಮರ್ಲಿನ್ನಳಿಗೆ ಬರೆದ ಕಾಗದಕ್ಕೆ ಉತ್ತರವಿಲ್ಲ. ಅವಳು ಎಲ್ಲಿದ್ದಾಳೆಂಬುದು ಸಹ ಸ್ಪಷ್ಟ ತಿಳಿಯದು. ಅವಳಿಲ್ಲದೆ ಏಕಾಂತ ದುಃಖ. ಏಕಾಂತ ಚಿಂತನೆ. ಏಕಾಂತ ಜೀವನ ಮನಸ್ಸಿಗೆ ಮುಜುಗರ ತುಂಬುತ್ತದೆ. ರೋಗದ ಕಾಟ-ಭವಿಷ್ಯದ ಬವಣೆ ಇನ್ನಷ್ಟು ಭಾರ. ಅವಳೊಂದು ಬಾರಿ ಬಂದು ಹೋದರೆ ಎಂತಹ ಸಂಕಷ್ಟವನ್ನಾದರೂ ಸಹಿಸಿಕೊಳ್ಳಬಲ್ಲೆ ಎನ್ನುತ್ತದೆ ಅಂತರಂಗ.

ಆ ಚಿಂತೆಯಲ್ಲಿ ಉತ್‌ಸ್ತಂಭಿತನಾದಂತೆ ನಿಶ್ಚಲ ಭಂಗಿಯಲ್ಲಿ ಕುಳಿತೇ ಇದ್ದ. ಹಣೆಯ ಮೇಲೆ ಹುರಿಯೆದ್ದ ನರಗಳು ದಾರಾದಾರವಾಗಿ ಕಾಣಿಸುತಿದ್ದುವು. ಡಾ|| ಕಿಟ್ಟೇಜಾನ್ ಬಳಿಗೆ ಬಂದು ನಿಂತಾಗಲೂ ಅವನು ಅದೇ ಚಿಂತನೆಯಲ್ಲಿ ಮುಳುಗಿದ್ದು ಅನಂತರ ಎಚ್ಚೆತ್ತುಕೊಂಡ. ಆಗ ಅವನ ಮುಖ ನೋಡಿ ಏನೋ ಒಂದು ಆತ್ಮೀಯ ಭಾವ ಉದಿಸಿತು ಅವಳಿಗೆ. ಕೆಂದುಟಿಗಳಲ್ಲಿ ಮುಗುಳ್ನಗುವನ್ನು ಸೂಸಿ ಪ್ರಶ್ನಿಸಿದಳು,

"ಏನಪ್ಪಾ, ಗಾಢವಾದ ಚಿಂತೆ ?"

"ಏನಿಲ್ಲ, ಸುಮ್ಮನೆ ಕುಳಿತಿದ್ದೆ"

"ರಾತ್ರಿ ನಿದ್ದೆ ಸರಿಯಾಗಿ ಬಂದಿತ್ತೆ ?"

"ಪರವಾಯಿಲ್ಲ, ಸುಮಾರಾಗಿ ಬಂದಿದೆ."

"ನೀನೊಬ್ಬನೇ ಬಂದಿದ್ದಿ, ನಿನಗೆ ತಂದೆ–ತಾಯಿಗಳು ಇದ್ದಾರಷ್ಟೆ?"

"ಇದ್ದಾರೆ." ತಲೆದೂಗಿದ ಗ್ಯಾರಿ ಲಾತವ್.

"ಅವರೇಕೆ ಇದುವರೆಗೂ ನಿನ್ನನ್ನು ನೋಡಲು ಬರಲಿಲ್ಲ ?"

"ನಾನು ತಿಳಿಸಲಿಲ್ಲ."

"ಅಂದರೆ.........?"

"ನಾನು ಬೇರೆಯಾಗಿ ವಾಸಿಸುತ್ತಿರುವೆ. ಅವರಿಗೆ ಸಮಾಚಾರ ತಿಳಿಯದು."

"ನಿನಗೆ ಮದುವೆಯಾಗಿದೆಯೇ ?"

"ಹೌದು."

"ಮತ್ತೇಕೆ ಅವಳು ಇಲ್ಲಿಗೆ ಬರುತ್ತಿಲ್ಲ ?"

"ಜರ್ಮನಿಗೆ ಹೋಗಿದ್ದಾಳೆ. ಅವಳು ಅಲ್ಲಿ ಪ್ರವಾಸದಲ್ಲಿರುವುದರಿಂದ ತಿಳಿಸಲಾಗಲಿಲ್ಲ."

"ನಿನ್ನವರು ಬಳಿಯಲ್ಲಿರುವುದು ತುಂಬ ಅಗತ್ಯ. ದಯವಿಟ್ಟು ತಿಳಿಸಿಬಿಡು."

"ಪರವಾಯಿಲ್ಲ ; ನನಗೆ ಅಂತಹ ತೊಂದರೆ ಏನೂ ಆಗಿಲ್ಲ."

"ಆದರೂ, ತಿಳಿಸುವುದು ಲೇಸು."

"..............."

"ವಿಳಾಸ ಕೊಟ್ಟಲ್ಲಿ ನಾವಾದರೂ ತಿಳಿಸಬಹುದು."

"ಏಕೆ ಅವರಿಗೆ ತೊಂದರೆ ?"

"ಇದನ್ನೆಲ್ಲಾ ತೊಂದರೆ ಎನ್ನುವುದಕ್ಕಾಗುವುದಿಲ್ಲ ಮಗೂ ! ಎಲ್ಲವೂ ಈ ಜೀವನದ ಅವಿಭಾಜ್ಯ ಅಂಗ."

"ಆದರೂ ಸಹ, ಅವರಿಗೆ ತಿಳಿಯದಿರುವುದೇ ಉತ್ತಮ ಎನಿಸುತ್ತೆ ನನಗೆ."

"ಛೀಃ ! ಛೀಃ !"

ಗ್ಯಾರಿ ಮಾತಾಡದೆ ಮುಗುಳು ನಕ್ಕ ; ಆ ನಗುವಿನ ಹಿಂದೆ ಅಡಗಿದ ನೋವು-ಪರಿತಾಪ ತೆರೆಯ ಹಿಂದೆ ಇಣುಕುವ ರಮಣಿಯಂತೆ ಸುಳಿದುವು. ಅವನು ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳಲು ಶತಪ್ರಯತ್ನ ಪಡುತಿದ್ದ. ಡಾ|| ಕಿಟ್ಟೀಜಾನ್ ಮೌನಭಾವದಿಂದ ಅವನ ವಿಚಾರಧಾರೆಯನ್ನು ಸಮರ್ಥಿಸಿದರೂ ಇನ್ನಾವುದೋ ಒಂದು ಬಗೆಯ ಕಳವಳ_ಕಾತುರತೆಯ ಒತ್ತಡದಿಂದ ಪ್ರಶ್ನಿಸಿದಳು,

"ನಿನ್ನ ಗೆಳೆಯ-ಗೆಳತಿಯರನ್ನು ಬರಮಾಡಿಕೊಳ್ಳುವುದಕ್ಕೇನು ಅಡ್ಡಿ ? ಅವರಿಗಾದರೂ ತಿಳಿಸಬಹುದಲ್ಲ?"

"ಇದ್ದಾರೆ. ಅದಕ್ಕಿಂತ ನನಗೀಗ ಏಕಾಂಗಿಯಾಗಿರುವುದೇ ಲೇಸೆನಿಸುತ್ತದೆ."

"ಏಕೆ..... ?"

"ಏನೋ ಒಂದು ರೀತಿ.....ಹೆಚ್ಚು ವ್ಯವಹಾರ ಇಷ್ಟವಾಗುವುದಿಲ್ಲ."

"ಬೇಡ, ನೀನು ಮಾತನಾಡದೆ ಶಾಂತಿಯಿಂದಿರಬಹುದು. ಯಾರಾದರೂ ಮಾತಾಡಿ ನಿನ್ನನ್ನು ರಮಿಸುವವರಿದ್ದರೆ ನಿನಗೆ ಹೆಚ್ಚು ಯೋಚನೆಗೆ ಅವಕಾಶವಿರುವುದಿಲ್ಲ."

ಗ್ಯಾರಿ ವಿಚಿತ್ರವಾಗಿ ನಕ್ಕ. ರೂಕ್ಷ ತುಟಿಗಳು ಸ್ವಲ್ಪವೇ ಬಿರಿದು ಮತ್ತೆ ಮುದುಡಿಕೊಂಡುವು.

"ಯಾರಾದರೂ ಆಪ್ತರನ್ನು ಬರಮಾಡಿಕೋ ; ಅವರು ದಿನಕ್ಕೆ ಒಂದೆರಡು ಗಂಟೆ ನಿನ್ನ ಬಳಿಯಲ್ಲಿದ್ದರೆ ನಿನಗೆ ಒಳ್ಳೆಯದು. ಮಾನಸಿಕ ನೆಮ್ಮದಿ ದೈಹಿಕ ವ್ಯಾಪಾರಕ್ಕೆ ತುಂಬ ಸಹಾಯ."

"................"

"ನಿನಗೆ ಸೂಕ್ತ ಕಂಡಂತೆ ಮಾಡಬಹುದು. ಆದರೆ, ನಿನ್ನ ಹೆಂಡತಿಗೆ ಮಾತ್ರ ತಿಳಿಸದೆ ಇರಬೇಡ."

"ಆಯಿತು, ಆಯಿತು."

ಅನಂತರ ಡಾ|| ಕಿಟ್ಟೀಜಾನ್ ಹೊರಕೋಣೆಗೆ ಬಂದು ಚಾರ್ಟಿನ ಮೇಲೆ ಕಣ್ಣಾಡಿಸಿದಳು. ಅಂದಿನ ವರದಿ ಹಿಂದಿನ ವರದಿಗಿಂತಲೂ ಬಹಳ ಹದಗೆಟ್ಟಿತ್ತು. ಅದೇ ವೇಳೆಗೆ ಬಂದ ಅಸಿಸ್ಟೆಂಟ್ ಡಾಕ್ಟರೊಡನೆ ಅದೇ

ವಿಚಾರವನ್ನೇ ಚರ್ಚಿಸುತ್ತ ಹೊರ ಹೋದಳು.

ಅಂದು ಔಷಧಿಯ ಗತಿ ಬದಲಾಗಿ ಚಿಕಿತ್ಸೆಯ ರಂಗ ವಿಸ್ತೃತಗೊಂಡು ದುದು ಗ್ಯಾರಿಯ ಗಮನಕ್ಕೂ ಬಂತು. ಅವನು ಉತ್ತಮ ಫಲಿತಾಂಶದ ಪ್ರತೀಕ್ಷೆಯಲ್ಲಿ ಕ್ಷಣ ಕ್ಷಣಗಳನ್ನು ಕಳೆಯಹತ್ತಿದ.

* * * *

ಗ್ಯಾರಿ ಲಾತಮ್ ನಿದ್ದೆಯಿಂದ ಎಚ್ಚೆತ್ತಾಗ ಮೂಡಣದಲ್ಲಿ ಹೊಂಗಿರಣಗಳು ಮೂಡುತ್ತಿದ್ದುವು. ಗಗನ ಮಂಡಲದಲ್ಲಿ ನಿರ್ಧೂಮ ಅಗ್ನಿಜ್ವಾಲೆ ವ್ಯಾಪಿಸಿದಂತೆ ರಂಗುರಂಗಿನ ಚಿತ್ತಾರ ಉದ್ಭೂತವಾಗಿತ್ತು.

ಆಸ್ಪತ್ರೆಯಲ್ಲಿ ಆಗಲೇ ದಿನಚರಿ ಆರಂಭವಾಗಿ ಮಾತಿನ ಮರ್ಮರ, ನಗೆಯಲಹರಿ, ಪಾದರಕ್ಷೆಗಳ ಪಟತ್ಕಾರ ಕರ್ಣಪಟಲಗಳಿಗೆ ತಾಗಿ ಅಂತಃಸ್ಥಲವನ್ನು ಮುಟ್ಟುತ್ತದೆ. ಇನ್ನು ಸ್ವಲ್ಪ ಹೊತ್ತಿನೊಳಗಾಗಿ ಬೆಳಗಿನ ಚಹ ಅಣಿಯಾಗುವುದರಿಂದ ಮುಖಮಜ್ಜನ ಮಾಡಲು ಏಳಲೇಬೇಕು ; ಆದರೆ ಮೈಯ್ಯಲ್ಲಿ ಹುರುಪು ಲವಲೇಶವೂ ಇರಲಿಲ್ಲ. ಭಾರವಾದ ಹೆಜ್ಜೆಗಳನ್ನು ಎಳೆದುಕೊಂಡು ನಿತ್ಯಕರ್ಮವನ್ನು ಮುಗಿಸಿದ ಸಮಯದಲ್ಲೇ ಚಹ ಅಣಿಯಾಗಿ ಬಂತು. ಅದನ್ನು ಅಲ್ಲಿನ ಮೆಟ್ರೇನಳೇ ಸ್ವತಃ ತಂದು ಮುಂದಿಟ್ಟು ಹೇಳಿದಳು,

"ನೀನು ಊಟ ತಿಂಡಿಗಳಲ್ಲಿ ಬಹಳ ಉದಾಸೀನ.... ಅದು ಕೂಡದು."

ಗ್ಯಾರಿ ಲಾತಮ್ ಕಿಸಿಸಿಗೆ–ಕಳವಳಗಳ ಒಕ್ಕೂಟವಾಗಿ ಉತ್ತರಿಸಿದ,

"ನಾಲಿಗೆ ತೀರ ಕೆಟ್ಟದೆ. ಏನು ಮಾಡಲಿ ?"

"ಸ್ವಲ್ಪ ಆರೋಗ್ಯ ಸುಧಾರಿಸಿದನಂತರ ಸರಿ ಹೋಗುತ್ತೆ. ಅದಕ್ಕಾಗಿಯೇ ಈ ಪಥ್ಯ–ಅನುಪಾನ."

"ಹಸಿವಿಲ್ಲ....."

"ಪರವಾಯಿಲ್ಲ. ಸೇರಿದಷ್ಟು ಸೇವಿಸು."

"ನಾನು ತೆಗೆದುಕೊಳ್ಳುವುದೂ ಅಷ್ಟೆ."

" ಅದು ಏನೇನೂ ಸಾಲದು. ಆರೋಗ್ಯಲಾಭಕ್ಕಾಗಿ ಸಾಕಷ್ಟು ಪ್ರಮಾಣ ತೆಗೆದುಕೊಳ್ಳದಿದ್ದರೆ ಹೇಗೆ ?"

"ಪ್ರಯತ್ನಿಸುವೆ."

ಅವಳು ಹೊರ ಹೋಗುತ್ತ ಪುನಃ ಹೇಳಿದಳು. "ಇಂದು ನೀನು ತಟ್ಟೆಯನ್ನು ಬರಿದು ಮಾಡಲೇಬೇಕು."

ಗ್ಯಾರಿ ಲಾತವ್ ಕೈ ಹಚ್ಚಿದ. ಆದರೆ, ನಾಲಿಗೆ ಒಲ್ಲದು. ದಿನವೂ ಇರುತ್ತಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಿನ ಪ್ರಮಾಣವೇ ಇದ್ದ ತೆ ಭಾಸವಾಯಿತು. ಒಂದೆರಡು ಚೂರು ಬ್ರೆಡ್ಡನ್ನು ತಿಂದು ಚಹ ಕುಡಿಯುವಷ್ಟರಲ್ಲಿ ಸಾಕಾಯಿತು. ಟ್ರೇ ಮೇಲೆ ಬಿಳಿಯ ಚೌಕವನ್ನು ಮುಚ್ಚಿ ಹಾಸಿಗೆಯ ಮೇಲೆ ಪುನಃ ಅಡ್ಡಾದ. ಚಿತ್ತಭಿತ್ತಿಯಲ್ಲಿ ಗತಜೀವನದ ಸುಖದುಃಖಗಳೆಲ್ಲ ಚಲನ ಚಿತ್ರದಂತೆ ಸುಳಿಸುಳಿಯತೊಡಗಿದುವು.

ಅಪ್ಪ-ಫೆಡ್ರಿಕ್ ಲಾತವ್ ಅತೀ ಪರಿಶ್ರಮದಿಂದ ಆರ್ಥಿಕ ಪ್ರಗತಿಯನ್ನು ಸಾಧಿಸಿದ ವ್ಯಕ್ತಿ. ತಾರುಣ್ಯ ದಿನಗಳಲ್ಲಿ ತಂದೆಯ ಹಿತವಚನಗಳಿಗೆ ಇನಿತೂ ಗಮನಕೊಡದ ಗ್ಯಾರಿಯನ್ನು ಸಿಟ್ಟಿನಿಂದ ಹೊರಹಾಕಿದ್ದ. ಅನಂತರ ಹೊಟ್ಟೆಯ ಪಾಡಿಗಾಗಿ ಹಗಲು ಕೆಲಸ ಪಡೆದು ರಾತ್ರಿಯ ಶಾಲೆಯಲ್ಲಿ ಕಲಿಯುವ ಪ್ರಸಂಗ ಬಂತು ಗ್ಯಾರಿಗೆ. ಆ ದಿನಗಳಲ್ಲಿ ಕೋಪ-ತಾಪಗಳಿಂದ ಕುದಿಯುತ್ತಿದ್ದರೂ ಈಗ ಹಾಗಾದುದೇ ಲೇಸು ಎನಿಸುತ್ತದೆ. ಆದರೂ ಸಹ ಪ್ರಸಂಗವಶಾತ್ ಅವರ ಯೋಗಕ್ಷೇಮ ವಿಚಾರಿಸಲೇ ಆಗಲೀ, ಕ್ರಿಸ್ಮಸ್ ಹಬ್ಬದ ಸ್ನೇಹ ಕೂಟಕ್ಕೇ ಆಗಲೀ ಇವನು ಹೋಗಲೂ ಇಲ್ಲ. ಅವರನ್ನು ಆಹ್ವಾನಿಸಲೂ ಇಲ್ಲ, ಅಂತಹ ಅತೀ ಸ್ವಾಭಿಮಾನದ ಬಿಮ್ಮು ಮನದ ಬಿಲದಲ್ಲಿ.

ಇನ್ನು ಮಡದಿ-ಮರ್ಲಿನ್ನಳ ವಿಚಾರದಲ್ಲೂ ಅಷ್ಟೆ.

ಅವಳು ಕಾಗದ ಬರೆಯದಿರಲು ಅಂದಿನ ಆ ಘಟನೆಯೇ ಸರ್ವತ್ರ ಕಾರಣ ಎಂಬುದು ಅವನ ಗ್ರಹಿಕೆ. ಆದರೆ, ಅವಳು ಸ್ವಾಭಿಮಾನಿಯಾದರೂ ತನ್ನನ್ನು ನಿರ್ಲಕ್ಷಿಸಿ ಹೋಗುವಷ್ಟು ದುಷ್ಟೆಯಲ್ಲ ಅಥವಾ ಅಪರಿಪಕ್ವಳಲ್ಲ ಎನ್ನುತ್ತದೆ ಅಂತರಂಗ.

ಅಂದು ಆ ಘಟನೆಯ ನಂತರ ಅವಳು ಕೋಪದ ಭರದಲ್ಲಿ ಅಂದದ್ದೇನು ? ಅದಕ್ಕೇನೆನ್ನಬೇಕು ?

"....ನನಗೆ ನೀನು ಹೇಳಬೇಕಾಗಿಲ್ಲ. ನಾನು ನನ್ನ ಆತ್ಮಘೋಷಣೆಯ ಅಧೀನ ! ನನ್ನ ಸ್ವಾತಂತ್ರ್ಯ-ನನ್ನ ಸ್ವಾಮ್ಯ ಎಂದೆಂದೂ ನನ್ನದೇ !

ಅದನ್ನು ಪ್ರಶ್ನಿಸಲು ನಿನಗೆ ಯಾವ ಹಕ್ಕೂ ಇರುವುದಿಲ್ಲ !"

ಅಬ್ಬಬ್ಬ ! ಎಷ್ಟೊಂದು ಹರಿತವಾಗಿತ್ತು ಆ ದನಿ ? ಬೆಟ್ಟದಿಂದ ಧುಮ್ಮಿಕ್ಕುವ ಉದ್ವೇಲ ಜಲರಾಶಿಯಂತೆ ನುಗ್ಗಿಬಂದ ರೀತಿ ಈಗಲೂ ಕಿವಿಯಲ್ಲಿ ಜಳಜಳಿಸುತ್ತದೆ. ಏನೋ, ಆದುದು ಆಗಿ ಹೋಯಿತು ಅಂದರೆ ಈಗಲೂ ಸಿಟ್ಟೇ ? ನನ್ನ ದೇಹಸ್ಥಿತಿ ಕೆಡುತ್ತಿದ್ದುದು ಅವಳಿಗೆ ಗೊತ್ತಿತ್ತು. ಆದರೂ, ಈ ಹಿಂಜರಿಯುವಿಕೆ ತೀರ ನಿಗೂಢ. ಹಾಯ್ !

ಕರುಳು ಸಂಕಟದಿಂದ ನುಲಿಯತೊಡಗಿ ಕಣ್ಣುಗಳಲ್ಲಿ ಸಣ್ಣಗೆ ನೀರಾಡಿತು. ದೀಪ್ತ ಲಲಾಟದ ಮೇಲೆ ಬೆವರಿನ ತುಂತುರು ಹನಿಗಳು ಮೂಡಿದುವು. ಕಣ್ಣುಗಳನ್ನು ಮುಚ್ಚಿ ತನ್ನ ನೋವನ್ನು ತಾನೇ ನುಂಗಿಕೊಳ್ಳಲು ಪ್ರಯತ್ನಿಸಿದ.

ಡಾ|| ಕಿಟ್ಟೀಜಾನ್ ನಾಲ್ಕಾರು ಮಂದಿ ವೈದ್ಯರ ತಂಡದೊಂದಿಗೆ ಆಗಮಿಸಿದಾಗ ಗ್ಯಾರಿ ಲಾತವ್ ಇನ್ನೂ ವಿಚಾರ ಮಗ್ನನಾಗಿಯೇ ಇದ್ದ. ಅವಳು ಸಮೀಪಕ್ಕೈದು ನಾಡಿ ಹಿಡಿದಾಗ ತುಟಿಗಳಲ್ಲಿ ಪ್ರಯತ್ನಪೂರ್ವಕವಾಗಿ ಎಳೆ ನಗುವನ್ನು ಸೂಸಿ ಅಂದ,

"Good morning, Doctor !"

"Good morning, my dear boy !"

ಅವಳು ಕಣ್ಣು, ನಾಲಿಗೆಗಳನ್ನು ನೋಡಿ ಕೇಳಿದಳು,

"ಇಂದು ರಾತ್ರಿ ನಿದ್ದೆ ಬಂದಿತ್ತೇ ?"

"ಸಾಧಾರಣ.... ಸರಿಯಾಗಿ ಬರಲಿಲ್ಲ."

"ಬೆಳಗಿನ ಉಪಹಾರ ತೆಗೆದುಕೊಂಡೆಯಾ ?"

"ನಾಲಿಗೆ ಕೆಟ್ಟದೆ. ಒಂದೂ ಸೇರುತ್ತಲೇ ಇಲ್ಲ. ನನ್ನ ಶರೀರಪ್ರಕೃತಿ ದಿನದಿನಕ್ಕೂ ಕೆಡುತ್ತಿದೆ." ಎಂದು ಅತ್ಯಂತ ನಿರಾಶಾಭರಿತವಾಣಿಯಲ್ಲಿ ಉತ್ತರಿಸಿದ, ಕಣ್ಣುಗಳಲ್ಲಿ ಭಯ ಭೀತಿಯ ಛಾಯೆ ಇಣುಕುತಿತ್ತು.

"ನಿನ್ನ ರಕ್ತವಾಹಿನಿ ತುಂಬ ಕೆಟ್ಟದೆ. ಅದು ಪರಿಶುದ್ಧವಾಗದ ಹೊರತು ಆರೋಗ್ಯ ಸುಧಾರಿಸದು. ನಾವು ಇಲ್ಲಿಯವರೆಗೆ ನಡೆಸಿದ ಚಿಕಿತ್ಸೆಗೆ ನಿನ್ನ ದೇಹ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ, ಅಂದರೆ, ಚಿಕಿತ್ಸೆಯ

ವ್ಯಾಪ್ತಿಗೆ ರೋಗ ಒಳಪಡಲಿಲ್ಲ. ಎಂದಂತಾಯಿತು. ಇನ್ನು ಮುಂದಿನ ಕ್ರಮಕ್ಕೆ ನಾವು ಸಿದ್ಧರಾಗಬೇಕು."

"ಅಂದರೆ, ಯಾವ ಕ್ರಮ ಕೈಗೊಳ್ಳಲಿದ್ದೀರಿ ?"

"ಅಪರಿಶುದ್ಧ ರಕ್ತವನ್ನು ಬಸಿದು ಹೊಸ ರಕ್ತವನ್ನು ತುಂಬುವುದು."

ಆ ಮಾತು ಕೇಳಿ ಅನ್ಯಾನ್ಯ ವಿಚಾರ ತರಂಗಗಳಲ್ಲಿ ಹರಿದಾಡಿತು ಚಿತ್ತ. ಗ್ಯಾರಿ ಏನೂ ಹೇಳಲಿಲ್ಲ.

ಅವನ ತೀವ್ರ ಅನ್ಯಮನಸ್ಕತೆಯನ್ನು ಗಮನಿಸುತ್ತ ಕೇಳಿದಳು ಡಾ|| ಕಿಟ್ಟೀಜಾನ್,

"ನೀನು ಏನೂ ತಪ್ಪಾಗಿ ಭಾವಿಸದಿದ್ದರೆ ನಾನೊಂದು ಪ್ರಶ್ನೆ ಕೇಳುವೆ."

"ಆಗಬಹುದು ; ಅದರಿಂದ ಯಾವ ಅಭ್ಯಂತರವೂ ಇಲ್ಲ."

ಗ್ಯಾರಿ ಅತ್ಯಂತ ನೀರಸವಾದ ಎಳೆನಗು ಬೀರಿದ.

"ನೀನು ತುಂಬ ಸಮಸ್ಯೆಯಾಗಿ ತೋರುತಿದ್ದಿ. ರೋಗ ಗುಣವಾಗದಿರಲು ಅದೊಂದು ಕಾರಣವಿರಬಹುದು. ನೀನು ನನ್ನಿಂದ ಏನಾದರೂ ಮರೆಮಾಚುತ್ತಿಲ್ಲವಷ್ಟೆ ?"

"ಅಂದರೆ..... ಮಾನಸಿಕವಾಗಿಯೋ, ದೈಹಿಕವಾಗಿಯೋ ?"

"ಯಾವುದಾದರೂ ಸರಿಯೆ."

"ದೈಹಿಕವಾಗಿ ನನಗೆ ತಿಳಿದು ಬಂದಿರುವುದನ್ನು ನಿಮ್ಮ ಮುಂದಿಟ್ಟಿರುವೆ. ಮಾನಸಿಕವಾಗಿ ಏನಾದರೂ ಪರಿತಾಪಗಳು ಇರುವುದು ಸಹಜ. ಅದು ಯಾರಿಗೆ ತಪ್ಪಿದ್ದು ?"

"ಇರಲಿ, ಈಗಂತೂ ನೀನು ನಿರಾಳವಾಗಿ ಉಸಿರಾಡಬೇಕು. ಯಾವ ಚಿಂತೆಯನ್ನೂ ಹಚ್ಚಿಕೊಳ್ಳಬಾರದು. ನೀನು ಏನೋ ಒಂದು ಬಗೆಯಾಗಿ ತೋರುತ್ತಿ ; ಅದೇ ಒಂದು ಸಮಸ್ಯೆ."

"ಅಂದರೆ..... ?"

"ಸದಾ ಅನ್ಯಮನಸ್ಕತೆ..... ಯಾರೊಂದಿಗೂ ಸೇರದಿರೋಣ..... ನಿಮ್ಮವರಿಗೆ ತಿಳಿಸದೆ ಬಂದಿರುವುದು..... ಇವೆಲ್ಲ ನಿನ್ನ ಕಾಯಿಲೆಗೆ ಸಂಬಂಧಿಸುತ್ತವೆ."

"ಸಾಮಾನ್ಯ ವಿಚಾರ...."

ಡಾ|| ಕಿಟ್ಟೇ ಜಾನ್ ಅವನ ಕೈಯನ್ನು ಅದುಮಿ ಹಿಡಿದುಕೊಂಡು ಅತ್ಯಂತ ಆತ್ಮೀಯತೆಯಿಂದ ಕರುಣ ಕಾತರ ವಾಣಿಯಲ್ಲಿ ನುಡಿದಳು,

"ಹಾ....! ಹಾಗೆನ್ನಲಾಗದು..... ಈಗ ಅವೇ ಗೌಣ."

ಗ್ಯಾರಿ ಲಾತಮ್ ಮಾತಾಡದೆ ಪ್ರಯತ್ನ ಪೂರ್ವಕವಾಗಿ ಕೃತಕ ನಗೆಯನ್ನು ಬೀರಿದ–ಜಾಹೀರಾತಿಗೆ ಪ್ರಕಟಿಸುವಂತೆ. ಅವನ ಮುಖಭಾವವನ್ನು ಗಮನಿಸುತಿದ್ದ ಡಾ|| ಕಿಟ್ಟೇ ಜಾನ್ "ಯೋಚಿಸಿ ನೋಡು ; ಈ ವಿಚಾರದಲ್ಲಿ ನಿನ್ನ ಸಹಕಾರ ನನಗೆ ಅತ್ಯಂತ ಪ್ರಾಮುಖ್ಯವಾದುದು" ಎಂದಳು.

"ಇಲ್ಲ, ಡಾಕ್ಟರ್ ; ನನ್ನ ಧೇಹಪ್ರಕೃತಿ ಮತ್ತು ವ್ಯವಹಾರ ಯಾವಾಗಲೂ ಹೀಗೆಯೆ."

"ಆಹಾ.....!"

"ಹೌದು, ನಾನು ಗಂಭೀರ. ತೀರ ಸರಳತೆ ನನಗೆ ಅಷ್ಟಾಗಿ ಹಿಡಿಯುವುದಿಲ್ಲ." ವಾಕ್ಯ ಸರಣಿ ಕೊನೆಗೊಂಡಾಗ ಆವುದೋ ಅಜ್ಞಾನ ವೇದನೆಯ ಛಾಯೆ ಅವನ ಬೊಗಸೆಗಂಗಳಲ್ಲಿ ಸುಳಿಸುಳಿದು ಮಾಯವಾಯಿತು. ಕೆಲವು ಕ್ಷಣ ತಡೆದು ಆಶಂಕೆ-ಕಳವಳಗಳಿಂದ ಕೂಡಿ ವಿಜಾತೀಯವಾದ ಕಂಠಸ್ವರದಲ್ಲಿ ಪುನಃ ಮುಂದುವರಿದ "ಈ ನನ್ನ ವ್ಯವಹಾರಕ್ಕೆ ಅಂತಹ ಮಹತ್ವವನ್ನೇನೂ ಕೊಡಬೇಕಿಲ್ಲ ಡಾಕ್ಟರ್ ! ಇದು ನನ್ನ ದಿನ ನಿತ್ಯದ ಸಾಮಾನ್ಯ ವ್ಯಾಪಾರ."

"ಆಗಲಿ, ದಿನನಿತ್ಯ ಹಾಗಿದ್ದರೆ ಅದರ ರೀತಿಯೇ ಬೇರೆ. ಆಗ ನಿನ್ನ ಮನಸ್ಸು ಐಹಿಕ ವ್ಯಾಪಾರಗಳಲ್ಲಿ ಹರಿದಾಡುತ್ತಿತ್ತು. ಈಗ ಹರಿದಾಡುವುದು ರೋಗದ ದಾಡೆಗಳ ಮೂಲಕ."

"..........."

"ನಿನ್ನವರಿಗೆ ನೀನು ಕಾಗದ ಬರೆದು ಬರಮಾಡಿಕೊ. ಅಥವಾ ನಮಗೆ ವಿಳಾಸ ಕೊಡು ; ಈಗ ಯಾರಾದರೂ ನಿನ್ನ ಬಳಿ ಇರುವುದು ಸೂಕ್ತ. ನಿನ್ನನ್ನು ಬಲ್ಲವರು ನಿನ್ನ ಮನಸ್ಸು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲರು."

"ಆಗಬಹುದು....." ಎಂದ ಪ್ರಯತ್ನಪೂರ್ವಕವಾಗಿ, ಆಂತರಿಕ ವೇದನೆ ಹೃದಯವನ್ನು ಗಾಣಕ್ಕೆ ಕೊಟ್ಟಂತೆ ಹಿಂಡುತಿತ್ತು. ನಾಳನಾಳಗಳಲ್ಲಿ ಸಿಕ್ಕಿಕೊಂಡ ಉಸಿರು ಅಲ್ಲಲ್ಲೇ ಮಿಲಿಮಿಲಿಗೊಂಡಿತು.

"ನೀನೀಗ ಹಳೆಯದನ್ನೆಲ್ಲಾ ಮರೆತು ನಿರ್ಭಾರವಾಗಿ ಉಸಿರಾಡಬೇಕು."

"ಇಲ್ಲ.... ಡಾಕ್ಟರ್. ನಾನು ಯಾವುದನ್ನೂ ಅಷ್ಟೊಂದು ಹಚ್ಚಿಕೊಳ್ಳುವವನಲ್ಲ."

ಡಾ|| ಕಿಟ್ಟೀ ಜಾನ್ ಆ ಮಾತು ಕೇಳಿ ಹರ್ಷಿತೆಯಾದಂತೆ ಮುಖದ ಮೇಲೆ ಸಣ್ಣ ಸಮಾಧಾನದ ಕಳೆಯನ್ನು ತಂದುಕೊಂಡಳು.

* * * *

ತನುಮನಗಳಿಗೆ ತಂಪೂಡಿಸುವಂತಹ ಸುಂದರ ವಾತಾವರಣದಲ್ಲಿ ಬಾಲರವಿ ದೂರ ದಿಗಂತದ ಹೆಮ್ಮುಗಿಲಿನ ಮೆತ್ತೆಯ ಮೇಲೆ ಸರ್ವೋಚ್ಚ ಶ್ರೀಮಂತಿಕೆಯಿಂದ ಏರುತಿದ್ದ.

ಹೊರ ಜಗತ್ತಿನ ತರುನಿಕರವೆಲ್ಲಾ ಸೌವರ್ಣಕಾಂತಿಯಲ್ಲಿ ಮಿಂದು ಮಡಿಯುಟ್ಟು ನಾಗರಿಕ ರಸ ಚೇತನವನ್ನು ಪುಷ್ಟೀಕರಿಸುವಂತೆ ನಳನಳಿಸುತಿತ್ತು. ಆ ಮಧುರ ಶಾಂತವಾತಾವರಣದಿಂದ ಆಕರ್ಷಿತನಾದ ಗ್ಯಾರಿ ಲಾತಮ್ ಹಾಸಿಗೆಯಿಂದ ಎದ್ದು ಕಿಟಕಿಯ ಬಳಿಯಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಂಡ. ಅಂತರ್ನಿಹಿತ ರೋಗದ ವಿಷಕೀಟ ನರತಂತುಗಳನ್ನು ಶೀಳುವಂತೆ ಹಾರಾಡುತಿದ್ದು ಮಾನಸಿಕ ಪ್ರಪಂಚವೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ಎಷ್ಟು ಪ್ರಯತ್ನಿಸಿದರೂ ಸ್ಥಿಮಿತಕ್ಕೆ ಬಾರದು.

ಒಮ್ಮೊಮ್ಮೆ,

ಥೇಮ್ಸ್ ನದಿಯ ಜುಳುಜುಳು ಮಂಜುಳಗಾನ ಮನವನ್ನು ಅರಳಿಸುವಂತೆ ಕೇಳಿಬರುವುದು. ಹಿಂದೆಯೇ ನಾನಾ ಬಗೆಯ ವಿಹಾರದ ನೆನಪುಗಳು. ಒಮ್ಮೆ ಮನವನ್ನು ಅತ್ತ ಹರಿಯಬಿಟ್ಟರೆ ಇನ್ನೊಮ್ಮೆ ಮಡದಿಯ ಕಡೆ. ಅವಳು ಪ್ರಕೃತಿ ವ್ಯಾಪಾರದಲ್ಲಿ ಅಥವಾ ಪ್ರಕೃತಿ ಸೌಂದರ್ಯದಲ್ಲಿ ಮೈಮರೆಯುವಷ್ಟು ಇನ್ನಾವ ಸುಖಭೋಗದಲ್ಲೂ ಮರುಳಾಗುತ್ತಿರಲಿಲ್ಲ. ಸೋಹೋ ಪ್ರದೇಶದ ರಾತ್ರಿಯ ಕ್ಲಬ್ಬುಗಳಿಗೆ ಹೋಗುವುದನ್ನು ನಿಷೇಧಿಸಿದ್ದು ಅವಳ ಗೆಳೆತನವಾದ ಮೇಲೆಯೇ. ಅಂತಹ ಒಂದು ಸುಂದರವಾದ ವ್ಯಕ್ತಿತ್ವ ಇಂದು ಸಮಸ್ಯೆಯ ಕಗ್ಗಂಟಾಗಿ ಮನವನ್ನು ರುಂಧ್ರ ಕೀಟದಂತೆ ಕಾಡುವುದು ವಿಶೇಷವೇ. ಬಳಿಯಲ್ಲಿ ಸಂಗಾತಿಗಳಿಲ್ಲದೆ ಸಮಯ ನಿಧಾನಗತಿಯಲ್ಲಿ

ಉರುಳುವುದರಿಂದ ಇನ್ನಷ್ಟು ಮಾನಸಿಕ ವಿಪ್ಲವಕ್ಕೆ ಇಂಬು. ರೋಗ ಮತ್ತು ಚಿಕಿತ್ಸೆಗಳ ಕಾಳಗಕ್ಕೆ ರಂಗವಾದ ಶರೀರದ ಬವಣೆ ಸಹಿಸಲಸಾಧ್ಯ. ಈ ಸಂಕಷ್ಟಕ್ಕಿಂತ ಮೃತ್ಯುವಿನ ಉಡಿಲೇಸು ಎನ್ನುತ್ತದೆ ಅಂತರಂಗ.

ಆದರೂ ಸಹ, ತನ್ನ ಮರ್ಲಿನ್ನಳಿಗೆಂದೇ ಉಸಿರಾಡುವ ಜೀವ ರೋಗವನ್ನು ಜೀರ್ಣಿಸಿಕೊಳ್ಳಲು ಸರ್ವಸಹಸಾ ಹೆಣಗುತ್ತ ಬದುಕುವಾಸೆಯನ್ನು ಮನಸ್ಸಿಗೆ ಊಡುವುದರಿಂದ ಕಾಲಕ್ರಮಣ ನಡೆಯುವುದು ದಿಟ. ಕಾಂತಿಹೀನವಾದ ಕಣ್ಣುಗಳು ಸರ್ವತ್ರ ಬೆಳಗುವುದೇ ನಿತ್ಯ ನೂತನ ಆಶಾಜ್ಯೋತಿಯಿಂದ. ಅಲ್ಲದೆ ತನ್ನ ಜೀವನ ಪರಿಸ್ಥಿತಿಗೆ ಕಾರಣೀಭೂತರಾದ ತಂದೆ ತಾಯಿಯರು ಮತ್ತು ತನ್ನೊಂದಿಗೆ ಒಡಹುಟ್ಟಿದವನೂ, ಅಪಾರವಾದ ಪ್ರೀತಿಗೆ ಪಾತ್ರನಾದವನೂ ಆದ ಏಕಮಾತ್ರ ತಮ್ಮ ಇವರನ್ನು ಚಿತ್ತಕಲ್ಪದ ಮೇಲೆ ಕಡೆದು ನಿಲ್ಲಿಸಿದಾಗ ಒಮ್ಮೆಯಾದರೂ ಕಣ್ತುಂಬ ನೋಡಲೇಬೇಕೆಂಬ ಆಶಾಪ್ರವೃತ್ತಿಯಿಂದ ಜೀವ ತುಯ್ದಾಡುವುದು. ಆದರೂ, ಲೇಖನಿ ಹಿಡಿದು ಎರಡಕ್ಷರ ಬರೆಯಲಾಗದಷ್ಟು ಸ್ವಾಭಿಮಾನವೋ, ಉದಾಸೀನವೋ ಅಥವಾ ಇನ್ನೇನೋ.

ಢಣ್ !

ಲಂಡನ್ ನಗರದ ಹೃದಯವೇ ಮಿಡಿದಂತೆ ಪಾರ್ಲಿಮೆಂಟ್ ಭವನ ಗೋಪುರದ ಬೃಹದ್ ಗಡಿಯಾರ ಕರುಣಕಾತರತೆಯಿಂದ ಮಿಡಿಯಿತು– ಅನುಕಂಪ ಸೂಸುವಂತೆ.

ಆಗ ಸುಮ್ಮನೆ ಸಹಜಭಾವದಿಂದ ಗಡಿಯಾರದತ್ತ ನೋಟ ಹೊರಳಿಸಿದ. ಆ ಅಂಕಿಯುಕ್ತ ಮುಖಶ್ರೀ ತನಗೆ ಏನನ್ನೋ ಹೇಳಬಯಸಿದಂತೆ ಭಾಸವಾಯಿತು. ಸ್ವಲ್ಪಹೊತ್ತು ಅಲ್ಲಿಂದ ಭಾವನಾತ್ಮಕ ದೃಷ್ಟಿ ಚಲಿಸಲಿಲ್ಲ. ಚಿಂತಾಮಗ್ನ ಚಿತ್ತ ಮೌನಶಾಂತಿಯಲ್ಲಿ ಮುಳುಗಿತು. ಬಹುಶಃ ಹಾಗೆ ಅರೆತಾಸು ಕಳೆದಿರಬಹುದು. ಆಫೀಸಿನ ಕದ ಕಿರ್ರನೆ ಸದ್ದು ಮಾಡಿ ಗಮನವನ್ನು ಸೆಳೆದುಕೊಂಡಾಗ ನೋಟ ಸಹಜವಾಗಿ ಅತ್ತ ಹೊರಳಿತು. ಮಿಸ್ ಮೇರಿ ಜಾನ್ ಬಾಗಿಲನ್ನು ಹಿಂದೆಯೇ ಮುಚ್ಚಿಕೊಂಡು ಆಫೀಸಿನಿಂದ ಹೊರಬಿದ್ದ ಕ್ಷಣದಲ್ಲಿ ಗ್ಯಾರಿಯನ್ನು ಕಂಡು ಅತ್ತಲೇ ಬಂದಳು.

"ಏನಪ್ಪಾ, ಹೊಂಬಿಸಲು ಬಹಳ ಹಿತವೆನಿಸಿದೆಯೇ ?"

"ಹೌದು ಬೆಳಗಿನ ಹವೆ ಯಾರಿಗೆ ಹಿತವಾಗದು ?"

"ಸರಿ.........ಸರಿ." ತಲೆಯಾಡಿಸುತ್ತಾ ಮುಗುಳು ನಕ್ಕಳು ಮೇರಿ.

"ಹೊರಹೊರಟಿದ್ದಿ, ಕೆಲಸವಾಯಿತೇ ?"

"ಇನ್ನೂ ಇಲ್ಲ. ತಾಯಿಯ ಆಫೀಸಿನಲ್ಲಿ ಸ್ವಲ್ಪ ಕೆಲಸವಿದೆ ಅಲ್ಲಿಗೆ ಹೊರಟಿರುವೆ."

"ಓಹೋ......'

"ಅಂದಹಾಗೆ, ನೀನು ಹೇಗಿದ್ದಿ ? ಈಗ ಏನಾದರೂ ಗುಣ ತೋರುತ್ತಿದೆಯೇ ?

"ಏನೂ ಗುಣವಿಲ್ಲ. ರೋಗ ಪ್ರಾಣಹಿಂಸೆ ಕೊಡುತ್ತಿದೆ, ತಾಳಲಾರೆ."

"ಎದೆಗುಂದಬಾರದು. ವಿಜ್ಞಾನ ಬಹಳ ಮುಂದೆ ಹೋಗಿದೆ."

"ಅದು ನಿಜ, ಆದರೆ ತಾಳ್ಮೆಯಲ್ಲಿ ನಾವು ಬಹಳ ಹಿಂದೆ ಉಳಿದಿದ್ದೇವೆ."

ಒಡನೆ ಇಬ್ಬರ ಮುಖದಲ್ಲೂ ನಗುವಿನ ಚಿಲುಮೆ ಉಕ್ಕಿ ಹರಿಯಿತು.

ಅನಂತರ ಅವಳು ಅತ್ಯಂತ ಶ್ರದ್ಧೆಯಿಂದ ನುಡಿದಳು,

"ಅಷ್ಟು ತಿಳಿದುಕೊಂಡವರಿಗೆ 'ತಾಳ್ಮೆ' ಬಹಳ ಕಷ್ಟವೇನಲ್ಲ."

ಆ ಮಾತು ಎದೆಯಾಳಕ್ಕಿಳಿಯಿತು. ಹಿಂದೊಮ್ಮೆ ಮರ್ಲಿನ್ನಳು ಅದೇ ಮಾತು ಹೇಳಿದ್ದಳು. ಅವಳಿಂದ ಪಡೆದುಕೊಂಡ ಸ್ಫೂರ್ತಿ ಇವಳಿಂದ ಉಜ್ಜ್ವಲಗೊಂಡಿತೇನೋ. ಒಂದೆರಡು ಕ್ಷಣ ಅವಳನ್ನು ನಿಟ್ಟಿಸಿ ನೋಡಿ ಅಂದ,

"ಒಂದೊಂದು ವೇಳೆ ಆತ್ಮೀಯರು ನೀಡುವ ಸ್ಫೂರ್ತಿ ಆ ಭಗವಂತನೂ ನೀಡಲಾರನೇನೋ ಅನಿಸುತ್ತೆ !"

"ಅದು ಹೇಗೆ ?"

"ನಾನು ಪಡೆದುಕೊಂಡ ಸ್ಫೂರ್ತಿ ಅದಕ್ಕೆ ಉದಾಹರಣೆ."

"ಇರಲಿ, ಅದನ್ನು ಯಾವಕಾರಣಕ್ಕೂ ಬಿಟ್ಟುಕೊಡಬಾರದು. ಅದರಲ್ಲೂ ನಿನ್ನಂತಹ ಯುವಕರು ನಿಃಸ್ಫೂರ್ತಿಯಿಂದ ನರಳುವುದು ನಿಜವಾಗಿಯೂ ನಾಚಿಕೆಗೇಡಿತನ !"

"ನೀನು ಆರೋಗ್ಯವಾಗಿದ್ದಿ. ನನ್ನ ಕಷ್ಟ ಗೊತ್ತಾಗುವುದಿಲ್ಲ ಅಷ್ಟೆ."

"ನನಗೆ ಆ ಅನುಭವ ಆಗಿಲ್ಲ, ನಿಜ. ಆದರೆ ದೃಢತೆ ಇದೆ."

ಆ ಮಾತು ಮರ್ಲಿನ್ನಳ ಮುಖದಿಂದಲೇ ಹೊರಬಿದ್ದಂತಾಯಿತು. ಅಂಗ ಭಂಗಿ–ಹಾವಭಾವ ಎಲ್ಲವೂ ಅವಳನ್ನೇ ಒಂದಲ್ಲ, ಒಂದು ರೀತಿಯಲ್ಲಿ ಪ್ರತಿನಿಧೀಕರಿಸುವಂತೆ ತೋರಿಬಂದು ಸ್ವರ ಸಂವಿಧಾನವನ್ನು ಮನದಲ್ಲೇ ಸವಿದು ಮುಗುಳು ನಕ್ಕ,

"ದೇವರು ನಿನಗೆ ಒಳಿತು ಮಾಡಲಿ. ಅವನ ಮೇಲೆ ನಂಬುಗೆ ಇಡು!"

ಗ್ಯಾರಿ ಲಾತವ್ ಸಂತುಷ್ಟನಾಗಿ ಪ್ರತಿ ವಂದನೆಯನ್ನು ಸಲ್ಲಿಸಿದ.

"ತುಂಬ ವಂದನೆಗಳು."

ಅವಳು ಅಲ್ಲಿಂದ ಹೊರಟಳು.

ಹಿಂದಿಲಿಂದ ಹಿಂಬಾಲಿಸಿದ ನಯನದ್ವಯಗಳು ದೂರದಲ್ಲಿ ಅವಳು ಕಣ್ಮರೆಯಾಗುವವರೆಗೂ ನಿಟ್ಟಿಸಿದುವು. ಆ ಅಪರದ್ದೇಶ; ಕುರುಳು ಕುರುಳಾಗಿ ಇಳಿಬಿದ್ದ ಹೊಂಗೂದಲು. ಚಿಗರಿಯನ್ನು ಮೀರಿಸುವ ಚಟುವಟಿಕೆ ಮನೋನಿಶ್ಚಯಕ್ಕೆ ಪುಟಗೊಡುವಂತಿದ್ದವು.

* * * *

ಗ್ಯಾರಿಲಾತವ್ ಕಾಲದೆಶೆಯಲ್ಲಿ ಮುದುಡಿ ಬಿದ್ದಿದ್ದ ಹೊದ್ದಿಕೆಯನ್ನು ಮೇಲೆಳೆದುಕೊಂಡ. ಆರೋಗ್ಯ ದಿನದಿನಕ್ಕೂ ಕ್ಷೀಣಿಸುತಿದ್ದು ಕ್ಷಣಕ್ಷಣಗಳೆಲ್ಲಾ ನಿಮಿಷನಿಮಿಷಗಳಾಗಿ ತಾಸುತಾಸುಗಳಾಗಿ ಮಾರ್ಪಟ್ಟು ಕಬ್ಬಿನ ಗಾಣದಂತೆ ಮನವನ್ನು ಹಿಂಡುತ್ತ ಉರುಳುತಿದ್ದುವು. ಚಿಂತಾವ್ಯಾಕುಲಿತ ಚಿತ್ತ ಗತಕಾಲದ ಹಸುರಾಗಿ ಬಂಡೆದ್ದು ಅಕ್ಷಿಪಟಲದ ಮೇಲೆ ಮೂಡಿ ಬರುವುವು.

ವಿವಾಹಪೂರ್ವ ತನಗೂ ಮರ್ಲಿನ್ನಳಿಗೂ ಪೋಸ್ಟಾಫೀಸಿನ ಮಹಾ ಗೋಪುರದಲ್ಲಿ ನಡೆದ ಭೇಟಿಯು ಸಹಜಸ್ವರೂಪ ಸಾರವತ್ತಾಗಿ ಸುಳಿದು ಬಂದಾಗ ಗಮನ ಅಲ್ಲೇ ಕೇಂದ್ರೀಕೃತವಾಯಿತು....ಅಂದು, ಎಡೆಬಿಡದೆ ಸುರಿಯುತಿದ್ದ ತುಂತುರು ಮಳೆಯಲ್ಲಿ ಓವರ್ ಕೋಟನ್ನು ತೊಟ್ಟು ನಗರದ ಪೋಸ್ಟ್ ಆಫೀಸಿನ ಕಡೆ ಹೊರಟ. ಅಲ್ಲಿಗೆ ಹೋಗಿಬರಲು ಬೇಕಷ್ಟು ಬಸ್ಸುಗಳು ಸಿಗುತ್ತವೆಯಾದರೂ ಕಾಲ್ನಡಿಗೆಯೇ ಹಿತಕರ ಎನಿಸಿತು ಅವನಿಗೆ. ಮಳೆನೀರಿನಿಂದ ತೊಯ್ದು ಹಾದಿಸುಂಚಿನಲ್ಲಿ ಹೊಮ್ಮುವ ಮಣ್ಣಿಂಪನ್ನು

ಉಪಭೋಗಿಸಿ ಆನಂದಿಸಿತು ಜಿಹ್ವೇಂದ್ರಿಯ. ಆಕ್ಸ್‌ಫರ್ಡ್ ರಸ್ತೆಯನ್ನು ದಾಟುವಷ್ಟರಲ್ಲಿ ಮಳೆಯು ನಿಂತು ವಾತಾವರಣ ಶುಭ್ರವಾಗಿ, ಮಂಜಿನ ತೆರೆಯನ್ನು ಹರಿದು ಹೊಂಬಿಸಿಲು ಇಳೆಯಮೇಲೆ ಹರಡುವುದಕ್ಕೂ ಹೆಚ್ಚಿನ ಕಾಲಾವಕಾಶ ತೆಗೆದುಕೊಳ್ಳಲಿಲ್ಲ. ತಣ್ಣಗೆ ಕೊರೆಯುವ ಮೈಗೆ ಬಿಸಿಲ ಬೆಚ್ಚನೆಯ ಕಾವು ನಿಜಕ್ಕೂ ಆನಂದವನ್ನು ಮೂಡಿಸಿತು. ಆಗ ಅವನಿಗೆ ತನ್ನ ಗೆಳತಿಯು ಜೊತೆಯಲ್ಲಿ ಇದ್ದಿದ್ದರೆ ಈ ಸೊಬಗಿನ ರುಚಿಯೇ ಬೇರೆ ಎನಿಸಿರಲೇಬೇಕು. ಅವಳ ವಸತಿ ಅಲ್ಲಿಗೆ ಹತ್ತಿರವಾದುದರಿಂದ ಅವಳ ಭೇಟಿಯ ಬಯಕೆ ವಿಶೇಷವೇನೂ ಅಲ್ಲ.

ದೂರದಲ್ಲಿ ನಯನಾಕರ್ಷಿತವಾದ ಪೋಸ್ಟಾಫೀಸಿನ ಮಹಾ ಗೋಪುರ !

ಗಗನಭಿತ್ತಿಯವರೆಗೆ ಏರಿ ಮುಗಿಲಲೋಕವನ್ನು ಇಣಿಕಿನೋಡುವ ಗೋಪುರ ದೃಷ್ಟಿಗೋಚರಿಸಿದರೂ ಸಮೀಪಗತವಾಗಿರಲಿಲ್ಲ. ಅದು ಗೋಪುರ ಮಾತ್ರವಲ್ಲ; ಅದರಲ್ಲಿ ನಾಗರಿಕ ವಿಶೇಷವೂ ಉಂಟು. ಬ್ರಿಟಿಷ್ ದ್ವೀಪದಿಂದ ಇತರ ಭಾಗಗಳಿಗೆ ಟೆಲಿಫೋನ್ ಮತ್ತು ಟೆಲಿವಿಷನ್ ಸಂಪರ್ಕಗಳ ಯೋಜನೆಗಾಗಿ ೬೨೦ ಅಡಿಗಳ ಎತ್ತರದಲ್ಲಿ ಏರ್ಪಡಿಸಿದ ವ್ಯವಸ್ಥಾ ಕೇಂದ್ರವೂ, ಜನಮನರಂಜನೆಗಾಗಿ ಒಂದು ಚಲಿಸುವ ರೆಸ್ಟೋರೆಂಟೂ, ನಗರ ದೃಶ್ಯವನ್ನು ಸಮೀಪದಿಂದ ಸವಿಯಲು ದೂರದರ್ಶಕವೂ, ನೋಟಕರಿಗೆ ವರ್ತುಲಾಕಾರದ ವೇದಿಕೆಯೂ ಅದರಲ್ಲಿ ಉಪಸ್ಥಾಪನೆಗೊಂಡಿವೆ. ಅದು ದೂರ ಪ್ರವಾಸಿಗರನ್ನಷ್ಟೇ ಆಕರ್ಷಿಸುವುದು ಎಂದೇನಲ್ಲ ; ಸ್ಥಳೀಯರೂ ಸಹ ಅಲ್ಲಿನ ಸ್ಥಳವನ್ನು ಮುಂಗಡವಾಗಿ ಕಾಯ್ದಿರಿಸಿ ಮನರಂಜನೆಯನ್ನು ಪಡೆಯುತ್ತಾರೆ. ೩೩ ಅಂತಸ್ತುಗಳನ್ನು ಹೊಂದಿದ ಗೋಪುರವನ್ನೇರಲು ವೇಗಗಾಮಿಯಾದ ಲಿಫ್ಟ್‌ಗಳಿವೆ. ಅವುಗಳ ಮೂಲಕ ಮೇಲೇರುವಾಗ ವೇಗದ ತೀವ್ರತೆಯ ಅರಿವು ಅಷ್ಟಾಗಿ ಮೂಡುವುದೇ ಇಲ್ಲ. ರೆಸ್ಟೋರೆಂಟನಲ್ಲಿ ಆಹಾರವನ್ನು ಸೇವಿಸುತ್ತ ನಗರ ದೃಶ್ಯವನ್ನು ಸವಿದು ಅದರ ಸೂಕ್ಷ್ಮ ಚಲನೆಯೊಂದಿಗೆ ಸ್ಥಳ ಪಲ್ಲಟವನ್ನೂ ಹೊಂದಬಹುದು.

ಅವನು ಮುಂದಿನ ಅರ್ಧ ಹಾದಿಯನ್ನು ಕ್ರಮಿಸುವಷ್ಟರಲ್ಲಿ ತನ್ನ ಎದೆಯ ಹಾರೈಕೆಯಂತೆಯೇ ಮರ್ಲಿನ್ನಳ ಭೇಟಿಯ ಭಾಗ್ಯ ಲಭಿಸಿತು. ಅವಳು ಕೆಂಗುಲಾಬಿಯಂತಹ ತುಟಿಗಳಲ್ಲಿ ಮಧುಮಯವಾದ ನಗುವಿನ

ಲಹರಿಯನ್ನು ಹರಿಸಿ 'ಹಾಯ್!' ಎಂದಳು, ಕಂಠಸ್ವರ ನವಿಲಿನ ಕೇಕೆಯಂತೆ ಹರಿದು ಬಂತು. ಉತ್ಸಾಹವನ್ನೂ ಉತ್ಸುಕಗೊಳಿಸುವಂತಹ ಚೇತನ ಅದು. ಗ್ಯಾರಿಯೂ ಹೃದಯದ ಹೆಬ್ಬಾಗಿಲನ್ನೇ ತೆರೆದು ಅವಳಿಗೆ ಸ್ವಾಗತ ನೀಡಿದ. ಮುಖಮಂಡಲ ಆನಂದದಿಂದ ಅರಳಿ ಹೂವಾಯಿತು. ಅವಳು ಹೆಣ್ಣು ಹಂಸೆಯಂತೆ ಸಮೀಪಕ್ಕೈತಂದಳು.

"ಓ.........! ಮರ್ಲಿನ್!" ಆನಂದೋತ್ಸಾಹದಿಂದ ಉದ್ಗಾರ ತೆಗೆದ ಗ್ಯಾರಿಲಾತಮ್,

"ಎಲ್ಲಿಗೆ ಹೊರಟಿದ್ದಿ ?"

"ಪೋಸ್ಟಾಫೀಸಿಗೆ."

"ನಾನೂ ಅಲ್ಲಿಗೆ !"

"ಇದೇನು ಕಾಲ್ನಡಿಗೆ ?"

"ಮೊದಲು ನೀನು ಹೇಳು, ಏಕೆ ಅಂತ ?"

"ನನಗೆ ಸ್ವಲ್ಪ ವ್ಯಾಯಾಮ ಬೇಕಿತ್ತು."

"ನನಗೂ ಅಷ್ಟೆ !"

ಆ ಕಂಠಸ್ವರ ಪಿಟೀಲಿನ ಕ್ರೇಂಕಾರವನ್ನೂ ನಾಚಿಸುವಂತಿತ್ತು.

ಗ್ಯಾರಿಲಾತಮ್ ಸರ್ವಾಂಗ ಪುಳಕಿತನಾಗಿ ಅವಳ ಮೃದು ಹಸ್ತವನ್ನು ಆದುಮಿ ಹಿಡಿದುಕೊಂಡು ಅತ್ಯಂತ ಆತ್ಮೀಯತೆಯಿಂದ ಅಂದ,

"ಬಾ, ನಿನ್ನನ್ನು ನೋಡದೆ ಒಂದು ವಾರವೇ ಆಗಿತ್ತು. ಹೀಗೇ ಸುತ್ತಿ ಅಡ್ಡಾಡಿ ಬರೋಣ."

"ಅಯಿತು. ನೀನು ಹೇಳಿದಮೇಲೆ ಇಲ್ಲ ಎನ್ನುವುದು ಹೇಗೆ ?"

"ಎಲ್ಲಾ ಬರೀ ಮಾತಿನಲ್ಲೇ ಮುಗಿಸಿ ಬಿಡುತ್ತಿ !"

"ಅಂದರೆ....?"

"ಒಂದು ವರ್ಷದಿಂದ ಮೀನಿನಂತೆ ಜಾರಿಕೊಳ್ಳುತಿದ್ದಿ; ಬಹುಶಃ ನಾನು ಕೇಳಿಕೊಂಡಷ್ಟು ಇನ್ನಾವ ತರುಣನೂ ಭಾವೀ ಪ್ರೇಯಸಿಯನ್ನು ಖಂಡಿತ ಕೇಳಿಕೊಂಡಿರಲಾರ."

"ಆ ಮಾತನ್ನು ಅಷ್ಟೊಂದು ದೃಢವಾಗಿ ಹೇಳುವುದರಲ್ಲಿ ನೀನು

ಯಾವ ಮಾಹಿತಿ ತೆಗೆದುಕೊಂಡೆ ?"

"ಮಾಹಿತಿಯೇಕೆ ? ನಾನು ಅಷ್ಟೊಂದು ಪ್ರಜ್ಞಾಹೀನನೇ ?"

"ಬರೀ ಊಹೆಯಿಂದ ಹೇಳಿದರೆ ತಪ್ಪಾಗುತ್ತದೆ. ನೀನು ಮನೆ ಮನೆಯನ್ನೂ ಹೊಕ್ಕಿ ನೋಡಬೇಕು!"

"ಓ ಅದೆಲ್ಲಾ ಏಕೆ ? ಹೊರ ಜಗತ್ತಿನ ವ್ಯಾಪಾರವೇ ಸಾಕು."

ಆ ವೇಳೆಗೆ ಇಬ್ಬರೂ ಪೋಸ್ಟಾಫೀಸಿನ ಮೆಟ್ಟಲು ಹತ್ತುತಿದ್ದರು. ಅಲ್ಲಿನ ಕೆಲಸ ಮುಗಿದನಂತರ ಗ್ಯಾರಿ ಕೇಳಿದ,

"ಸ್ಥಳ ಸಿಕ್ಕಿದರೆ ಮೇಲಂತಸ್ತಿನ ರೆಸ್ಟೊರೆಂಟಿಗೆ ಹೋಗೋಣವೇ ?"

"ಇಷ್ಟುಕ್ಕೂ ನಿನಗೆ ಸ್ಥಳ ಸಿಗಬೇಕಲ್ಲ ?"

ಇಷ್ಟೊತ್ತೂ ಮಳೆ ಸುರಿದಿದೆ. ಇನ್ನೂ ಮಂಜು ಮೋಡ ಪೂರ್ತಿ ಹರಿಯಲ್ಲಿಲ್ಲ. ಜನ ಅಷ್ಟು ಭರ್ತಿಯಿರಲಾರದು."

"ಹಾಗಾದರೆ.........ನೋಡೋಣ."

ಇಬ್ಬರೂ ಹೋಗಿ ಆಫೀಸಿನಲ್ಲಿ ಕೇಳಲಾಗಿ ಕೆಲವು ಸೀಟುಗಳಿರುವುದು ತಿಳಿದು ಬಂತು. ಒಡನೆಯೇ ಮರ್ಲಿನ್ ಉತ್ಸುಕಳಾದಳು "ನಾನು ಬಯಸಿದ್ದನ್ನು ನೀನು ಕೊಡಿಸಬೇಕು ತಿಳಿಯಿತೇ ?"

"ಮೊದಲು ಮೇಲೆ ಹೋಗೋಣ. ಅನಂತರ ಎಲ್ಲಾ."

"ಅದೆಲ್ಲಾ ಇರಲಿ, ಮೊದಲು ಹೇಳು. ನಾನು ಕೇಳಿದ್ದು ಕೊಡಿಸುತ್ತೀತಾನೆ ?"

"ಖಂಡಿತ....."

ಇಬ್ಬರೂ ಆನಂದೋತ್ಸಾಹದಿಂದ ಅಲ್ಲಿನ ವ್ಯಾಪಾರ ಮುಗಿಸಿ ಲಿಫ್ಟಿಗೆ ಜಿಗಿದರು. ಗಗನದೆತ್ತರಕ್ಕೆ ಲಿಫ್ಟಿನಲ್ಲಿ ಏರುವುದೂ ಸಹ ಒಂದು ಅದ್ಭುತ ಮೋಜು. ಯಾನವನ್ನು ಕೊನೆಗಾಣಿಸಿ ಮೇಲಂತಸ್ತಿಗೆ ಪದಾರ್ಪಣೆ ಮಾಡಿದಾಗ ಮನಮೋಹನೀಯ ಖಾನಾವಳಿ ಸ್ವಾಗತ ನೀಡಿತು. ನವ ಹುರುಪಿನ ಭಾವೀ ದಂಪತಿಗಳು ಮೇಜಿನ ಮುಂದಿನ ಕುರ್ಚಿಯಮೇಲೆ ಮಂಡಿಸಿದರು. ಗ್ಯಾರಿ ಅವಳ ಬಯಕೆಯ ಪ್ರಕಾರ ಖಾದ್ಯವಿಶೇಷಕ್ಕೆ ಆರ್ಡರು ಕೊಟ್ಟ. ತೆರೆದ ಹೃದಯಗಳ ಸರಸ ಸಂಭಾಷಣೆ ನಿರಾತಂಕವಾಗಿ ನಡೆಯಿತು. ಲಂಡನ್ ಮಹಾನಗರದ ಮೇಲೆ ಹರಡಿದ ತೆಳುವಾದ ಮಂಜಿನ ತೆರೆಯ

ಮೇಲೆ ಪಕ್ಷಿನೋಟವನ್ನು ಬೀರುತ್ತ ಬಸಿ-ಬಟ್ಟಲುಗಳಿಗೆ ಕೈ ಹಚ್ಚಿದರು. ವಿದ್ಯುತ್ ಚಾಲಿತ ರೆಸ್ಟೋರೆಂಟ್ ನಿಧಾನಗತಿಯಲ್ಲಿ ಚಲಿಸುತಿತ್ತು. ತೂಗುಯ್ಯಾಲೆಯನ್ನು ನೆನಪಿಗೆ ತರುವಂತೆ. ಆ ಅಪೂರ್ವ ಸನ್ನಿವೇಶದಲ್ಲಿ ಮಧುಮತ್ತ ಮನಃಪ್ರಾಣಗಳು ಆನಂದಸಾಗರದಲ್ಲಿ ಮುಳುಗೆದ್ದುವು; ಜಗತ್ತು ಮಧುಮಯವಾಗಿ, ಸುಖೀರಾಜ್ಯವಾಗಿ, ಸ್ವರ್ಗ ಸದೃಶವಾಗಿ ತೋರಿಬಂತು. ಆಗ ಅವನೇ ತನ್ನ ಎದೆಯಾಶಯವನ್ನು ಹೊರಹಾಕಿದ,

"ಈಗ ಹೇಳು, ನೀನು ನನ್ನವಳು ತಾನೇ ?"

ಆಶೆಯ ಮೊಳಕೆಯನ್ನು ಅಲ್ಲಿಂದಲ್ಲೇ ಚಿವುಟುವಂತೆ ಹಂದ ಅವಳ ಕಿಲ ಕಿಲ ನಗುವೇ ಉತ್ತರವಾಯ್ತು.

"ಛೀ ! ಛೀ ! ಇದೆಂತಹ ತುಂಟತನ?"

"ಅಲ್ಲ; ಅಲ್ಲ ; ಮೂರ್ಖತನ !"

"ಹಾಗೇ ಅನ್ನಬೇಕು !"

ಇಬ್ಬರೂ ಕಿಲಕಿಲ ನಕ್ಕರು.

"Marriages are made in heaven"

ಆ ಮಾತನ್ನು ಅವಳಿಂದ ಬಹಳ ಸಾರಿ ಕೇಳಿದ್ದ. ಇಂದು ಅದೇನೂ ವಿಶೇಷವೆನಿಸಲಿಲ್ಲ. ಆದರೂ ಕಾತರ-ಆತುರ.

ಮರ್ಲಿನ್ ತನ್ನ ಮುಖಕ್ಕೆ ಅಡರುತಿದ್ದ ಕೂದಲನ್ನು ಎರಡೂ ಕೈಗಳಿಂದ ಹಿಂದಕ್ಕೆ ತಳ್ಳಿ ತನ್ನ ವ್ಯಾಖ್ಯಾನಕ್ಕೆ ಯಾವ ಭೂಮಿಕೆಯನ್ನೂ ಹಾಕಿಕೊಳ್ಳದೆ ಸರಾಗವಾಗಿ ನುಡಿದಳು,

"ಯಾರಿಗೆ ಗೊತ್ತು ? ಈ ಸ್ನೇಹ ಬಾಂಧವ್ಯ ಜೀವನಕ್ಷೇತ್ರಕ್ಕಾಗಿಯೇ ಇರಬಹುದು ! ಆದರೆ, ಈಗಲೇ ಅವಸರ ಬೇಡ !"

"ನಾನೂ ಸಹ ಈಗಲೇ ತಯಾರಿಲ್ಲ. ನಿನ್ನ ಆಶ್ವಾಸನೆ ಇದ್ದರೆ ಸಾಕು."

ಅವಳು ನಕ್ಕುನುಡಿದಳು "ಹಾಗೆ ನೋಡಿದರೆ ನಾನೇ ಆ ಮಾತು ಕೇಳಬೇಕಾಗಿತ್ತು. ನಾನು ಗತಿವಿಹೀನೆ-ನನಗೆ ತಂದೆ ತಾಯಿಯರಿಲ್ಲ."

"ನನಗೂ ಹಾಗೇ ಅಂದುಕೊ. ಆಗಲೇ ಅವರಿಗೆ ಟಾ ಟಾ ಹೇಳಿ

ಬಿಟ್ಟಿದ್ದೇನೆ, ಇಬ್ಬರೂ ಒಂದೇ; ಬೇಗನೆ ಸಂಸಾರ ಹೂಡಿದರೆ ಒಬ್ಬರಿಗೊಬ್ಬರು ನೆರವು ಪಡೆಯಬಹುದು."

"ಅದೇನು ದೊಡ್ಡ ವಿಷಯವಲ್ಲ."

"ಸರಿ !" ಉದ್ಗಾರ ತೆಗೆದ. ಮುಖಭಾವ ಸ್ವಲ್ಪ ಒಗರಾಯಿತು.

"ಅಷ್ಟಕ್ಕೇಕೆ ಅಸಮಾಧಾನ ?"

"ಅದಿರಲಿ, ನನ್ನ ಬೇಡಿಕೆಗೆ ಏನೆನ್ನುವೆ ? ಅದನ್ನಾದರೂ ಬಿಡಿಸಿ ಹೇಳು, ನನ್ನನ್ನು ಕಾಯಿಸಿ ಕೊಲ್ಲಬೇಡ."

ದನಿ ಎದೆಯಾಳದಿಂದ ಹರಿದುಬಂತು. ಕಾತರ ತುಂಬಿದ ಕಣ್ಣುಗಳಿಂದ ನೋಡತೊಡಗಿದ. ಆಗ ಆವಳ ಮನಃಸ್ಥಿತಿಯೇ ಬದಲಾಯ್ತೇನೋ ; ಬಿಸಿಲಟ್ಟಿದ ಮಂಜಿನಂತೆ ಕರಗಿ ಉತ್ತರಿಸಿದಳು,

"ಒಮ್ಮೆಲೇ ಅಷ್ಟೊಂದು ಚಿಂತಾಪರವಶನಾಗಬೇಡ. ನಿನ್ನ ಸ್ಥಿತಿಯನ್ನು ನೋಡಿದರೆ ಇನ್ನಷ್ಟು ನೋಯಿಸಲು ಮನಸ್ಸು ಬರುವುದಿಲ್ಲ."

"ಅಂದರೆ.........ನೀನು ನನ್ನವಳಾಗುತ್ತಿ ತಾನೇ ?"

"ಹೌದು !"

ಆ ಮುಹೂರ್ತದಲ್ಲಿ ಅವನಿಗೆ ಉಂಟಾದ ಆನಂದ ಅವರ್ಣನೀಯ.

* * * * *

ಆದರೆ,

".........ಅನಾಥಾಶ್ರಮದಲ್ಲಿ ಬೆಳೆದ ಹುಡುಗಿ ಕುಲಗೋತ್ರಗಳಿಲ್ಲ. ಅವಳು ನಿನ್ನೊಂದಿಗೆ ಆಜನ್ಮಪರ್ಯಂತ ಜೀವನ ನಡೆಸುತ್ತಾಳೆಂಬುದು ಕನಸಿನ ಮಾತು. ಕೈ ಹಿಡಿಯುವ ಮುನ್ನ ಅದನ್ನೆಲ್ಲಾ ಗಮನಿಸುವುದು ಸೂಕ್ತ," ಎಂದು ಸಂಪ್ರದಾಯಸ್ಥರಾದ ತಂದೆ ತಾಯಿ ಒತ್ತಾಯಿಸಿದ್ದರಿಂದ ಅದು ಮತ್ತೊಂದು ರಾದ್ಧಾಂತಕ್ಕೆ ಮುಖ್ಯವಾದ ಕಾರಣ. ಅವರೊಂದಿಗೆ ಅವನು ಉಳಿಸಿಕೊಂಡಿದ್ದ ಅಲ್ಪಸ್ವಲ್ಪ ಬಾಂಧವ್ಯವೂ ಅದರಿಂದ ಮೊಟಕಾಯಿತು. ಮನೆಯನ್ನು ಬಿಟ್ಟು ಹೊರಹೋಗಿ ಬೇರೆ ಸಂಸಾರ ಹೂಡಿದ. ಅಂದಿನಿಂದ ಇವನಾಗಲೀ ಅವರಾಗಲೀ ಬಂದು ಹೋಗುವ ಪ್ರಸಂಗ ಬೀಳಲಿಲ್ಲ. ಚಳಿಗಾಲದ ಮಂಜಿನ ಬೆಟ್ಟದಂತೆ ಬೆಳೆಯಿತು ಉದಾಸೀನ.

ಆಮೋದ ಪ್ರಮೋದಗಳಲ್ಲಿ ಮುಳುಗಿದ ತರುಣದಂಪತಿಗಳಿಗೆ ತಮ್ಮ

ತಮ್ಮಲ್ಲೇ ಜನ್ಮ ಸಾರ್ಥಕತೆಯನ್ನು ಕಂಡುಕೊಂಡಷ್ಟು ಉತ್ಸಾಹಶೀಲತೆ. ಕೈತುಂಬ ದುಡಿದು ಸಣ್ಣ ಸಂಸಾರವನ್ನು ಅಚ್ಚುಕಟ್ಟಾಗಿ ನೆಡೆಸುವುದರಲ್ಲಿ ಮೈಯೆಲ್ಲಾ ಮನಸ್ಸು. ಮನೆಗೆ ಹೊಸರೂಪು ಕೊಡುವುದರಲ್ಲಿ ನೂರು ಬಗೆಯ ಆಸ್ಥೆ. ಇಂತಿಂತಹ ಹುರುಪುಗಳಲ್ಲಿ ತಂದೆ ತಾಯಿಯರ ನೆನಪು ಮೂಡು ವುದಿರಲಿ ತಮ್ಮನ್ನು ತಾವು ಮರೆತರೂ ಆಶ್ಚರ್ಯವಿಲ್ಲ.

ವಿವಾಹಪೂರ್ವ ಮರ್ಲಿನ್ ಕೆಲಸ ಮಾಡುತಿದ್ದುದು ಆರ್ಕ್‌ರೈಟ್ ಕಾರ್ಖಾನೆಯಲ್ಲಿ. ಅನಂತರವೂ ಅವಳ ಸೇವೆ ಮುಂದುವರಿದುದು ಅಲ್ಲೇ. ಕೈ ತುಂಬ ಸಂಬಳ, ಪ್ರವಾಸ ಭತ್ಯ, ನೆರೆಹೊರೆ ರಾಜ್ಯಗಳಲ್ಲಿ ಮತ್ತೆ ಮತ್ತೆ ಪ್ರವಾಸ, ಕಾರ್ಖಾನೆಯ ಉತ್ಪನ್ನಗಳ ಪ್ರಚಾರಕ್ಕಾಗಿ ದೇಶವಿದೇಶಗಳಲ್ಲಿ ಪ್ರಚಾರ ಭಾಷಣ, ಅಷ್ಟಲ್ಲದೆ ಉಡುಗೆ–ತೊಡಿಗೆ, ಊಟ–ವಸತಿಗಳ ಉತ್ತಮ ಸೌಕರ್ಯಗಳೂ ದೊರೆಯುತ್ತವೆ. ದೀರ್ಘ ಪ್ರವಾಸ ಹೊರಡುವುದೆಂದರೆ ಅವಳಿಗೆ ಎಲ್ಲಿಲ್ಲದ ಹಿತ. ಜರ್ಮನಿಯ ಕಡೆ ಹೊರಟರಂತೂ ತನ್ನ ಬಾಲ್ಯದ ಸ್ನೇಹಿತರುಗಳೊಂದಿಗೆ ಹರಟೆಯ ಹಬ್ಬ–ಸ್ನೇಹ ಕೂಟ ವಿಚಾರ ವಿಮರ್ಶೆ. ಇನ್ನೂ ಏನೇನೋ.

ಅವಳ ಆಸ್ಥೆ, ಅವಳ ವಿಹಾರ, ಅವಳ ಕೆಲಸ ಒಂದಕ್ಕೊಂದು ಪೂರಕ. ಅಂತಲೇ ಅವಳು ತನ್ನ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸುತ್ತಾಳೆ. ಅಂತಹ ಒಂದು ಸಂದರ್ಭದಲ್ಲೇ ಜರ್ಮನಿಗೆ ಹೊರಟಿದ್ದ ಅವಳಿಂದ ಆವರೆಗೆ ಯಾವ ಸುದ್ದಿಯೂ ಬಂದಿರಲಿಲ್ಲ.

ಗ್ಯಾರಿ ಲಾತಮ್ ಅದೇ ವಿಚಾರದಲ್ಲಿ ತನ್ಮಯನಾಗಿದ್ದು ಬಾಗಿಲಕಡೆ ದೃಷ್ಟಿಯನ್ನು ಹರಿಯ ಬಿಟ್ಟಿದ್ದ. ಟಪ್ಪಾಲಿನವ ಬರುವ ಹೊತ್ತು. ಟಕಟಕ ಹೆಜ್ಜೆಯ ಸದ್ದುಗಳು ದೂರದಲ್ಲಿ ಮೊಳಗಿದಾಗಲೇ ಅವನವೆಂದು ಗುರುತಿಸು ವಷ್ಟು ಸೂಕ್ಷ್ಮ ಪರಿಚಯ ಮನಸ್ಸಿಗೆ. ಸಮಯಕ್ಕೆ ಸರಿಯಾಗಿ ಅವನೇ ಬಂದು ಯಾವುಯಾವುದೋ ಕಾಗದಗಳನ್ನು ನೀಡಿದ. ಆದರೆ, ಮರ್ಲಿನ್ನ ಳಿಂದ ಸುದ್ದಿಯೇ ಇಲ್ಲದೆ ಅವನ ಮುಖಬಿಂಬ ಇದ್ದಿದ್ದೂ ಬಾಡಿ ಹೋಯಿತು. ತಾನು ಬರೆದ ಕಾಗದಗಳು ಅವಳಿಗೆ ತಲುಪಲಿಲ್ಲವೇನೋ ಎಂಬ ಭಾವನೆ ಒಮ್ಮೊಮ್ಮೆ ಬಲಿಯುತ್ತದೆ. ಅದರ ಹಿಂದೆಯೇ ಅವಳ ಆಮೋದ ಪ್ರಮೋದ ಗಳಲ್ಲಿ ನನ್ನ ನೆನಪು ಎಲ್ಲಿ ಮೂಡಬೇಕು ? ಎಂಬ ಪ್ರಶ್ನೆಯ ತತ್ತಳ ತುಳಿತ

ಹೃದಯರಂಗದಲ್ಲಿ ರೋಗ ವಿಶೇಷ–ಚಿಂತಾ ವಿಶೇಷ ಭಾವಾನುಭಾವಗಳಲ್ಲಿ ತುಂಬಿ ಯೋಚನಾಶಕ್ತಿಯನ್ನು ಕುಂದಿಸುತ್ತಿರುವುದು ಆತ್ಮಗತವಾಗಿತ್ತು.

ಮುಂದೇನು? ಎಂಬುದು ಸಮಸ್ಯೆ.

ಮರ್ಲಿನ್ನಳಿಂದ ಪತ್ರವಿಲ್ಲ. ಅವಳೆಲ್ಲಿದ್ದಾಳೆಂಬುದೂ ತಿಳಿಯದು. ಇನ್ನು ತಂದೆ ತಾಯಿಯರಿಗಾದರೂ ತನ್ನ ಸ್ಥಿತಿಗತಿಯನ್ನು ತಿಳಿಸುವುದು ಲೇಸು. ಕಾಹಿಲೆಯ ಸ್ವರೂಪ ಸಾಮಾನ್ಯವಲ್ಲ. ಬದುಕುವ ಭರವಸೆ ದಿನ ದಿನಕ್ಕೂ ಶುದ್ಧಾಂಗವಾಗಿ ಅಳಿಯುವಾಗ ಉದಾಸೀನ ಸಲ್ಲ ಎಂಬ ಭಾವ ಮನದಲ್ಲಿ.

ಔಷಧಿಯ ನಿರಂತರ ಸೇವನೆ ರಕ್ತವಾಹಿನಿಯ ಕಲ್ಮಶವನ್ನು ಮುಂಬೆಳಸುತ್ತಲೇ ಇದ್ದುದರಿಂದ ಗ್ಯಾರಿ ಲಾತಮ್ ತೀರ ಬಳಲಿದವನಂತೆ ಉಸಿರಾಡುತಿದ್ದ. ಕಾಲದೆಶೆಯಲ್ಲಿ ಮುದುಡಿ ಬಿದ್ದ ಹೊದ್ದಿಕೆ, ಹಣೆಯ ಮೇಲೆ ಇಳಿಬಿದ್ದ ಬಾಚದ ಕೂದಲು, ಹರಡಿಬಿದ್ದ ವೃತ್ತ ಪತ್ರಿಕೆಗಳು, ಒಡೆದು ನೋಡದ ಕಾಗದ ಪತ್ರಗಳು ಮಾನಸಿಕ ಸ್ಥಿತಿಯನ್ನು ಸಾರಿ ಹೇಳುವಂತಿದ್ದುವು.

ಪಾರ್ಲಿಮೆಂಟ್ ಭವನದ ಬಿಗ್‌ಬೆನ್ ಗಡಿಯಾರ ಗಂಟೆ ಬಾರಿಸಿದಾಗ ಮನವನ್ನು ಅತ್ತ ಹರಿಯಬಿಟ್ಟ. ಅಂದಿಂದಿಗೂ ಅದು ಹೇಳಿದ್ದಾದರೂ ಏನು? ಇದುವರೆಗೂ ಅರ್ಥ ಮಾಡಿಕೊಳ್ಳಲಿಲ್ಲ, ಅದು ನನ್ನದೇ ತಪ್ಪು ಎನಿಸಿದಾಗಲೂ ಅದ್ಭುತ ಝಂಕಾರದ ಮೋಹಕ ರವ ಅಲೆಯಲೆಯಾಗಿ ಕೇಳಿಬರುತ್ತಲೇ ಇತ್ತು.

"ವತ್ಸ ! ಸುಖ ದುಃಖಗಳ ಸಮರಸವೇ ಜೀವನ."

ಎಂತಹ ಕಮನೀಯ ಕಠೋರ ಹಿತವಾದ? ಪ್ರಕೃತಿ ಬದ್ಧವಾದ ಬದುಕು ಅನಿವಾರ್ಯ ಎಂಬುದು ಮಾತ್ರವಲ್ಲ; ತೀವ್ರ ಜಂಜಡವೂ ಅನಿವಾರ್ಯ ಎಂಬುದನ್ನು ಸ್ಥಿರೀಕರಿಸುವ ಧಾರ್ಮಿಕ ತತ್ವ ಮನವರಿಕೆಯಾದಾಗ ಏನೋ ಒಂದು ಬಗೆಯ ಜಡತ್ವ ಅಥವಾ ನಿರ್ಲಿಪ್ತತೆ ಮನಃಪ್ರಾಣಗಳಲ್ಲಿ ವ್ಯಾಪಕವಾಗಿ ಹರಡಿತು.

ಅದೇ ಸಮಯದಲ್ಲಿ,

ಬಾಗಿಲ ಬಳಿ ಕಟಕಟ ಸದ್ದು ಮಾಡಿ ಡಾ|| ಕಿಟ್ಟೀ ಜಾನ್ ಒಳಗಡೆ ಪದಾರ್ಪಣೆ ಮಾಡಿದಳು.

ಗ್ಯಾರಿ ಲಾತಮ್ ವಂದನೆಯನ್ನರ್ಪಿಸಿದ.

"ಏನಪ್ಪಾ, ಒಬ್ಬನೇ ಕುಳಿತಿದ್ದಿ ?"

"ನನಗೆ ಅದೇ ಇಷ್ಟ."

ಅವಳು ತಲೆದೂಗಿದಳು. ಆತನ ಗುಣ ಸಂವರ್ಧನೆ ಮನವನ್ನು ದಿನೇ ದಿನೇ ಆಕರ್ಷಿಸುತಿತ್ತು. ಒಂದು ನಿಮಿಷ ಕರುಣ-ಕಾತರ ದೃಷ್ಟಿಯಿಂದ ನಿಟ್ಟಿಸಿ ನೋಡಿ "ಭಗವಂತ ಗಂಡಾಂತರದಿಂದ ಇವನನ್ನು ಕಾಪಾಡಿದರೆ ಆಸ್ಪತ್ರೆಗೆ 'ದತ್ತು' ತೆಗೆದುಕೊಳ್ಳಬಹುದಾಗಿತ್ತು. ಆದರೆ, ಭಗವಂತನ ಇಚ್ಛೆ ಏನಿದೆಯೋ." ಎಂಬ ಯೋಚನೆಯು ಸಂವಿಧಾನದಲ್ಲಿ ಚಿತ್ತ ಅಂಡಲೆಯುತಿತ್ತು.

"ನಿನ್ನವರು ಯಾರೂ ಬರಲಿಲ್ಲವಲ್ಲಾ ? ನೀನು ಯಾರಿಗೂ ಬರೆಯಲಿಲ್ಲವೇ ?"

"ಯಾಕೋ ಮನಸ್ಸು ಬರಲಿಲ್ಲ. ಹೀಗೇ ತಣ್ಣಗಿರೋಣ ಎನಿಸುತ್ತೆ."

"ಈ ಸಂದರ್ಭದಲ್ಲಿ ಅದು ಸರಿಯಲ್ಲ."

"ಪ್ರತಿಯೊಂದನ್ನೂ ದೇವರಿಗೆ ಸಮರ್ಪಿಸಿ ಬಿಡುವುದರಲ್ಲೇ ಹಿತವಿದೆ."

"ಅದು ಸರಿ." ಎಂದ ಡಾ|| ಕಿಟ್ಟೀಜಾನ್ ಸ್ವಲ್ಪಹೊತ್ತು ಔಷಧಿಯೊಂದನ್ನು ಪರೀಕ್ಷಿಸುತಿದ್ದು ಅನಂತರ ಕೇಳಿದಳು "ನಿನ್ನ ಮಡದಿ ಇರುವುದೆಲ್ಲಿ ?"

"ಅವಳ ಹುಟ್ಟೂರು ಜರ್ಮನಿ. ಆ ಕಡೆ ಹೋದಾಗ ತಿಂಗಳುಗಟ್ಟಲೆ ಅಲ್ಲೇ ಇದ್ದು ಬಿಡುತ್ತಾಳೆ. ಅವಳ ಸಂತಸವನ್ನು ಹಾಳು ಮಾಡಬಾರದೆಂದು ನಾನು ಬರೆಯಲಿಲ್ಲ."

ನಂಜಿನ ಮುದ್ದೆಗೆ ಚಿನ್ನದ ಲೇಪ ಬಳಿಯಬೇಕಾಗಿ ಬಂದುದು ಮನಸ್ಸಿಗನಿತೂ ಹಿತವೆನಿಸಲಿಲ್ಲ. ಆದರೂ, ವಿಧಿಯಿರಲಿಲ್ಲವಾದ್ದರಿಂದ ಸಹಜ ಭಾವವನ್ನು ಮುಖದಲ್ಲಿ ತೇಲಿಸಲು ಪ್ರಯತ್ನಿಸಿದ.

"ಇರಲಿ, ಆ ಸಂತಸವನ್ನು ಎಂದಾದರೂ ಪಡೆದುಕೊಳ್ಳಬಹುದು.

ಅದಕ್ಕೇನಂತೆ ? ಈಗ ನಿನಗೆ ಬಹಳವಾಗಿ ಅವಳ ಅಗತ್ಯವುಂಟು. ಖಂಡಿತ ಉದಾಸೀನ ಮಾಡಬಾರದು."

ಆ ನುಡಿ ಹೃದಯದಾಳದಿಂದ ಹರಿದು ಬಂತು-ಅವನ ಬೀಭತ ರೋಗವನ್ನು ಹಿಮ್ಮೆಟ್ಟಿಸಲಾಗದ ಪರಿತಾಪದೊಡನೆ.

ಗ್ಯಾರಿ ಅದನ್ನು ಸೂಕ್ಷ್ಮವಾಗಿ ಗಮನಿಸಿ ಅಂದ,

"ಆಗಲಿ, ಬರೆಯುವೆ. ಈ ಸಲ ತಪ್ಪಿಸುವುದಿಲ್ಲ."

ಆದರೆ, ಅವನಾಗಲೇ ಹಲವಾರು ಕಾಗದಗಳನ್ನು ಬರೆದಿದ್ದ. ಅವುಗಳಲ್ಲಿ ಕ್ಷಮೆ ಬೇಡಿಕೆಯ ಮಹಾಪೂರವೇ ಹರಿದಿತ್ತು, ಎಂಬುದು ಗೋಪ್ಯ.

ಡಾ|| ಕಿಟ್ಟೀ ಜಾನ್ ಸಣ್ಣ ಸಮಾಧಾನದಿಂದ ತಲೆದೂಗುತ್ತ "ಅದು ಒಳ್ಳೆಯದು." ಎಂದಳು.

"ನನಗೆ ಆ ಬಗ್ಗೆ ಚಿಂತೆಯೇನೂ ಇಲ್ಲ. ನನ್ನ ಭವಿಷ್ಯವನ್ನು ದೇವ ದೂತರಾದ ನಿಮ್ಮ ಕೈಯಲ್ಲಿ ನಿಶ್ಚಿಂತೆಯಿಂದ ಇಟ್ಟಿರುವೆ....."

"ದೇವರನ್ನು ನಂಬಿದವರಿಗೆ ಭಯವಿಲ್ಲ."

"ಸರಿ; ಅವನ ಇಚ್ಛೆಯಿದ್ದಂತಾಗಲಿ."

"ಹೌದಪ್ಪಾ ! ಮಾನಸಿಕ ವ್ಯವಹಾರ ಆರೋಗ್ಯದ ಮೇಲೆ ತುಂಬ ಪರಿಣಾಮ ಉಂಟುಮಾಡುತ್ತದೆ. ಅದರಿಂದ ಯಾವುದೇ ಸಂದರ್ಭದಲ್ಲೂ ನಿಶ್ಚಿಂತೆಯಿಂದ ಇರುವುದು ಲೇಸು"

ಅನಂತರ ಅವನ ಪಥ್ಯ-ಅನುಪಾನಾದಿಗಳನ್ನು ಕುರಿತು ಕೆಲವು ತಿಳಿವಳಿಕೆಯನ್ನು ನೀಡಿ, ಔಷಧಿಯ ಕ್ರಮವನ್ನು ಸೂಚಿಸಿ ಅಲ್ಲಿಂದ ಹೊರಟಳು ಡಾ|| ಕಿಟ್ಟೀ ಜಾನ್.

ಗ್ಯಾರಿ ಲಾತಮ್ ಎತ್ತರಿಸಿದ ದಿಂಬಿನಮೇಲೊರಗಿ ಅರ್ಧ ಶಯನಾವಸ್ಥೆಯಲ್ಲಿ ಮಲಗಿ, ಬಿಳಿಯ ಹೊದ್ದಿಕೆಯನ್ನು ಮೈಮೇಲೆಳೆದುಕೊಂಡ. ಚಿತ್ತ ಮಡದಿಯ ಬಳಿ ಸುಳಿದಾಡಿತು. ಅವಳೊಂದಿಗೆ ಟವರ್ ಬ್ರಿಜ್, ಬ್ಯಾಟರ್‌ಸೀ, ವಾಟರ್‌ಲೂ ಸೇತುವೆಗಳ ಬಳಿ ಅಡ್ಡಾಡಿದ ದಿನಗಳು, ಲಡ್‌ಗೇಟ್ ದಿಬ್ಬದ ಮೇಲೆ ನಡೆಸಿದ ವಿಹಾರ, ಸೇಂಟ್ ಪಾಲ್ಸ್ ಕೆಥೆಡ್ರಲ್‌ನಲ್ಲಿ ಭಾಗವಹಿಸಿದ ಪ್ರಾರ್ಥನಾ ಸಭೆ, ಯುದ್ಧ ವೀರರಾದ ನೆಲ್ಸನ್, ವೆಲ್ಲಿಂಗ್‌ಟನ್ನರ ಸಮಾಧಿಗಳಿಗೆ ಪುಷ್ಪಾರ್ಪಣೆ, ಥೇಮ್ಸ್ ನದಿಯಲ್ಲಿ ದೋಣಿ

ವಿಹಾರ, ಭೂಗರ್ಭದ ರೈಲುಗಳಲ್ಲಿ ಪಯಣ, ಚಲಿಸುವ ಫ್ಲಾಟ್ ಫಾರಂನಲ್ಲಿ–ಎಸ್ಕಲೇಟರ್‌ನಲ್ಲಿ ಮಕ್ಕಳಂತೆ ವಿನಾಕಾರಣ ಓಡಾಡಿದ ಬಗೆ ಚಿತ್ತಭಿತ್ತಿಯ ಮೇಲೆ ಸುಳಿಯಿತು. ಅವಳಿಲ್ಲದೆ ಅಂತಹ ಯಾವೊಂದು ಆನಂದ ವಿಹಾರವೂ ನಡೆದಿರಲಿಲ್ಲ. ನ್ಯಾಷನಲ್ ಆರ್ಟ್ ಗ್ಯಾಲರಿಯಲ್ಲಿ ಅವಳೊಂದಿಗೆ ದಿನಗಟ್ಟಲೆ ಕಳೆದಿದ್ದೂ ಉಂಟು. ಆ ಎಲ್ಲಾ ನೆನವರಿಕೆ ಇಂದು ಕಣ್ಣುಗಳಲ್ಲಿ ಸಣ್ಣಗೆ ನೀರಾಡಿತು.

*   *   *   *

ಗ್ಯಾರಿ ಲಾತಮ್ ನರಳುತಿದ್ದುದು ಯಕೃತ್ತಿನ ತೀವ್ರತರವಾದ ಊತದಿಂದ. ವ್ಯಾಧಿ ಗಮನಾರ್ಹವಾಗಿ ಯಕೃತ್ತನ್ನು ಹಾನಿಗೊಳಿಸಿದ್ದುದರಿಂದ ಆ ಪ್ರಾಮುಖ್ಯವಾದ ಅಂಗವು ರಕ್ತ ಶುದ್ಧೀಕರಣ ಕಾರ್ಯವನ್ನು ನಿರ್ವಹಿಸಲು ಅಸಮರ್ಥವಾಗಿದ್ದು, ರಕ್ತವು ಕೆಟ್ಟು ಕಲ್ಮಷದಿಂದ ತುಂಬಿ ರಕ್ತಕೋಶಗಳನ್ನು ದುರಸ್ತಿ ಮಾಡಲಾಗದಷ್ಟು ನಷ್ಟ ಸಂಭವಿಸಿತ್ತು. ಆದ್ದರಿಂದ ಮುಂದಿನ ತುರ್ತು ಕ್ರಮಕ್ಕೆ ವೈದ್ಯವೃಂದ ಪೀಠಿಕೆ ಹಾಕಲು ಸಿದ್ಧವಾಯಿತು. ಆದರೆ, ರೋಗಿಯು ತುಂಬ ನಿತ್ರಾಣಿಯಾಗಿದ್ದುದರಿಂದ ಚಿಕಿತ್ಸೆಯನ್ನು ಸ್ವಲ್ಪ ಸಮಯ ಮುಂದೂಡುವ ಅಗತ್ಯ ತೋರಿ, ತತ್ಸಂಬಂಧ ಪೂರ್ವಭಾವೀ ಚಿಕಿತ್ಸೆ ಕೈಗೊಂಡು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿ ಸ್ಥಿತಿಗತಿಯನ್ನು ಅವಲೋಕಿಸುತಿತ್ತು.

ದಿನಗಳು ಅತ್ಯಂತ ಕಳವಳಕಾರಕವಾಗಿ ಓಡುತಿದ್ದುವು.

ಮಡದಿ ಮರ್ಲಿನ್ನಳಿಂದ ಸುದ್ದಿಯಾಗಲೀ ಪತ್ರವಾಗಲೀ ಬರಲಿಲ್ಲ. ಗ್ಯಾರಿ ಲಾತಮ್ ದಿನವೂ ಅವಳ ಹಾದಿ ನೋಡಿ ನೋಡಿ ಬೇಸತ್ತು ಹೋದ. ಜೊತೆಗೆ ತಾನಿನ್ನು ಉಳಿಯಲಾರೆ ; ಅದರೊಳಗಾಗಿ ಅವಳು ಹಿಂದಿರುಗಿ ಬಂದಿದ್ದಲ್ಲಿ ನೋಡಬಹುದಾಗಿತ್ತು ಎಂಬ ಆಸೆ ; ಎಷ್ಟೇ ಪ್ರಯತ್ನಿಸಿದರೂ ಒಮ್ಮೊಮ್ಮೆ ತನ್ನ ಹತೋಟಿ ತಪ್ಪಿ ಕಂಬನಿಯ ಕೋಡಿ ಹರಿದು ಹೋಗುವುದೂ ಉಂಟು.

ಹೊರಗಡೆ ಎಡೆಬಿಡದ ತುಂತುರು ಮಳೆ. ಮೂರು ನಾಲ್ಕು ದಿನಗಳಿಂದ ನಿಲುಗಡೆಯೇ ಇಲ್ಲ. ಮೈ ನಡುಗಿಸುವಂತಹ ಶೀತಲ ವಾತಾವರಣ. ಹೊದ್ದಿಕೆಗಳೆಷ್ಟಿದ್ದರೂ ಸಾಲದು ; ಆದರೂ ನಿರ್ಭಾರವಾಗಿ ಉಸಿರಾಡಲು ಬಯಸುತ್ತದೆ ಜೀತನ.

ದೇಹಾಂತರವೆಲ್ಲಾ ವಿಷಮಯವಾದುದರಿಂದ ಶ್ವಾಸ-ನಿಶ್ವಾಸಗಳ ಸಂಚಾಲನೆಯು ತೀರ ಕಠಿಣ. ಔಷಧಿ ಅನುಪಾನಗಳು ಹತ್ತಿರ ಸುಳಿಯುವುದೂ ಸಹ ಬೇಡ. ಸಾವು-ಬದುಕುಗಳೊಡನೆ ನಿರಂತರ ಹೋರಾಡುವ ಜೀವ ತನ್ನ ಉಳಿಕೆಯನ್ನೆಲ್ಲಾ ತಮ್ಮನ ಹೆಸರಿಗೆ ಉಯಿಲು ಬರೆಯಲು ಪ್ರೇರೇಪಿಸಿತು. ಅವನೊಂದಿಗೆ ನಾಲ್ಕು ವರ್ಷಗಳ ಹಿಂದೆ ಮ್ಯಾಡಮ್ ಟುಸ್ಸಾಡಳ ಮೇಣದ ಬೊಂಬೆಗಳ ಪ್ರದರ್ಶನಕ್ಕೆ ಹೋಗಿದ್ದುದೇ ಕೊನೆಯ ಅಂಕ. ಅಂದು ರಜೆ ಇದ್ದುದರಿಂದ ಇಬ್ಬರೂ ಅರ್ಧ ದಿನ ಅಲ್ಲೇ ಕಳೆದಿದ್ದರು. ವಿಶ್ವದ ಹಿರಿಯ ವ್ಯಕ್ತಿಗಳ ಪ್ರತಿರೂಪು, ಟ್ರಫಾಲ್ಗರ್ ಯುದ್ಧ, ಬ್ರಿಟಿಷ್ ಮಹಾಯುದ್ಧ, ಪ್ಲಾನೆಟೇರಿಯಂ ನಕ್ಷತ್ರ ಮಂಡಲ ಹೀಗೆ ದರ್ಶನೀಯವಾದ ಆ ನಾಟಕ ಪ್ರದರ್ಶನದಲ್ಲಿ ಇಬ್ಬರೂ ಒಟ್ಟಾಗಿ ಕಳೆದು ಆನಂದಿಸಿದ್ದರು. ಅನಂತರ ಅವನ ಭೇಟಿಯೂ ಆಗಿರಲಿಲ್ಲ. ಇಷ್ಟು ವರ್ಷಗಳ ನಂತರ ತೀರ ಸಂಕಟ ಪರಿಸ್ಥಿತಿಯಲ್ಲಿ ನಡುಗುವ ಕೈಗಳಿಂದ ಅವನ ಹೆಸರಿಗೆ ಉಯಿಲು ಪತ್ರವನ್ನು ಎರಡು ಪಂಕ್ತಿಗಳಲ್ಲಿ ಬರೆದು ಮುಗಿಸಿ ಅಂಚೆಗೆ ಹಾಕಿಸಿದ.

ಅನಂತರ ಮತ್ತೆರಡು ದಿನಗಳು ಅದೇ ಸಾಧಾರಣ ಪರಿಸ್ಥಿತಿಯಲ್ಲಿ ಉರುಳಿ ಹೋದುವು.

ಅಂದು, ಡಾ||ಕಿಟ್ಟೀ ಜಾನ್ ದೈಹಿಕ ಪರೀಕ್ಷೆ ನೆಡೆಸಿದನಂತರ ನುಡಿದಳು "ಇನ್ನು ಪರವಾಯಿಲ್ಲ ; ಈಗ ಬಹಳಷ್ಟು ಚೇತರಿಸಿಕೊಂಡಿದ್ದಿ. ನಾಳೆ ವಿಷಯುಕ್ತ ರಕ್ತವನ್ನೆಲ್ಲ ಬಸಿದು ಶುದ್ಧರಕ್ತ ಸಂಯೋಜನೆ ನಡೆಸಬಹುದು."

"ಆಗಬಹುದು. ನೀವು ಹೇಗೆ ಹೇಳಿದರೆ ಹಾಗೆ."

"ಅನಂತರ ನಿನ್ನ ಆರೋಗ್ಯ ಸುಧಾರಿಸುತ್ತದೆ.

ಗ್ಯಾರಿ ಮರು ಮಾತಾಡಲಿಲ್ಲ. ಮುಖಭಾವ ಶಾಂತ ಸ್ನಿಗ್ಧವಾಗಿತ್ತು.

ಅವಳು ತನ್ನ ಅಸಿಸ್ಟೆಂಟ್ ಡಾಕ್ಟರೊಡನೆ ಅಲ್ಲಿಂದ ಹೊರಟಳು. ದೈಹಿಕ ವಿಜ್ಞಾನದ ಯಾವಯಾವ ಘಟಕಗಳು ತಲೆಯನ್ನು ತುಂಬಿದ್ದವೋ, ಮುಖಭಾವ ಬಹಳ ಗಾಂಭೀರ್ಯದಿಂದ ಕೂಡಿತ್ತು.

ಗ್ಯಾರಿ ಲಾತಮ್ ಒರಗುದಿಂಬಿನ ಮೇಲೆ ವಿಶ್ರಾಂತಿ ಪಡೆದಿದ್ದ. ಎರಡು ಮೂರು ದಿನಗಳಿಂದ ನಿದ್ರೆ ಸ್ವಲ್ಪವೂ ಬಂದಿರಲಿಲ್ಲ. ಒಮ್ಮೆ ಎಚ್ಚರ. ಇನ್ನೊಮ್ಮೆ ಮಂಪರ ಹೀಗೆ ಏನೇನೋ ಮುಜುಗರ. ಸ್ವಲ್ಪ ಹೊತ್ತು ನಿದ್ದೆ

ಬಂದಿದ್ದರೆ ಎಂಬ ಭಾವನೆಯಿಂದ ಕಣ್ಣುಗಳನ್ನು ಮುಚ್ಚಿಕೊಂಡ. ಇನ್ನೊಂದು ತಾಸು ಔಷಧಿ ಅನುಪಾನಗಳ ಗೋಜಿಲ್ಲ. ಆ ವೇಳೆಯನ್ನು ನಿದ್ದೆಗಾಗಿ ಉಪಯೋಗಿಸಿಕೊಳ್ಳುವ ಯೋಚನೆ. ಆದರೆ, ಬಯಸಿದಾಗ ಅದು ಬರಬೇಕಲ್ಲ ?

ಅರ್ಧ ತಾಸು ಕಳೆದಿತ್ತೇನೋ, ಕಾರಿಡಾರಿನ ತುತ್ತತುದಿಯಲ್ಲಿ ಮರ್ಲಿನ್ನಳ ಕಂಠಸ್ವರ ಹಂಸೆಯ ಕ್ರೇಂಕಾರದಂತೆ ಕೇಳಿ ಬಂತು! ಗ್ಯಾರಿ ಲಾತಮ್ ಆನಂದದಿಂದ ಪುಳಕಿತನಾಗಿ ನೋಟವನ್ನು ಬಾಗಿಲ ಕಡೆ ನೆಟ್ಟ. ಅನೇಕ ಮಂದಿಯ ಮಾತುಕತೆಗಳ ಹುರುಪು ಗೆಜ್ಜೆ ಸರವನ್ನು ಗಲಗಲನೆ ಅಲುಗಿಸಿದಂತೆ ಕೇಳಿ ಬರುತಿತ್ತು. ಏನಿರಬಹುದು ? ಅಷ್ಟೊಂದು ಉತ್ಸಾಹಕ್ಕೆಂಬುದು ಅರ್ಥವಾಗಲಿಲ್ಲ. ವಿಚಿತ್ರತರವಾದ ಆನಂದ ಕೋಲಾಹಲ ಮನಃಪ್ರಾಣಗಳನ್ನು ಅವ್ಯಾಹತವಾಗಿ ಮುಟ್ಟುತ್ತಲೇ ಇತ್ತು. ಕಾತರ ಕುತೂಹಲ ತುಂಬಿದ ಮನಕ್ಕೆ ಆಗ ಕಳೆಯುವ ಒಂದೊಂದು ಕ್ಷಣವೂ ಸುದೀರ್ಘವೇ.

ಅಂತೂ, ಮಾತುಕತೆಯ ಸಂಭ್ರಮವೇಗ ಹತ್ತಿರ ಹತ್ತಿರವಾಗುತ್ತ ಬಂದು ಅನೇಕ ಮಂದಿ ಒಮ್ಮೆಗೇ ಒಳಗಡೆ ಪದಾರ್ಪಣೆ ಮಾಡಿದರು. ಅವರ ಮಧ್ಯೆ ಮರ್ಲಿನ್.....ಎಲ್ಲರ ಮುಖದಲ್ಲೂ ಆನಂದ-ಸಂಭ್ರಮ. ಎಡಬಲಗಳಲ್ಲಿ ಡಾ|| ಕಿಟ್ಟೀಜಾನ್, ಮಿಸ್ ಮೇರಿ ಜಾನ್ ಮರ್ಲಿನ್ನಳನ್ನು ತಬ್ಬಿ ಹಿಡಿದುಕೊಂಡಿದ್ದ ಚಿತ್ರ ನಿಜಕ್ಕೂ ಅಚ್ಚರಿಯನ್ನು ಮೂಡಿಸುವಂತಿತ್ತು. ಮರ್ಲಿನ್ ಸುಖದುಃಖಗಳ ಗಣಿಯಾಗಿ ಭಾವೋದ್ವೇಗದಿಂದ ಬಳಿಗೆ ಧಾವಿಸಿ ಬಂದು ಹಣೆಯಮೇಲೆ ಹೂ ಮುತ್ತನಿಟ್ಟು ತಲೆಯನ್ನು ನೇವರಿಸುತ್ತ ಅತ್ಯಂತ ಆತಂಕಪೂರ್ಣವಾಣಿಯಲ್ಲಿ ನುಡಿದಳು,

"ಬಹಳ ಸೊರಗಿದ್ದಿ ಗ್ಯಾರಿ, ದೇವರು ನಿನ್ನನ್ನು ಕಾಪಾಡಲಿ."

ಡಾ|| ಕಿಟ್ಟೀ ಜಾನ್ ಸಂಭ್ರಮಭಾವದಿಂದ ಮರ್ಲಿನ್ನಳನ್ನು ಬಿಗಿದು ಹಿಡಿದುಕೊಂಡು ಗ್ಯಾರಿಯನ್ನು ಕುರಿತು ಆನಂದ ವಾರ್ತೆಯನ್ನು ಬಿತ್ತರಿಸಿದಳು,

"ಗ್ಯಾರಿ, ನೀನಿಲ್ಲಿ ಸೇರಿದ್ದು ನನ್ನ ಪುಣ್ಯ. ಈಗ ಮರ್ಲಿನ್ ನನ್ನ ಮಗಳಾದಳು!"

ಅರೆ.....!

ಏನಿದು ? ಎಂತಹ ಆಶ್ಚರ್ಯ !

ಗ್ಯಾರಿ ಲಾತವ್ ಏನೂ ಅರ್ಥವಾಗದವನಂತೆ ಮಿಕಿ ಮಿಕಿ ನೋಡಿದ.

ಮರ್ಲಿನ್ ತನ್ನ ಸಂಕಟವನ್ನು ತೋಡಿಕೊಂಡಳು,

"ನಾನು ಇದುವರೆಗೂ ರೋಂ–ನಲ್ಲಿ ತಂಗಿದ್ದುದರಿಂದ ನಿನ್ನ ವಿಚಾರ ತಿಳಿಯಲೇ ಇಲ್ಲ. ನಾನು ಜರ್ಮನಿಗೆ ಬಂದ ನಂತರ ಒಮ್ಮೆಗೇ ನಿನ್ನ ಕಾಗದ ಗಳೆಲ್ಲ ತಲ್ಪಿದುವು. ನನಗಿನ್ನೂ ಅಲ್ಲಿ ಕೆಲಸವಿತ್ತು ; ಆದರೂ ಅಲ್ಲಿ ಉಳಿ ಯಲಾಗಲಿಲ್ಲ. ಓಡಿ ಬಂದೆ !"

ಡಾ|| ಕಿಟ್ಟೀ ಜಾನ್ ತನ್ನ ಕಂಠವನ್ನು ಜಾಗಟೆಯಂತೆ ಹರಿಯ ಬಿಟ್ಟಳು.

"ಗ್ಯಾರಿ, ಇಲ್ಲಿ ಕೇಳು ನನ್ನ ಮಗಳು ಮರ್ಲಿನ್ ಕಳೆದು ಹೋಗಿ ಹಂದಿನೆಂಟು ವರ್ಷಗಳಾಗಿತ್ತು ! ಇನ್ನವಳ ದರ್ಶನವಾಗುವುದೆಂದು ನಾವು ಕನಸಿನಲ್ಲೂ ಎಣಿಸಿರಲಿಲ್ಲ. ದೇವರು ದಯಾಮಯ ! ಒಂದಲ್ಲ ಒಂದು ರೀತಿಯಲ್ಲಿ ಉಪಕರಿಸುತ್ತಾನೆ !"

ಗ್ಯಾರಿಗೆ ಅವಳು ಅನಾಥಾಶ್ರಮದಲ್ಲಿ ಬೆಳೆದ ವಿಚಾರ ಗೊತ್ತಿದ್ದುದ ರಿಂದ ಅದನ್ನು ಹೆಚ್ಚು ಬೆಳೆಸಲು ಇಚ್ಛಿಸದೆ ಕೇಳಿದ "ಅವಳು ಕಳೆದು ಹೋದುದು ಹೇಗೆ ? ಅದೀಗ ಬಯಲಾದುದು ಹೇಗೆ ?"

"ನನ್ನ ಮೊದಲ ಮಗಳು ಮರ್ಲಿನ್ ! ಇವಳು ಐದು ವರ್ಷದವಳಿ ದ್ದಾಗ ವಿಶ್ವ ವಸ್ತು ಪ್ರದರ್ಶನಕ್ಕೆ ಎಲ್ಲರೂ ಹೋಗಿದ್ದೆವು. ಅಲ್ಲಿ ಕಳೆದು ಕೊಂಡ ಮಗುವನ್ನು ಇದುವರೆಗೂ ಪತ್ತೆ ಹಚ್ಚಲಾಗಲಿಲ್ಲ. ನಾವು ಬಹಳ ವಾಗಿ ಪ್ರಯತ್ನಿಸಿ ಸೋತು ಹೋಗಿದ್ದೆವು. ಅದೇ ವರ್ಷ ಅವಳಿಗೆ ಅಪೆಂ ಡಿಕ್ಸ್ ಆಪರೇಶನ್ ಆಗಿತ್ತು, ಮುಂಗೈ ಮೇಲಿನ ಗಾಯದ ಕಲೆ, ಕಿವಿಯ ಬಳಿಯ ಕಪ್ಪು ಮಚ್ಚೆ, ಮುಂಗಾಲಿನಲ್ಲಿ ಸುಟ್ಟಗಾಯದ ಕಲೆ ಇವು ನನ್ನ ಮಗಳು ಎಂಬುವುದಕ್ಕೆ ಸಚಿತ್ರ ಸಾಕ್ಷಿ !"

ಎಲ್ಲರ ಮುಖದ ಮೇಲೂ ಸಂತಸದ ಕಳೆ ನಲಿದಾಡಿತು.

ಗ್ಯಾರಿ ಯೋಚಿಸಿದ ನಿಜವಾಗಿಯೂ ಅವರವರಲ್ಲಿ ಎಂತಹ ಸಾದೃಶ್ಯ ವಿದೆ....?

ಅದೇ ವೇಳೆಗೆ ತಂದೆ ತಾಯಿ ತಮ್ಮ ಒಳಹೊಕ್ಕಿ ಇಟ್ಟರು. ಎಲ್ಲರ ಮುಖದಲ್ಲೂ ಕಾತರ–ಕಳವಳಗಳ ಕಪ್ಪು ಛಾಯೆ ಮುದ್ರಿತವಾಗಿತ್ತು.

* * * *

ಗ್ಯಾರಿ ಶರೀರದಲ್ಲಿನ ವಿಷಯುಕ್ತ ರಕ್ತವನ್ನು ಬಸಿಯಲು ಅಣಿಗೊಳಿಸುವ ಮುನ್ನವೇ ಅವನು ಪ್ರಜ್ಞಾಶೂನ್ಯನಾದ. ವಿಷಪೂರಿತ ರಕ್ತ ಮೆದುಳಿನಲ್ಲಿ ಪ್ರವಹಿಸಿ ಪರಿಸ್ಥಿತಿಯ ದೋಷಕ್ಕೆ ಕಾರಣವಾಗಿತ್ತು. ವೈದ್ಯರ ತಂಡ ಆಗಲೂ ಹಿಂದೆಗೆಯದೆ ಅವನ ವಿಷಯುಕ್ತ ರಕ್ತವನ್ನೆಲ್ಲ ಬಸಿದು ಶುದ್ಧ ರಕ್ತವನ್ನು ತುಂಬಲು ಸಿದ್ಧತೆ ನಡೆಸಿದರು. ಅವನ ದೇಹದಿಂದ ಕಂಠಾಭಿದಮನಿಗಳ ಮೂಲಕ ರಕ್ತವನ್ನು ಖಾಲಿ ಮಾಡಿದಂತೆ ಅಪಧಮನಿಗಳಿಗೆ ತಂಪಾದ ಲವಣ ದ್ರಾವಣವನ್ನು ಸಂಯೋಜನೆ ಮಾಡಲು ಒಂದು ಹೃದಯ ಶ್ವಾಸಕೋಶ ಯಂತ್ರವನ್ನು ಬಳಸುವ ಮೂಲಕ ಕಾರ್ಯಸಾಧನೆಯನ್ನು ಸಾಧಿಸಿದರು. ರಕ್ತದ ಸ್ಥಾನವನ್ನು ಲವಣ ದ್ರಾವಣ ಸಂಪೂರ್ಣವಾಗಿ ಆಕ್ರಮಿಸಿಕೊಂಡ ನಂತರ ಅದನ್ನು ಖಾಲಿ ಮಾಡಲು ದೇಹಕ್ಕೆ ಶುದ್ಧ ರಕ್ತ ಸಂಯೋಜನೆ ಮಾಡಲಾಯಿತು.

ರಕ್ತವನ್ನು ಸಂಪೂರ್ಣವಾಗಿ ಖಾಲಿ ಮಾಡುವ ಕಾರ್ಯವಿಧಾನವು ಮತ್ತೊಂದು ಸಮಸ್ಯೆಯನ್ನು ಒಡ್ಡುತ್ತದೆ. ರೋಗಿಯ ಮೆದುಳು ಮತ್ತು ಇತರ ಮುಖ್ಯ ಅಂಗಗಳು ಇವುಗಳಿಗೆ ಆಮ್ಲಜನಕದ ನಿರಂತರ ಸರಪರಾಜು ಸರಿಯಾದ ಕ್ರಮದಲ್ಲಿ ಪೂರೈಕೆಯಾಗದಿದ್ದರೆ ಹಾನಿಗೊಳ್ಳುವುದು ದಿಟ. ಆ ಅಪಾಯವನ್ನೆದುರಿಸಲು ಜೀವನ ಕ್ರಿಯೆಯನ್ನೇ ನಿಧಾನಗೊಳಿಸಲು ರೋಗಿಯ ದೇಹವನ್ನು ತಣ್ಣಗೆ ಮಾಡಲಾಯಿತು. ಇಂಥ ಪರಿಸ್ಥಿತಿಯಲ್ಲಿ ದೇಹದ ಆಮ್ಲಜನಕದ ಬಳಕೆಯು ಕನಿಷ್ಠ ಮಿತಿಗೆ ಕಡಿಮೆಯಾಗುವುದು ಸಹಜ.

ದಿಟ್ಟ ಕಾರ್ಯ ಸಾಧನೆಯನ್ನು ಕೈಕೊಂಡ ವೈದ್ಯವೃಂದ ಯಶಸ್ಸಿನ ಕಳೆಯನ್ನು ಮುಖಮಂಡಲದಲ್ಲಿ ಬೆಳಗಿದರು.

—o—

ವೈಶಾಖೀ ಪರ್ವ

"ಉತ್ತಿಷ್ಠಿತ ಜಾಗೃತ ಪ್ರಾಪ್ತವರಾನ್ ನಿಬೋಧತ"

ಎಂದು ಯಾವ ಕಂಠಸ್ಫೂರ್ತಿ ಕಹಳೆಯಂತೆ ಮೊಳಗಿ ಸಮಸ್ತ ಸುಪ್ತ ಚೇತನವೂ ಒಮ್ಮೆಗೇ ಮಿಡುಕಿ ಬಿದ್ದು ಎದ್ದೇಳುವಂತೆ ಜಾಗ್ರತಗೊಳಿಸಿತೋ ಆ ಸ್ಫೂರ್ತಿಧಾರೆ ಅಂದಿಂದಿಗೂ ಸಾರೋದ್ಧಾರವಾಗಿ ನೆತ್ತರಿನ ಕಣ ಕಣ ವನ್ನೂ ಆವರಿಸಿ, ಮನೋವಾಕ್ಕಾಯಗಳಲ್ಲಿ ಪ್ರವಹಿಸುತ್ತಲಿದ್ದುದರಿಂದ ಸಾವು ನೋವುಗಳು ಗಣನೆಗೆ ಬರುತ್ತಲೇ ಇಲ್ಲ. ಬಹುತೇಕ ರಾಷ್ಟ್ರೀಯರು ತಮ್ಮ ರಾಷ್ಟ್ರದ ಶೃಂಖಲೆಯನ್ನು ಕಿತ್ತೊಗೆಯಲು ಕಂಕಣಬದ್ಧರಾಗಿ ಚಳ ವಳಿಯ ಭಯಂಕರ ಅಗ್ನಿಕುಂಡದಲ್ಲಿ ಧುಮುಕಿ ನೊಣ ಪತಂಗಗಳಂತೆ ಪಟ ಪಟಾಯಮಾನವಾಗಿ ಬೇಯುತ್ತಿದ್ದರು. ಭಾರತಿ ಮಹೀಯಸಿಯಾದರೂ ಒಮ್ಮೆ ರೋಷ, ಮತ್ತೊಮ್ಮೆ ಕ್ಷೋಭೆ, ಕೆಲವೊಮ್ಮೆ ಗ್ಲಾನಿ, ಮತ್ತೊಮ್ಮೆ ನಿಸ್ಸಹಾಯಕತೆಯ ಧಾರಣ ಪ್ರಸಂಗಗಳಲ್ಲಿ ಸಿಲುಕಿ ದುಃಖಾನ್ವಿತೆಯಾ ಗುವಳು. ಆರ್ದ್ರಾರ್ದ್ರ ಮುಖಮಂಡಲದ ಮೇಲೆ ನಾನಾ ಭಾವನೆಗಳ ಬಣ್ಣ ಮೂಡಿ ಮಾಯವಾಗುವುದು.

ಭಾರತ ಗಗನದಾಣದಲ್ಲಿ ಯಾವ ಯಾವ ಕ್ರೂರ ಗ್ರಹಗಳು ಉಪಾ ರೂಢವಾಗಿದ್ದುವೋ ದೇವರಿಗೇ ಗೊತ್ತು. ಮಿಂಚಿನ ಸಂಚಿನ ಪರಿಸ್ಥಾನಕ್ಕೆ ಯಾವ ಅಗೋಚರ ಶಕ್ತಿ ಎಳೆಯುತಿತ್ತೋ ಹೇಳಲಾಸಲ್ಲ. ಅಂತೂ, ಒಂದಲ್ಲ ಒಂದು ಕಡೆ ಕೆನ್ನೀರಿನ ಚಿಲುಮೆ ಚಿಮ್ಮುತ್ತಲೇ ಇತ್ತು-ಸಾಕ್ಷಾತ್ ಯಮಧರ್ಮ ತನ್ನ ರಕ್ತ ಸಿಕ್ತ ಹಸ್ತಗಳಿಂದ ಅಲ್ಲಲ್ಲಿ ತಟ್ಟಿ ತಟ್ಟಿ ಪುಣ್ಯಭೂ ಮಿಯನ್ನು ರಕ್ತರಂಜಿತಗೊಳಿಸಿದಂತೆ!

ವಸಂತ ವೈಖರಿಯ ವೈಶಾಖಮಾಸ ಏನೋ ಒಂದು ಬಗೆಯ ಆಕ್ಕ

ವಿಸ್ಮೃತಾವಸ್ಥೆಯಲ್ಲಿ ಮಹಾ ವೈಶಾಖೀ ಪರ್ವಕ್ಕೆ ನಾಂದಿ ಹಾಡುವಂತೆ ಅಡಿಗಳನ್ನು ಮುಂದಿಡುತಿತ್ತು.

* * * *

ಬ್ರಿಟಿಷ್ ಸರಕಾರದ ಭವ್ಯಭವನದ ಮಹಡಿಯ ಮೇಲೆ ಕೂಡಿದ ಗುಪ್ತ ಸಭೆಯ ಅಧ್ಯಕ್ಷ ಪೀಠದಲ್ಲಿ ಮಂಡಿಸಿದ ಆರ್ಥರ್ ಸ್ವಿನ್‌ಸನ್ ಕಾತರ–ಕೋಪಗಳಿಂದ ಉದ್ದೀಪ್ತನಾಗಿ ಅಂದ,

"ಲಾಠೀ ಪ್ರಹಾರ – ಗೋಲೀ ಬಾರ್‌ಗಳಿಂದ ಈ ದುಷ್ಟ ಜನರನ್ನು ಹತ್ತಿಕ್ಕುವುದು ಸಾಧ್ಯವೇ ಇಲ್ಲ. ಹೀಗೇ ಮುಂದುವರಿದರೆ ಮುಂದೆ ಮುಂದೆ ಪರಿಸ್ಥಿತಿ ಬಹಳ ಕಠಿಣವಾಗಬಹುದು."

ಮಾತುಕತೆ ನಡೆಯುತಿದ್ದುದು ಸ್ವಚ್ಛ ಇಂಗ್ಲೀಷಿನಲ್ಲಿ.

"ಹೌದು, ಈ ವಿಚಾರ ನಮಗೆ ಮಾತ್ರವಲ್ಲ ; ಇಡೀ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ತಿಳಿದು ಹೋಗಿದೆ."

"ಅಂದರೆ.....? ನಾವಿಲ್ಲಿ ಮಣ್ಣು ಮುಕ್ಕುತಿದ್ದೇವೆ ಎಂದಂತಾಯಿತು!"

"ಸರಿ, ಏನು ಮಾಡೋಣ ? ಪರಿಸ್ಥಿತಿ ಹಾಗಿದೆ. ಇದುವರೆಗೆ ನಾವೇನು ಕಡಿಮೆ ಶ್ರಮ ತೆಗೆದುಕೊಂಡಿದ್ದೇವೆಯೇ ? ಒಂದು ಜೀವ ಹೋದರೆ ಹತ್ತು ಒಟ್ಟಾಗಿ ಬರುತ್ತವೆ ! ಇವರಿಗೆ ಜೀವ ನಷ್ಟದ ಲಕ್ಷವೇ ಇಲ್ಲ !"

ಜನರಲ್ ಡಯರ್ ಅತೀವ ಅಸಹನೆಯಿಂದ ವಿಷಯವನ್ನು ಮುಂದಿಟ್ಟ. ಹೊಣೆಗಾರಿಕೆಯ ಗಂಭೀರ ಮುದ್ರೆ ಮುಖಭಾವದಲ್ಲಿ ಒಡೆದು ಮೂಡಿತ್ತು. ನೀಲನಯನವನ್ನು ಮಿನುಗುತಿದ್ದ ತೀಕ್ಷ್ಣತರವಾದ ಮಿಂಚು ಕೋಪಾತಿರೇಕವನ್ನು ಸೂಸುತಿತ್ತು. ಕೈ ಬೆರಳುಗಳನ್ನು ಹಿಸುಕುತ್ತ ಲಟಲಟನೆ ಲಟಿಕೆಗಳನ್ನು ಮುರಿದ.

"ನೀನು ಬರೀ 'ಜನರಲ್' ಆದರೆ ಸಾಲದು. ಸೈನ್ಯವನ್ನು ಚಾಕಚಕ್ಯತೆಯಿಂದ ನಡೆಸಿಕೊಳ್ಳುವ ದಕ್ಷತೆ ಪಡೆದುಕೊಳ್ಳಬೇಕು ; ಇಲ್ಲದಿದ್ದಲ್ಲಿ ಮಾಡಿದ್ದೆಲ್ಲಾ ದಂಡವಾದೀತು!"

ಅಧಿಕಾರವಾಣಿ ಸಮಯೋಚಿತವಾಗಿ ಮೊಳಗಿತು. ಆರ್ಥರ್ ಸ್ವಿನ್‌ಸನ್ ಉದ್ರೇಕಿತನಂತೆ ಕೆಂಪು ತಳೆದ.

"ಇಂದು ಜಲಂದರ್‌ನಿಂದ ಬರುವ ಸೇನೆಯಲ್ಲಿ ಬಹಳ ಮಂದಿ ದೇಶೀ

ಯರಿದ್ದಾರೆ. ಅವರನ್ನು ಪೂರಾ ನಂಬಬಾರದು! ನಮ್ಮ ಎಲ್ಲಾ ಗುಪ್ತಚಾರರನ್ನೂ ತಹಬಂದಿಯಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದಲ್ಲಿ ಕೆಲಸ ಕೆಡುತ್ತದೆ!"

"ದಟ್ಟ ದರಿದ್ರರು.....ಹೆಚ್ಚಿನ ಪಗಾರಕ್ಕೆ ಮನ ಸೋಲುತ್ತಾರೆ!"

"ಹಾ! ಅಲ್ಲೇ ಮೋಸ ಹೋಗುವುದು! ಯಾವುದನ್ನೂ ಅಷ್ಟು ಸುಲಭವಾಗಿ ತೀರ್ಮಾನಿಸಬಾರದು. ಈ ಕಡೆ ಪಗಾರಕ್ಕೆ ಕೈಯೊಡ್ಡಿ ಆ ಕಡೆ ಜನತೆಯೊಂದಿಗೆ ಸಹಕರಿಸಿದರೆ.....?

"ಈ ಜನ ಕಂಕನರಿಗಳಿದ್ದ ಹಾಗೆ! ಕಣ್ಣಿನ ಮೇಲೆ ಕಣ್ಣಿಡದಿದ್ದರೆ ಕಷ್ಟ." ಜಾರ್ಜ್ ಹೌಡಿನಿ ಆ ಮಾತನ್ನು ಸಮರ್ಥಿಸಿದ.

"ಹೌದು, ಹೌದು! ಅದರಲ್ಲೂ ಈ ಪಂಜಾಬಿಗಳನ್ನು ಹೀಗೇ ಎಂದು ನಿರ್ಣಯಿಸುವುದಂತೂ ಬಹಳ ಕಷ್ಟ. ಧೂರ್ತರು! ಉಡಾಳತನದಿಂದ ಕೊಬ್ಬಿದವರು! ಸರ್ವಾಧಿಕಾರದ ಹುಚ್ಚು ಬೇರೆ; ಇವರನ್ನೆಲ್ಲಾ ಅಂಕೆಯಲ್ಲಿಟ್ಟುಕೊಳ್ಳದಿದ್ದರೆ ನಮ್ಮ ವ್ಯವಹಾರ ಎಂದಾದರೂ ನಡೆಯುವುದುಂಟೇ?" ಎಂದ ಗ್ರಿಫಿತ್ಸ್. ಮಾನಸಿಕ ವಿಕ್ಷೋಭೆಯಿಂದ ಕಣ್ಣುಗಳು ರಂಗು ತಳೆದಿದ್ದುವು. ಮುಖಭಾವ ಘನ ಗಾಂಭೀರ್ಯದಿಂದ ಕೂಡಿತ್ತು.

ವಿಷಯ ಆ ನೆಲೆಗೆ ಬಂದು ನಿಂತಾಗ ಸ್ವಲ್ಪ ಹೊತ್ತು ಯಾರ ತುಟಿಗಳೂ ಬಿರಿಯಲಿಲ್ಲ.

ಆರ್ಥರ್ ಸ್ವಿನ್‌ಸನ್ ತದೇಕ ಚಿಂತನೆಯಲ್ಲಿ ಮುಳುಗಿದ್ದು ವಿಚಾರ ವಿಮರ್ಶೆಗೈಯ್ಯುತ್ತ ಮುಂದುವರಿದ,

"ಈಗ ಹೊಸ ಕಾನೂನು ರಚಿಸದಿದ್ದರೆ ಸಾಧ್ಯವೇ ಇಲ್ಲ. ಕಾನೂನು ಲಘುವಾಗಿದ್ದಷ್ಟು ಜನ ಲಕ್ಷವಿಲ್ಲದೆ ನುಗ್ಗಿ ಬರುತ್ತಾರೆ. ಒಮ್ಮೆ ಸಿಕ್ಕಿಬಿದ್ದ ಮೇಲೆ ಎಂದೂ ಮುಕ್ತಿ ದೊರೆಯಲೇ ಬಾರದು! ಅಂತಹ ಗಂಭೀರ ಭಯ ಮೂಡಿಸದಿದ್ದರೆ ಈ ಪಾಶಾಂಡಿಗಳನ್ನು ಹತೋಟಿಗೆ ತರುವುದು ಕಷ್ಟ."

"ಇದಕ್ಕೆಲ್ಲಾ 'ಕಾನೂನು' ಏಕೆ ಬೇಕು? ಕಂಡಲ್ಲಿ ಗುಂಡಿಟ್ಟರಾಯಿತು!" ಎಂದ ಜನರಲ್ ಡಯರ್.

"ಲೋಕ ಮೆಚ್ಚುವಂತಿದ್ದರೆ ಪರರಾಷ್ಟ್ರಗಳ ಸಹಾನುಭೂತಿ ದೊರೆಯುತ್ತದೆ.....ಇಲ್ಲದಿದ್ದರೆ ಕಷ್ಟ"

"ಹೆಗ್ಗಣಗಳನ್ನು ಬಡಿಯುವುದಕ್ಕೇಕೆ ಇತರರ ಸಹಾನುಭೂತಿ ?"

"ಆದರೂ....."

"ಅದು ಹೇಗಾದರೂ ಇರಲಿ, ಈಗ ಕಾನೂನಿನ ವಿಚಾರ ವಿಮರ್ಶೆ ಮಾಡು. ಅವು ಹೇಗಿರಬೇಕು-ಎಂತಿರಬೇಕು ಎಂಬುದು ನಮ್ಮ ಮುಂದಿನ ಸಮಸ್ಯೆ."

"ಇಲ್ಲಿ ಇನ್ನೊಮ್ಮೆ ಐರೋಪ್ಯ ಅಧಿಕಾರಿಗಳ ಸಭೆ ಕೂಡಿಸುವುದು ಉತ್ತಮ. ಲಾ ಸೆಕ್ರೆಟರಿಯ ಅವಶ್ಯಕತೆ ಇರುತ್ತೆ." ಜಾರ್ಜ್ ಹೌಡಿನಿ ತನ್ನ ಸಲಹೆಯನ್ನು ಮುಂದಿಟ್ಟ.

"ಆಗಬಹುದು ....ನಾಳೆ ಬೆಳಗ್ಗೆಯೇ ಎಲ್ಲರನ್ನೂ ಕೂಡಿಸು."

ಹೌದು ! ಎಲ್ಲಾ ತುರ್ತುಗತಿಯಲ್ಲಿ ನಡೆಯಬೇಕು."

"ಪಂಜಾಬಿಗಳು ಮತ್ತೊಮ್ಮೆ ಬಹಿರಂಗ ಆಂದೋಳನಕ್ಕಿಳಿಯುವುದಿರಲಿ, ಅಂತರಂಗದಲ್ಲಿ ಕೂಡಾ ಅದರ ಯೋಚನೆ ಮಾಡಬಾರದು ! ಅಂತಹ ಕಠಿಣವಾದ ಕಾನೂನು ರಚಿಸಬೇಕು !" ಎಂಬುದಾಗಿ ಆರ್ಥರ್ ಸ್ಟಿನ್‌ಸನ್ ದೃಢ ಕಂಠದಿಂದ ಒತ್ತಿ ಹೇಳಿ ಹೊರಬಿದ್ದ.

ಉಳಿದವರು ಮರು ಮಾತಾಡದೆ ಹಿರಿಯ ಅಧಿಕಾರಿಯ ಅಪ್ಪಣೆಯನ್ನು ಶಿರಸಾಹೊತ್ತು ತಮ್ಮ ತಮ್ಮ ದಾರಿ ಹಿಡಿದರು. ಅಲ್ಲಿಗೆ ಗುಪ್ತಸಭೆ ವಿಸರ್ಜನೆಯಾಗಿ ಅಧಿಕಾರದ ಅಧಿಕೃತ ಗೃಹ ಕದನವನ್ನು ಮುಚ್ಚಿಕೊಂಡಿತು.

ಸಂಧ್ಯಾ ಶಾಂತಿಯ ವೈಭವದಲ್ಲಿ ಅರ್ಧ ಚಂದ್ರಮ ಅಂತರಿಕ್ಷದ ವಕ್ಷವನ್ನು ಏರಿದ್ದ. ನೀಲ ಪಟಲದ ಮೇಗಡೆ ಮಿನುಮಿನುಗುವ ನಕ್ಷತ್ರೇಕ್ಷುಗಳು ಅಲ್ಲಲ್ಲಿ ಪ್ರತ್ಯಕ್ಷವಾಗಿದ್ದುವು.

* * * *

ಗ್ರಿಫಿತ್ಸ್ ಅತ್ಯಂತ ನಿರಾಶಾಭಾವದಿಂದ ಕೂಡಿದವನಾಗಿ ಅಂದ,

"ಪಂಜಾಬಿನ ಪರಿಸ್ಥಿತಿ ದಿನದಿನಕ್ಕೂ ಹದಗೆಡುತ್ತಿದೆ. ಜನಗಳು ತೀವ್ರ ಅಸಮಾಧಾನಗೊಂಡಿದ್ದಾರೆ. ಕಚೇರಿಯ ಕೆಲಸಗಳು ಸ್ಥಗಿತಗೊಂಡಿವೆ. ದೇಶೀಯ ಅಧಿಕಾರಿಗಳು ಅಸಡ್ಡೆಯಿಂದ ವರ್ತಿಸುತಿದ್ದಾರೆ. ಇನ್ನು ಯಾವ ರೀತಿ ಅಧಿಕಾರ ನಡೆಸಬೇಕೋ ತಿಳಿಯುತ್ತಲೇ ಇಲ್ಲ."

"ಕಲೆಕ್ಟರ್ ಏನು ಹೇಳುತ್ತಾನೆ ?" ಕಾತರಯುಕ್ತ ವಾಣಿಯಲ್ಲಿ ಪ್ರಶ್ನಿಸಿದ ಜಾನ್‌ಸನ್.

"ಕಲೆಕ್ಟರ್ ಜಾರ್ಜ್ ಹೇಳುವುದೂ ಅದೇ."

"ನಾವು ಹೊರಗಡೆಯಿಂದ ಸಿಬ್ಬಂದಿಯನ್ನೇಕೆ ಕರೆಸಬಾರದು ?"

"ನಾನೂ ಅದೇ ಯೋಚನೆಯಲ್ಲಿರುವೆ"

"ಸರಿ ಮತ್ತೆ, Go ahead."

"ಲಾಹೋರಿನ ಕಲೆಕ್ಟರ್ ನಮ್ಮೊಂದಿಗೆ ಸಹಕರಿಸಲು ಸಿದ್ಧನಿದ್ದಾನೆ."

"ಅವನಿಗೆ ಈಗಲೇ ಟ್ರಂಕ್‌ಕಾಲ್ ಮಾಡು."

"ಮೂರು ದಿನಗಳಿಂದ ಪ್ರಯತ್ನಿಸುತ್ತಿರುವೆ. ಲೈನ್ ಸರಿಯಿಲ್ಲ. ಈ ಧೂರ್ತರು ಅದಕ್ಕೂ ಕತ್ತರಿ ಹಚ್ಚುತ್ತಾರೆ !"

ಅನಂತರ ಮೆಲುದನಿಯಲ್ಲಿ ಅನೇಕ ವಿಷಯಗಳು ಚರ್ಚಿತವಾದುವು; ಜಾನ್‌ಸನ್ ಉತ್ತೇಜಿತನಾಗಿ ಹೊರಬಿದ್ದ. ಗ್ರಿಫಿತ್ಸ್ ಅಲ್ಲಲ್ಲೇ ಪದಚಾರಣ ಮಾಡುತ್ತ ಅದೇ ವಿಚಾರದಲ್ಲಿ ನಿಮಗ್ನನಾಗಿದ್ದ. ತಲೆಯಲ್ಲಿ ಸಮಸ್ಯೆಗಳು ಹಿಂಡು ಹಿಂಡಾಗಿ ಅಲೆಯುತಿದ್ದುವು. ಹೃದಯಾಂತರಾಳದಲ್ಲಿ ಸಾಗುವ ಕೋಲಾಹಲಪೂರ್ಣ ಯುದ್ಧದಿಂದ ಭಯಭೀತಿಯು ಛಾಯೆಯೊತ್ತಿ ಕಣ್ಣುಗಳ ಕೆಳಗೆ ಅರ್ಧರೇಖೆಯು ನೀಲಿಯಾಗಿತ್ತು. ಪ್ರಶಸ್ತವಾದ ಹಣೆಯಮೇಲೆ ನರಗಳು ಹುರಿಗಳಂತೆ ಉಬ್ಬಿ ನಿಂತಿದ್ದುವು. ಅವನು ತನ್ನಷ್ಟಕ್ಕೆ ತಾನೇ ಚಡಪಡಿಸಿಕೊಳ್ಳುತ್ತ ಅಂದುಕೊಂಡ,

"ಇನ್ನು ನಿಭಾಯಿಸುವುದು ಕಷ್ಟ. ಅಬ್ಬಬ್ಬ ! ಭಯಂಕರ..... ಬೀಭತ್ಸ !"

ಅದೇ ವೇಳೆಗೆ ಬಾಗಿಲಲ್ಲಿ ದವಾಲಿ ಹಣಿಕಿದ.

"Yes please!"

ಕೆಂಪು ಅಂಗಿಯ ದವಾಲಿ ಒಳಬಂದು ವೈಬಾಗಿ ನೆಲಮುಟ್ಟಿ ನಮಸ್ಕರಿಸಿ ನಿವೇದಿಸಿಕೊಂಡ,

"ಸ್ವಾಮಿಾ ! ಗುಪ್ತಚಾರ ಹಂಸರಾಜ್ ಬಂದಿದ್ದಾನೆ."

"ಹೋಗು ಈಗಲೇ ಬರಹೇಳು!"

ಅವನು ದೀನಾದೀನವಾಗಿ ಹಿಂದಹಿಂದಕ್ಕೆ ನಡೆಯುತ್ತ ಬೆನ್ನು ತೋರದಂತೆ ಹೊಸ್ತಿಲು ದಾಟಿದ. ಹಿಂದೆಯೇ ದೃಷ್ಟಿಯನ್ನಟ್ಟಿದ ಗ್ರಿಫಿತ್ಸ್‌ನ

ಎದೆಯಾಳದಿಂದ ನಿಟ್ಟುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು ; ತಮ್ಮ ಅಭೂತಪೂರ್ವ ಅಧಿಕಾರವನ್ನು ಕಳೆದುಕೊಳ್ಳಲು ಮನಸ್ಸು ಸರ್ವಥಾ ಒಪ್ಪಲಿಲ್ಲ. ಹೇಗಾದರೂ ಯಥೋಚಿತವಾಗಿ ಉಳಿಸಿಕೊಳ್ಳದಿದ್ದಲ್ಲಿ ತಮ್ಮ ಪೌರುಷ ವ್ಯರ್ಥ....ಎನಿಸಿದಾಗ ಅಧಿಕಾರ ಶಾಹಿಯ ಅದಮನೀಯ ಆಸೆ ಕಾಣದ ಕೈಗಳಿಂದ ಹೃದಯವನ್ನು ಹಿಂಡ ತೊಡಗಿತು. ಅಂದಿಂದಿಗೂ ರಾಜಾಧಿರಾಜರಂತೆ ವಿರಾಜಿಸಿದ ಸ್ವರ್ಗಸೌಖ್ಯ ಅಕ್ಷಿಪಟಲದ ಮೇಲೆ ಸುಳಿಸುಳಿದಳಿಯಿತು. ಅವನು ನಿಸ್ಸಹಾಯಕನಂತೆ ಬಿಸಿಯುಸಿರು ಬಿಟ್ಟ.

ಕೆಲವು ನಿಮಿಷಗಳೊಳಗಾಗಿ ಅಲ್ಲಿಗೆ ಆಗಮಿಸಿದ ಗುಪ್ತಚಾರ ಸಂಪ್ರದಾಯ ಶರಣತೆಯಿಂದ ವೈಬಾಗಿ ವಂದಿಸಿ ಅತೀ ವಿನಯವಂತಿಕೆಯಿಂದ ನುಡಿದ,

"ಇಂದು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಹರದಯಾಳರ ಮನೆಯಲ್ಲಿ ನಡೆಯಲು ನಿರ್ಧರಿಸಿದೆ. ನಾನು ಬಹಳ ಚಾಕಚಕ್ಯತೆಯಿಂದ ಆ ಸುದ್ದಿಯನ್ನು ತಿಳಿದುಕೊಂಡೆ."

"ಹೇಗೆ ತಿಳಿದುಕೊಂಡೆ ? ಅವರಿಗೇನಾದರೂ ನಿನ್ನ ಸುಳಿವು ಸಿಕ್ಕಿತೇ ?"

"ಇಲ್ಲ. ಇಲ್ಲ. ಸರಿಯಾದ ಗುಪ್ತಚಾರಿಕೆಯಲ್ಲೇ ತಿಳಿದುಕೊಂಡಿರುವೆ; ಅವರಿಗೆ ನನ್ನ ಸುಳಿವು ಇನಿತೂ ಕೊಟ್ಟಿರುವುದಿಲ್ಲ."

"ಕಾಂಗ್ರೆಸ್ ಸಭೆ ನಡೆಯುವುದು ಎಷ್ಟೊತ್ತಿಗೆ ?"

"ಇಂದೇ ಹನ್ನೊಂದು ಗಂಟೆಗೆ."

"ನಿನಗೆ ಸರಿಯಾಗಿ ಗೊತ್ತೆ ?"

"ಹೌದು ಬುದ್ಧಿ ! ಸರಿಯಾಗಿ ತಿಳಿದುಕೊಂಡಿರುವೆ."

"ಬೇಷ್ ಈ ಧೂರ್ತ ಜನರ ಸಾಮೂಹಿಕ ಚಟುವಟಿಕೆಯನ್ನು ಧ್ವಂಸಗೊಳಿಸಿ ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸುವಂತೆ ಮಾಡುವುದೇ ನಮ್ಮ ಉದ್ದೇಶ ! ನೀನು ಎಲ್ಲಾ ವಿಚಾರಗಳಲ್ಲೂ ನಿರ್ವಂಚನೆಯಿಂದ ಸಹಕರಿಸಿದರೆ....ಆಂ ! ಗೊತ್ತಾಯ್ತಷ್ಟೆ ?"

"ಗೊತ್ತು ! ಮಹಾಸ್ವಾಮಿ, ನಾವು ಅಂದಿಂದಿಗೂ ತಮ್ಮ

ಉಪ್ಪುಂಡವರು ! ನೀವು ಹೇಗೆ ಹೇಳಿದರೆ ಹಾಗೆ ! ಬೆಂಕಿಯಲ್ಲಿ ಧುಮುಕು ಎಂದರೂ ನಾನು ಸಿದ್ಧ !"

"ಖಂಡಿತವಾಗಿ....?"

"ತಮ್ಮ ಪಾದದಾಣೆ ಬುದ್ಧಿ !"

"ಬದುಕಯ್ಯಾ, ಚೆನ್ನಾಗಿ ಬದುಕು ! ನಿನ್ನಂತಹವರು ಚೆನ್ನಾಗಿ ಬದುಕಬೇಕು !"

ಅನಂತರ,

ಆ ಕೂಡಲೇ ಪೋಲೀಸ್ ಕಮಿಷನರಿಗೆ ಟೆಲಿಫೋನಿನ ಕರೆ ನೀಡಿ, ಸಮಯೋಚಿತ ಸಲಹೆಗಳನ್ನಿತ್ತು ತುರ್ತು ವ್ಯವಹಾರವನ್ನು ಅಚ್ಚುಕಟ್ಟಾಗಿ ನಡೆಸುವಂತೆ ಆಜ್ಞಾಪಿಸಿದ–ಗ್ರಿಫಿತ್ಸ್.

* * * *

ಆರ್ಥರ್ ಸ್ವಿನ್‌ಸನ್ ಹೊಸದಾಗಿ ರೂಪಿತವಾದ ರೌಲೆಟ್ (Roulette) ಕಾನೂನಿನ ಕಡತದ ಮೇಲೆ ದೃಷ್ಟಿ ಹಾಯಿಸಿದ್ದ. ಆತನ ಬಳಿಯಲ್ಲಿ ನಾಲ್ಕಾರು ಮಂದಿ ಅಧಿಕಾರಿಗಳಿದ್ದರು. ರೌಲೆಟ್ ಕಾನೂನಿನ ಸ್ವರೂಪ ಬಹಳ ಗಂಭೀರ. "ನ–ವಕೀಲ್, ನ–ದಲೀಲ್ ನ-ಅಪೀಲ್" ಎಂಬ ಮೂರು "ನ"ಕಾರಗಳಿಂದ ಉದ್ಭವಿಸಿದ ದುಶ್ಯಾಸನ ಅದು. ಒಮ್ಮೆ ಯಾರಾದರೂ "ಅಪರಾಧಿ" ಎನಿಸಿಕೊಂಡಲ್ಲಿ ಆ ಕರಾಳ ಶಾಸನದ ಹಿಡಿತ ದಿಂದ ತಪ್ಪಿಸಿಕೊಳ್ಳುವುದು ಕನಸಿನ ಮಾತು. ಅಧಿಕಾರಶಾಹಿ ಯಾವ ಶಿಕ್ಷೆ ನೀಡಬಯಸುವುದೋ ಅದರ ನೆರಳೇ ಅವನಿಗೆ ಗತಿ ! ಅಂದಮೇಲೆ ಚಳವಳಿಯು ಸಂಪೂರ್ಣ ಹುಟ್ಟಳಿದು ಹೋಗಲೇಬೇಕು !

ಆರ್ಥರ್ ಸ್ವಿನ್‌ಸನ್ ಸಮಾಧಾನದ ಉಸಿರು ಬಿಟ್ಟು ಅಂದ,

"ಇನ್ನು ನಾವು ಬ್ರಿಟಿಷರೆದುರಿಗೆ ತಲೆಯೆತ್ತಿ ತಿರುಗಾಡ ಬಲ್ಲೆವು !"

ಗ್ರಿಫಿತ್ಸ್ ಒಳಗಿಂದೊಳಗೇ ನಿಟ್ಟುಸಿರು ಬಿಟ್ಟು "ಇದೂ ಕೂಡಾ ಅಂತಹ ಪರಿಣಾಮಕಾರಿಯಾಗುತ್ತೆ ಎಂದು ನಂಬುವುದು ಕಷ್ಟ. ಈ ಜನ ಪ್ರಾಣಕ್ಕೆ ಬೆಲೆಯೇ ಕೊಡುವುದಿಲ್ಲ !"

"ಹೌದು ! ಮಕ್ಕಳ ಸಹಿತ ಹೆಂಗಸರೂ ಮುಂದೆ ಬಂದು ಬಿಡು ತ್ತಾರೆ !"

"ಏನೇ ಇದ್ದರೂ, ಶಾಸನ ಬಿಗಿಯಾರಬೇಕು !"

"ಅದು ಸರಿಯೆ."

"ಮುಖ್ಯವಾಗಿ ಒಗ್ಗಟ್ಟು ಮುರಿಯಬೇಕು ! ಒಗ್ಗಟ್ಟು ಮುರಿದರೆ ಶಕ್ತಿ ದುರ್ಬಲವಾಗುತ್ತದೆ."

"ಅದವರಿಗೆ ಗೊತ್ತು. ಅಂತಲೇ ಸಂಘ ಶಕ್ತಿ ಬೆಳೆಸಿಕೊಂಡಿದ್ದಾರೆ."

"ಬರಿಗೈಯಲ್ಲಿ ಹೋರಾಟ ! ಪುಂಡುಗಾರಿಕೆ ! ತೀರ ಅಸಹ್ಯಕರ !"

"ಹಿಂದೂ–ಮುಸ್ಲಿಂ–ಪಠಾಣ–ಸೀಖರ ನಡುವೆ ಬಿತ್ತಿದ ವಿಷಬೀಜ ಬಲಿತು ಹಣ್ಣಾದರೆ ಒಗ್ಗಟ್ಟು ಹುಟ್ಟಳಿದು ಹೋಗುತ್ತದೆ !"

"ಈಗ ಅವರವರೊಳಗೆ ಸಂಪೂರ್ಣ ಒಮ್ಮತ ಇದೆ ಎಂದಕೊಳ್ಳಬೇಡ. ಸ್ವಾತಂತ್ರ್ಯಕ್ಕಾಗಿ ಒಮ್ಮತ ಅಷ್ಟೆ."

"ಹೌದು.....ಆ ಗುರಿಯೇ ಒಗ್ಗಟ್ಟನ ಉದ್ದೇಶ."

ಬೇಧನೀತಿಯ ಮೇಲೆಯೇ ಆಡಳಿತಯಂತ್ರ ನಡೆಯಬೇಕು. ಅಷ್ಟು ಮಾತ್ರವಲ್ಲ; ಅದಕ್ಕೆ ಸಮತಾಭಾವದ ಬಣ್ಣ ಬಳಿದು ಜನರನ್ನು ನಮ್ಮೆಡೆಗೆ ಸೆಳೆದುಕೊಳ್ಳಬೇಕು !"

"ಅದೆಲ್ಲಾ ಬಹಳ ದೂರದ ಮಾತು. ಪ್ರಸ್ತುತ ಪರಿಸ್ಥಿತಿಯಲ್ಲಿ ಒಮ್ಮೆಗೇ ಸಮಾಧಾನವನ್ನು ಮೂಡಿಸಬೇಕಾದರೆ ಇನ್ನೇನಾದರೂ ಉಪಾಯವಿದೆಯೇ ?"

"ರೌಲೆಟ್ ಕಾನೂನು !"

" ಅದೇನಿದ್ದರೂ ತುರ್ತು ಪರಿಸ್ಥಿತಿಗಾಯಿತು ! ಆದಕ್ಕೂ ಮುನ್ನ.....?"

"ಅದೂ ಇರಲಿ, ಇದೂ ಇರಲಿ. ಯಾವುದರಿಂದ ಬಗ್ಗು ಬಡಿಯುವುದು ಸಾಧ್ಯವೋ ಅದರಿಂದ ಬಡಿಯಬೇಕು. ಮುಖ್ಯವಾಗಿ ನಾಲ್ಕೂ ಪಂಗಡಗಳವರಿಗೆ ಅವರವರ ಮೂಗಿನ ನೇರಕ್ಕೇ ಪಸ್ತು ಸ್ಥಿತಿಯನ್ನು ತಂದಿಟ್ಟರೆ ಅವರವರೇ ನಾಯಿಗಳಂತೆ ಕಚ್ಚಾಡಿ ಸಾಯುವುದರಲ್ಲಿ ಅನುಮಾನವಿಲ್ಲ !"

"ಅದು ಖಂಡಿತ....!"

"ರೌಲೆಟ್ ಕಾನೂನಿನ ಸಮಗ್ರ ಪರಿಚಯ ಒಮ್ಮೆ ಆಯಿತೆಂದರೆ ಈ ನಾಯಿ ಕುನ್ನಿಗಳು ಖಂಡಿತ ಬಾಲ ಮುದುಡಿಕೊಳ್ಳುತ್ತವೆ; ಅದರಲ್ಲಿ ಅನುಮಾನವೇ ಇಲ್ಲ."

"ಅಷ್ಟೊಂದು ದೃಢವಾದ ಸಂಬಿಕೆ ಇರುವುದೂ ಸಹ ಒಳ್ಳೆಯ ದಲ್ಲ."

"ಹಾಗೆನ್ನಲೇಬಾರದು. ಎಲ್ಲಾ ಅಸ್ತ್ರಗಳೂ ಎಲ್ಲಾ ಸಮಯ ದಲ್ಲೂ ಸಿದ್ಧವಿರಲೇಬೇಕು. ಅಂತಲೇ ಪ್ರತಿಯೊಂದರಲ್ಲೂ ವಿಶ್ವಾಸವಿಡು ವುದು ಲೇಸು."

"ಹೌದಪ್ಪಾ, ವಿಶ್ವಾಸವನ್ನು ಕಳೆದುಕೊಂಡ ಮೇಲೆ ಉಳಿಯುವು ದಾದರೂ ಏನು ?"

ಆರ್ಥರ್ ಸ್ವಿನ್‌ಸನ್ ದೀರ್ಘನಿಶ್ವಾಸ ಬಿಟ್ಟ. ದೇಶೀಯ ಸಾಮಾಜಿ ಕರ ಔತ್ಸುಕ್ಯ ದೃಷ್ಟಿಪಥದಲ್ಲಿ ಸುಳಿಸುಳಿದಳಿಯಿತು. ಮಾನಸ ಮಂದಿರ ದಲ್ಲಿ ಮಹಾ ವಿಕ್ಷೋಭೆಯ ಪ್ರಭಂಜನ ನಡೆಯುತಿತ್ತು. ಎಡಗೈಯನ್ನು ಕಟಿ ಪ್ರದೇಶದಲ್ಲಿ ಊರಿ ಇರಲಿ, ನೋಡೋಣ; ಕೊನೆಯ ಪ್ರಯತ್ನ....!" ಎಂದ.

"ರೌಲೆಟ್ ಕಾನೂನಿನ ಮುಂದೆ ಯಾರ ಆಟವೂ ನಡೆಯುವುದಿಲ್ಲ; ಅದಕ್ಕಾಗಿ ಇನ್ನು ಚಿಂತೆ ಬೇಡ."

"ಹೌದು. ಈ ಸಲ ನಾವು ಖಂಡಿತ ಯಶಸ್ಸಿನ ಹಾದಿ ಹಿಡಿಯು ತ್ತೇವೆ !"

ಅನಂತರ ಎಲ್ಲರೂ ಪರಸ್ಪರ ಕೈ ಕೈ ಕುಲುಕಿ ಗಂಭೀರ ಗತಿಯಲ್ಲಿ ಹೊರ ಬಿದ್ದರು.

....ದೂರ ದೂರ ಗಗನದ ಚಾರಿತ್ರ್ಯಪೂತ ಹೃದಯದ ನೀಲ ಪರಾಗ ದಲ್ಲಿ ಪುಂಡರೀಕ ಪುಷ್ಪಗಳ ಮಾಲೆ ಹರಡಿದಂತೆ ಬೆಳ್ಳಕ್ಕಿಗಳ ಸಾಲು ರಂಜ ನೀಯವಾಗಿ ಚಲಿಸುತಿತ್ತು.

....ಜಟಿಲ ಜಗತ್ತಿನ ಆಮೋದ-ಪ್ರಮೋದಗಳೆಲ್ಲ ಆಯಾ ಪ್ರದೇಶ ಗಳನ್ನೇ ಅವಲಂಬಿಸಿದರೂ ವಾತಾವರಣದ ಮೂಲಕ ಸೀಮಾಂತರದಿಂದ ಸೀಮಾಂತರಕ್ಕೆ ಹಬ್ಬಿ ಸಂಮಿಶ್ರ ಧರ್ಮವನ್ನು ಮೂಡಿಸುತಿದ್ದುವು.

ಆದರೆ.....

*   *   *   *

ಸದ್ಗೃಹಸ್ಥರ ಮನೆಯ ಮಹಡಿಯ ಮೇಲಿನ ಸಣ್ಣ ಕೊಠಡಿಯಲ್ಲಿ ಕೂಡಿದ ತ್ರಿಮೂರ್ತಿಗಳ ತುರ್ತುಸಭೆಯಲ್ಲಿ ಕಮಲ್‌ಕಿರಣ್ ತನ್ನ ಅಭಿಪ್ರಾಯವನ್ನು ದೃಢ ಕಂಠದಿಂದ ಹೊರಹಾಕಿದ,

"ಇಂದು, ನಮ್ಮ ಪ್ರಾಣವನ್ನೇ ಪಣವಾಗಿ ಕಟ್ಟದಿದ್ದಲ್ಲಿ ಆಗುವುದೇ ಇಲ್ಲ. ನಾವು ಮಹಾತ್ಮಾಜೀಯವರ "ಮಾಡಿ-ಮಡಿ" ಎಂಬ ಆದೇಶವನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು."

"ಇಂದಿನ ಪರಿಸ್ಥಿತಿಯಲ್ಲಿ "ಮಾಡು"ವ ಪ್ರಸಂಗ ಒತ್ತಟ್ಟಿಗಿರಲಿ, ಹೊರಗೆ ತಲೆ ಹಾಕಿದರೆ ಸಾಕು, ಗೋಲಿಯ ಬಾಯಿಗೆ ಬೀಳದಿದ್ದರೆ ಪುಣ್ಯ. ಪೋಲೀಸ್ ಬಂದೋಬಸ್ತು ಬಲವಾಗಿರುವಾಗ ಕೈಬಾಂಬು ತೆಗೆದುಕೊಂಡು ಹೋಗುವುದು ಸಾಮಾನ್ಯ ಪ್ರಶ್ನೆಯಲ್ಲ. ಏನು ಮಾಡಬೇಕೋ ಅರ್ಥವಾಗುವುದಿಲ್ಲ." ಅರ್ಜುನಸಿಂಗ್ ಸ್ವಲ್ಪ ಅನುಮಾನ ವ್ಯಕ್ತಪಡಿಸಿದ.

"ಶಕ್ತಿಯಿಂದಾಗದುದನ್ನು ಯುಕ್ತಿಯಿಂದ ಸಾಧಿಸಬೇಕು ! ಹೇಗಾದರೂ ಅವರ ಕಛೇರಿಗೋ, ಬ್ಯಾಂಕಿಗೋ ಒಗೆದು ವಿಧ್ವಂಸಗೊಳಿಸಿದರೆ ಅದಕ್ಕೊಂದು ಬೆಲೆ ಬರುತ್ತೆ."

"ಶಂಕರ ಬಂದೋಪಾಧ್ಯಾಯ ಹೇಳುವುದೂ ಅದನ್ನೇ. ಆದರೆ....."

ಆ ಮಾತನ್ನು ಮುಂದುವರಿಸಗೊಡದಂತೆ ಕಮಲ್‌ಕಿರಣ್ ನಡುವೆ ಬಾಯಿ ಹಾಕಿದ,

"ಈಗ ಅಂಜಿದರೆ ಮುಂದೆ ನಮಗೆ ನರಕದಲ್ಲಿಯೂ ಸ್ಥಾನ ಸಿಗಲಾರದು !"

ಅವನ ಭಾವೋದ್ರೇಕವನ್ನು ಸತೃಷ್ಣನಯನಗಳಿಂದ ನೋಡುತ್ತ ಅರ್ಜುನಸಿಂಗ್ ಒಪ್ಪಿಕೊಂಡ "ಅದು.....ನಿಜ."

"ಬ್ಯಾಂಕಿಗೆ ಕೈಬಾಂಬು ಹಾಕುವುದು ಕಷ್ಟವಲ್ಲ. ರಾತ್ರಿಯ ಕದ್ದಿಂಗಳಿನಲ್ಲಿ ಹೊಂಚು ಹಾಕಿ ಧ್ವಂಸಗೊಳಿಸಬಹುದು."

"ಯಾರ‍್ಯಾರು ಹೋಗೋಣ ?"

"ಹಾ ! ಹಾಗೆ ಒಟ್ಟೊಟ್ಟಾಗಿ ನಿರ್ವಹಿಸುವ ಕೆಲಸವಲ್ಲ ಅದು.

ಯಾರಿಗೂ ತಿಳಿಯದಂತೆ ಹೊಂಚುಹಾಕಿ ಮಾಡಬೇಕಾದ ಕರ್ತವ್ಯ ತಿಳಿಯಿತೇ ?"

"ಹಾಗಿದ್ದರೆ ನಾನೇ ಹೋಗುವೆ. ನನಗೆ ಆ ಚಮತ್ಕಾರ ಗೊತ್ತು!" ಎಂದು ರಾಜಮೋಹನ್ ಚಕ್ರವರ್ತಿ ನುಡಿಯುವುದಕ್ಕೂ ಅಹಮದ್ ಜೇರಿ ಒಳಹೆಜ್ಜೆ ಇಡುವುದಕ್ಕೂ ಸರಿ ಹೋಯಿತು.

"ಬಾರಯ್ಯಾ, ನೀನಿಲ್ಲದೆ ಕಾರ್ಯಕಲಾಪ ಪೂರ್ತಿಗೊಳ್ಳುವಂತಿಲ್ಲ."

"ಏನು....ಹೇಳಿ ?"

"ಇಂದು ಐರಿಷ್ ಬ್ಯಾಂಕಿಗೆ ಕೈಬಾಂಬು ಹಾಕುವ ವಿಚಾರವಿದೆ.... ಅಥವಾ ಬೆಂಕಿ !"

"ಅಷ್ಟು ಮಾಡದಿದ್ದರೆ ಅವರು ಇಲ್ಲಿಂದ ಕಾಲ್ತೆಗೆಯುವುದಿಲ್ಲ."

"ರಾತ್ರಿ ಯಾರು ಹೋಗಬೇಕೆಂಬುದು ಪ್ರಶ್ನೆ."

"ಬ್ಯಾಂಕ್ ಕಾವಲನ್ನು ವಂಚಿಸಿ ಧ್ವಂಸಗೊಳಿಸುವುದೇ ಬುದ್ಧಿವಂತಿಕೆ !"

"ಹೌದು !"

"ಆ ಕೆಲಸ ನನಗೆ ವಹಿಸಿ ಬಿಡಿ !" ಎಂದ ಕಮಲ್ ಕಿರಣ್.

* * * *

ಐರಿಷ್ ಬ್ಯಾಂಕು ಧಗಧಗಾಯಮಾನವಾಗಿ ಉರಿದು ಬೂದಿಯಾದುದು ಎಲ್ಲರಿಗೂ ಎಲ್ಲಿಲ್ಲದ ಆಶ್ಚರ್ಯ. ರಾತ್ರಿಯೆಲ್ಲಾ ಅಗ್ನಿಶಾಮಕ ದಳಗಳು ಶ್ರಮಿಸಿದರೂ ಅದರ ಸುತ್ತಮುತ್ತಣ ಮನೆಗಳಿಗೆ ಅಗ್ನಿಜ್ವಾಲೆ ವ್ಯಾಪಿಸದಂತೆ ತಡೆಯುವುದು ಮಾತ್ರ ಸಾಧ್ಯವಾಯಿತೇ ಹೊರತು ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಪರಿಸರದಲ್ಲಿದ್ದ ಐರೋಪ್ಯ ಅಧಿಕಾರಿಯ ವಾಸಗೃಹ ಸಹ ಭಸ್ಮೀಭೂತವಾಯಿತು. ಅದೃಷ್ಟವಶಾತ್ ಅವನು ಪರರಾಜ್ಯಕ್ಕೆ ಪಯಣಿಸಿದ್ದುದರಿಂದ ಪ್ರಾಣಾಪಾಯದಿಂದ ಪಾರಾದ. ಆ ನಿಗೂಢ ಪ್ರಕರಣದ ಪರಿಣಾಮವಾಗಿ ಜನಸಾಮಾನ್ಯರು ಎಲ್ಲಿ ಕಂಡರಲ್ಲಿ ಗುಂಡು, ಸಿಕ್ಕಿಸಿಕ್ಕಿದಲ್ಲಿ ಲಾಠೀಚಾರ್ಜು ನಡೆದುಹೋಯಿತು. ನಿರಪರಾಧಿಗಳು ದುರಂತಕ್ಕೊಳಗಾದರು. ಎಲ್ಲಿ ನೋಡಿದರೂ ನೆತ್ತರಿನ ಕೋಡಿ ! ಹಾಹಾಕಾರ ! ಆದರೂ ಅಪರಾಧಿಗಳ ಪತ್ತೆ ಹತ್ತಲಿಲ್ಲ. ಪುರಾಣ ಪ್ರಥಿತ

ರಾಕ್ಷಸ ನೀತಿಗಿಂತಲೂ ಕಟುವಾಗಿ ನಡೆಯಹತ್ತಿತು ಐರೋಪ್ಯರ ಕ್ರೌರ್ಯದ ಭಯಾನಕ ಅಂಕ.

ಆದರೂ ಅಷ್ಟಕ್ಕೆ ಭಾರತೀಯರು ಮಣಿದಾರೆ ?

ಆದಾದ ನಾಲ್ಕೈದು ದಿನಗಳೊಳಗಾಗಿ ಮತ್ತೊಂದು ಐರೋಪ್ಯ ಬ್ಯಾಂಕು ಉರಿದು ಭಸ್ಮೀಭೂತವಾಯಿತು ! ಆಗ ಐರೋಪ್ಯರ ಬಿಡದಿಯಲ್ಲಿ ಹಬ್ಬಿದ ಗಲಿಬಿಲಿ ಹೃದಯವನ್ನು ಮುಟ್ಟುವಂತಿತ್ತು. ತಮ್ಮ ಇಡೀ ಕಾಲೋನಿಗೆ ಇರುವೆಯೂ ನುಸುಳದಂತಿದ್ದ ಕಾವಲನ್ನು ಮತ್ತಷ್ಟು ಸುಭದ್ರಪಡಿಸಿದರು. ರಾತ್ರಿಯ ಪಾಳಿಯಲ್ಲಿ ಐರೋಪ್ಯ ಸಿಬ್ಬಂದಿಯ ಕಾವಲು. ಹಗಲಿನ ಪಾಳಿಯಲ್ಲಿ ದೇಶೀಯ ಪೋಲೀಸರಿದ್ದರೂ ಅವರ ಮೇಲೆ ಕಣ್ಣಿಟ್ಟು ಕಾಯುತಿತ್ತು–ಬ್ರಿಟಿಷ್ ಅಧಿಕಾರಶಾಹಿ. ಭಯ-ಭೀತಿ ಕೋಪ ತಾಪ–ದ್ವೇಷಗಳ ಖಡ್ಗದಲುಗಿನ ಮೇಲೆ ಚಿತ್ತ ಹರಿದಾಡುವುದು. ಆತಂಕ–ಆಶಂಕೆಗಳ ಸ್ತರದಲ್ಲಿ ದಿನಗಳು ಉರುಳುತ್ತಿದ್ದುವು.

ಆರ್ಥರ್ ಸ್ವಿನ್‌ಸನ್ ಮೇಜಿನಮೇಲಿದ್ದ ಕಡತದಮೇಲೆ ಕಣ್ಣಾಡಿಸುತ್ತಿರುವಾಗಲೇ ಜನರಲ್ ಡಯರ್ ಆಗಮಿಸಿದ. ಮುಖಭಾವ ಚಿಂತಾಮುದ್ರೆಯಿಂದ ಗಂಭೀರವಾಗಿತ್ತು. ಎದುರಿಗಿದ್ದ ಕುರ್ಚಿಯನ್ನು ಎಳೆದು ಕುಳಿತುಕೊಂಡನಂತರ ಅವನು ತಾಪದಗ್ಧ ಕಂಠದಿಂದ ಅಂದ,

"ನಾವು ರೌಲೆಟ್ ಕಾನೂನನ್ನು ರಚಿಸಿದರೂ ಈ ದುಷ್ಟನಾಯಿಗಳು ನಮ್ಮ ಕಣ್ಣಿಗೆ ಮಣ್ಣೆರಚುವಂತೆ ದುಷ್ಟ ಕಾರ್ಯಾಚರಣೆಯಲ್ಲಿ ತೊಡಗಿರುವುದೇ ವಿಶೇಷ."

"ಆಗ ಗುಪ್ತಚಾರರೇನು ಮಾಡುತಿದ್ದರು ?"

"ಹಂಸರಾಜ್ ಬಹಳ ಚಾಕಚಕ್ಯತೆಯುಳ್ಳವ .....ಆದರೆ ಅವನಿದ್ದುದೇ ಒಂದು ಕಡೆ ಇದು ನಡೆದದ್ದೇ ಒಂದು ಕಡೆ ಎನಿಸುತ್ತೆ."

"ನಮ್ಮ ರಾಬರ್ಟ್‌ಕಾನಲಿ ಯಾವಕಡೆಗಿದ್ದ ? ಅವನ ಸಿಬ್ಬಂದಿ ?"

ಅವನಿದ್ದುದು ಸ್ಥಳದಲ್ಲೇ ! ಬಹುಶಃ ಮಂತ್ರ–ತಂತ್ರ ಬಳಸಿರಬಹುದು. ಅದರಲ್ಲೆಲ್ಲ ಇವರು ಪ್ರಸಿದ್ಧರು !"

"ಅದನ್ನು ನಂಬುವುದಕ್ಕಾದೀತೇ ?"

"ಮತ್ತೆ ಇದಕ್ಕೇನು ಅರ್ಥ ?"

ಆ ಪ್ರಶ್ನೆಗೆ ಉತ್ತರ ಹೊಳೆಯಲಿಲ್ಲವಾದುದರಿಂದ ಅರ್ಥರ್ ಸ್ವಿನ್ ಸನ್ ಸುಮ್ಮನಾದ.

"ಎಲ್ಲರೂ ಬಹಳ ಖೇದಕ್ಕೊಳಗಾಗಿದ್ದಾರೆ. ಹಂಸರಾಜ್........"

ಅವನು ಮಾತನ್ನು ಮುಂದುವರಿಸಗೊಡದಂತೆ ಅರ್ಥರ್ ಸ್ವಿನ್‌ಸನ್ ನಡುವೆ ಬಾಯಿಹಾಕಿದ,

"ಇಷ್ಟರಲ್ಲೇ ಹಂಸರಾಜ್ ಇಲ್ಲಿಗೆ ಬರಬೇಕಾಗಿತ್ತು. ಅವನು ನಿನಗೆ ಸಿಕ್ಕಿದನೇ ?"

"ಇಲ್ಲ...."

"ಜಾನ್‌ಸನ್ ಗುಪ್ತಚಾರಿಕೆ ಹೇಗೆ ನಡೆಯುತ್ತಿದೆ ?"

"ಅವನೇನು ಕಡಿಮೆಯಲ್ಲ ಬಹಳ ದಕ್ಷ....ಆದರೂ ಸಲಸಲಕ್ಕೂ ಸೋಲುತ್ತಿರುವುದೇ ಒಂದು ಸೋಜಿಗ !"

"ಅದೇ ಕಷ್ಟಕ್ಕೆ ಬಂದಿದೆ."

ಇಬ್ಬರೂ ಸ್ವಲ್ಪಹೊತ್ತು ಯೋಚನಾ ಭಂಗಿಯಲ್ಲಿ ಮಾತಿಲ್ಲದೆ ಗಂಭೀರವಾಗಿ ಕುಳಿತುಕೊಂಡರು.

ಕೆಂಪು ವಸ್ತ್ರದ ದವಾಲಿ ಬಾಗಿಲಬಳಿ ಮೆಲ್ಲಗೆ ತಲೆಹಾಕಿ ಅತ್ಯಂತ ವಿನಮ್ರತೆಯಿಂದ ಒಳಬಂದು ಬಿತ್ತರಿಸಿದ,

"ಜಾನ್‌ಸನ್ ಬಂದಿದ್ದಾರೆ!"

"ಬರಹೇಳು."

ಅವನು ಆದೇಶವನ್ನು ಶಿರಸಾವಹಿಸಿ ಹಿಂದಿರುಗಿದ.

ಒಂದೆರಡು ಘಳಿಗೆ ಕಳೆಯುವುದರೊಳಗಾಗಿ ಜಾನ್‌ಸನ್ ಅವರ ಮುಂದೆ ಹಾಜರಾದ. ಮುಖದಮೇಲೆ ಲವಲೇಶವಾದರೂ ಖಳೆ ಇರಲಿಲ್ಲ. ಹಿರಿಯ ಅಧಿಕಾರಿಗಳಿಗೆ ಅಭಿವಂದನೆ ಸಲ್ಲಿಸಿ ನಸು ತಲೆಬಾಗಿ ನಿಂತ.

"ನೀನೊಬ್ಬ ಪ್ರಯೋಜನಕ್ಕೆ ಬಾರದವ ! ಊರೆಲ್ಲಾ ಇಷ್ಟೊಂದು ಗಲಾಟೆ-ದೊಂಬಿಗಳು ನಡೆಯುತ್ತಿವೆ. ಅದರ ಪೂರ್ವಭಾವಿಯಾಗಿ ಈ ದುಷ್ಟ ಮಂದಿ ಗುಪ್ತಸಭೆ ನಡೆಸಿದ್ದಾರೆ. ಒಂದಾದರೂ ನಮಗೆ ಕ್ಲುಪ್ತ ಕಾಲದ ವರದಿ ಬರಲಿಲ್ಲ. ವ್ಯರ್ಥ ! ಲಜ್ಜೆಯಿಲ್ಲದೆ ಬಂದು ಮುಖ ತೋರಿಸುತಿದ್ದಿ !" ಎಂದ ಆರ್ಥರ್ ಸ್ವಿನ್‌ಸನ್, ಕೆಮ್ಮಿ ಗಂಟಲನ್ನು ಸರಿ

ಪಡಿಸಿಕೊಂಡು ಪುನಃ ಮನಸ್ಸಿನ ಕಂಠಶೋಷಣೆ ಮಾಡಿದ. ಒಡಲುರಿಯೆಲ್ಲಾ ಬಿಡಿಬಿಡಿಯಾಗಿ, ಕಟುನುಡಿಯಾಗಿ ರೋಷದ ಕಿಡಿಯನ್ನು ಕಾರಿದುವು. ಸಿಟ್ಟು ಏರಿದಷ್ಟೂ ಮುಖಬಿಂಬ ಕೆಂಪು ತಳೆಯುತಿತ್ತು. ಕಣ್ಣುಗಳು ಜ್ವಲಂತ ಉಲ್ಕೆಗಳಂತೆ ಜ್ವಲಿಸುತಿದ್ದುವು.

ಜಾನ್‌ಸನ್ ಮೂರ್ತಿಮತ್ತಾಗಿ ನಿಂತೇ ಇದ್ದ. ಮನಃಪ್ರಾಣಗಳು ಕಸಿವಿಸಿಯ ಕೋಟಿಯಾಗಿದ್ದುವು. ಆತ ಒದರುವುದನ್ನು ಸಂಪೂರ್ಣ ನಿಲ್ಲಿಸಿದ ನಂತರ ಅತ್ಯಂತ ತಗ್ಗಿದ ದನಿಯಲ್ಲಿ ವಿಷಯವನ್ನು ಮುಂದಿಟ್ಟ.

"ಇಂದು ಡಾ|| ಸತ್ಯಪಾಲರಾಯ್ ಡಾ|| ಸೈಫುದ್ದೀನ್ ಕಿಚಲೂರವರು ಶಂಕರ ಬಂದೋಪಾಧ್ಯಾಯರ ಮನೆಯಲ್ಲಿ ಗುಪ್ತಸಭೆ ನಡೆಸಲಿದ್ದಾರೆ ! ಸರಕಾರದ ಕಚೇರಿಗೆ ಬೆಂಕಿ ಹಚ್ಚುವ ಕ್ರಮ ಅದರಲ್ಲಿ ರೂಪಿತವಾಗಲಿದೆ!"

"ಆ್ಞ.....! ಹೌದೇ ?"

"ಹೌದು.....ಸರ್ !"

ಆರ್ಥರ್ ಸ್ವಿನ್‌ಸನ್ ಮೂರ್ತಿಮತ್ತಾಗಿ ಕುಳಿತ. ಮುಖಭಾವ ಗಾಢಚಿಂತೆಯಿಂದ ಆವರಿಸಿತು.

* * * *

ಮಹಾತ್ಮಾ ಗಾಂಧೀಜಿಯವರು ೨೪ ಗಂಟೆಗಳ ಉಪವಾಸ ಮತ್ತು ಸಂಪೂರ್ಣ ಹರತಾಳಗಳಿಗೆ ಕರೆ ಕೊಟ್ಟರು. ಆ ಪರಿತಾಪದಗ್ಧ ಕರೆಗೆ ರಾಷ್ಟ್ರಕ್ಕೆ ರಾಷ್ಟ್ರವೇ ಓಗೊಟ್ಟಿತ್ತು. ಅದುಕಾರಣ ಪಂಜಾಬಿನ ಆದ್ಯಂತ ಹರತಾಳ ಸಾಂಗೋಪಾಂಗವಾಗಿ ನಡೆದು ಜನಕೋಟಿಯ ಮನದಲ್ಲಿ ಏನೋ ಒಂದು ಬಗೆಯ ಸಮಾಧಾನ ಕೆಸರಿನ ಕಮಲದಂತೆ ಉದ್ಭೂತವಾಯಿತು.

ಅಮೃತಸರ ನಗರ ಏಕಭಾವನೆಯಿಂದ ಹರತಾಳವನ್ನು ಆಚರಿಸಿತು. ಅಂಗಡಿ ಬೀದಿಗಳು ಸ್ಮಶಾನಶಾಂತಿಯ ವೈಭವದಲ್ಲಿ ಮೆರೆದುವು. ವಾಸಗೃಹಗಳು ತಲೆಬಾಗಿಲು ಮುಚ್ಚಿಕೊಂಡು ಮೂಕ ಶೋಕವ್ಯಾಕುಲವನ್ನು ಅವಿಚ್ಛಿನ್ನವಾಗಿ ಆಚರಿಸಿದುವು. ಜನತೆಯ ಒಗಟ್ಟು ಆ ದೃಢಭಾವ, ಆ ಸ್ವಾತಂತ್ರ್ಯದಾಹ ಐರೋಪ್ಯರ ಕಿಚ್ಚಿಗೆ ತುಪ್ಪವನ್ನೆರೆಯಿತು. ಮದ್ಯ-

ಗುಂಡುಗಳ ಕೋಟಿ ಸವೆಯುವವರೆಗೂ ಅದ್ಭುತ ಶಕ್ತಿ-ಸಾಹಸಗಳ ಪ್ರದರ್ಶನಕ್ಕೆ ಅವರು ಒಮ್ಮನದಿಂದ ಅಣಿಯಾಗತೊಡಗಿದರು.

ಶಂಕರ ಬಂದೋಪಾಧ್ಯಾಯರ ಮನೆಯಲ್ಲಿ ನಡೆಯುತಿದ್ದ ಗುಪ್ತ ಸಭೆಯಮೇಲೆ ಧಾಳಿನಡೆಸಿ-ಡಾ|| ಸೈಪುದ್ದೀನ್ ಕಿಚಲೂ, ಡಾ|| ಸತ್ಯಪಾಲ ರಾಯ್ ಮತ್ತು ಶಂಕರ ಬಂದೋಪಾಧ್ಯಾಯರನ್ನು ಬಂಧಿಸಿ ಅಮಾನುಷ ರೀತಿಯಲ್ಲಿ ಸೆಳೆದೊಯ್ದು ಗುಪ್ತಸ್ಥಳಕ್ಕೆ ರವಾನಿಸಲಾಯಿತು. ಆ ಅನಿರೀಕ್ಷಿತ ಬಂಧನ ಜನ ಸಾಮಾನ್ಯರನ್ನು ಡಂಗುಪಡಿಸಿದುದರಿಂದ ಐರೋಪ್ಯರ ಕಚೇರಿಯ ಬಳಿಗೆ ಧಾವಿಸಿ ಜನನಾಯಕರ ಬಿಡುಗಡೆಯ ಘೋಷಣೆಗಳನ್ನು ಒಕ್ಕೊರಲಿನಿಂದ ಘೋಷಿಸತೊಡಗಿದರು.

"ನಮ್ಮ ನಾಯಕರನ್ನು ಬಿಡುಗಡೆ ಮಾಡಿ !"

"ವಿನಾಕಾರಣ ಬಂಧಿಸಿದ್ದೇಕೆ ?"

"ಈಗಲೇ ಬಿಡುಗಡೆ ಮಾಡಿ!"

"ದೇಶದ ಶಾಂತಿಯನ್ನು ಕಳೆಯಬೇಡಿ !"

"ಮಾನವೀಯತೆಯಿಂದ ವರ್ತಿಸುವುದನ್ನು ಕಲಿಯಿರಿ. ಕ್ರಿಸ್ತ ಧರ್ಮಕ್ಕೆ ಮಸಿ ಬಳಿಯಬೇಡಿರಿ !"

ಕಚೇರಿಯಲ್ಲಿ ಕಾರ್ಯನಿಮಗ್ನರಾಗಿದ್ದ ಐರೋಪ್ಯ ಅಧಿಕಾರಿಗಳು ಆ ಘೋಷಣೆ- ಆ ಬೇಡಿಕೆಗಳಿಗೆ ಏನೆಂದು ಉತ್ತರಿಸಿದರು ಗೊತ್ತೇ ? ಫೈಲುಗಳನ್ನೆಲ್ಲ ಅಲ್ಲಲ್ಲೆ ಬಿಟ್ಟು ಕೋವಿಗಳಿಗೆ ತೋಟಗಳನ್ನು ಅಳವಡಿಸಿದರು ! ಕಚೇರಿಯ ಹಿಂಭಾಗವೆಲ್ಲಾ ಐರೋಪ್ಯ ಅಧಿಕಾರಿಗಳ ನಿವಾಸಸ್ಥಾನ..... ಈ ಜನರನ್ನು ಹೀಗೆಯೇ ಮುಂದುವರಿಯಬಿಟ್ಟರೆ ಇನ್ನಾವ ಗಂಡಾತರವೋ.... ಎಲ್ಲರೂ ಒಂದೇಬಾರಿಗೆ ಒಳಭಾಗಕ್ಕೆ ನುಗ್ಗಿದರೆ ತಮ್ಮ ಹುಟ್ಟು ಅಳಿದಂತೆಯೇ ! ಎಂಬ ಸ್ವಕಪೋಲಕಲ್ಪಿತ ಭಯ ಮನವನ್ನು ಆವರಿಸಿತು. ಅಧಿಕಾರಿಗಳು ಹುಚ್ಚೆದ್ದು ಜನರತ್ತ ಕೋವಿಗಳನ್ನು ತಿರುಗಿಸಿದರು ! ಆಫೀಸಿನ ಒಳಭಾಗದಿಂದ ನಿರಪರಾಧಿಗಳೂ ನಿರಾಯುಧರೂ ಆದ ಬಡ ಮಂದಿಯ ಮೇಲೆ ಗುಂಡುಗಳು ಭಯಂಕರ ಸದ್ದಿನೊಡನೆ ಹಾರತೊಡಗಿದುವು- ತಮ್ಮ ಅಂತ್ಯಗಾಲದ ಚಿನ್ಹೆಯಂತೆ ! ಗುಂಡು ತಾಗಿದ ಜನ ಕಣ್ಣೀರು ಚೆಲ್ಲಿ ಹಾಹಾಕಾರದೊಡನೆ ಅಲ್ಲಲ್ಲೇ ಕುಸಿದರು. ಬಿಡುಗಡೆಯ ಬೇಡಿಕೆಯನ್ನು

ಮುಂದಿಟ್ಟವರು ಗುಂಡಿನ ಉತ್ತರವನ್ನು ಪಡೆದುದು ವಿಶ್ವದಾಖಲೆಯಾದರೂ ಐರೋಪ್ಯರು ಗೆದ್ದ ಕೆಚ್ಚಿನಿಂದ ನಗುವಿನ ಲಹರಿಯನ್ನು ಹರಿಸಿದರು !

ಮಧ್ಯಾಹ್ನಕಾಲೀನ ಸುಡುಬಿಸಿಲಿನ ಝಳದಲ್ಲಿ ಬಿದ್ದಿದ್ದ ಹೆಣಗಳೂ ಗಾಯಾಳುಗಳೂ ಸಹಾಯಕರಿಲ್ಲದೆ ಅಲ್ಲಲ್ಲೇ ಒಣಗಿ ಗರಿಗರಿಯಾಗುತಿದ್ದ ಅತ್ಯಂತ ದಯನೀಯವೂ ಕರುಣಾಜನಕವೂ ಆದ ಘೋರ ದೃಶ್ಯದಿಂದ ಅಶ್ರುಪೂರ್ಣಲೋಚನೆಯಾದಳು-ಪ್ರಕೃತಿ.

ಬಂಧು ಬಳಗದವರಿಗೆ ಅದಾವ ಮಿಂಚಿನಲ್ಲಿ ಸುದ್ದಿ ಮುಟ್ಟಿತೋ. ದುಃಖಾರ್ತರಾಗಿ ಧಾವಿಸಿ ಬಂದರೆ ಎದೆಯೊಡೆಯುವಂತಹ ಭೀಕರ ಸನ್ನಿವೇಶ! ತಮ್ಮ ತಮ್ಮವರನ್ನು ಅರಿಸಿಕೊಳ್ಳುವ ಆತುರ....ಬದುಕಿದ್ದಾರೆಯೋ ಎಂಬ ಕಾತರ....ದುಃಖ-ದುಗುಡಗಳ ಗೋಳು ದೇವರಿಗೆ ವೇದ್ಯ. ಆ ಸಂಕಟ ಸಮಯದಲ್ಲಿ ವಾಹನಸೌಕರ್ಯವಿಲ್ಲದೆ ಗಾಯಾಳುಗಳನ್ನು ಸಾಗಿಸುವುದು ಹೇಗೆಂದು ಪರಿತಪಿಸುತ್ತಿದ್ದ ಬಂಧು ಮಿತ್ರರಿಗೆ ಸಹಾಯ ಹಸ್ತ ನೀಡಲು ಮುಂದಾದವರು ದೀನದರಿದ್ರರಾದ ಕೂಲಿಗಳು ! ಗುಂಡಿನ ಸದ್ದು ಕೇಳಿದೊಡನೆಯೇ ತಮ್ಮ ತಮ್ಮ ಕೈಗಾಡಿಗಳನ್ನು ಗಡಬಡ ಸದ್ದಿನೊಡನೆ ದೂಡಿಕೊಂಡು ನಾಲ್ಕಾರು ದಿಕ್ಕುಗಳಿಂದ ಧಾವಿಸಿಬಂದ ರೀತಿ ಗಮನೀಯವಾದುದು. ಬಿಸಿಲಬೇಗೆಯಲ್ಲಿ ಬೆವರಿಳಿಸಿ ಏದುಸಿರು ಬಿಡುತ್ತ ಒಂದೊಂದು ಗಾಡಿಗೆ ಇಬ್ಬಿಬ್ಬರಂತೆ ಗಾಯಾಳುಗಳನ್ನು ಎತ್ತಿ ಮಲಗಿಸಿಕೊಂಡರು-ಕೂಡಲು ಶಕ್ತರಾದರೆ ಮೂರು ನಾಲ್ಕು ಮಂದಿ ! ಅಂತೂ ಹತ್ತಾರು ಕೈಗಾಡಿಗಳು ಡಾ|| ಕಿದಾರನಾಥರ ಕಡೆಗೆ ಧಾವಿಸಿದುವು. ಬಂಧುಜನ ಕಂಬನಿ ಸುರಿಸುತ್ತ ಹಿಂಬಾಲಿಸಿದರು. ಕಟುಕರಿಗೂ ಕರುಳು ಹರಿಯುವಂತಹ ದಾರುಣದೃಶ್ಯ ಎನ್ನುವುದರಲ್ಲಿ ಅತಿಶಯವೇನೂ ಇಲ್ಲ.

ವಿಕ್ಟೋರಿಯಾ ಸರ್ಕಲ್‌ದಾಟಿ ರಾಜಮಾರ್ಗಕ್ಕೆ ಕೈಗಾಡಿಗಳು ಪ್ರವೇಶಿಸಿದಾಗ ಇನ್ನೊಂದು ಪ್ರಕರಣ ಸಂಭವಿಸಿತು. ರಸ್ತೆಯ ಪಕ್ಕದಲ್ಲಿದ್ದ ಬೃಹದ್ ಕಟ್ಟಡದ ಜಗಲಿಯಲ್ಲಿ ನಿಂತಿದ್ದ ಡಾ|| ಮಿಸ್ ಈಡ್‌ಸನ್ ತನ್ನ ಸಹಪಾಠಿಯಾದ ಐರೋಪ್ಯ ನರ್ಸಳೊಂದಿಗೆ ಆ ದೃಶ್ಯದಕಡೆ ದೃಷ್ಟಿಯನ್ನು ಹಾಯಿಸಿ ಫಕಫಕನೆ ನಗತೊಡಗಿದಳು ! ಸರಸ ಸಂಭಾಷಣೆ ನಡೆಸಿ ಇಬ್ಬರೂ

ಕೇಕೆ ಹಾಕಿ ನಕ್ಕರು ! ಊದಾವರ್ಣದ ಕಟ್ಟಡವು ಮರುದನಿಗೊಡುವಂತೆ ನಗುವಿನ ಸದ್ದು ಮತ್ತೆ ಮತ್ತೆ ಮೊಳಗಿತು !

ಆಗ, ದೀನದುಃಖಿಗಳಿಗಾದ ಸಂಕಟ ಹೇಳಲಾಸಲ್ಲ, ಪರಿತಾಪ ತಪ್ತ ಬುದ್ಧಿ ಹಾದಿಯಂಚಿನ ಸಗಣಿಯನ್ನು ಅವರತ್ತ ತೂರಿಸಿತು ! ಒಡನೆ ಅವರಿಬ್ಬರೂ ಅಲ್ಲಿಂದ ಒಳಗಡೆ ಓಡಿ ಕದಮುಚ್ಚಿಕೊಂಡು ಕಿಟಕಿಯಮೂಲಕ ಅಟ್ಟಹಾಸದಿಂದ ನಕ್ಕು-ಹಂಗಿಸಿ ತಮ್ಮ ಸೇಡು ತೀರಿಸಿಕೊಂಡರು !

ಅದು ಅಷ್ಟಕ್ಕೆ ಮುಗಿಯಲಿಲ್ಲ ; ಇನ್ನೊಂದು ಪ್ರಕರಣಕ್ಕೆ ನಾಂದಿ ಹಾಡಿತು !

ಮರುದಿನ ಬೆಳಿಗ್ಗೆ ಒಂಭತ್ತರ ಸಮಯ.

ಡಾ|| ಮಿಸ್ ಈಡ್‌ಸನ್ ಅದೇ ನರ್ಸಳೊಂದಿಗೆ ರಾಜಮಾರ್ಗ ಹಿಡಿದು ಹೊರಟಿದ್ದಾಳೆ. ಹಿಂದಿನದಿನ ಗಾಯಾಳುಗಳನ್ನು ಕೈಗಾಡಿಗಳಲ್ಲಿ ಸಾಗಿಸಿದ ರಾಜಮಾರ್ಗವೂ ಅದೇ. ಅಲ್ಲಿಯ ಸ್ಥಳವಂದಿಗರಿಗೆ ಅವರಿಬ್ಬರನ್ನೂ ಅಲ್ಲಿ ನೋಡುತ್ತಲೂ ಹೊಟ್ಟೆಗೆ ಕಿಚ್ಚೂಡಿಸಿದಂತಾಗಿ ಆ ಕೂಡಲೇ ತುಳಿದು ಹೊಸಗಿಬಿಡುವಷ್ಟು ಉದ್ರೇಕದಿಂದ ಅಡ್ಡಗಟ್ಟಿದರು. ಇನ್ನೇನು ಆಕ್ಷಣವೇ ದುರಂತ ನಡೆದು ಹೋಗಬೇಕು ! ಅಷ್ಟರಲ್ಲಿ ಅದೃಷ್ಟವಶಾತ್ ಕೆಲವು ಮಂದಿ ದಯಾವಂತರಾದ ಸ್ಥಳೀಯರು ಅವರ ಸಹಾಯಕ್ಕೆ ಧಾವಿಸಿ ಬಂದು ಉದ್ರೇಕಿತರನ್ನು ಅಲ್ಲಿಂದಲ್ಲೇ ತಡೆಗಟ್ಟಿ-ಹಿಮ್ಮೆಟ್ಟಿಸಿ, ಡಾಕ್ಟರ ರೋಮವೂ ನಲುಗದಂತೆ ಬೆಂಗಾವಲಿದ್ದು ಸುರಕ್ಷಿತವಾಗಿ ಮನೆಯವರೆಗೆ ತಲುಪುವಷ್ಟು ಉದಾರತೆಯನ್ನು ತುಂಬುಹೃದಯದಿಂದ ಬಸಿದರು. ಆ ಸಂದರ್ಭದಲ್ಲಿ ತಾವು ಯಾರನ್ನು ನೋಡಿ ಹಂಗಿಸಿ ನಗುವಂತಹ ಹೇಯ ಕೃತ್ಯವೆಸಗಿದ್ದರೋ ಅವರ ಮುಕ್ತಹಸ್ತದಿಂದಲೇ ಸಹಾಯವನ್ನು ಪಡೆದುಕೊಂಡಾಗ ನಸು ಲಜ್ಜಿತರಾದರೂ ಒಡಲುರಿಯು ಕಿಂಚಿತ್ತಾದರೂ ನಂದಿತೇ? ಹಾ....! ನಂದುವುದಿರಲಿ, ಸರಕಾರಕ್ಕೆ ಕಳುಹಿಸಿದ ತಮ್ಮ ವರದಿಗೆ ಹೊಸ ಬಣ್ಣ ಕಟ್ಟಿ ಮತ್ತೊಂದು ಮಹಾ ಪ್ರಕರಣಕ್ಕೆ ಬೀಜ ಬಿತ್ತುವುದರಲ್ಲಿ ಇನಿತೂ ಹೇಸಲಿಲ್ಲ, ಅವರು.

* * * *

ಅಧಿಕಾರ ವಲಯದಲ್ಲಿ ಪುನಃ ಗಲಿಬಿಲಿ-ಬಿಸಿಬಿಸಿ ವಾತಾವರಣ.

ಆರ್ಥರ್ ಸ್ವಿನ್‌ಸನ್ ಆ ಪ್ರಸಂಗದ ಪರಿಶೀಲನೆಗೆ ಆಜ್ಞಾಪಿಸಿದ. ಜನರಲ್ ಡಯರ್ ನೇತೃತ್ವದಲ್ಲಿ ವಿಚಾರಣೆ ಆರಂಭವಾದಾಗಲೇ ಜಲಂಧರದಿಂದ ಸೇನೆಗಳು ಆಗಮಿಸಿದುವು. ಸೇನಾ ಚಟುವಟಿಕೆ ಒಮ್ಮತದಿಂದ ಮುಂದುವರಿಯಿತು. ವಿಚಾರಣೆ ಏಕಮುಖವಾದುದರಿಂದ ಪೂರ್ವಭಾವೀ ಸಿದ್ಧತೆಗೆ ಹೆಚ್ಚು ಸಮಯ ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ. ಸಮಗ್ರ ವಿಚಾರಣೆಯ ನಾಟಕದಲ್ಲಿ ಗಾಯಾಳುಗಳ ಕುಟುಂಬಿಗರೂ ಗತಿಸಿದವರ ಕುಟುಂಬಿಗರೂ ಆದ ದೀನದಃಖಿಗಳನೇಕರು ನ್ಯಾಯಾಲದ‌ಯದ ಕಟಕಟೆಯನ್ನೇರಿ ಕಾನೂನು ಕಟ್ಟಳೆಗೆ ಆಬದ್ಧರಾದರು. ಏಕತಾನದ ಮುನ್ನಡೆಯಲ್ಲಿ ವಿಚಾರಣೆಯು ಅವ್ಯಾಹತವಾಗಿ ನಡೆಯಿತು. ಡಾ|| ಮಿಸ್ ಈಡ್‌ಸನ್ ಮತ್ತು ನರ್ಸ್ ಅಪರಾಧಿಗಳೆನಿಸಿದವರೆಲ್ಲರನ್ನು ನ್ಯಾಯಾಲಯದಲ್ಲಿ ಗುರುತಿಸಿ, "ತಮಗೆ ಅವಮಾನ ಮಾಡಿದವರು ಇವರೇ" ಎಂದು ಗಂಟಾಘೋಷಣೆ ಮಾಡಿ ವಿಚಾರಣೆಗೆ ಭದ್ರ ಬುನಾದಿ ಹಾಕಿದರು. ಮಿಲಿಟರಿ ನ್ಯಾಯಾಲಯದಲ್ಲಿ ಘೋರ ಅಪರಾಧ ಸಾಬೀತಾಗಲು ಒಮ್ಮತದಿಂದ ತೀರ್ಪು ಹೊರಬಿತ್ತು, ಅಪರಾಧಿಗಳಿಗೆ "ಚಟುಕಿನೇಟು" ಕೊಡಬೇಕು ; ಶಿಕ್ಷೆ ಬಹಿರಂಗವಾಗಿ ನಡೆಸತಕ್ಕದು ; ಎಂದು !

ಒಡನೆ ಅವರೆಲ್ಲರನ್ನೂ ಅಲ್ಲಿಂದ ಕೈಕೋಳಗಳ ಸಹಿತ ಎಳೆದುಕೊಂಡು ಹೋಗಿ ಮರಗಳಿಗೆ ಅಮಾನುಷವಾಗಿ ಕಟ್ಟಿ, ಬಟ್ಟೆಗಳಚಿ ಚಟುಕಿನೇಟುಗಳಿಗೆ ಗುರಿಪಡಿಸಲಾಯಿತು. ಅತ್ಯಂತ ನಿರ್ದಯ ರೀತಿಯಲ್ಲಿ ನಡೆದ ಕಾನೂನುಬದ್ಧ ಬಹಿರಂಗ ಶಿಕ್ಷೆಯಿಂದ ಬಂದಿಗಳ ಮೈಚರ್ಮ ಹರಿದು, ನೆತ್ತರು ಧಾರಾಕಾರವಾಗಿ ಚಿಮ್ಮಿತು. ಕೂಗು–ಚೀತ್ಕಾರಗಳು ಗಗನ ಮುಟ್ಟಿದುವು. ಆಗ ಆ ಪ್ರದೇಶಕ್ಕೆ ಜನಜಂಗುಳಿ ನುಗ್ಗದಂತೆ ಮಿಲಿಟರಿ ಪಡೆಗಳು ಸುತ್ತ ಭದ್ರಕಾವಲು ಕಾದಿದ್ದುವು.

ಆ ಚಿತ್ರಹಿಂಸೆಯ ಸಂಕಟದಗೋಳು ಲೇಖನಿಗೆ ಉಲ್ಲೇಖನಾತೀತವಾದರೂ ಬ್ರಿಟಿಷ್ ಅಧಿಕಾರಶಾಹಿಯ ಕಿವಿಗೆ ಸಂಗೀತ ಹಾಡಿದಷ್ಟು ಹಿತಕರ ! ಸ್ವರ್ಗೋಪಮ ಆನಂದ !

ಮೇಲಾಗಿ, –

ರೌಲೆಟ್ ಕಾನೂನು ಈ ಪ್ರಕರಣಕ್ಕೆ ಸೃಜಿಸಿದ ಇನ್ನೊಂದು ನಿಬಂಧನೆ

ಏನೆಂದರೆ ಡಾ|| ಮಿಸ್ ಈಡ್‌ಸನ್ ಅಪಮಾನಗೊಂಡಂತಹ ರಾಜಮಾರ್ಗ ದಲ್ಲಿ ಭಾರತೀಯರು ಹಾದುಹೋಗುವಾಗ ಹೊಟ್ಟೆ ಹೊಸೆದು ಹರಿದಾಡ ಬೇಕು ; ನಡೆಯಬಾರದು ಎಂಬುದು ! ಆ ಸುತ್ತಮುತ್ತಲೂ ಪ್ರತಿಷ್ಠಿತ ಮಂದಿಗೆ ರಾಜಮಾರ್ಗವನ್ನುಳಿದು ಬೇರೆ ಗತಿಯಿರಲಿಲ್ಲ. ಆಗ ಅದರಿಂದ ಉದ್ಭವಿಸಿದ ಸಂಕಷ್ಟ ವರ್ಣನಾತೀತ ! ಜನ ರಸ್ತೆಗಿಳಿದೊಡನೆ ಬಂದೂಕಿನ ತುದಿಗಳು ಕಟ್ಟಾಜ್ಞೆಯನ್ನು ಪರಿಪಾಲಿಸಲು ಮುಂದಾಗುತಿದ್ದುದರಿಂದ ಸ್ಥಳೀಯರ ಸ್ಥಿತಿಗತಿ ನರಕ ಸದೃಶ. ರಸ್ತೆ ದಾಟಬೇಕೆಂದರೆ ಹೊಟ್ಟೆ ಹೊಸೆಯಲೇಬೇಕು ; ಇಲ್ಲವೇ ಸಾವು ಕಟ್ಟಿಟ್ಟಬುತ್ತಿ.

ಐರೋಪ್ಯರಿಗೆ ಇಷ್ಟೆಲ್ಲ ಕ್ರೌರ್ಯ ಪ್ರದರ್ಶನದನಂತರವೂ ಸಮಾಧಾನ ಮೂಡಲಿಲ್ಲ. ತಮ್ಮ ಕಡೆ ಕೊಲೆಗೀಡಾದ ಪ್ರತಿಯೊಂದು ಜೀವಕ್ಕೂ ಹತ್ತರಷ್ಟು, ನೂರರಷ್ಟು ಜೀವಗಳನ್ನು ಬಲಿ ತೆಗೆದುಕೊಳ್ಳುವ ಹುಮ್ಮಸ್ಸಿ ನಲ್ಲಿ ಮದ್ದು-ಗುಂಡುಗಳ ಶೇಖರಣೆ ಮಾಡತೊಡಗಿದರು. ಎಲ್ಲಿ ಯಾವ ಮೂಲೆಯಲ್ಲಿ ತಮ್ಮ ವಿರೋಧಾತ್ಮಕ ಸುದ್ದಿ ಬರುತಿತ್ತೋ, ಅವಮಾನದ ಚರಿತ್ರೆ ಬಯಲಿಗೆ ಬೀಳುತಿತ್ತೋ ಅವೆಲ್ಲಾ ಒಂದಕ್ಕೆ ಹತ್ತಾಗಿ ಕೇಡಿನ ಪಟ್ಟಿಯಲ್ಲಿ-ನಷ್ಟದ ಪಟ್ಟಿಯಲ್ಲಿ ಕೂಡಿ, ಎಲ್ಲೆಂದರಲ್ಲಿ ಯಾವಾಗೆಂದರೆ ಆವಾಗ ಕೋವಿಗಳು, ಲಾಠಿಗಳು ಸಮರೋಪಮವಾಗಿ ಸಿದ್ಧವಾಗುತ್ತಿ ದ್ದುವು.

ಆಳರಸರ ಆದೇಶವು ನರಮೇಧಯಜ್ಞಕ್ಕೆ ದೇಶೋವಿಶಾಲವಾದ ಕುಂಡವನ್ನು ನಿರ್ಮಿಸುತ್ತಿರುವಾಗಲೂ ಭಾರತವರ್ಷ ಘೋರ ವ್ಯಥಾವ್ಯಾ ಕುಲವನ್ನು ಸ್ಮಶಾನ ಶಾಂತಿಯ ವೈಭವದಲ್ಲಿ ಒಡಲತುಂಬಿ ಭರಿಸುತಿದ್ದುದೇ ವಿಶೇಷ.

ಆದರೂ, ಸಾಲದೋ ಎಂಬಂತೆ ಡಾ|| ಮಿಸ್ ಈಡ್‌ಸನ್ ಪ್ರಕ ರಣಕ್ಕೆ ಸಂಬಂಧಿಸಿದ ರಾಜಮಾರ್ಗವನ್ನು ಬಾಂಬು ಹಾಕಿ ಛಿದ್ರಗೊಳಿಸಿ, ಆ ಪ್ರದೇಶದ ಜನ ವಸತಿಯನ್ನು ವಿಧ್ವಂಸಗೊಳಿಸಿ ನಿರ್ವಸಿತರನ್ನಾಗಿ, ನಿಸ್ಸ ಹಾಯಕರನ್ನಾಗಿ ಮಾಡಬೇಕೆಂಬ ಉತ್ಕಟ ಆಕಾಂಕ್ಷೆ ಐರೋಪ್ಯ ಅಧಿ ಕಾರಿಗಳಿಗೆ.

ಅದೇ ನೇರಕ್ಕೆ ಸೀಖರ ಸ್ವರ್ಣಮಂದಿರದ ಯಾವುದೇ ಭಾಗದ ಮೇಲೆ

ಬಾಂಬು ಬಿದ್ದರೆ, ಇಡೀ ಪಂಜಾಬ್ ಭಯಂಕರ ಹಗೆಯಾಗಿ ನಿಂತು ಐರೋಪ್ಯರನ್ನು ನಿರ್ನಾಮಗೊಳಿಸುವುದು ಖಂಡಿತವೆಂದು ಜನನಾಯಕರ ಒಕ್ಕೊರಲಿನ ಘೋಷಣೆ!

ಆ ಪ್ರಸ್ಪಂದ-ವಿಸ್ಪಂದಗಳ ಅದ್ಭುತ ಕೋಟೆಯನ್ನು ದಾಟಿ ಐರೋಪ್ಯರು ಹೂಡಿದ ಸಂಚೇನು ?

ಅವರು ಕೂಡಿದ ಗುಪ್ತ ಸಭೆಯಲ್ಲಿ ಮೂಡಿದ ಠರಾವೇನು ? ?

ಸಹಾನುಭೂತಿಯ ಉಸಿರು ಅಲ್ಲಿ ಕಿಂಚಿತ್ತಾದರೂ ಹರಿದಾಡಿತೇ ???

ಹಾ.....!

* * * *

ಆರ್ಥರ್ ಸ್ವಿನ್‌ಸನ್, ಜಾರ್ಜ್‌ಮೆಕ್ರ್ಯಾ, ಈಸ್ಟ್‌ಮನ್, ಬರ್ನ್‌F ಸ್ಪೈಲ್ಸ್, ಗ್ರಿಫಿತ್ಸ್ ಮುಂತಾದವರು ಕೂಡಿದ ಗುಪ್ತಸಭೆ ಗವರ್ನರ್ ಭವನದಮಹಡಿಯ ಮೇಲೆ 'ಗ್ರೀನ್ ರೂಂ' ನಲ್ಲಿ ನಡೆಯುತಿತ್ತು.

"ಈಗೀಗ ಕಾಡು ಜನರ ಉಪಟಳ ತಡೆಯುವಂತೆಯೇ ಇಲ್ಲ. ಹೇಗಾದರೂ ಇವರಿಗೆ ಸಾಮೂಹಿಕ ಶಿಕ್ಷೆ ನೀಡದಿದ್ದರೆ ಬುದ್ಧಿ ಕಲಿಸುವುದು ಕಷ್ಟ!"

"ಸಾಮೂಹಿಕ ಶಿಕ್ಷೆ ನೀಡುವುದು ಹೇಗೆ ?"

"ಯಾವುದಾದರೊಂದು ಉಪಾಯ ಹೂಡಿ ಎಲ್ಲರನ್ನೂ ಬಲೆಯೊಳಗೆ ಸಿಕ್ಕಿಸಿಕೊಳ್ಳಬೇಕು. ಅಷ್ಟಲ್ಲದಿದ್ದರೆ ಸಮಗ್ರ ಶಿಕ್ಷೆ ಕೊಡಲಾಗುವುದಿಲ್ಲ"

"ಹೇಗೆ ಮಾಡೋಣ ? ಅದಕ್ಕೊಂದು ಕಾರಣ ಕಲ್ಪಿಸಬೇಕಲ್ಲ ?"

"ಎಲ್ಲೂ ಸಭೆ-ಮೆರವಣಿಗೆ ಮುಂತಾದವು ನಡೆಯಕೂಡದೆಂದು ಪ್ರಕಟಿಸಿ ಗಳಲನೇ ಸೆಕ್ಷ್ಯ ಜಾರಿಗೆ ತರುವುದು ಲೇಸು."

"ಅದರಿಂದೇನಾದೀತು ? ಈ ಧೂರ್ತರು ಬಿಡಿ ಬಿಡಿಯಾಗಿಯೇ ರಂಗಭೂಮಿಗೆ ಇಳಿಯುತ್ತಾರೆ. ಈಗಾಗಲೇ ಎಷ್ಟು ಬಾರಿ ಗಳಲನೇ ಸೆಕ್ಷ್ಯ ಜಾರಿಗೆ ತರಲಿಲ್ಲ ? ಇದೆಲ್ಲಾ ಇವರಿಗೊಂದು ಲೆಖ್ಖವೆ ? ಒಂದಕ್ಕೆ ಹತ್ತಾಗಿ ಹುಟ್ಟಿಕೊಳ್ಳುತ್ತಾರೆ!"

"ನಿಜ, ನಿಜ ; ಅದು ಅಂದಿಂದಿಗೂ ನಡೆದದ್ದೆ. ಅದರಿಂದ ಅಂತಹ ಪ್ರಯೋಜನವೇನೂ ಆಗಿಲ್ಲ.

"ಶಿಕ್ಷೆ ಸಮಗ್ರರೂಪ ತಾಳಬೇಕು! ಆಗಲೇ ಈ ಜನ ಕಂಗಾಲಾಗ ಬೇಕಾದರೆ....!"

ಇನ್ನು ಬಾಂಬು ಹಾಕುವುದೊಂದೇ ದಾರಿ!"

"ಬಾಂಬರ್ ವಿಮಾನ ದಿನವೂ ಹಾರಾಡುವುದನ್ನು ನೋಡಿದ್ದಾರಷ್ಟೆ ಈ ಜನ ಸ್ವಲ್ಪವಾದರೂ ಕುಗ್ಗಿದ್ದಾರೆಯೆ?"

"ಹಾಗಾದರೆ....."

"ಮೇಲಧಿಕಾರಿಗಳು ಏನು ಹೇಳುತ್ತಾರೆ?"

"ಅವರಿಗೂ–ಎಲ್ಲರಿಗೂ ಇದೇ ಸಮಸ್ಯೆ. ಏನಿದ್ದರೂ ನಾವೇ ನಮ್ಮ ಚಾಕಚಕ್ಯತೆಯನ್ನು ಉಪಯೋಗಿಸಿಕೊಳ್ಳಬೇಕು!"

"ಹೌದು. ಅದಷ್ಟೇ ಅಲ್ಲ. ಈಗೀಗ ಯಾರನ್ನಾದರೂ ನಂಬಿ ಕೆಲಸ ವಹಿಸುವುದೂ ಕಷ್ಟವೇ!"

"ಏನು ಮಾಡೋಣ?"

"ನಾವು ಏನಾದರೂ ಮಾಡದಿದ್ದರೆ ಅಧಿಕಾರ ಬಿಡಬೇಕಾಗುತ್ತೆ! ಏನು ಉದ್ರೇಕ? ಏನು ಕಿರುಕುಳ? ನೋಡಿದರೆ ಕಾಡು ಹಂದಿಗಳಿಗೂ ಕೀಳಾದ ಮಂದಿ!"

"ಹೌದು.....ಹೌದು! ಸಾಮಾನ್ಯರು ಎದೆಯೊಡ್ಡುವುದು ಕಷ್ಟ."

"ಸಮಗ್ರ ಭಯೋತ್ಪಾದನೆಗೆ ಏನಾದರೊಂದು ಕ್ರಮ ಕೈಕೊಳ್ಳ ದಿದ್ದಲ್ಲಿ ನಮಗೇ ಯಮಗಂಡ!"

"ಇದೇ ಏಪ್ರಿಲ್ ಹದಿಮೂರರಂದು ಸ್ವರ್ಣಮಂದಿರದ ಕೊಳದಲ್ಲಿ ಮುಳುಗು ಹಾಕುವುದಕ್ಕಾಗಿ ಜನಜಂಗುಳಿ ಕೂಡುತ್ತೆ, ಆಗ....."

ಜಾರ್ಜ್‌ಮೆಕ್ಕ್ಯೊ ನಡುವೆ ಬಾಯಿ ಹಾಕಿದ "ಸ್ವರ್ಣ ಮಂದಿರದಲ್ಲಿ ಗಲಾಟೆಯಾದರೆ ಅದರ ಪರಿಣಾಮ ಉಗ್ರವಾಗುತ್ತದೆ. ಅನಂತರ ನಾವಿಲ್ಲಿ ಉಸಿರಾಡುವುದು ಸಾಧ್ಯವೇ ಇಲ್ಲ!"

ಆಗ ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ರುದ್ರಮೌನ ಕೊಠಡಿ ಯನ್ನು ಆವರಿಸಿತು. ಉಚ್ಛ್ವಾಸ–ನಿಶ್ವಾಸಗಳು ಸದ್ದಿಲ್ಲದೆ ಹರಿದಾಡಿದುವು. ಅನಂತರ ತನ್ನ ಅಭಿಪ್ರಾಯವನ್ನು ಮುಂದಿಟ್ಟ ಗ್ರಿಫಿತ್ಸ್.

"ಹದಿಮೂರರಂದು ಹೇಗೂ ಈ ಕ್ಷುದ್ರ ಜನ ಕೂಡುತ್ತಾರಷ್ಟೆ? ಆಗ

ಅವರನ್ನೆಲ್ಲಾ ಯಾವುದಾದರೊಂದು ರೀತಿಯಲ್ಲಿ ಇಕ್ಕಟ್ಟಿನ ತಾಣದಲ್ಲಿ ಕೂಡುವಂತೆ ಮಾಡಿದರೆ.....?"

"ಅದು ಒಳ್ಳೆಯದು !"

"ಸರಿ....ಸರಿ !"

"ಅದರ ಪ್ರಚಾರಕ್ಕೆ ಯಾರನ್ನು ನೇಮಿಸೋಣ ?"

"ಅದಕ್ಕೆ ದೇಶಿಯರೇ ಆಗಬೇಕು. ನಮ್ಮವರ ಮಾತಿಗೆ ಯಾರೂ ಬೆಲೆ ಕೊಡುವುದಿಲ್ಲ !"

"ಹಾಗಾದರೆ ಹಂಸರಾಜನನ್ನು ಕರೆಯಿರಿ !"

"ಹೌದು ! ಅವನೇ ಸರಿಯಾದ ಜಾಣ !"

ಹಂಸರಾಜ್ ತನ್ನ ಸಂಗಡಿಗರೊಂದಿಗೆ ಐರೋಪ್ಯ ಅಧಿಕಾರಿಗಳ ಆದೇಶವನ್ನು ಶಿರಸಾ ಹೊತ್ತು ಜಲಿಯನ್‌ವಾಲಾಬಾಗಿನಲ್ಲಿ ಕಾಂಗ್ರೆಸ್ಸಿನ ಸಭೆ ಸೇರುವುದೆಂಬ ಪ್ರಚಾರ ಕಾರ್ಯವನ್ನು ಗುಪ್ತ ರೀತಿಯಲ್ಲಿ ಕೈಕೊಂಡ. ಆತನ ಸಹೋದ್ಯೋಗಿಗಳು ಕಾಂಗ್ರೆಸ್ಸಿಗರಂತೆಯೇ ನಟಿಸಿ ಸುದ್ದಿಯ ಜಾಲವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಅಮೃತಸರದಾದ್ಯಂತ ಹರಡುವುದರಲ್ಲಿ ಸಂಪೂರ್ಣ ಯಶಸ್ವಿಗಳಾದರು. ಅದರಲ್ಲೂ ಕನ್ಹಯ್ಯಲಾಲರ ಅಧ್ಯಕ್ಷತೆಯಲ್ಲಿ ಠಾಕೂರ್ ಮನಮೋಹನ್ ಬಾಬು, ಅಹಮ್ಮದ್ ಸಾದಿಕ್ ಡಾ|| ಕಿದಾರ್ ನಾಥ್ ಮುಂತಾದವರು ಭಾಷಣ ಮಾಡಲಿರುವರೆಂದರೆ ಸಾಮಾನ್ಯವೇ ?

ಐರೋಪ್ಯರ ಕುಟಿಲ-ಕುತಂತ್ರಗಳ ಮೋಸದ ಬಲೆ ಕೃತಿಮ ರೇಸಿಮೆಯಂತೆ ಹೊಳೆದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಅದೇ ನೇರಕ್ಕೆ ಇನ್ನೊಂದು ಕಡೆ ಸಭೆ-ಮೆರವಣಿಗೆ ಮುಂತಾದುವು ನಡೆಯಕೂಡದೆಂಬ ಕಟ್ಟಾಜ್ಞೆಗೆ ಗೌರ್ನರ ಮುದ್ರೆ ಬಿದ್ದುದು ಮಾತ್ರವಲ್ಲ ; ಅದು ಪ್ರಚಾರ ಹೊಂದದೆಯೇ ಆಫೀಸಿನ ಮೇಜಿನ ಮೇಲೆ ತಣ್ಣಗೆ ಮಂಡಿಸಿತು. ಬ್ರಿಟಿಷ್ ಸಾಮ್ರಾಜ್ಯದ ಸೂರ್ಯನನ್ನು ಕಡ್ಡಾಯವಾಗಿ ಮುಳುಗಿಸಲು.

* * * * *

೧೯೧೯ನೇ ಇಸವಿ ವೈಶಾಖ ಮಾಸದ ೧೩ನೇ ತೇದಿ !

ಅಂತೂ,

ಸ್ವರ್ಣ ಮಂದಿರದ ಮಹೋತ್ಸವದಲ್ಲಿ ಭಾಗಿಗಳಾಗಲು ಆನಂದೋತ್ಸಾಹಿತರಾದ ಮಂದಿ ಸಹಜವಾಗಿಯೇ ಕಾಂಗ್ರೆಸ್ಸಿನ ಸಭೆಯಲ್ಲಿ ಭಾಗವಹಿಸಲು ಆಶಿಸಿದರು! ಹೃದಯ ಬಿರಿಯುವಷ್ಟು ಉತ್ಸುಕತೆಯಿಂದ ನಗರ ನಾಗರಿಕರೂ, ಹಳ್ಳಿಗರೂ, ಕಾಂಗ್ರೆಸ್ಸಿಗರೂ, ಸಾಮಾಜಿಕ ಧುರೀಣರೂ ಸಮಯಕ್ಕೆ ಸರಿಯಾಗಿ ಆಗಮಿಸಿದರು. ಜಲಿಯನ್‌ವಾಲಾಬಾಗ್ ಎಂದು ಹೆಸರು ಪಡೆದಿದ್ದ ಆ ಸ್ಥಳ ಹೂದೋಟವೇನೂ ಆಗಿರಲಿಲ್ಲ. ನಾಲ್ಕೈದು ಸಾವಿರ ಮಂದಿ ಕೂಡಬಹುದಾದ ಪ್ರಶಸ್ತವಾದ ಸ್ಥಳ. ಸುತ್ತಲೂ ಎತ್ತರವಾದ ಪ್ರಾಕಾರ; ಎದುರಿಗೆ ಪ್ರವೇಶದ್ವಾರ. ಅದನ್ನು ಮುಚ್ಚಿದರೆ ಒಳಗಿನವರು ಒಳಗೆ; ಹೊರಗಿನವರು ಹೊರಗೆ.

ಆಗಲೇ ಮೂರು ನಾಲ್ಕು ಸಾವಿರ ಮಂದಿ ಅಲ್ಲಿ ಜಮಾವಣೆ ಹೊಂದಿದ್ದರೂ ಅಧ್ಯಕ್ಷ ಕನ್ಹಯ್ಯಲಾಲರಾಗಲೀ, ಇತರ ಭಾಷಣಕಾರರಾಗಲೀ ಯಾರೂ ಕಾಣಿಸುತ್ತಲೇ ಇಲ್ಲ. ತುಸು ಅಸಮಾಧಾನದಿಂದ ಜನ ಅತ್ತಿತ್ತ ನೋಡ ತೊಡಗುತ್ತಲೂ ಸಮಯಸ್ಫೂರ್ತಿಯಿಂದ ಅನೇಕ ಕಾಂಗ್ರೆಸ್ಸಿಗರು ಅಧ್ಯಕ್ಷ ಕನ್ಹಯಲಾಲರಿಗೂ, ಭಾಷಣಕಾರರಿಗೂ ಸುದ್ದಿ ಮುಟ್ಟಿಸಲು ಓಡಿದರು. ಶ್ರೋತೃಗಳು ಬಾಗಿಲ ಕಡೆ ಪಿಳಿಪಿಳಿ ನೋಡುತಿದ್ದಂತೆಯೇ ಕೆಲವು ಭಾಷಣಕಾರರು ಎಲ್ಲಿಂದಲೋ ಆಗಮಿಸಿ ಲಗುಬಗೆಯಿಂದ ವೇದಿಕೆಯನ್ನೇರಿದರು !

ಒಳಗಡೆ ಜನ ಜಂಗುಳಿ ಕಿಕ್ಕಿರಿ ತುಂಬುತ್ತಲೂ ಜನರಲ್ ಡಯರ್ ಮಿಲಿಟರಿ ಪಡೆಯೊಡನೆ ಆಗಮಿಸಿದ. ಅಷ್ಟಾಗುವವರೆಗೂ ಅಲ್ಲಲ್ಲೇ ಸುಳಿದಾಡುತ್ತಿದ್ದ ಹಂಸರಾಜ್ ತನ್ನವರೊಡನೆ ಫಲಾಯನ ಬೆಳೆಸಿದ !

ಶಾಂತ-ಶ್ರಾಂತ ನಗರಿಯ ಮಾನಸಪಟಲ ಮಿಡುಕುವಂತೆ ಅರುಣಾರುಣ ಪಶ್ಚಿಮ ದಿಕ್ತಟದಲ್ಲಿ ಕೆಂಗೆಂಡದುಂಡೆಯಂತೆ ಪ್ರಜ್ವಲಿಸುತಿದ್ದ. ದಿಗ್ದೇಶದಲ್ಲಿ ಹರಡಿದ ಕೆಮ್ಮೋಡಗಳು ರಕ್ತಪಾಯಿಯಂತೆ ರಕ್ತವರ್ಣ ರಂಜಿತವಾಗಿದ್ದುವು.

ಸೂರ್ಯಾಸ್ತಮಕ್ಕೆ ಆರು ನಿಮಿಷಗಳಿರುವಾಗ ಜನರಲ್ ಡಯರ್–ನ ನೇತೃತ್ವದಲ್ಲಿ ವೈಶಾಖೀ ಪರ್ವದ ಮಹಾ ಉದ್ಘಾಟನೆ ! ಅವನು ಕೈಯೆತ್ತಿ

ಸೂಚನೆ ಕೊಟ್ಟೊಡನೆಯೇ ಸಹಸ್ರ ಸಹಸ್ರ ಗೋಲಿಗಳ ಕರ್ಣಕಠೋರವಾದ ಢಂಕಾರ !

ಢಂ, ಢಂ, ಢಂ, ಢಂ, ಢಂ, ಢಂ, ಢಂ.....!

ಅಸಂಖ್ಯ ಕಂಠಗಳ ಚೀತ್ಕಾರ ! ಕರುಳು ಕಿತ್ತು ಬರುವಂತಹ ಆರ್ತ ವೊರೆ ! ಗಲಿಬಿಲಿ.....ಗಲಾಟೆ.....ಓಡಾಟ.....ಉರುಳಾಟ.....ಚೀರಾಟ.....

ಆ ಅವರ್ಣನೀಯವಾದ ಪ್ರಕಾಂಡಕಾಂಡ ಮುಕ್ತಾಯವಾದುದು ಕೋವಿಗಳಲ್ಲಿ ಗುಂಡುಗಳು ತೀರಿದಾಗಲೇ ! ಇನ್ನಾರ ದಯಾದಾನದಿಂದಲೂ ಅಲ್ಲ.

ಅತ್ಯಂತ ದುಃಖಾನ್ವಿತ ಭಾರತ ರವಿ ಪಶ್ಚಿಮ ವಾರ್ಧಿಯಲ್ಲಿ ಕಂಬನಿ ಸುರಿಸುತ್ತ ಅಸ್ತಂಗತನಾದ.

ಅಂತೂ, ಜನರಲ್ ಡಯರ್ ಸಂಚು ಒಂದು ರೀತಿಯಲ್ಲಿ ಫಲಿಸಿತು ; ಇನ್ನೊಂದು ರೀತಿಯಲ್ಲಿ ಭಾರತೀಯರು ಸತ್ತು ಗೆದ್ದರು.

ಜನರಲ್ ಡಯರ್ ಆ ಅಸಂಖ್ಯ ಶವಗಳ ಸಂಸ್ಕಾರ ಭಾರವನ್ನು ಹೊರಲು ನಿರಾಕರಿಸಿದುದರಿಂದ ಅವು ಅದೆಷ್ಟು ಸಮಯ ಕೊಳೆಯುತ್ತ ಅಲ್ಲಿ ಬಿದ್ದಿದ್ದವೋ. ಮೇಲಾಗಿ ಆಹತರಾದ ನತದೃಷ್ಟಜೀವಿಗಳು ಹೇಳುವವರು–ಕೇಳುವವರು ಇಲ್ಲದೆ ತೊಟ್ಟು ನೀರಿಗಾಗಿ ಪರಿತಪಿಸುತ್ತ ಎಷ್ಟುಹೊತ್ತು ಬಿದ್ದಿದ್ದರೋ ದೇವರಿಗೇ ಗೊತ್ತು.

ಆರ್ಥರ್ ಸ್ವಿನ್‌ಸನ್ ಆ ಪ್ರಕರಣದ ಬಗ್ಗೆ ತಮ್ಮವನಾದ ಜನರಲ್ ಡಯರ್-ನನ್ನು ಸಮರ್ಥಿಸಿ ಬರೆದ ಗ್ರಂಥ "ಸೂರ್ಯಾಸ್ತಮಕ್ಕೆ ಆರು ನಿಮಿಷಗಳಿರುವಾಗ....." ಎಂಬುದು ಪ್ರಕಾಶಿತವಾದಾಗ ಜಲಿಯನ್‌ವಾಲಾ ಬಾಗ್ ಪ್ರಕರಣ ತೀರ ಸಾಮಾನ್ಯ ವಿಷಯವಾಗಿತ್ತು–ಭಾರತ ಇತಿಹಾಸ ಪುಟಗಳಲ್ಲಿ ಕೆನ್ನೀರಿನಿಂದ ಬರೆಯಲ್ಪಡುವ ಸಂಭವವಿದ್ದರೂ.

ಸಂಪೂರ್ಣ

ಮಲ್ಲಿಕಾ ಕೃತಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ
(ಕಥಾ ಸಂಕಲನ)
೬) ಶ್ರೀಮುಖಿ
೭) ಬಹುರತ್ನಾವಸುಂಧರಾ
೮) ರತ್ನಗರ್ಭಾವಸುಂಧರಾ
೯) ಫಾಲ್ಗುಣೀ ಪರ್ವ
(ಕವಿತಾ ಸಂಕಲನ)
೧೦) ಪೂಜಾವಸಾನ ಸಮಯೇ....!
೧೧) ಧ್ಯಾನಾವಸಾನ ಸಮಯೇ....!
(ಪೌರಾಣಿಕ ನಾಟಕ)
೧೨) ಪುಣ್ಯಪಯೋನಿಧಿ
೧೩) ಪುಣ್ಯಾಭಿಸಾರ
(ಸಾನೆಟ್ಟುಗಳು)
೧೪) ತರಂಗಿಣಿ
(ಇವುಗಳ ಪ್ರತಿಗಳು ಮುಗಿದಿವೆ)
ಎರಡನೆಯ ಮುದ್ರಣಗಳು
(ಕಥಾ ಸಂಕಲನ)
೧೫) ಸುಧಾಮಣಿ
೧೬) ರಮಣೀಮಣಿ
೧೭) ಲಿಯೋನಾ
೧೮) ಶ್ರೀಹರ್ಷಲಾ
೧೯) ವೈಶಾಖೀ ಪರ್ವ

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಕಸ್ತೂರಿ ಮಾಲಿಕಾ
೨೬) ಮಂದಾರ ಮಾಲಿಕಾ
೨೭) ಚಂಪಕ ರಾಜಿ
೨೮) ನಾದ ಬಿಂದು
೨೯) ವಿಜಯ ಗಾಥಾ
೩೦) ಗಾನತೀರ್ಥ
೩೧) ಬಕುಳ ರಾಜಿ
೩೨) ಕಲ್ಯಾಣ ಭಾರತಿ (ಅಚ್ಚಿನಲ್ಲಿ)

(ಸಂಜೀವನ ಕಾವ್ಯ)

೩೩) ರಾಗಾನುರಾಗಿಣಿ
೩೪) ಉತ್ತರೋತ್ತರಣಿ
೩೫) ಮಂಗಳ ಭಾರತಿ

(ಗದ್ಯ ಕಾವ್ಯ)

೩೬) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೩೭) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೩೮) ದೂರ ದೇಶದಲ್ಲಿ
೩೯) ಬೆಳದಿಂಗಳ ರಾತ್ರಿ
೪೦) ವಿಶೇಷ ಸುದ್ದಿ
೪೧) ರಂಗನ ಸಾಹಸ
೪೨) ಓಹಿಯೋಜ ಸರೋವರ
೪೩) ಕೌಶಿಕನ ಗೊಂಬೆ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು-560 025